# ಅಧ್ಯಾಪಕ ಪಠ್ಯ
# TEACHER TEXT

## ಕನ್ನಡ – ಐಚ್ಛಿಕ

## KANNADA - OPTIONAL

ತರಗತಿ

XII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2015

***Prepared by*** :

**State Council of Educational Research and Training (SCERT)**
Poojappura, Thiruvananthapuram 695 012, Kerala

*Website* : www.scertkerala.gov.in
*E-mail* : scertkerala@gmail.com
Phone : 0471-2341883, Fax : 0471-2341869

Typesetting and Layout : SCERT
Printed at : SCERT, Kerala

© Department of Education, Government of Kerala

# ಮುನ್ನುಡಿ

ಆತ್ಮೀಯ ಅಧ್ಯಾಪಕರೇ,

ಕನ್ನಡ ಐಚ್ಛಿಕ ತರಗತಿಯಲ್ಲಿ ಮಕ್ಕಳು ಬಹಳಷ್ಟು ಸಾಮರ್ಥ್ಯಗಳನ್ನು ಗಳಿಸಬೇಕಲ್ಲವೇ? ಈ ಉದ್ದೇಶಕ್ಕಾಗಿಯೇ ಪಠ್ಯಪುಸ್ತಕ ಮತ್ತು ಅಧ್ಯಾಪಕ ಪಠ್ಯಗಳನ್ನು ತಯಾರಿಸಲಾಗಿದೆ. ಪಠ್ಯಪುಸ್ತಕದಲ್ಲಿ ಸೂಚಿಸಿದಂತೆ ಭಾಷಾ ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಲು ಅನುಕೂಲವಾಗುವಂತೆ ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಪಠ್ಯಪುಸ್ತಕದಲ್ಲಿ ಹೇಳಿದ ಕಲಿಕಾ ಸಾಧನೆಗಳನ್ನು ಪೂರೈಸಲು ಸಾಧ್ಯವಾಗುವಂತೆ ಮಕ್ಕಳಿಗೆ ನೆರವಾಗುವುದು ಅಧ್ಯಾಪಕರ ಜವಾಬ್ದಾರಿಯಲ್ಲವೇ? ಈ ನಿಟ್ಟಿನಲ್ಲಿ ಭಾಷಾ ಕಲಿಕೆಗೆ ಸಹಾಯವಾಗುವಂತೆ ಪ್ರಕೃತ ಕೈಪಿಡಿಯನ್ನು ರೂಪಿಸಲಾಗಿದೆ. ಇದರಲ್ಲಿ ನೀಡಿರುವ ನಿರ್ದೇಶಗಳು, ಸೂಚನೆಗಳು, ಚಟುವಟಿಕೆಗಳು, ಉದಾಹರಣೆಗಳು, ಮಾದರಿ ಎಲ್ಲವೂ ಅಧ್ಯಾಪಕರ ಸಹಾಯಕ್ಕಾಗಿ ರೂಪುಗೊಂಡವು ಎಂಬುದನ್ನು ಪರಿಗಣಿಸಿ ಬೋಧನ ಪ್ರಕ್ರಿಯೆಯನ್ನು ಫಲಪ್ರದವಾಗಿಸಲು ನೀವೆಲ್ಲರೂ ಶ್ರಮಿಸುವಿರೆಂದು ಭಾವಿಸುತ್ತೇನೆ.
ನಿಮ್ಮ ಅಧ್ಯಾಪನ ಪ್ರಕ್ರಿಯೆಯಲ್ಲಿ ಮಕ್ಕಳು ಪರಿಪೂರ್ಣ ಜ್ಞಾನ ಸಂಪನ್ನರಾಗಲು ಈ ಕೈಪಿಡಿಯು ಸಹಕಾರಿಯಾಗಲಿ.

ಶುಭಾಶಯಗಳೊಂದಿಗೆ,

**ಡಾ। ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

## TEACHER TEXT DEVELOPMENT TEAM

## KANNADA - OPTIONAL
## STANDARD XII

**Participants**

Harisha N., HSST Kannada, HHSIB Swamiji's HSS Edneer, Kasaragod.
Prakasha N. HSST (Jr) Kannada, GFHSS Bekal.
Saraswathi Prasanna P.N., HSST Kannada, SSHSS Katukukke.
Vishwanatha O., HSST (Jr) Kannada, GHSS Udma.
Latha B., HSST (Jr) Kannada, GHSS Edneer.
Prakash M., HSST (Jr) Kannada, GHSS Bangramanjeshwara.
Ganesha P.S., HSST (Jr) Kannada, Sri Annapoorneshwari HSS Agalpady.

**Experts**

Dr. Srikrishna Bhat P., Prof. (Rtd.) Govt. College, Kasaragod.
Dr. Kamalaksha K., Course Director, School of Indian Languages, Kannur University

**Academic Co-ordinator**

Dr. Faisal Mavulladathil, Research Officer, SCERT, Thiruvananthapuram

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರಂ 695012

# ಅನುಕ್ರಮಣಿಕೆ


ಸಾಮಾನ್ಯ ಸಮೀಪನ 7–31

ಮೌಲ್ಯನಿರ್ಣಯ ಸಮೀಪನ 42–62

**1. ಹಳೆಗನ್ನಡ ನುಡಿಬೆಡಗು** 63–84

- ಸಲಿಸುವೆಂ ನೂರುವರಂ – ಪಂಪ
- ಶ್ರೀಮತಿ ಸ್ವಯಂವರ – ಮುದ್ದಣ

**2. ನಡುಗನ್ನಡ ಕಾವ್ಯಸೌರಭ** 85–110

- ಇಳೆಯಾಂಡಗುಡಿಮಾರ – ಹರಿಹರ
- ಧರೆಮೆಚ್ಚದಣ್ಣ ಸೋದರರ ಕಾಳಗಕೆ – ರತ್ನಾಕರವರ್ಣಿ
- ಉಲ್ಲಂಘಿಸುವರುಂಟೆ ವಿಧಿಕೃತವನು – ಲಕ್ಷ್ಮೀಶ

**3. ಹೊಸಗನ್ನಡ ಗದ್ಯವಿಹಾರ** 111–140

- ಕಾಡಿಗೆ ಹೊದ್ದಿಸಿದ ಮಂಜಿನ ಪರದೆ – ಜಿ.ಪಿ. ಬಸವರಾಜು
- ಹರಳುಗಟ್ಟಿದ ಬಗೆ – ಡಾ. ಅನುಪಮಾ ನಿರಂಜನ
- ಇಡ್ಲಿಯ ಇತಿಹಾಸ – ಸೇಡಿಯಾಪು ಕೃಷ್ಣಭಟ್ಟ
- ಪ್ರಾಚೀನ ತುಳು ಸಾಹಿತ್ಯ – ಡಾ. ಪಿ. ವೆಂಕಟರಾಜ ಪುಣಿಂಚತ್ತಾಯ
- ಭಾಷೆ ಮತ್ತು ಭಾಷಾ ವಿಜ್ಞಾನ – ಸಂಗ್ರಹ

**4. ನಾಟಕರಂಗ** 141–167

- ಕನ್ನಡದಲ್ಲಿ ನಾಟಕ ಸಾಹಿತ್ಯ – ಸಂಗ್ರಹ
- ಮಂಥರಾ – ಡಾ. ಎಚ್.ಎಸ್. ವೆಂಕಟೇಶ ಮೂರ್ತಿ

# ಪಠ್ಯಕ್ರಮ

## ಹಳೆಗನ್ನಡ ಸಾಹಿತ್ಯ

ಆರಂಭಕಾಲದ ಹಳೆಗನ್ನಡ ಕಾವ್ಯಭಾಗ (10ನೇ ಶತಮಾನ)

19ನೇ ಶತಮಾನದಲ್ಲಿ ರಚಿತವಾದ ಹಳೆಗನ್ನಡ ಗದ್ಯಭಾಗ

## ನಡುಗನ್ನಡ ಸಾಹಿತ್ಯ

ರಗಳೆ

ಸಾಂಗತ್ಯ ಕಾವ್ಯಭಾಗ

ಷಟ್ಪದಿ ಕಾವ್ಯಭಾಗ

## ಹೊಸಗನ್ನಡ ಗದ್ಯ ಸಾಹಿತ್ಯ

ಪ್ರವಾಸ ಕಥನದ ಭಾಗ

ಆತ್ಮಕಥೆಯ ಭಾಗ

ಸಂಶೋಧನ ಲೇಖನ

ತುಳು ಭಾಷಾ ಸಾಹಿತ್ಯದ ಕುರಿತಾದ ಲೇಖನ

ಭಾಷೆ ಮತ್ತು ಭಾಷಾವಿಜ್ಞಾನದ ಕುರಿತಾದ ಲೇಖನ

## ನಾಟಕ ರಂಗ

ಕನ್ನಡದಲ್ಲಿ ನಾಟಕ ಸಾಹಿತ್ಯ ಬೆಳೆದು ಬಂದಬಗೆಯ ಕುರಿತಾದ ಲೇಖನ

ಆಧುನಿಕ ನಾಟಕ

# ಕೇರಳ ಶಾಲಾ ಪಠ್ಯಕ್ರಮ 2013
# ಸಾಮಾನ್ಯ ಸಮೀಪನಗಳು

## 1.1 ಪೀಠಿಕೆ

ಸಾಮಾಜಿಕ ಬದುಕಿನ ಗುಣಮಟ್ಟದ ಹಿನ್ನೆಲೆಯಲ್ಲಿ ಹೇಳುವುದಾದರೆ ಕೇರಳವು ದೇಶಕ್ಕೆ ಮಾದರಿಯಾಗಿದೆ. ಸಾರ್ವಜನಿಕ ಶಿಕ್ಷಣದ ವ್ಯಾಪಕತೆ, ಸಾರ್ವಜನಿಕ ಆರೋಗ್ಯದ ಗುಣಮಟ್ಟ ಎಂಬಿವುಗಳೇ ಕೇರಳದ ಈ ಸಾಧನೆಗೆ ಪ್ರಧಾನ ಕಾರಣಗಳಾಗಿವೆ. ಸಮಾಜದ ಎಲ್ಲ ವರ್ಗಗಳ ಮಕ್ಕಳನ್ನು ಶಾಲೆಗೆ ಕಳುಹಿಸಲು ಸಾಧ್ಯವಾಗಿದ್ದರೂ, ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಎಂಬುದು ಕೇರಳದ ಶಿಕ್ಷಣ ಕ್ಷೇತ್ರವು ಇದಿರಿಸುವ ಅತಿ ದೊಡ್ಡ ಸವಾಲಾಗಿದೆ. 1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಅಂಗವಾಗಿ ಶೈಕ್ಷಣಿಕ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರೊಂದಿಗೆ ಪಠ್ಯಕ್ರಮವನ್ನು ಶಿಶುಕೇಂದ್ರಿತ, ಚಟುವಟಿಕೆ ಆಧಾರಿತ, ಪ್ರಕ್ರಿಯಾತ್ಮಕ ಹಾಗೂ ಕಾಲೋಚಿತವಾಗಿ ಪರಿಷ್ಕರಿಸುವ ಪ್ರಯತ್ನಗಳಾಗಿವೆ. ಇದರ ಪರಿಣಾಮವಾಗಿ ತರಗತಿಗಳಲ್ಲಿ ಜ್ಞಾನ ನಿರ್ಮಾಣ ಪ್ರಕ್ರಿಯೆಗಳು ನಡೆಯಬೇಕು ಎಂಬ ತಿಳುವಳಿಕೆ ಮೂಡಿತು. ಇದರಂತೆ ಮಗುವನ್ನು ಶೈಕ್ಷಣಿಕ ಪ್ರಕ್ರಿಯೆಗಳ ಕೇಂದ್ರಸ್ಥಾನದಲ್ಲಿ ಇರಿಸುವ ಚಟುವಟಿಕೆಗಳಿಗೆ ನಾಂದಿ ಹಾಡಲು ನಮಗೆ ಸಾಧ್ಯವಾಗಬೇಕು.

ಬದುಕಿನ ಎಲ್ಲಾ ಕ್ಷೇತ್ರಗಳೂ ಪ್ರತಿ ಕ್ಷಣ ಬದಲಾಗುತ್ತಿವೆ. ಅಧ್ಯಾಪನ ಶಾಸ್ತ್ರ, ಅಧ್ಯಯನ ಮನಶ್ಶಾಸ್ತ್ರ ಮೊದಲಾದ ವಿಷಯಗಳ ಹೊಸ ಸಂಶೋಧನೆಗಳು ಮತ್ತು ಪ್ರಾಯೋಗಿಕವಾದ ಅನುಭವಗಳು ಉತ್ತಮ ರೀತಿಯ ಕಲಿಕೋಪಕರಣಗಳ ನಿರ್ಮಾಣ ಹಾಗೂ ಕಲಿಕಾನುಭವಗಳ ವಿನಿಮಯ ಮತ್ತು ಮೌಲ್ಯಮಾಪನವನ್ನು ನಡೆಸಲು ನಮ್ಮನ್ನು ಪ್ರೇರೇಪಿಸಿವೆ. ಎಲ್ಲಾ ವರ್ಗಗಳ ಮಕ್ಕಳ ಕಲಿಕೆಯ ಪ್ರಗತಿಯನ್ನು ನಾವು ಗುರಿಯಾಗಿರಿಸಿಕೊಂಡಿದ್ದೇವೆ.

"ವಿಭಿನ್ನವಾದ ಸಾಮಾಜಿಕ, ಆರ್ಥಿಕ ಹಿನ್ನೆಲೆಯುಳ್ಳ, ವಿಭಿನ್ನ ದೈಹಿಕ, ಮಾನಸಿಕ, ಬೌದ್ಧಿಕ ಸಾಮರ್ಥ್ಯಗಳಿರುವ ಎಲ್ಲ ಮಕ್ಕಳಿಗೆ ಕಲಿಯಲು ಹಾಗೂ ಶಾಲಾ ಕಲಿಕೆಯಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ದೃಢಪಡಿಸಬೇಕು. ಲಿಂಗ, ಜಾತಿ, ಭಾಷೆ, ಸಂಸ್ಕೃತಿ, ಧರ್ಮ, ವಿಭಿನ್ನ ಸಾಮರ್ಥ್ಯಗಳೇ ಮೊದಲಾದ ಕಾರಣಗಳಿಂದ ಉಂಟಾಗುವ ಸಮಸ್ಯೆಗಳನ್ನು ಮೀರಲು ಕೇವಲ ಯೋಜನೆಗಳು ಮತ್ತು ಶಿಕ್ಷಣ ನೀತಿಗಳು ಮಾತ್ರ ಸಾಲವು. ಎಳೆಯ ಪ್ರಾಯದಿಂದಲೇ ಯೋಗ್ಯವಾದ ಕಲಿಕಾ ಗುರಿಗಳನ್ನೂ, ಅಧ್ಯಾಪನ ರೀತಿಗಳನ್ನೂ ಆರಿಸಿ ರೂಪಿಸಬೇಕಾಗಿದೆ." (**NCF** 2005, ಪು.27)

- ವಿಭಿನ್ನ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯುಳ್ಳವರು.
- ವಿಭಿನ್ನ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಸಾಮರ್ಥ್ಯವುಳ್ಳವರು.

ಹೀಗೆ ಎಲ್ಲಾ ವರ್ಗಗಳಿಗೆ ಸೇರಿದವರಿಗೆ ಕಲಿಕಾ ಸಾಧನೆಯನ್ನು ಗಳಿಸಲು ಶಿಕ್ಷಣ ಪ್ರಕ್ರಿಯೆಯ ಎಲ್ಲಾ ವಲಯಗಳಲ್ಲಿ ಸೂಕ್ಷ್ಮವೂ ಶಾಸ್ತ್ರೀಯವೂ ಆಗಿರುವ ಧೋರಣೆಗಳನ್ನು ಸ್ವೀಕರಿಸಬೇಕಾದುದು ನಮ್ಮ ದೃಷ್ಟಿಕೋನವಾಗಬೇಕು ಎಂದು ಎನ್.ಸಿ.ಎಫ್. ನಿರ್ದೇಶಿಸುತ್ತದೆ. ಕಾಲೋಚಿತವಾಗಿ ಪಠ್ಯಕ್ರಮವನ್ನು ನವೀಕರಿಸುವುದು ಮತ್ತು ಈ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿಸುವುದರಿಂದ ಮಾತ್ರ ಈ ಗುರಿಯನ್ನು ಸಾಧಿಸಬಹುದು. ಈ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈಗ ಪಠ್ಯಕ್ರಮವನ್ನು ಪರಿಷ್ಕರಿಸಲಾಗುತ್ತಿದೆ. ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಎಲ್ಲರ ಅನುಭವ, ಸಂಶೋಧನೆ ಹಾಗೂ ಅಧ್ಯಯನ ಶೋಧಗಳನ್ನು ಬಳಸಿಕೊಂಡು ಇದನ್ನು ಮಾಡಲಾಗುವುದು. ಸಮರ್ಪಕತೆಯಿಂದ ಮತ್ತಷ್ಟು ಸಮರ್ಪಕತೆಗೆ ಎಂಬ ವೈಜ್ಞಾನಿಕ ಸಮೀಪನವನ್ನು ಇಲ್ಲಿ ಸ್ವೀಕರಿಸಲಾಗುವುದು.

## 1.2 ಪಠ್ಯಕ್ರಮ ಪರಿಷ್ಕರಣೆಯ ಅಗತ್ಯ

ಕಳೆದ ಐದು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅನೇಕ ಹೊಸ ಆಶಯಗಳು ಮೂಡಿಬಂದಿವೆ. ಭಾರತದಲ್ಲಿ 2009 ರಲ್ಲಿ ಜ್ಯಾರಿಗೆ ಬಂದ ವಿದ್ಯಾಭ್ಯಾಸ ಹಕ್ಕು ಕಾಯಿದೆಯಿಂದ ಶಿಕ್ಷಣವು ಮಕ್ಕಳ ಹಕ್ಕಾಗಿ ಬದಲಾಗಿದೆ. ಹಕ್ಕು ಆಧಾರಿತ ವಿದ್ಯಾಲಯ (Right based Educational Institution) ಎಂಬ ಗುರಿಯನ್ನು ಸಾಧಿಸಲು ನಮ್ಮ ಪಠ್ಯಕ್ರಮವನ್ನು ಅಂತಾರಾಷ್ಟ್ರೀಯ ಗುಣಮಟ್ಟಕ್ಕೆ ಏರಿಸಬೇಕಾಗಿದೆ. ಅಂತಾರಾಷ್ಟ್ರೀಯ ಗುಣಮಟ್ಟ ಎಂಬುದು ಯಾವುದೇ ಒಂದು ದೇಶದ ಗುಣಮಟ್ಟವಲ್ಲ. ಇದು ಒಂದು ಪ್ರತ್ಯೇಕ ಹಂತವನ್ನು ದಾಟುವ ಮಗು ಜಗತ್ತಿನ ಯಾವುದೇ ಪ್ರದೇಶದಲ್ಲಿದ್ದರೂ ಆರ್ಜಿಸಬೇಕಾದ ಜ್ಞಾನ ಮತ್ತು ಅನುಭವಗಳ ಒಟ್ಟು ಮೊತ್ತವಾಗಿದೆ. ಜಾಗತಿಕ ಮಟ್ಟದಲ್ಲಿ ಜ್ಯಾರಿಗೊಂಡಿರುವ ಉತ್ತಮ ಅಧ್ಯಯನ, ಅಧ್ಯಾಪನ ಮಾದರಿಗಳು ಕೇರಳದ ಮಕ್ಕಳಿಗೂ ಸಿಗಬೇಕಾದುದು ಅಗತ್ಯ.

# ಹೈಯರ್ ಸೆಕೆಂಡರಿ ಪಠ್ಯಕ್ರಮ –2013

## ಸಾಮಾನ್ಯ ಸಮೀಪನಗಳು

ನವೋತ್ಥಾನದ ಹಿನ್ನೆಲೆ, ಉಚಿತ ಹಾಗೂ ಸಾರ್ವತ್ರಿಕವಾದ ಸಾರ್ವಜನಿಕ ಶಿಕ್ಷಣದ ಮೂಲಕ ಕೇರಳವು ಜ್ಞಾನ ಸಂಪನ್ನ ಸಮಾಜವಾಗಿ ಬದಲಾಯಿತು. ರಚನಾತ್ಮಕ ಗುಣಮಟ್ಟದ ಶಿಕ್ಷಣವನ್ನು ಪಾಲ್ಗೊಳ್ಳುವಿಕೆಯ ಮೂಲಕ ಖಾತರಿಗೊಳಿಸುವಿಕೆಯಲ್ಲಿ ಯಶಸ್ವಿಯಾಗಿದ್ದೇವೆ. ಈ ರೀತಿಯ ಪಾಲ್ಗೊಳ್ಳುವಿಕೆ ಕೇರಳದ ಶಿಕ್ಷಣ ಕ್ಷೇತ್ರವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆಗೆ ಪಾತ್ರವಾಗಿಸಿತು.

20ನೇ ಶತಮಾನದ ಮೊದಲ ದಶಕಗಳಲ್ಲೇ ಸಮಾಜದ ಎಲ್ಲ ವಿಭಾಗದ ಮಕ್ಕಳನ್ನು ವಿದ್ಯಾಲಯಗಳಿಗೆ ತಲುಪಿಸಲು ನಮ್ಮಿಂದ ಸಾಧ್ಯವಾಯಿತು. ಸಾರ್ವತ್ರಿಕ ಉಚಿತ ಶಿಕ್ಷಣನ್ನು ಒದಗಿಸಲು ಅಗತ್ಯದ ಪ್ರಯತ್ನಗಳನ್ನು ಎಲ್ಲಾ ಹಂತಗಳಲ್ಲೂ ನಡೆಸಲಾಗಿದೆ. ಸರಕಾರದ ಪಾಲ್ಗೊಳ್ಳುವಿಕೆ, ಮಿಶನರಿಗಳ ಚಟುವಟಿಕೆಗಳು, ಸಮಾಜ ಸುಧಾರಣಾ ಚಳುವಳಿಗಳು ಮೊದಲಾದವು ಸಾಮಾನ್ಯ ವಿದ್ಯಾಭ್ಯಾಸದ ಅಭಿವೃದ್ಧಿಗೆ ಕೊಡುಗೆಯನ್ನು ನೀಡಿವೆ. ಸ್ವಾತಂತ್ರ್ಯ ಲಭಿಸಿದ ಬಳಿಕ ಜ್ಯಾರಿಗೊಂಡ ಡಾ. ರಾಧಾಕೃಷ್ಣ ಕಮಿಷನ್ ವರದಿಯಿಂದ ತೊಡಗಿ 2005ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟಿನವರೆಗೆ ರಾಷ್ಟ್ರೀಯ ಅಧ್ಯಯನ ವರದಿಗಳು ಹಾಗೂ ಸಮೀಪನಗಳು ಕೇರಳದಲ್ಲಿ ಪಠ್ಯಕ್ರಮದ ಪರಿಷ್ಕಾರದ ಪ್ರಯತ್ನಗಳ ಮೇಲೆ ಪ್ರಭಾವ ಬೀರಿವೆ.

ಡಾ. ಲಕ್ಷ್ಮಣಸ್ವಾಮಿ ಮುದಲಿಯಾರ್ ಅಧ್ಯಕ್ಷರಾದ ಸೆಕೆಂಡರಿ ವಿದ್ಯಾಭ್ಯಾಸ ಆಯೋಗ ಸಮಿತಿ ಸೆಕೆಂಡರಿ ವಲಯದ ಪ್ರಾಧಾನ್ಯವನ್ನು ವಿಸ್ತಾರವಾಗಿ ಪ್ರತಿಪಾದಿಸಿದೆ. ಡಾ.ಡಿ.ಎಸ್. ಕೊಠಾರಿ ಅಧ್ಯಕ್ಷರಾಗಿದ್ದ ಆಯೋಗವು ಸಮರ್ಪಿಸಿದ "ವಿದ್ಯಾಭ್ಯಾಸ ಹಾಗೂ ರಾಷ್ಟ್ರೀಯ ಅಭಿವೃದ್ಧಿ" ಎಂಬ ವರದಿಯು ಪ್ರಾಥಮಿಕ ವಿದ್ಯಾಭ್ಯಾಸ ಮಟ್ಟದಿಂದ ತೊಡಗಿ ಉನ್ನತ ವಿದ್ಯಾಭ್ಯಾಸದ ಹಂತದ ವರೆಗಿನ ವಿವಿಧ ಘಟ್ಟಗಳನ್ನು ಅಧ್ಯಯನಕ್ಕೆ ಒಳಪಡಿಸಿತು. ಈ ಆಯೋಗವು 10+2+3 ಎಂಬ ರೀತಿಯನ್ನು ಪ್ರಥಮ ಬಾರಿಗೆ ಮುಂದಿಟ್ಟಿತು. 1986ರ ರಾಷ್ಟ್ರೀಯ ವಿದ್ಯಾಭ್ಯಾಸ ನೀತಿಯು ಇದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇರಳದಲ್ಲಿ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವು ಜ್ಯಾರಿಗೊಂಡಿತು. ಅಧ್ಯಾಪಕ ಕೇಂದ್ರಿತ ರೀತಿಗಿಂತ ಭಿನ್ನವಾದ ವಿದ್ಯಾರ್ಥಿ ಕೇಂದ್ರಿತ ಹಾಗೂ ಚಟುವಟಿಕಾಧಾರಿತ ಪಠ್ಯಕ್ರಮಕ್ಕೆ 1990ರಲ್ಲಿ ನಾಂದಿ ಹಾಡಲಾಯಿತು.

# 2005ರ ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು
## (National Curriculum Framework -2005)

ಭಾರತದ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಅನೇಕ ಬದಲಾವಣೆಗೆ ತಳಹದಿಯನ್ನು ಹಾಕಿತು. ಇದರ ಆಧಾರದಲ್ಲಿ ವಿವಿಧ ವಿಷಯಗಳಲ್ಲಿ NCERT ಯು ಪಠ್ಯಕ್ರಮಗಳನ್ನು ಸಿದ್ಧಪಡಿಸಿತು. ಕೇರಳದಲ್ಲಿ KCF 2007ನ್ನು ರೂಪಿಸಿ ಪ್ರೌಢ ಶಾಲಾ ಹಂತದವರೆಗೆ ಪಠ್ಯಕ್ರಮದ ಪರಿಷ್ಕರಣೆಯನ್ನು ನಡೆಸಲಾಯಿತು. 2009ರ ವಿದ್ಯಾಭ್ಯಾಸ ಹಕ್ಕು ಕಾಯ್ದೆ, ಹೈಯರ್ ಸೆಕೆಂಡರಿಗೆ ಸಂಬಂಧಿಸಿದ ಪ್ರೊ. ಪಿ.ಒ.ಜೆ. ಲಬ್ಬ ಸಮಿತಿಯ ವರದಿ ಮತ್ತು ಪಠ್ಯಕ್ರಮ ಪರಿಷ್ಕರಣೆಗೆ ಸಂಬಂಧಿಸಿ ಸರಕಾರ ನಿಯೋಗಿಸಿದ ಡಾ. ಪಿ.ಕೆ. ಅಬ್ದುಲ್ ಅಝೀಜ್ ಸಮಿತಿಯ ವರದಿಗಳು ಪಠ್ಯಕ್ರಮ ಪರಿಷ್ಕರಣೆ ಅತ್ಯಗತ್ಯ ಎಂದು ಸೂಚಿಸಿದವು.

ಹೈಯರ್ ಸೆಕೆಂಡರಿಯ ಆರಂಭವು ಕೇರಳದ ವಿದ್ಯಾಭ್ಯಾಸ ಚರಿತ್ರೆಯಲ್ಲಿ ಮಹತ್ವದ ಹಂತವಾಗಿರುತ್ತದೆ. ಹಿಂದೆ ಜ್ಯಾರಿಯಲ್ಲಿದ್ದ ಪ್ರಿ.ಡಿಗ್ರಿ ವ್ಯಾಸಂಗವನ್ನು ಉನ್ನತ ಶಿಕ್ಷಣ ಇಲಾಖೆಯಿಂದ ಬೇರ್ಪಡಿಸಿ ಸಾರ್ವಜನಿಕ ಸಾರ್ವತ್ರಿಕ ವಿದ್ಯಾಭ್ಯಾಸ ಇಲಾಖೆಯ ಅಂಗವಾಗಿ ಸೇರ್ಪಡೆಗೊಳಿಸಿದುದರ ಮೂಲಕ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವು ಜನಪ್ರಿಯವಾಯಿತು, ವಿಸ್ತಾರವಾಯಿತು. ಎಲ್ಲಡೆಗೆ ವ್ಯಾಪಿಸಿತು.

1990ರಲ್ಲಿ ಕೇರಳದಲ್ಲಿ ಹೈಯರ್ ಸೆಕೆಂಡರಿಯ ನಿರ್ದೇಶನಾಲಯದ ರೂಪೀಕರಣವಾಯಿತು. 31 ಸರಕಾರಿ ಪ್ರೌಢ ಶಾಲೆಗಳನ್ನು ಹೈಯರ್ ಸೆಕೆಂಡರಿಯನ್ನಾಗಿ ಭಡ್ತಿಗೊಳಿಸಲಾಯಿತು. ಕಲ್ಲಿಕೋಟೆ ವಿಶ್ವವಿದ್ಯಾನಿಲಯದಲ್ಲಿ ಜ್ಯಾರಿಯಲ್ಲಿದ್ದ ಪ್ರಿಡಿಗ್ರಿ ಪಠ್ಯಕ್ರಮದ ಭಾಷಾ ಪಠ್ಯ ಪುಸ್ತಕ ಹಾಗೂ NCERTಯ ವಿಷಯ ಪಠ್ಯಪುಸ್ತಕಗಳನ್ನು ಕೇರಳದ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸ ಮಟ್ಟದಲ್ಲಿ ಬಳಸಲಾಯಿತು.

1990ರಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಸಮಗ್ರವಾದ ಬದಲಾವಣೆಯೊಂದಿಗೆ ಹೊಸ ಪಠ್ಯಕ್ರಮವು ಪ್ರಾಥಮಿಕ ಹಂತದಲ್ಲಿ ಜ್ಯಾರಿಗೊಂಡಿತು. ಚಟುವಟಿಕೆ ಆಧಾರಿತ, ಪ್ರಕ್ರಿಯಾಧಾರಿತ, ಪ್ರಯೋಗಾಧಾರಿತ ಹಾಗೂ ವಿದ್ಯಾರ್ಥಿ ಕೇಂದ್ರಿತವಾದ ಈ ಪರಿಕಲ್ಪನೆಗೆ ಅನುಗುಣವಾಗಿ ನಿರಂತರ ಮೌಲ್ಯಮಾಪನದ ವಿಧಾನ ಹಾಗೂ ಗ್ರೇಡಿಂಗ್ ಪದ್ಧತಿಯನ್ನು ಜ್ಯಾರಿಗೊಳಿಸಲಾಯಿತು. ಮುಂದೆ ಹೈಯರ್ ಸೆಕೆಂಡರಿಯಲ್ಲೂ ಈ ವಿಧಾನವು ಜ್ಯಾರಿಗೆ ಬಂದಿತು. ಆದರೆ ಹೈಯರ್ ಸೆಕೆಂಡರಿಯಲ್ಲಿ ಸಮಗ್ರವಾದ ಪಠ್ಯ ಪರಿಷ್ಕರಣೆ ನಡೆದಿರಲಿಲ್ಲ. SCERTಯ ನೇತೃತ್ವದಲ್ಲಿ ಕೆಲವು ವಿಷಯಗಳಿಗೆ ಪಠ್ಯಪುಸ್ತಕಗಳು ಹಾಗೂ ಎಲ್ಲಾ ವಿಷಯಗಳಿಗೆ ಸಂಪನ್ಮೂಲ ಪಠ್ಯಗಳು ಮತ್ತು ಎಜ್ಯುಮೇಟ್ (Edumate) ಗಳನ್ನು ಸಿದ್ಧಪಡಿಸಲಾಯಿತು.

2007ರಲ್ಲಿ ಜ್ಯಾರಿಗೊಳಿಸಿದ ಏಕಗವಾಕ್ಷ (Single window) ವಿಧಾನವು ಹೈಯರ್ ಸೆಕೆಂಡರಿಯ ಪ್ರವೇಶಾತಿಯನ್ನು ಕಾರ್ಯದಕ್ಷಗೊಳಿಸಿತು. ಇ–ಗವರ್‌ನೆನ್ಸ್ (e-governance) ಅಂಗವಾಗಿ ಪರೀಕ್ಷೆ ನಡೆಸುವುದು, ಪಠ್ಯಪುಸ್ತಕಗಳ ಪೂರೈಕೆ (Text book indent), ಸ್ಕಾಲರ್‌ಶಿಪ್‌ಗಳು, ಆನ್‌ಲೈನ್ ಟ್ರಾನ್ಸ್‌ಫರ್ (online transfer) ಮೊದಲಾದ ರೀತಿಗಳನ್ನು ಅನುಸರಿಸಿ ಹೈಯರ್ ಸೆಕೆಂಡರಿಯನ್ನು ಹೆಚ್ಚು

ಪಾರದರ್ಶಕಗೊಳಿಸಲಾಯಿತು.

ವಿವಿಧ ರೀತಿಯ ನೂತನ ವಿಷಯಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಕೇರಳದ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸ ಪದ್ಧತಿಯು ನೀಡುತ್ತಿದೆ. 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮುಂದಿರಿಸಿದ ವಿಷಯಗಳಿಗಿಂತ ಹೊರತಾಗಿ ವೈವಿಧ್ಯಮಯ ವಿಷಯಗಳನ್ನು ಕೇರಳದ ಪಠ್ಯ ಕ್ರಮವು ನೀಡುತ್ತದೆ ಎಂಬುದು ಹೆಮ್ಮೆಯ ವಿಷಯ. ಕಲಿಕೆಯಲ್ಲಿ ಇಂಗ್ಲೀಷನ್ನು ಪ್ರಥಮ ಭಾಷೆಯಾಗಿಯೂ, ದ್ವಿತೀಯ ಭಾಷೆಯಾಗಿ 12 ಐಚ್ಛಿಕ  ಭಾಷೆಗಳಲ್ಲಿ ಒಂದನ್ನು ಆಯ್ಕೆ ಮಾಡುವ ಅವಕಾಶವೂ ವಿದ್ಯಾರ್ಥಿಗಳಿಗೆ ಲಭಿಸುತ್ತಿದೆ. ವಿಜ್ಞಾನ ವಿಷಯದಲ್ಲಿ 10, ವಾಣಿಜ್ಯ ವಿಷಯದಲ್ಲಿ 4, ಮಾನವಿಕ ವಿಷಯಗಳಲ್ಲಿ 32 ಒಳಗೊಂಡು ಒಟ್ಟು 46 ವಿಷಯಗಳ ಒಕ್ಕೂಟ (Combination) ಗಳಿವೆ. ಕಲೆಯ ಅಧ್ಯಯನಕ್ಕೆ ಪ್ರತ್ಯೇಕವಾದ ವಿದ್ಯಾಲಯಗಳಿವೆ.

ಹೈಯರ್ ಸೆಕೆಂಡರಿ ಮಟ್ಟದಲ್ಲಿ ಗುಣಮಟ್ಟದ ವಿದ್ಯಾಭ್ಯಾಸವನ್ನು ಖಾತರಿಗೊಳಿಸಲು ಸಮಗ್ರ ಅಧ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಸರಕಾರವು ನಡೆಸುತ್ತಿದೆ. ಕಲಿಕೆ ಹಾಗೂ ಬೋಧನೆಯ ಪ್ರಕ್ರಿಯೆಯಲ್ಲಿ ಇಂದು ಎದುರಾಗುತ್ತಿರುವ ಸಮಸ್ಯೆಗಳನ್ನು ಚರ್ಚಿಸಲು, ಕಲಿಕಾ ಚಟುವಟಿಕೆಗಳನ್ನು ಆಯೋಜಿಸಲು, ವಿಷಯಾಧರಿತ ಅಧ್ಯಾಪಕರ ಒಕ್ಕೂಟಗಳು ನೆರವಾಗುತ್ತಿವೆ.

## ಪಠ್ಯಕ್ರಮದ ಪರಿಷ್ಕರಣೆಯ ಮಹತ್ವ

ಜ್ಞಾನದ ಕ್ಷೇತ್ರವು ನಿರಂತರ ಬದಲಾವಣೆಗೆ ಒಳಗಾಗುತ್ತಿದೆ. ಈ ಬದಲಾವಣೆಗಳನ್ನು ಹೀರಿ ಅಂತರ್ಗತಗೊಳಿಸಿಕೊಂಡರೆ ಮಾತ್ರ ಪಠ್ಯಕ್ರಮಕ್ಕೆ ಸಮಕಾಲೀನ ಪ್ರಸ್ತುತತೆಗನುಗುಣವಾಗಿ ಮುಂದೆ ಸಾಗಲು ಸಾಧ್ಯವಾಗುವುದು. ಈ ಬದಲಾವಣೆಯು ಕೇರಳದ ಶಾಲೆಗಳ ಪಠ್ಯಕ್ರಮವು ಭಾರತದ ಇತರ ರಾಜ್ಯಗಳ ಪಠ್ಯ ಕ್ರಮಗಳಿಗಿಂತ ಭಿನ್ನವಾಗಿಸಿತು.

ಹೈಯರ್ ಸೆಕೆಂಡರಿಯಲ್ಲಿ ಚಟುವಟಿಕೆ ಆಧಾರಿತ ಕಲಿಕಾ ರೀತಿ ಈಗಾಗಲೇ ಜ್ಯಾರಿಗೊಂಡಿದ್ದರೂ ಪಠ್ಯಕ್ರಮದ ಸಮಗ್ರವಾದ ಪರಿಷ್ಕರಣೆ ಇದುವರೆಗೆ ನಡೆದಿಲ್ಲ. ಪ್ರಸ್ತುತ ಚಾಲ್ತಿಯಲ್ಲಿರುವ ಪಠ್ಯಕ್ರಮದ ಪರಿಷ್ಕರಣೆಯು ಸಮಕಾಲೀನ ಬದಲಾವಣೆಗಳಿಗೆ ಸ್ಪಂದಿಸುತ್ತದೆ ಮತ್ತು ಹೈಯರ್ ಸೆಕೆಂಡರಿ ವಿದ್ಯಾರ್ಥಿಗಳ ಮನೋಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಉನ್ನತ ವ್ಯಾಸಂಗಕ್ಕಿರುವ ಮೆಟ್ಟಿಲು ಎಂಬ ನಿಟ್ಟಿನಲ್ಲಿ ಹೈಯರ್ ಸೆಕೆಂಡರಿ ಪಠ್ಯಕ್ರಮವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ತಲುಪಿಸಬೇಕಾಗಿದೆ. ಅಂತರಾಷ್ಟ್ರೀಯ ಮಟ್ಟವೆಂದರೆ ಕೇವಲ ಒಂದು ನಿರ್ದಿಷ್ಟ ರಾಷ್ಟ್ರದ ವಿದ್ಯಾಭ್ಯಾಸದ ಮಟ್ಟವಲ್ಲ. ಹೈಯರ್ ಸೆಕೆಂಡರಿ ವಿದ್ಯಾಭ್ಯಾಸವನ್ನು ಪೂರೈಸಿದ ವಿದ್ಯಾರ್ಥಿಗೆ ಪ್ರಪಂಚದ ಯಾವುದೇ ಭಾಗದಲ್ಲೂ ಜೀವನವನ್ನು ಮುನ್ನಡೆಸಲು ಬೇಕಾದ ಸಾಮರ್ಥ್ಯವನ್ನು ನೀಡುವುದೇ ಇದರ ಉದ್ದೇಶವಾಗಿದೆ. ಅದು ಅಸ್ತಿತ್ವಕ್ಕೆ ಬೇಕಾಗಿ ವಿದ್ಯಾರ್ಥಿಯು ಆರ್ಜಿಸಬೇಕಾದ ಎಲ್ಲ ಅನುಭವಗಳ ಹಾಗೂ ಜ್ಞಾನದ ಮೊತ್ತವಾಗಿದೆ.

ಜಾಗತಿಕ ಮಟ್ಟದಲ್ಲಿ ಸ್ವೀಕೃತವಾದ ಶ್ರೇಷ್ಠ ಬೋಧನೆ ಹಾಗೂ ಕಲಿಕೆಯ ಮಾದರಿಗಳು ಕೇರಳದ ವಿದ್ಯಾರ್ಥಿಗಳಿಗೆ ಒದಗಿಸಬಹುದಾದ ಅಗತ್ಯವನ್ನು ಇದು ಸಾಬೀತುಗೊಳಿಸುತ್ತದೆ. ಆ ದಿಸೆಯಲ್ಲಿ ಸಾಗುವ ಪ್ರಯತ್ನ ಎಂಬಂತೆ ಸಮಗ್ರವಾದ ಪಠ್ಯಕ್ರಮ ಪರಿಷ್ಕರಣೆಯನ್ನು ರೂಪಿಸಲಾಗಿದೆ. ಪಠ್ಯಕ್ರಮಗಳನ್ನು ಕಾಲೋಚಿತವಾಗಿ ಪರಿಷ್ಕರಿಸಬೇಕಾದುದು ಅತ್ಯಗತ್ಯವೆಂದು ಪಠ್ಯಕ್ರಮಕ್ಕೆ ಸಂಬಂಧಪಟ್ಟ ಸರಕಾರವು ನಿಯೋಜಿಸಿದ ಉನ್ನತ ಸಮಿತಿಯು ಒತ್ತಿ ಹೇಳಿದೆ. ಅಲ್ಲದೆ, ವಿದ್ಯಾಭ್ಯಾಸ ಹಕ್ಕು ನಿಯಮದ ಪಠ್ಯಕ್ರಮ, ಮೌಲ್ಯಮಾಪನ ಎಂಬಿವುಗಳಿಗೆ ಸಂಬಂಧಿಸಿದ ಕಾಯ್ದೆಯನ್ನು ಪಠ್ಯಕ್ರಮದ ಪರಿಷ್ಕರಣೆಯಲ್ಲಿ ಅಗತ್ಯವಾಗಿ ಪರಿಗಣಿಸಬೇಕಾಗಿದೆ.

> ಐದು ವರ್ಷಗಳಿಗೆ ಮಿಗಿಲಾಗಿ ಜಾರಿಯಲ್ಲಿರುವ ಪಠ್ಯಕ್ರಮ ಹಾಗೂ ಪಠ್ಯ ಪುಸ್ತಕಗಳನ್ನು ತುರ್ತಾಗಿ ಎಸ್.ಸಿ.ಇ.ಆರ್.ಟಿ. (SCERT) ಯ ನೇತೃತ್ವದಲ್ಲಿ ಪರಿಷ್ಕರಿಸಬೇಕು.
>
> – ಪ್ರೊ. ಪಿ.ಒ.ಜೆ. ಲಬ್ಬ ಸಮಿತಿ

> ಜ್ಞಾನ ಸಂಪನ್ನ ಸಮಾಜ ಎಂಬ ನೆಲೆಯಲ್ಲಿ ಆಯಾ ಕಾಲದ ವಿವಿಧ ಸವಾಲುಗಳನ್ನು ಎದುರಿಸಲು ಪಠ್ಯಕ್ರಮವನ್ನು ಪುನರ್ ನಿರ್ಮಿಸಿ ಆಮೂಲಾಗ್ರವಾಗಿ ಪರಿಷ್ಕರಿಸಬೇಕಾದುದು ಅತ್ಯಗತ್ಯವಾಗಿದೆ.
>
> – ಡಾ. ಪಿ.ಎ. ಅಬ್ದುಲ್ ಅಝೀಜ್ ಸಮಿತಿ

# ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ 2009

### ಸೆಕ್ಷನ್ –29 (ಅಧ್ಯಾಯ 5)

## ಪಠ್ಯಕ್ರಮ ಹಾಗೂ ಮೌಲ್ಯನಿರ್ಣಯ ಸೂಚಕಗಳು

1) ಪ್ರಾಥಮಿಕ ಶಿಕ್ಷಣದ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನಗಳನ್ನು ಆಯಾ ಸರಕಾರದ ಅಧಿಸೂಚನೆಯ ಮೂಲಕ ಸೂಚಿಸಲಾಗುವ ಒಂದು ಶೈಕ್ಷಣಿಕ ಅಧಿಕಾರ ಸ್ಥಾನದ ಮೂಲಕ ಪ್ರತಿಪಾದಿಸಬೇಕು.

2) ಶೈಕ್ಷಣಿಕ ಅಧಿಕಾರ ಸ್ಥಾನ 1 ನೇ ಉಪವಿಭಾಗದ ಪ್ರಕಾರ ಪಠ್ಯಕ್ರಮ ಹಾಗೂ ಮೌಲ್ಯ ನಿರ್ಣಯ ವಿಧಾನವನ್ನು ಪ್ರತಿಪಾದಿಸುವಾಗ ಕೆಳಗಿನ ಅಂಶಗಳನ್ನು ಪರಿಗಣಿಸಬೇಕಾಗಿದೆ.

   a) ಸಂವಿಧಾನದಲ್ಲಿ ಹೇಳಲಾದ ಮೌಲ್ಯಗಳ ಹೊಂದಿಕೆ.

   b) ಮಗುವಿನ ಸರ್ವತೋಮುಖವಾದ ಬೆಳವಣಿಗೆ.

   c) ಮಗುವಿನ ಜ್ಞಾನ, ಸಾಮರ್ಥ್ಯ, ಕೌಶಲ್ಯಗಳನ್ನು ಕ್ರಮೇಣ ಹೆಚ್ಚಿಸುವುದು.

   d) ದೈಹಿಕ ಹಾಗೂ ಮಾನಸಿಕ ಸಾಮರ್ಥ್ಯಗಳ ಸಂಪೂರ್ಣ ಬೆಳವಣಿಗೆ.

   e) ಮಗುವಿಗೆ ಇಷ್ಟವಾದ, ಶಿಶು ಕೇಂದ್ರಿತವಾದ ಚಟುವಟಿಕೆಗಳಿರುವ ಕಲಿಕೆ.

   f) ಕಲಿಕೆಯ ಮಾಧ್ಯಮವನ್ನು ಮಗುವಿನ ಮಾತೃಭಾಷೆಯಲ್ಲಿಯೇ ನೀಡುವುದನ್ನು ಆದಷ್ಟು ಪ್ರಾಯೋಗಿಕಗೊಳಿಸಬೇಕು.

   g) ಭಯ, ಮಾನಸಿಕ ಒತ್ತಡ ಉಂಟಾಗುವ ಸ್ಥಿತಿ, ಆತಂಕ ಇವುಗಳಿಂದ ಮಗುವನ್ನು ಮುಕ್ತಗೊಳಿಸಿ, ಸ್ವತಂತ್ರವಾಗಿ ಅಭಿಪ್ರಾಯ ಪ್ರಕಟಿಸಲು ಮಗುವಿಗೆ ಸಹಾಯ ನೀಡುವುದು.

   h) ಮಗುವಿನ ಜ್ಞಾನಗ್ರಹಣ ಮತ್ತು ಅದನ್ನು ಪ್ರಯೋಗಿಸುವ ಸಾಮರ್ಥ್ಯದ ಸಮಗ್ರ ಮತ್ತು ನಿರಂತರ ಮೌಲ್ಯಮಾಪನ.

## ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಿರುವ ಮಕ್ಕಳ ಹಕ್ಕು ಕೇರಳದ ಕಾನೂನುಗಳು ಹಾಗೂ ಪರಿಚ್ಛೇದಗಳು 2011 ಶೈಕ್ಷಣಿಕ ಅಧಿಕಾರಿಗಳು

1. 29ನೇ ಪರಿಚ್ಛೇದದ ಪ್ರಕಾರ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಮಿತಿ (SCERT) ಶೈಕ್ಷಣಿಕ ಅಧಿಕಾರಗಳನ್ನು ನೀಡಲಾಗಿದೆ.
2. (1) ನೇ ಉಪಪರಿಚ್ಛೇದದ ಅಡಿಯಲ್ಲಿ ಪ್ರಕಟಿಸಿರುವ ಪ್ರಕಾರ ಶೈಕ್ಷಣಿಕ ಅಧಿಕಾರವನ್ನು ಹೊಂದಿರುವ ಸಂಸ್ಥೆಯು ಪಾಠ್ಯಕ್ರಮ, ಮೌಲ್ಯಮಾಪನ ಸೂಚಕ ತಯಾರಿಸುವಾಗ ಈ ಕಾನೂನಿನ 29ನೇ ಪರಿಚ್ಛೇದದ (2)ನೇ ಉಪಪರಿಚ್ಛೇದದ ಅಂಶ(a) ಯಿಂದ (f) ವರೆಗಿನ ನಿಬಂಧನೆಗಳಿಗೆ ಭಾದಕವಾಗದಂತೆ;

(a)ಸಕಾಲಿಕವೂ ಪ್ರಾಯಕ್ಕನುಗುಣವೂ ಆಗಿರುವ ಪಠ್ಯಕ್ರಮ ಮತ್ತು ಪಾಠ ಪುಸ್ತಕಗಳಿಗೆ ಮೂಲಭೂತ ವಾದ ಜೀವನ ನೈಪುಣ್ಯವನ್ನು ರೂಢಿಸಿಕೊಳ್ಳಲು ಅಗತ್ಯವಾದ ಕಲಿಕಾ ಸಾಮಾಗ್ರಿಗಳೂ ಒಳಗೊಂಡಂತೆ ಇತರ ಕಲಿಕಾ ಸಾಮಾಗ್ರಿಗಳಿಗೆ ರೂಪು ನೀಡುವುದು;

(b) ಒಂದರಿಂದ ಎಂಟರವರೆಗಿನ ತರಗತಿಗಳಲ್ಲಿ ಪ್ರತಿಯೊಂದು ವಿಷಯಕ್ಕೂ ಅಗತ್ಯವಾದ ಕನಿಷ್ಠ ಕಲಿಕಾ ಪರಿಣಾಮಗಳನ್ನು ನಿರ್ಣಯಿಸಬೇಕಲ್ಲದೆ ಮಕ್ಕಳಿಗಾಗಿ ಮೌಲಿಕವಾದ ಸೂಚಕಗಳನ್ನು ವಿಕಾಸಗೊಳಿಸಿ ಮಕ್ಕಳ ಕಲಿಕಾಪರಿಣಾಮಕ್ಕಾಗಿ ಅಧ್ಯಾಪಕರ ಜವಾಬ್ದಾರಿಯ ಮಾನದಂಡಗಳಿಗೆ ರೂಪು ನೀಡುವುದು;

(c)ಕಲಿಕೆ ಮತ್ತು ಬೋಧನೆಯ ಪರಿಣಾಮಗಳ ಆಧಾರದಲ್ಲಿ ಸೇವಾಕಾಲದ ಅಧ್ಯಾಪಕ ತರಬೇತಿ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವುದು;

(d)1995ರ ನ್ಯೂನತೆಗಳಿರುವ ವ್ಯಕ್ತಿಗಳಿಗಾಗಿರುವ (ಸಮಾನ ಹಕ್ಕುಗಳು, ಹಕ್ಕುಗಳ ಸಂರಕ್ಷಣೆ ಹಾಗೂ ಪೂರ್ಣ ಭಾಗವಹಿಸುವಿಕೆ) ನಿಯಮಗಳಿಗನುಸಾರವಾಗಿ ನ್ಯೂನತೆಗಳಿರುವ ಮಕ್ಕಳಿಗೆ ಶಿಕ್ಷಣವನ್ನು ನೀಡುವುದಕ್ಕಾಗಿ ಅಧ್ಯಾಪಕರಿಗೆ ಸೇವಾಪೂರ್ವ ಮತ್ತು ಸೇವಾ ಕಾಲದ ತರಬೇತಿ ಕಾರ್ಯಕ್ರಮಗಳಿಗೆ ರೂಪು ನೀಡುವುದು:

(e)ನಿರಂತರವೂ ಸಮಗ್ರವೂ ಆದ ಮೌಲ್ಯಮಾಪನವನ್ನು ಜಾರಿಗೆ ತರುವುದಕ್ಕಾಗಿ ಅಗತ್ಯವಾದ ಸೂಚನೆ ಗಳನ್ನೂ ಮಾಹಿತಿಗಳನ್ನೂ ತಯಾರಿಸುವುದು.

(f) ಶೈಕ್ಷಣಿಕ ಧೋರಣೆಗಳು ಹಾಗೂ ಕಾರ್ಯಕ್ರಮಗಳು, ಪಠ್ಯಕ್ರಮ, ಭೋಧನೆಯ ಮೂಲಕ ಮಕ್ಕಳ ಮೇಲಾಗುವ ಪರಿಣಾಮ ಇತ್ಯಾದಿಗಳ ಕುರಿತು ಸಂಶೋಧನೆಗಳನ್ನೂ ಅಧ್ಯಯನಗಳನ್ನೂ ಕೈಗೊಳ್ಳುವುದು ಮತ್ತು ಅದನ್ನು ಜಾರಿಗೊಳಿಸುವುದು.

ಶಿಕ್ಷಣ ಹಕ್ಕು ಕಾಯ್ದೆಯ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನವು ಸಾಂವಿಧಾನಿಕ ಬಾಧ್ಯತೆಯಾಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ಪಠ್ಯಕ್ರಮವನ್ನು ಪರಿಷ್ಕರಿಸಬೇಕು. ಈ ಹಿನ್ನೆಲೆಯಲ್ಲಿ ಪಾಠಪುಸ್ತಕ ಪರಿಷ್ಕರಣೆಯನ್ನು ನಾವು ಕಾಣಬೇಕು.

**ಕೇರಳ ಶಾಲಾ ಪಠ್ಯಕ್ರಮದ (2013) ವೈಶಿಷ್ಟ್ಯಗಳನ್ನು ನೋಡೋಣ.**

1) ವಿದ್ಯಾರ್ಥಿ ಕೇಂದ್ರಿತ, ಪ್ರಕ್ರಿಯಾತ್ಮಕ, ಚಟುವಟಿಕೆ ಪ್ರಧಾನ, ಮೌಲ್ಯಾಧಾರಿತ ಪಠ್ಯಕ್ರಮ.

2) ಬೌದ್ಧಿಕ ಹಂತದಲ್ಲಿ, ಪ್ರಕ್ರಿಯೆಗಳ ಹಂತದಲ್ಲಿ, ಮನೋಭಾವ ಹಂತದಲ್ಲಿ ಹಾಗೂ ಮೌಲ್ಯಗಳ ಹಂತದಲ್ಲಿ ಮಗುವಿನ ಕಲಿಕಾ ಸಾಧನೆಗಳಿಗೆ ಒತ್ತು ನೀಡಲಾಗಿದೆ.

3) ಜ್ಞಾನ ನಿರ್ಮಾಣ ಎಂಬ ತಾತ್ವಿಕ ನೆಲೆಗಟ್ಟಿನಲ್ಲಿರುವ ಪಠ್ಯಕ್ರಮ.

4) ವಿನಿಮಯ ಪ್ರಕ್ರಿಯೆಯಲ್ಲಿ ವೈವಿಧ್ಯಪೂರ್ಣವೂ ಯೋಗ್ಯವೂ ಆದ ಅಧ್ಯಾಪನ ತಂತ್ರಗಳನ್ನು ಸ್ವೀಕರಿಸಿ ಉಪಯೋಗಿಸಲು ಅಧ್ಯಾಪಕರಿಗೆ ಸ್ವಾತಂತ್ರ್ಯವಿದೆ.

5) ಕಲಿಕಾಸಾಧನೆ, ಮಕ್ಕಳ ವಿಭಿನ್ನ ಗುಣಮಟ್ಟ ಇವುಗಳನ್ನು ತಿಳಿದು ವಿವಿಧ ಕಲಿಕಾ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಕಂಡು ಹಿಡಿಯುವ ಕಲಿಕೆ, ಆಶಯಗ್ರಹಣ ರೀತಿ, ಹೊಸ ಚಿಂತನೆಗಳು, ಯೋಚಿಸುವ ಸಾಮರ್ಥ್ಯವನ್ನು ಬೆಳೆಸುವುದು. ಸಹಕಾರ ಕಲಿಕೆ, ಸಹವರ್ತಿ ಕಲಿಕೆ, ಚಿಂತನೆಗಳ ಪ್ರತಿಫಲನ, ವೈಯಕ್ತಿಕ ಮತ್ತು ಗುಂಪಿನ ಅವಕಾಶಗಳನ್ನು ಒದಗಿಸುವುದು ಮೊದಲಾದ ವಿಧಾನಗಳನ್ನು ಪರಿಗಣಿಸುವುದು.

6) ಉಚಿತ ಸಾರ್ವಜನಿಕ ಶಿಕ್ಷಣ ಎಂಬ ಹಾಗೆ ಎಲ್ಲ ಮಕ್ಕಳ ಕಲಿಕಾ ಸಾಧನೆಗೆ ಪ್ರಾಧಾನ್ಯ ನೀಡಬೇಕು.

7) ಪ್ರಿ–ಪ್ರೈಮರಿಯಿಂದ ಹೈಯರ್ ಸೆಕಂಡರಿ ವರೆಗೆ ಸಮಗ್ರವಾದ ಪಠ್ಯಕ್ರಮ.

8) ಪ್ರತಿಯೊಂದು ತರಗತಿಗೂ ವಿವಿಧ ವಿಷಯಗಳ ಹೂರಣವನ್ನು ರಾಷ್ಟ್ರೀಯ ಮಟ್ಟದ ವಿಷಯಗಳ ಹೂರಣದೊಂದಿಗೆ ಏಕೀಕರಿಸಿ, ಕೇರಳದ ಪಾಠಪುಸ್ತಕಗಳನ್ನು ತಯಾರಿಸಲಾಗುವುದು.

9) ರಾಷ್ಟ್ರೀಯ ಮಟ್ಟದಲ್ಲಿರುವಂತೆ ಒಂದು ಮತ್ತು ಎರಡನೇ ತರಗತಿಗಳಿಗೆ ಮಾತೃಭಾಷೆ(ಪರಿಸರ ಅಧ್ಯಯನದೊಂದಿಗೆ) ಗಣಿತ ಮತ್ತು ಇಂಗ್ಲಿಷ್ ಎಂಬ ಮೂರು ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

10) ಒಂದರಿಂದ ನಾಲ್ಕನೇ ತರಗತಿಯವರೆಗಿನ ಇಂಗ್ಲಿಷ್ ಮಾಧ್ಯಮ ಪಾಠಪುಸ್ತಕಗಳನ್ನು ಸಿದ್ಧಪಡಿಸಲಾಗುವುದು.

11) ಶಾಸ್ತ್ರೀಯ ಭಾಷೆ ಹಾಗೂ ಮಾತೃಭಾಷೆ ಎಂಬ ನೆಲೆಯಲ್ಲಿ ಕನ್ನಡ ಭಾಷಾ ಕಲಿಕೆಗೆ ವಿಶೇಷವಾದ ಪ್ರಾಧಾನ್ಯ ನೀಡಲಾಗುವುದು.

12) ಪ್ರಿ–ಪ್ರೈಮರಿ ಶಿಕ್ಷಣಕ್ಕಾಗಿ ಏಕೀಕೃತ ಪಠ್ಯಕ್ರಮವನ್ನು ರೂಪಿಸಿ, ಔಪಚಾರಿಕ ಶಿಕ್ಷಣದ ಅಂಗವಾಗಿ ಬದಲಾಯಿಸಲು ನಿರ್ದೇಶಿಸಲಾಗುವುದು.

13) ಮಾಹಿತಿ ತಂತ್ರಜ್ಞಾನವನ್ನು (ICT) ಒಂದು ಪಠ್ಯವಿಷಯ ಎನ್ನುವುದಕ್ಕಿಂತ ಪಠ್ಯವಿಷಯಗಳನ್ನು ಸಂವಹನಮಾಡುವ ಮಾಧ್ಯಮವಾಗಿ ಬಳಸಬೇಕು.

14) ವಿಶೇಷವಾದ ಪರಿಗಣನೆಗೆ ಅರ್ಹರಾದ ಮಕ್ಕಳಿಗೆ ವಿಭಿನ್ನ ಹಾಗೂ ನೂತನವಾದ ಕಲಿಕಾ ತಂತ್ರಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು ಮತ್ತು ವಿಭಿನ್ನವಾದ ಮೌಲ್ಯಮಾಪನ ಚಟುವಟಿಕೆಗಳನ್ನು ಆವಿಷ್ಕರಿಸಿ ಅನುಷ್ಠಾನಗೊಳಿಸುವುದು.

15) ಕಲಿಕಾ ಸಾಧನೆಗಳನ್ನು ಅವಲಂಬಿಸಿದ ಸಮಗ್ರ ಮತ್ತು ನಿರಂತರವಾದ ಮೌಲ್ಯ ಮಾಪನ (**CCE**) ನಡೆಸಬೇಕು.

16) ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ, ಕಲೆಯ ಶಿಕ್ಷಣ, ವೃತ್ತಿ ಪರಿಚಯ ಇವುಗಳನ್ನು ಕಡ್ಡಾಯ ಪಠ್ಯವಿಷಯಗಳಾಗಿ ಪರಿಗಣಿಸಲಾಗಿದೆ.

17) ಹೈಯರ್ ಸೆಕಂಡರಿ ವಿಭಾಗದಲ್ಲಿ ಕಾಲಾನುಸಾರಿಯಾಗಿ ಪಾಠ ಪುಸ್ತಕಗಳನ್ನು ಸಿದ್ಧಪಡಿಸಬೇಕು.

18) ರಾಷ್ಟ್ರೀಯ ಶಿಕ್ಷಣ ನಿಯಮದ ಬೆಳಕಿನಲ್ಲಿ ಹಕ್ಕು ಆಧಾರಿತ ಶಿಕ್ಷಣಕ್ಕೆ ಒತ್ತು ನೀಡಬೇಕು.

19) ಪ್ರತಿಯೊಬ್ಬ ಅಧ್ಯಾಪಕನೂ ಓರ್ವ ಸಹರಕ್ಷಕ (Mentor)ನ ಸ್ಥಾನಕ್ಕೇರಿ, ಬೇಕಾದ ಕಾಳಜಿಯನ್ನು, ರಕ್ಷಣೆಯನ್ನು ಶಾಲೆಯಲ್ಲಿ ಮತ್ತು ತರಗತಿಯಲ್ಲಿ ಮಗುವಿಗೆ ಒದಗಿಸಬೇಕು.

20) ಅಧ್ಯಾಪಕರು ಪಾಲಿಸಬೇಕಾದ ವೃತ್ತಿ ನೀತಿ ಸಂಹಿತೆಗೆ (Code of Professional Ethics for School Teacher) ಒತ್ತು ನೀಡಲಾಗುವುದು.

21) 21ನೇ ಶತಮಾನದ ಕಲಿಕಾ ನೈಪುಣ್ಯಗಳು (21st Century Learning skills) ಕಾಲೋಚಿತವಾಗಿ ಗಳಿಸಿಕೊಳ್ಳುವುದಕ್ಕೆ ಯೋಗ್ಯವಾಗಿವೆ.

22. ಮಾನವೀಯ ಮೌಲ್ಯಗಳನ್ನು ಒಳಗೊಂಡ ತಲೆಮಾರನ್ನು ಸೃಷ್ಟಿಸಲು ಸಮರ್ಥವಾಗಿದೆ.

23. ಸಮಾನ ಅವಕಾಶ ಮತ್ತು ಸಮಾನತೆ (Equity and Equality) ಲಭಿಸುವ ಶಿಕ್ಷಣ ವ್ಯವಸ್ಥೆಗೆ ಹೊಂದಿಕೊಂಡಿದೆ.

ಸಹಜವಾದ ಕಲಿಕೆ, ಕಲಿಯುವ ಮಕ್ಕಳ ಬೌದ್ಧಿಕ, ಮಾನಸಿಕ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು ತಲೆ, ಹೃದಯ, ಹಸ್ತ ಸಮನ್ವಯಗೊಂಡ ಪಠ್ಯಕ್ರಮ (Curriculum for the harmony of head, Heart and Hand) ಎಂಬ ಕಾಣ್ಕೆಯೊಂದಿಗೆ ಪಠ್ಯಕ್ರಮವನ್ನು ನಾವು ಮಾಡಬೇಕು.

ಹಾಗಾದರೆ ಪಠ್ಯಕ್ರಮ ಸಮೀಪನ ಹೇಗಿರಬೇಕು? ಅದರ ಸೈದ್ಧಾಂತಿಕ ಮತ್ತು ಪ್ರಾಯೋಗಿಕವಾದ ಅಡಿಪಾಯ ಹೇಗಿರಬೇಕು?

## 1.3 ಪಠ್ಯಕ್ರಮ ಸಮೀಪನ

ಪಂಚೇಂದ್ರಿಯಗಳನ್ನು ಬಳಸಿ ಸುತ್ತುಮುತ್ತಲಿನ ಪರಿಸರದಿಂದ ಕಲಿಯಲಿರುವ ಸಹಜ ಸಾಮರ್ಥ್ಯಗಳೊಂದಿಗೆ ಮಗು ಹುಟ್ಟುತ್ತದೆ. ಜಗತ್ತನ್ನು ಹೊಸ ರೀತಿಯಲ್ಲಿ ನೋಡಲು, ಅರ್ಥಮಾಡಲು,

ವ್ಯವಹರಿಸಲು, ಮೌಲ್ಯಮಾಪನ ಮಾಡಲು ಶಾಲೆಯ ಶಿಕ್ಷಣದ ಮೂಲಕ ಮಗುವಿಗೆ ಸಾಧ್ಯವಾಗಬೇಕು. ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸಿ, ಆ ಸಮಸ್ಯೆಗಳನ್ನು ಪರಿಹರಿಸಿಕೊಂಡು ಕಲಿಕೆ ನಡೆಯುತ್ತದೆ. ಪಠ್ಯಕ್ರಮ ವಿನಿಮಯ ಸಮೀಪನದ ಲಕ್ಷಣಗಳು ಯಾವುವು?

- ಚಟುವಟಿಕೆ ಆಧಾರಿತವಾದುದು.
- ಪ್ರಕ್ರಿಯೆಗಳಿಂದ ಕೂಡಿದ್ದು.
- ಕಲಿಕೆಯನ್ನು ಗಟ್ಟಿಗೊಳಿಸುವುದು.
- ಕಲಿಕಾ ಸಾಧನೆಗಳನ್ನು ಸಫಲಗೊಳಿಸಲು ಸಮರ್ಥವಾದುದು.
- ಪರಿಸರ ಆಧಾರಿತವಾದುದು.
- ವಿಕಾಸದ ವಲಯಗಳನ್ನು ಪರಿಗಣಿಸುವುದು.
- ವಿದ್ಯಾರ್ಥಿಯ ಸ್ವಭಾವಕ್ಕೆ ಅನುಗುಣವಾದುದು.
- ಕಲಿಕೆಯೊಂದಿಗೆ ಮೌಲ್ಯ ನಿರ್ಣಯವೂ ಜತೆಯಾಗಿರುವುದು.

ಜ್ಞಾನನಿರ್ಮಾಣ ಆಧಾರಿತವಾದ ಕಲಿಕಾ ರೀತಿಯು ಪಠ್ಯಕ್ರಮಕ್ಕೆ ಆಧಾರವಾಗಿದೆ. ವಿದ್ಯಾರ್ಥಿಯ ಆರ್ಜಿತ ಜ್ಞಾನ ಮತ್ತು ಆಶಯ ಪರಿಸರವನ್ನು ಪರಿಗಣಿಸಿಕೊಂಡು ಪ್ರಯೋಜನಕಾರಿಯಾದ ಕಲಿಕಾ ಚಟುವಟಿಕೆಗಳನ್ನು ಏರ್ಪಡಿಸುವುದರಿಂದ ಸಹಜ ಜ್ಞಾನವನ್ನು ರೂಪಿಸಲು ಸಾಧ್ಯ ಎಂಬುದು ಈ ದೃಷ್ಟಿಕೋನದ ವೈಶಿಷ್ಟ್ಯ.

### ಕಲಿಕಾನುಭವಗಳು

ಬದುಕಿನ ವಿಭಿನ್ನ ಹಿನ್ನೆಲೆಗಳಿಂದ ಬರುವ ವಿದ್ಯಾರ್ಥಿಗಳ ಆರ್ಜಿತ ಜ್ಞಾನ, ಸಾಮರ್ಥ್ಯ, ಆಸಕ್ತಿ ಇವುಗಳು ವಿಭಿನ್ನವಾಗಿರುವವಲ್ಲವೇ. ಈ ವೈಶಿಷ್ಟ್ಯವನ್ನು ಪರಿಗಣಿಸಿಕೊಂಡು ವ್ಯಕ್ತಿ ಭಿನ್ನತೆಯನ್ನೂ ಬಹುಮುಖ

ಮಕ್ಕಳು ತೊಡಗಿಕೊಂಡಿರುವ ಜ್ಞಾನ ನಿರ್ಮಾಣ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮಕ್ಕಳ ತಿಳುವಳಿಕೆಯನ್ನು ಗಟ್ಟಿಗೊಳಿಸಲು ಸಹಾಯಕವಾಗುವುದು. ಕಲಿಕೆಯಲ್ಲಿ ತೊಡಗಿಸಿಕೊಂಡಿರುವ ಮಕ್ಕಳು ತಮ್ಮ ಜ್ಞಾನವನ್ನು ತಾವೇ ನಿರ್ಮಿಸಿಕೊಳ್ಳುತ್ತಾರೆ. ತಾವು ಶಾಲೆಯಲ್ಲಿ ಕಲಿತಿರುವುದನ್ನು ಹೊರಗಿನ ವಿಷಯಗಳೊಂದಿಗೆ ಅನ್ವಯಿಸಿ ಪ್ರಶ್ನೆಗಳನ್ನು ಕೇಳುವಂತೆ ಪ್ರೋತ್ಸಾಹಿಸಬೇಕು. ಬಾಯಿಪಾಠ ಹೊಡೆದು ಒಂದೇ ಒಂದು ಸರಿಯಾದ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ, ತಮ್ಮದೇ ವಾಕ್ಯಗಳಲ್ಲಿ ಸ್ವತಂತ್ರವಾಗಿ ಉತ್ತರವನ್ನು ಹೇಳುವಂತೆ ಪ್ರೋತ್ಸಾಹಿಸಬೇಕು. ಇವುಗಳೆಲ್ಲಾ ತಮ್ಮ ಜ್ಞಾನವನ್ನು ವಿಸ್ತರಿಸುವ ಮಕ್ಕಳಿಗೆ ಸಹಾಯ ಮಾಡುವ ಪ್ರಧಾನ ಹೆಜ್ಜೆಗಳಾಗಿವೆ. ಬೌದ್ಧಿಕವಾದ ಊಹೆ ಅರ್ಥವತ್ತಾದ ಒಂದು ಬೋಧನ ಕ್ರಮವಾಗಿದೆ. ಇದನ್ನು ಪ್ರೋತ್ಸಾಹಿಸಬೇಕು. ಹಲವಾರು ಬಾರಿ ತಮ್ಮ ದೈನಂದಿನ ಅನುಭವಗಳಿಂದ ಅಥವಾ ಮಾಧ್ಯಮ ಸಂಪರ್ಕದಿಂದ ಮಕ್ಕಳ ಮನಸ್ಸಿನಲ್ಲಿ ಕೆಲವು ಆಶಯಗಳು ರೂಪುಗೊಂಡಿರಬಹುದು. ಆದರೆ ಅಧ್ಯಾಪಕರು ನಿರೀಕ್ಷಿಸುವ ಮಾತುಗಳಲ್ಲಿ ಅವುಗಳನ್ನು ಅವರಿಗೆ ಪ್ರಕಟಿಸಲು ಸಾಧ್ಯವಾಗದು. ತಿಳಿದಿರುವುದು ಮತ್ತು ತಿಳಿಯದಿರುವುದರ ಮಧ್ಯೆ ಹೊಸ ಜ್ಞಾನದ ಸೃಷ್ಟಿಯಾಗುತ್ತದೆ. ಶಾಲೆಯ ಹೊರಗೆ ಮನೆ ಅಥವಾ ಸಮಾಜದಲ್ಲಿ ಬೆಳೆಸುವ ಕರಕೌಶಲ್ಯದ ರೂಪದಲ್ಲಿ ಇಂತಹ ಜ್ಞಾನ ಸೃಷ್ಟಿಯಾಗುವುದು. ಇಂತಹ ಎಲ್ಲ ತಿಳುವಳಿಕೆಗಳನ್ನು ಗೌರವಿಸಬೇಕು. ತಿಳುವಳಿಕೆ ಮತ್ತು ಸಂವೇದನಶೀಲತೆಯಿರುವ ಅಧ್ಯಾಪಕರು ಈ ಕುರಿತು ಪ್ರಜ್ಞಾವಂತರಾಗಿರುತ್ತಾರೆ. ಮಕ್ಕಳ ವಿಕಾಸ ಸಾಧ್ಯತೆಯನ್ನು ಮನಗಂಡು, ಚಟುವಟಿಕೆಗಳನ್ನು ಒದಗಿಸಿ ಹಾಗೂ ಪ್ರಶ್ನೆಗಳನ್ನು ಕೇಳಿ ಅವರನ್ನು ಮುನ್ನಡೆಸಲು ಅಧ್ಯಾಪಕರಿಗೆ ಸಾಧ್ಯ.

ಅನ್ವೇಷಣೆ, ನಿರೀಕ್ಷಣೆ, ಪ್ರಶ್ನೆಗಳನ್ನು ಕೇಳುವುದು, ಚರ್ಚಾಕೂಟಗಳು ಇವುಗಳ ಮೂಲಕ ಸಿದ್ಧಾಂತ ರೂಪೀಕರಣ ಮತ್ತು ಆಶಯ ಸೃಷ್ಟಿಗಳಾಗುತ್ತವೆ. ಇವುಗಳು ಸಕ್ರಿಯ ಭಾಗವಹಿಸುವಿಕೆಯ ಭಾಗವಾಗಿವೆ. ಶಾಲೆಗಳು ಪ್ರಶ್ನೆಗಳನ್ನು ಕೇಳುವುದಕ್ಕೂ ಚರ್ಚಿಸುವುದಕ್ಕೂ ಶೋಧಿಸುವುದಕ್ಕೂ ವಿಶ್ಲೇಷಿಸುವುದಕ್ಕೂ ನಿಗಮನವನ್ನು ಕಂಡುಕೊಳ್ಳಲೂ ಅವಕಾಶವನ್ನು ಒದಗಿಸಬೇಕು.

ಎನ್.ಸಿ.ಎಫ್. 2005 ಪುಟ. 41,42

ವಾದ ಬುದ್ಧಿಮತ್ತೆಯನ್ನೂ ಗಮನದಲ್ಲಿರಿಸಿಕೊಂಡು ಕಲಿಕೆಯ ಅನುಭವಗಳನ್ನು ರೂಪಿಸಬೇಕಾದುದು ಮುಖ್ಯವಾಗಿದೆ.

**ಕಲಿಕಾ ಪರಿಸರ**

ವಿದ್ಯಾರ್ಥಿಯ ಆಸಕ್ತಿ ಹಾಗೂ ಬೆಳವಣಿಗೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ವೈವಿಧ್ಯಪೂರ್ಣ ಕಲಿಕಾ ಚಟುವಟಿಕೆಗಳಲ್ಲಿ ಭಾಗಿಯಾಗಲು ಅನುಕೂಲವಾಗುವಂತೆ ತರಗತಿಗಳನ್ನು ಸಿದ್ಧಪಡಿಸಬೇಕು. ವಿದ್ಯಾರ್ಥಿ ಕೇಂದ್ರಿತ ಕಲಿಕಾ ಚಟುವಟಿಕೆಗಳಿಗೆ ಸಹಾಯಕವಾಗುವಂತೆ ಚಟುವಟಿಕೆ ಆಧಾರಿತ ಕಲಿಕೆಯನ್ನು ಹೇಗೆ ಮಾಡಬೇಕೆಂದು ನಾವು ತಿಳಿದುಕೊಂಡೆವಲ್ಲವೇ?

**ಕಲಿಕಾ ಪ್ರಕ್ರಿಯೆ**

- ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಅನುಭವಗಳ ಆಧಾರದಲ್ಲಿ ಜ್ಞಾನ ನಿರ್ಮಾಣ (Knowledge Construction) ಮಾಡುವನು.
- ಜ್ಞಾನ ನಿರ್ಮಾಣವನ್ನು ವೈಯುಕ್ತಿಕ ಮತ್ತು ಸಾಮಾಜಿಕ ಹಂತಗಳಲ್ಲಿ ಮಾಡಬೇಕು.
- ವಿವಿಧ ಕಲಿಕಾ ಶೈಲಿಗಳನ್ನು (Learning Style) ಪರಿಗಣಿಸಿಕೊಂಡು ವಿವಿಧ ಇಂದ್ರಿಯಾನುಭವಗಳನ್ನು (Multisensory Experiences) ನೀಡುವ ಮೂಲಕ ಕಲಿಕೆಯನ್ನು ಯಶಸ್ವಿಗೊಳಿಸಬಹುದು.
- ಕಲಿಕಾನುಭವಗಳನ್ನು ಸಕ್ರೀಯವಾಗಿ (spiralling) ಮಂಡಿಸುವ ಮೂಲಕ ಕಲಿಕೆಯು ಸಾಕಷ್ಟು ಫಲಕಾರಿಯಾಗುತ್ತದೆ.
- ಕಲಿಕಾ ಚಟುವಟಿಕೆಗಳಿಗೆ ಯೋಗ್ಯವಾದ ನಮನೀಯತೆ (Flexibility), ಹೊಂದಾಣಿಕೆ (Adaptations), ಕಲಿಕಾ ಚಟುವಟಿಕೆಗಳ ಆಯ್ಕೆ (Selection) ಇವುಗಳನ್ನು ನಡೆಸುವ ಮೂಲಕ ವಿಭಿನ್ನ ಅಭಿರುಚಿಯ ಕಲಿಕೆಯ ಆಸಕ್ತರನ್ನು ಪರಿಗಣಿಸಬಹುದು.
- ಸಾಕಷ್ಟು ಕಲಿಕಾನುಭವಗಳು ಪ್ರತಿಯೊಬ್ಬ ವಿದ್ಯಾರ್ಥಿಗೆ ದೊರಕಿದಾಗಲೇ ಕಲಿಕಾ ಸಾಧನೆ (Learning outcome) ದೃಢವಾಗುವುದು.
- ಕಲಿಕೆ ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳು ನಿರಂತರವಾಗಿ ನಡೆಯಬೇಕಾಗಿರುವುದು.
- ವಿಷಯಾಧಾರಿತ ವಸ್ತು, ವಿದ್ಯಾರ್ಥಿಯ ಕಲಿಕೆಯ ಅಗತ್ಯ ಇವುಗಳನ್ನು ಹೊಂದಿಕೊಂಡು ವಿವಿಧ ಕಲಿಕಾ ಬೋಧನ ತಂತ್ರಗಳನ್ನು ಬಳಸಿಕೊಂಡರೆ ಎಲ್ಲರಿಗೂ ಕಲಿಕಾ ಸಾಧನೆ (Learning Outcome) ಯನ್ನು ಗಳಿಸಿಕೊಳ್ಳಲು ಸಾಧ್ಯ.
- ಪ್ರತಿಯೊಂದು ಮಗುವಿನ ಸಮಗ್ರ ಪ್ರಗತಿಯನ್ನು (Allround development) ಉದ್ದೇಶವಾಗಿರಿಸಿಕೊಂಡು ಕಲಿಕಾ ಪ್ರಕ್ರಿಯೆಗಳನ್ನು ನಿರ್ಧರಿಸಬೇಕು.

### 1.4 ಕಲಿಕಾ ಸಾಧನೆಗಳು (Learning Outcomes)

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಕಲಿಕಾ ಚಟುವಟಿಕೆಗಳ ಫಲವಾಗಿ ಜ್ಞಾನ, ಕೌಶಲ್ಯ, ಮನೋಭಾವ, ಮೌಲ್ಯಗಳು ಮಗುವಿನಲ್ಲಿ ರೂಪುಗೊಳ್ಳುತ್ತವೆ. ಇವುಗಳಲ್ಲಿ ಕೆಲವನ್ನು ಸ್ವಲ್ಪ ಕಾಲದಲ್ಲಿ

ಸಂಪಾದಿಸಬಹುದು ಮತ್ತು ಕೆಲವಕ್ಕೆ ದೀರ್ಘಕಾಲ ಬೇಕಾಗುವುದು. ಹೀಗೆ ಮಗುವಿನಲ್ಲಿ ಉಂಟಾಗುವ ಬದಲಾವಣೆಗಳನ್ನು ನಮಗೆ ಮುಂಚಿತವಾಗಿ ನಿರ್ಧರಿಸಲು ಸಾಧ್ಯವಿದೆ. ಪಠ್ಯಕ್ರಮವನ್ನು ಸಿದ್ಧಪಡಿಸುವಾಗ ಶಾಲಾ ಶಿಕ್ಷಣದ ವಿವಿಧ ಹಂತಗಳಲ್ಲಿ ಮಗು ಸಾಧಿಸಬೇಕಾದ ಗುರಿಗಳನ್ನು ನಾವು ಕಲಿಕಾ ಸಾಧನೆಗಳೆಂದು ಹೇಳುತ್ತೇವೆ. ಕೆಲವು ಕಲಿಕಾ ಚಟುವಟಿಕೆಗಳ ಸರಣಿಯ ಮೂಲಕ ಪ್ರತಿಯೊಂದು ಘಟಕದಲ್ಲಿಯೂ ವಿದ್ಯಾರ್ಥಿ ಸಾಧಿಸುವ ಕಲಿಕಾ ಸಾಧನೆಗಳು ವಿಕಾಸಗೊಂಡು ತರಗತಿಯ ಕೊನೆಯಲ್ಲಿ ಗಳಿಸುವ ಕಲಿಕಾ ಸಾಧನೆಗಳಾಗುತ್ತವೆ. ಅನಂತರ ನಿಗದಿತ ಶಿಕ್ಷಣ ಕಾಲಾವಧಿಯ ಕಲಿಕಾ ಸಾಧನೆಗಳಾಗಿ ಅವು ಬೆಳೆಯುತ್ತವೆ. ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ (observable) ಅಳೆಯಲೂ (measurable) ಸಾಧ್ಯವಿರುವುದು ಅದರ ವೈಶಿಷ್ಟ್ಯವಾಗಿದೆ. ಪ್ರತಿಯೊಂದು ಘಟಕದ, ತರಗತಿಯ, ಅವಧಿಯ ಕೊನೆಯಲ್ಲಿ ಮಗು ಗಳಿಸಬೇಕಾದ ಜ್ಞಾನ ಕೌಶಲ್ಯ, ಮೌಲ್ಯ, ಮನೋಭಾವಗಳನ್ನು ಗಳಿಸಲಾಗಿದೆಯೇ ಎಂದು ಮೌಲ್ಯಮಾಪನ ಮಾಡಲು ಕಲಿಕಾಸಾಧನೆಗಳ ವಿಶ್ಲೇಷಣೆಯಿಂದ ಸಾಧ್ಯ. ಪಠ್ಯಕ್ರಮದ ಸರಿಯಾದ ವಿನಿಮಯದ ಮೂಲಕ ಎಲ್ಲ ಮಕ್ಕಳ ಕಲಿಕಾ ಸಾಧನೆಗಳನ್ನು ದೃಢಪಡಿಸಲು ನಮಗೆ ಸಾಧ್ಯವಾಗಬೇಕು.

ಕಲಿಕಾ ಸಾಧನೆಗಳ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.

- ವಿಷಯನಿಷ್ಠವಾದ ಕಲಿಕೆಯ ಮೂಲಕ ವಿದ್ಯಾರ್ಥಿ ಗಳಿಸಿಕೊಳ್ಳಬೇಕಾದ ಜ್ಞಾನ (knowledge), ಕೌಶಲ್ಯ (skills), ಮನೋಭಾವ ಮತ್ತು ಮೌಲ್ಯ (attitude and value)ಗಳನ್ನು ಕಲಿಕಾ ಸಾಧನೆ ಒಳಗೊಂಡಿರುತ್ತದೆ.
- ಕಲಿಕಾ ಸಾಧನೆಗಳನ್ನು ನಿರೀಕ್ಷಣೆ ಮಾಡಲೂ, ಅಳೆಯಲೂ ಸಾಧ್ಯವಿದೆ.
- ಹ್ರಸ್ವ ಮತ್ತು ದೀರ್ಘಕಾಲದಲ್ಲಿ ಗಳಿಸುವ ವಿಭಿನ್ನ ಕಲಿಕಾ ಸಾಧನೆಗಳಿವೆ.

## 1.5 ಕಲಿಕಾ ಸಂಪನ್ಮೂಲಗಳು ಮತ್ತು ಕಲಿಕಾ ವ್ಯವಸ್ಥೆಗಳು

ಪಠ್ಯಕ್ರಮವನ್ನು ವಿನಿಮಯ ಮಾಡಲು ಬಳಸುವ ವಿವಿಧ ಘಟಕಗಳೇ ಕಲಿಕಾ ಸಂಪನ್ಮೂಲಗಳು. ಕಲಿಕಾ ಪ್ರಕ್ರಿಯೆಯ ಪೂರ್ಣತೆಗೆ ಕಲಿಕಾ ಸಂಪನ್ಮೂಲಗಳನ್ನು ಉಪಯೋಗಿಸಿಯೇ ತೀರಬೇಕು.

- ಗ್ರಂಥಾಲಯ
- ಪ್ರಯೋಗಾಲಯ (ಭಾಷೆ, ಗಣಿತ, ವಿಜ್ಞಾನ)
- ಕಲಿಕೋಪಕರಣಗಳು
- ಡಿಸ್‌ಪ್ಲೇ ಫಲಕಗಳು
- ಕಂಪ್ಯೂಟರ್ ಲ್ಯಾಬ್
- ಬಹುಮಾಧ್ಯಮ ಉಪಕರಣಗಳು

ಇದರ ಹೊರತಾಗಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಪ್ರಕಟಿಸುವ ಅನೇಕ ವೇದಿಕೆಗಳು ಶಾಲೆಗಳಲ್ಲಿವೆಯಲ್ಲವೇ? ಇವುಗಳನ್ನು ಕಲಿಕಾ ಸಾಧನೆಗಳನ್ನು ಗಳಿಸಿಕೊಳ್ಳಲು ಬಳಸಿಕೊಳ್ಳಬಹುದು.

- ಬಾಲಸಭೆ
- ಅಸೆಂಬ್ಲಿ
- ಕ್ಲಬ್‌ಗಳು
- ಚರ್ಚಾ ಕೂಟಗಳು
- ಶೈಕ್ಷಣಿಕ ಪ್ರವಾಸಗಳು
- ಸ್ವಯಂ ಸೇವಾ ಸಂಸ್ಥೆಗಳು (SPC, NSS, Scout, NCC)
- ಮಕ್ಕಳ ಪರಿಪೂರ್ಣವಾದ ಬೆಳವಣಿಗೆಗೆ ಇಂತಹ ಘಟಕಗಳು ಅತಿ ಅಗತ್ಯವಾಗಿವೆ.

## 1.6 ಕಲೆ ಮತ್ತು ವೃತ್ತಿಪರಿಚಯ ಕಲಿಕೆ

### ಕಲೆಯ ಕಲಿಕೆ

ಸೃಜನಶೀಲತೆ, ನಿರೀಕ್ಷಣ ಸಾಮರ್ಥ್ಯ ಮತ್ತು ಬುದ್ಧಿಮತ್ತೆಯನ್ನು ಮಕ್ಕಳಲ್ಲಿ ಬೆಳೆಸಲು ಕಲೆಯ ಕಲಿಕೆ ಅತಿ ಅಗತ್ಯವಾಗಿದೆ. ಹೊಸ ಪಠ್ಯಕ್ರಮದಲ್ಲಿ ಸಾಮಾನ್ಯ ವಿಷಯಗಳೊಂದಿಗೆ ಕಲೆಯ ಕಲಿಕೆಗೂ ಮಹತ್ವವನ್ನು ನೀಡಲಾಗಿದೆ. ಶಾಲಾ ಪಠ್ಯಕ್ರಮದಲ್ಲಿ ಕಲೆಯ ಕಲಿಕೆಯ ವ್ಯಾಪ್ತಿಯಲ್ಲಿ ಸಂಗೀತ, ನೃತ್ಯ, ಚಿತ್ರರಚನೆ, ಶಿಲ್ಪರಚನೆ, ನಾಟಕ, ಸಿನಿಮಾ ಮೊದಲಾದ ಪ್ರಕಾರಗಳನ್ನು ಸೇರಿಸಿಕೊಳ್ಳಲಾಗಿದೆ. ಮಕ್ಕಳ ಪ್ರತಿಭೆಗಳನ್ನು ಗುರುತಿಸಿ, ಪ್ರೋತ್ಸಾಹವನ್ನು ನೀಡುವುದು ಅಗತ್ಯವಾಗಿದೆ. ಕಲೆಯ ಕಲಿಕೆಯ ಸಾಮಾನ್ಯ ಉದ್ದೇಶಗಳು.

- ವಿದ್ಯಾರ್ಥಿಯ ಸಹಜವಾದ ಕಲೆಯ ಅಭಿರುಚಿಗಳನ್ನು ಪ್ರೋತ್ಸಾಹಿಸುವುದು.
- ವಿವಿಧ ಕಲೆಗಳನ್ನು ತಿಳಿದುಕೊಂಡು, ಮಕ್ಕಳ ಅಭಿರುಚಿಗೆ ಹೊಂದಿಕೊಂಡು ಕಲೆಗಳನ್ನು ಅಭ್ಯಾಸ ಮಾಡಲು ಅವಕಾಶಗಳನ್ನು ಒದಗಿಸುವುದು.
- ವಿವಿಧ ಕಲೆಗಳನ್ನು ಆಸ್ವಾದಿಸಿ, ಕಲೆಯ ಸೌಂದರ್ಯವನ್ನು ತಿಳಿದುಕೊಳ್ಳುವುದು.
- ಕಲೆಯ ಆಸ್ವಾದನೆ ಮಾಡಿ ಸಮಾಜ ಜೀವನದಲ್ಲಿ ಮಾನವೀಯ ದೃಷ್ಟಿಕೋನಗಳನ್ನು ಮೂಡಿಸುವುದು.
- ಸಾಂಸ್ಕೃತಿಕ ವೈವಿಧ್ಯವನ್ನು ಅರಿತುಕೊಂಡು ಸಂಸ್ಕೃತಿ ಪ್ರೇಮವನ್ನು ಬೆಳಸುವುದು.
- ಕಲೆಯ ಸತ್ವವನ್ನು ಅರಿತುಕೊಂಡು ಹೊಸ ಚಿಂತನೆಗಳನ್ನು ಮಾಡುವುದು ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸುವುದು.
- ಕಲೆಯನ್ನು ಬಳಸಿ ಇತರ ವಿಷಯಗಳ ಕಲಿಕೆಯನ್ನು ಫಲಪ್ರದಗೊಳಿಸುವುದು (Art applied learning)
- ಬಹುಮುಖವಾದ ಬೌದ್ಧಿಕ ವಿಕಾಸದ ಸಾಧ್ಯತೆಗಳನ್ನು ಉತ್ತಮ ಪಡಿಸುವುದು.
- ವಿಭಿನ್ನ ಕೌಶಲ್ಯಗಳಿರುವ ವಿದ್ಯಾರ್ಥಿಗಳನ್ನು ಕಲಿಕಾ ಚಟುವಟಿಕೆಗಳಿಗೆ ಆಕರ್ಷಿಸುವುದು.
- ಮಕ್ಕಳ ಆಸ್ವಾದನೆಯ ಮಟ್ಟವನ್ನು ಉತ್ತಮಪಡಿಸುವುದು.

### ವೃತ್ತಿ ಪರಿಚಯ

ಭಾವನಾತ್ಮಕ ಮತ್ತು ವಿಜ್ಞಾನ ಕ್ಷೇತ್ರಗಳ ಸಮನ್ವಯ ಹಾಗೂ ಪ್ರಗತಿಗಾಗಿ ವೃತ್ತಿ ಪರಿಚಯ ಶಿಕ್ಷಣ ಅನಿವಾರ್ಯವಾಗಿದೆ. ಪ್ರತಿಯೊಂದು ವೃತ್ತಿ ಪರಿಚಯ ತರಗತಿಯ ಅಡಿಪಾಯವು ಮಾನವ ಸಂಪನ್ಮೂಲದ ಪ್ರಗತಿಯಾಗಬೇಕು. ಎಲ್ಲ ಪ್ರಜೆಗಳ ಸಾಮರ್ಥ್ಯಗಳನ್ನೂ, ಕೌಶಲ್ಯಗಳನ್ನೂ ರಾಷ್ಟ್ರ ನಿರ್ಮಾಣಕ್ಕಾಗಿ ಬಳಸುವಂತೆ ಬೆಳೆಸುವುದೇ ಮಾನವ ಸಂಪನ್ಮೂಲ ಪ್ರಗತಿಯ ಉದ್ದೇಶವಾಗಿದೆ. ವೃತ್ತಿಯಲ್ಲಿ ಆಸಕ್ತಿ ಮೂಡಿಸುವುದು, ವ್ಯಕ್ತಿಗಳನ್ನು ಹೊಸ ವೃತ್ತಿ ಸಂಸ್ಕೃತಿಯ ವಕ್ತಾರರನ್ನಾಗಿ ಮಾಡುವುದು ವೃತ್ತಿ ಕಲಿಕೆಯ ಪ್ರಮುಖ ಉದ್ದೇಶಗಳಾಗಿವೆ.

- ಮಾನವ ಸಂಪನ್ಮೂಲದ ಅಭಿವೃದ್ಧಿ
- ರಾಷ್ಟ್ರೀಯ ಅಭಿವೃದ್ಧಿ
- ವೃತ್ತಿ ಸನ್ನದ್ಧತೆ
- ಉತ್ಪಾದನ ವಲಯದಲ್ಲಿ ಸ್ವಾಯತ್ತತೆ
- ಸಂತುಲಿತ ವ್ಯಕ್ತಿತ್ವ ವಿಕಾಸ
- ಮೌಲ್ಯ ಹಾಗೂ ಮನೋಭಾವಗಳ ಬೆಳವಣಿಗೆ

ಕಲೆ ಮತ್ತು ವೃತ್ತಿ ಕಲಿಕೆಗೆ ಪ್ರಾಧಾನ್ಯವನ್ನು ನೀಡಿ ಪಠ್ಯಕ್ರಮವನ್ನು ರೂಪಿಸಬೇಕು. ಇವುಗಳ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳೊಂದಿಗೆ ವಿನಿಮಯ ಮಾಡುವುದು ಅಗತ್ಯವಾಗಿದೆ.

## 1.7 ಆರೋಗ್ಯ ಮತ್ತು ಕ್ರೀಡಾ ಶಿಕ್ಷಣ

ಪ್ರಾಥಮಿಕ ಶಾಲಾ ಹಂತವು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಯ ಮುಖ್ಯ ಹಂತವಾಗಿದೆ. ಆದುದರಿಂದ ಈ ಹಂತದಲ್ಲಿ ಎಲ್ಲ ಮಕ್ಕಳಿಗೆ ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಅನುಭವಗಳು ಲಭಿಸುತ್ತವೆ ಎಂಬುದನ್ನು ದೃಢಗೊಳಿಸಬೇಕು. ಮಗುವಿನ ಆರೋಗ್ಯ ಮತ್ತು ಕ್ರೀಡಾ ಮನೋಭಾವವನ್ನು ಪೋಷಿಸುವುದು, ಆರೋಗ್ಯಕರ ಜೀವನ ಶೈಲಿಯನ್ನು ರೂಪಿಸುವುದು ಈ ಕಲಿಕೆಯ ಪ್ರಧಾನ ಉದ್ದೇಶವಾಗಿದೆ. ಆರೋಗ್ಯ ಮತ್ತು ಕ್ರೀಡಾ ಶಿಕ್ಷಣದ ಸಾಧ್ಯತೆಗಳನ್ನು ಉಳಿಸಿಕೊಂಡು ವಿಭಿನ್ನ ವಿಷಯಗಳನ್ನು ವಿನಿಮಯ ಮಾಡುವುದು ಅಗತ್ಯವಾಗಿದೆ.

### ಆರೋಗ್ಯ ಮತ್ತು ಕ್ರೀಡಾ ಕಲಿಕೆಯ ಪ್ರಧಾನ ಉದ್ದೇಶಗಳು

- ವಿವಿಧ ಸಂದರ್ಭಗಳಲ್ಲಿ ಯೋಗ್ಯವಾದ ರೀತಿಯಲ್ಲಿ ದೇಹವನ್ನು ಚಲಿಸುವಂತೆ ಮಾಡುವ ಕೌಶಲ್ಯವನ್ನು ಸಂಪಾದಿಸುವುದು.
- ದೇಹದ ಚಲನೆಯನ್ನು ನಿಯಂತ್ರಿಸುವ ವಿವಿಧ ಹಂತಗಳನ್ನು ತಿಳಿದುಕೊಂಡು, ಅವುಗಳನ್ನು ಸೃಜನಾತ್ಮಕ ಚಲನೆಗಳ ಮಾಧ್ಯಮವಾಗಿ ಅಭಿವೃದ್ಧಿಪಡಿಸುವುದು.

- ಸಾಮಾಜಿಕವಾದ ಜವಾಬ್ದಾರಿಗಳನ್ನು ಅರಿತುಕೊಂಡು, ಪ್ರಜಾಪ್ರಭುತ್ವ ರೀತಿಯ ಜೀವನ ಶೈಲಿಯನ್ನು ರೂಢಿಸಿಕೊಳ್ಳುವುದು ಮತ್ತು ಆಸ್ವಾದಿಸುವುದು.
- ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ದೃಢಪಡಿಸುವುದು.

## 1.8 ಒಳಗೊಂಡಿರುವ ಶಿಕ್ಷಣ (Inclusive Education)

ಶಾಲೆಯಲ್ಲಿ ಉತ್ತಮ ಪ್ರದರ್ಶನವನ್ನು ನೀಡುವ ತಮ್ಮ ಸಹಪಾಠಿಗೆ ವಾಸವಾಗಲು ಮನೆಯಿಲ್ಲವೆಂದೂ, ರಸ್ತೆ ಬದಿಯ ಪೈಪಿನಡಿಯಲ್ಲಿ ಕಟ್ಟಿದ ಡೇರೆಯೇ ಅವನ ಮನೆಯೆಂದೂ ತಿಳಿದಾಗ ಅದು ಚರ್ಚೆಗೆ ಗ್ರಾಸವಾಯಿತು. ಕಷ್ಟಗಳನ್ನು ಪರಸ್ಪರ ಹಂಚಿಕೊಳ್ಳುವುದರಿಂದ ಮಾತ್ರ ಪರಿಹಾರ ಉಂಟಾಗುವುದಿಲ್ಲ ಎಂದು ಅರಿತುಕೊಂಡ ವಿದ್ಯಾರ್ಥಿಗಳು ಅಧ್ಯಾಪಕರ ಸಹಾಯದೊಂದಿಗೆ ಹಣವನ್ನು ಸಂಗ್ರಹಿಸಿ ಗೆಳೆಯನಿಗೆ ಮನೆ ನಿರ್ಮಿಸಿಕೊಟ್ಟು ಮಾದರಿಯಾದರು.

*(ಒಂದು ಶಾಲೆಯ ಅನುಭವ)*

ತರಗತಿ ಕೋಣೆಯಲ್ಲಿ ಎಲ್ಲರನ್ನೂ ಒಂದುಗೂಡಿಸುವ, ಯಾರನ್ನೂ ಹೊರ ಹಾಕದ ಕಲಿಕೆಯ ಒಂದು ವಾತಾವರಣವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಶಾಲೆಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನೂ, ಸಹಾಯವನ್ನೂ ನೀಡಿ ನ್ಯಾಯಯುತವಾದ ಗುಣಮಟ್ಟದ ಶಿಕ್ಷಣವನ್ನು (Equitable Quality Education) ದೃಢಗೊಳಿಸಬೇಕಾಗಿದೆ.

**ವಿಶೇಷ ಗಮನ, ಕಲಿಕಾ ಸಹಾಯ ಮತ್ತು ರಕ್ಷಣೆ ಅಗತ್ಯವಿರುವುದು ಯಾರಿಗೆ?**

**(ಎ) ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಗಾಗಿ ಹೊರಹಾಕಲ್ಪಟ್ಟವರ ಮಕ್ಕಳು**

- ವಿಭಿನ್ನ ಮತ್ತು ವೈವಿಧ್ಯಪೂರ್ಣವಾದ ಸಾಮಾಜಿಕ, ಸಾಂಸ್ಕೃತಿಕ, ಕೌಟುಂಬಿಕ ಹಿನ್ನೆಲೆಯಲ್ಲಿ ತಾರತಮ್ಯವನ್ನು ಅನುಭವಿಸುವ ಮಕ್ಕಳು, ತೀವ್ರ ಬಡತನವನ್ನು ಎದುರಿಸುವವರು, ಬುಡಕಟ್ಟು ಆದಿವಾಸಿಗಳು, ಹೆಣ್ಮಕ್ಕಳು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ಬೇರೆ ರಾಜ್ಯಗಳಿಂದ ವಲಸೆ ಬಂದವರು, ಖಾಯಂ ಮನೆಗಳಿಲ್ಲದವರು–ಹೀಗೆ ಅನೇಕ ಸಂಕಷ್ಟಗಳನ್ನು ಎದುರಿಸುವವರು ಈ ವಿಭಾಗದಲ್ಲಿ ಸೇರುತ್ತಾರೆ.

ವಿಭಿನ್ನತೆಗಳನ್ನು, ಪರಿಮಿತಿಗಳನ್ನು ಅರಿತುಕೊಂಡು, ಅವರನ್ನು ಗುರುತಿಸಿ ಗೌರವಿಸಬೇಕಾದುದು ನಮ್ಮ ಸಮೀಪನವಾಗಿರಬೇಕು. ಶಾಲೆಯ ಒಗ್ಗಟ್ಟಿನ ಕಾರ್ಯ ಚಟುವಟಿಕೆಗಳ ಮೂಲಕ ಇಂಥವರ ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

### (ಬಿ) ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರು

ದೈಹಿಕ ಹಾಗೂ ಮಾನಸಿಕ ಸವಾಲುಗಳನ್ನು ಎದುರಿಸುವವರಿಗೂ, ಕಲಿಕೆಯಲ್ಲಿ ಕಷ್ಟವನ್ನು ಅನುಭವಿಸುವ ಮಕ್ಕಳಿಗೂ ಪ್ರತ್ಯೇಕವಾದ ಕಲಿಕಾ ವಿಧಾನದ ಅಗತ್ಯಗಳಿವೆ (special educational needs). ಕಿವುಡುತನ, ದೃಷ್ಟಿದೋಷ, ಬೌದ್ಧಿಕ ಮತ್ತು ಚಲನೆಯ ಪರಿಮಿತಿಗಳು, ಓಟಿಸಂ, ಸೆರೆಬ್ರಲ್ ಪಾಲ್ಸಿ, ಬಹುಮುಖವಾದ ವೈಕಲ್ಯಗಳು, ಭಾವನಾತ್ಮಕವಾದ ಅಸಮತೋಲನವಿರುವ ಮಕ್ಕಳು, ಗಮನಹರಿಸುವಲ್ಲಿ ಪರಿಮಿತಿಗಳಿರುವ ಮಕ್ಕಳು ಮುಂತಾದವರು ವಿಭಾಗದಲ್ಲಿ ಸೇರುತ್ತಾರೆ.

### ಪಠ್ಯಕ್ರಮದ ವಿನಿಮಯ ಹಾದಿಯಲ್ಲಿ ನಾವು ಏನನ್ನು ಅನುಸರಿಸಬೇಕು?

- ಕಲಿಕೆಯ ಅಗತ್ಯಗಳು, ಅಭಿರುಚಿ ಇವುಗಳನ್ನು ಪರಿಗಣಿಸಿ ಕಲಿಕಾ ಚಟುವಟಿಕೆಗಳ ಯೋಜನೆಗಳು.
- ಕಲಿಕಾ ಚಟುವಟಿಕೆಗಳಲ್ಲಿ ಎಲ್ಲರ ಭಾಗವಹಿಸುವಿಕೆ ಇರುವಂತೆ ಪಾಠಯೋಜನೆಯಲ್ಲಿ ಹೊಂದಾಣಿಕೆ.
- ವಿಭಿನ್ನವಾದ ಕಲಿಕಾ ವೇಗ, ಕಲಿಕಾ ಶೈಲಿ ಇವುಗಳನ್ನು ಪರಿಗಣಿಸಿಕೊಂಡು ವಿವಿಧ ಇಂದ್ರಿಯಾಧಾರಿತ ಸಮೀಪನ (multisensory approach) ಅನುಷ್ಠಾನ.
- ಪರಿಹಾರ ಚಟುವಟಿಕೆಗಳು (Remedial Practices), ಪೋಷಕ ಚಟುವಟಿಕೆಗಳು (Enrichment Practice) ಇವುಗಳನ್ನು ಪ್ರತಿಯೊಬ್ಬ ಮಗುವಿನ ಅಗತ್ಯವನ್ನು ಅನುಸರಿಸಿ ಅನುಷ್ಠಾನಗೊಳಿಸುವುದು.
- ವಿವಿಧ ಮೌಲ್ಯಮಾಪನ ಸಾಧ್ಯತೆಗಳನ್ನು ಜಾರಿಗೊಳಿಸುವುದು.
- ಸಂಪನ್ಮೂಲ ಅಧ್ಯಾಪಕರ ಹಾಗೂ ಇತರ ತಜ್ಞರ ಸಹಾಯವನ್ನು ದೃಢಪಡಿಸುವುದು.
- ಮಗುವಿನ ಕಲಿಕೆ, ಸಂರಕ್ಷಣೆ ಮೊದಲಾದ ವಿಷಯಗಳಲ್ಲಿ ಹೆತ್ತವರ ನಿರಂತರ ಬೆಂಬಲವನ್ನು ದೃಢಪಡಿಸುವುದು.

ಈ ಎರಡು ವಿಭಾಗದ ಮಕ್ಕಳಲ್ಲದೆ, ವಿಶೇಷ ಗಮನ ಹಾಗೂ ಪರಿಗಣನೆ ನೀಡಬೇಕಾದ ಪ್ರತ್ಯೇಕ ಅಭಿರುಚಿ ಮತ್ತು ಸಾಮರ್ಥ್ಯಗಳಿರುವ ಮಕ್ಕಳೂ (Gifted Childrens) ಇದ್ದಾರೆ. ಹೀಗೆ ಎಲ್ಲ ವಿಭಾಗದ ಮಕ್ಕಳನ್ನು ಒಳಗೊಳ್ಳುವ ರೀತಿಯಲ್ಲಿ ಶಾಲೆಯ ಚಟುವಟಿಕೆಗಳನ್ನೂ ಭೌತಿಕ ಹಿನ್ನೆಲೆಗಳನ್ನೂ ಶಾಸ್ತ್ರೀಯವಾಗಿ ರೂಪಿಸಬೇಕಾಗಿದೆ.

## 1.9 ಮಾಹಿತಿ ತಂತ್ರಜ್ಞಾನ – ಸಾಧ್ಯತೆ

ಮಾಹಿತಿ ವಿನಿಮಯಕ್ಕೆ ಅನೇಕ ವ್ಯವಸ್ಥೆಗಳು ಇಂದು ಬಳಕೆಯಲ್ಲಿವೆ ಅಲ್ಲವೇ? **ICT** ಬಳಕೆಯು ಇವುಗಳಲ್ಲಿ ತುಂಬ ಪ್ರಯೋಜನಕರವಾದುದು. ಮಕ್ಕಳು ಇದರ ತಂತ್ರಜ್ಞಾನವನ್ನು ಹೆಚ್ಚು ಕಡಿಮೆ ತಿಳಿದವರೇ ಆಗಿದ್ದಾರೆ. ಈ ತಿಳುವಳಿಕೆಯನ್ನು ತರಗತಿಯ ಕಲಿಕೆಗೆ ಬಳಸಿಕೊಳ್ಳಬೇಕಾಗಿದೆ. ಕಲಿಕೆಯನ್ನು ಅನಾಯಾಸಕರ ಹಾಗೂ ಸಂತೋಷದಾಯಕವನ್ನಾಗಿಸಲು ಇದರಿಂದ ಸಾಧ್ಯ.

## ಅಗತ್ಯ

ಪಠ್ಯಕ್ರಮ ವಿನಿಮಯದ ನಿರ್ದಿಷ್ಟ ಹಂತದಲ್ಲಿ ಯೋಗ್ಯವಾದ ICT ಸಾಮಗ್ರಿಗಳನ್ನು ಅಗತ್ಯವಾದರೆ ಮಾತ್ರ ಬಳಸಿದರೆ ಸಾಕು. ಮುದ್ರಣ ಮಾಧ್ಯಮದಲ್ಲಿರುವ ಪಾಠಪುಸ್ತಕಗಳ ಮಿತಿಗಳಾದ ಚಲನಶೀಲತೆ, ಶಬ್ದಗಳನ್ನು ಕೇಳಿಸಲು ಆಗದಿರುವುದು ಮೊದಲಾದ ಕೊರತೆಗಳನ್ನು ICT ಸಾಧ್ಯತೆಗಳ ಮೂಲಕ ಪರಿಹರಿಸಬಹುದು. ICT ಬಳಕೆಯ ಅಗತ್ಯ ಯಾವ ಯಾವ ಸಂದರ್ಭಗಳಲ್ಲಿ ಬೇಕಾಗಿದೆ ಎಂದೂ ಅದರ ಪ್ರಯೋಜನವನ್ನು ಹೇಗೆ ಪಡೆಯಬಹುದೆಂದೂ ನಿರ್ಧರಿಸಲು ಅಧ್ಯಾಪಕರಿಗೆ ಸಾಧ್ಯವಾಗಬೇಕು.

## ಹೊಂದಾಣಿಕೆ

ಮಗುವಿನ ಬುದ್ಧಿಯನ್ನೂ ಪ್ರತಿಭೆಯನ್ನೂ ಪ್ರಚೋದಿಸುವ ICT ಸಾಧ್ಯತೆಗಳು ಬೇಕಾಗಿವೆ. ಜಿಜ್ಞಾಸೆ ಮತ್ತು ಆಕಾಂಕ್ಷೆಯೊಂದಿಗೆ ಪಠ್ಯ ವಿಷಯದ ಬಗ್ಗೆ ಆಸಕ್ತಿ ಮೂಡುವಂತೆ ICT ಯನ್ನು ಬಳಸಬೇಕು. ಇಂದ್ರಿಯ ವೈಕಲ್ಯವುಳ್ಳವರಿಗೆ ಇದರ ಪ್ರಯೋಜನ ಹೆಚ್ಚು. ಶಬ್ದ ಹಾಗೂ ದೃಶ್ಯಗಳಿಂದ ವಿಷಯಗಳನ್ನು ಅನುಭವಕ್ಕೆ ತರಲು ICT ಪ್ರಯೋಜನಕಾರಿಯಾಗಿದೆ. ವಿಭಿನ್ನವಾದ ಕಲಿಕೆಯ ಶೈಲಿಗಳನ್ನು ಅಳವಡಿಸಿಕೊಂಡಿರುವ ಕಲಿಕೆಯ ಅನುಭವಗಳನ್ನು ಒದಗಿಸಲು ಇದು ಸಹಾಯಕವಾಗಿದೆ.

## ವಿಶ್ವಸನೀಯತೆ

ಕಲಿಕಾ ಸಾಮಗ್ರಿಗಳ ಬಗೆಗಿನ ವಿಶ್ವಸನೀಯತೆಯನ್ನು ದೃಢಪಡಿಸಬೇಕು. ಸರಕಾರಿ ಇಲಾಖೆಗಳ ಸೈಟುಗಳು, ಶೈಕ್ಷಣಿಕ ವೆಬ್‌ಸೈಟುಗಳು, ಪೋರ್ಟಲುಗಳು, ಬ್ಲಾಗುಗಳು, ಸಾಮಾಜಿಕ ಜಾಲ ತಾಣಗಳು ಮೊದಲಾದವುಗಳಿಂದ ಮಾಹಿತಿಗಳನ್ನು ಸಂಗ್ರಹಿಸುವಾಗ ಅದು ಅಧಿಕೃತವೇ ಎಂದು ದೃಢಪಡಿಸಬೇಕು. ತರಗತಿ ಕೋಣೆಯಲ್ಲಿ ಬಳಸುವ ಸಾಮಗ್ರಿಗಳ ಪ್ರಾಯೋಗಿಕ ನೆಲೆಯನ್ನು ದೃಢಪಡಿಸಬೇಕು. ಇಂತಹ ಸಾಮಗ್ರಿಗಳು ಕಾರ್ಯ ನಿರ್ವಹಿಸುವುದಕ್ಕೆ ಯೋಗ್ಯವಾದ ಸೋಫ್ಟ್‌ವೇರ್‌ಗಳು ಸುಲಭದಲ್ಲಿ ದೊರಕುವಂಥದ್ದೂ, ಉಪಯೋಗಕ್ಕೆ ಸಿಗುವಂಥದ್ದೂ ಆಗಿರಬೇಕು. ICT ಸಾಧ್ಯತೆಗಳು ಮಗುವಿನ ವಯಸ್ಸು, ಮಾನಸಿಕ ಸ್ಥಿತಿ ಇವುಗಳಿಗೆ ಹೊಂದಿಕೆಯಾಗುವಂತಿರಬೇಕು.

## 1.10 ಮೌಲ್ಯಗಳು, ಮನೋಧರ್ಮಗಳು, ಕಾಳಜಿ ಇವುಗಳನ್ನು ಬೆಳೆಸುವ ವಲಯಗಳು

ವಿದ್ಯಾರ್ಥಿಯಲ್ಲಿ ಮಾನವೀಯ ಮೌಲ್ಯ ಹಾಗೂ ಸಾಂವಿಧಾನಿಕ ಮೌಲ್ಯಗಳ ಕುರಿತು ಅರಿವು ಮೂಡಿಸುವುದು, ಸಾಮಾಜಿಕ ಜೀವನವನ್ನು ಬಲಗೊಳಿಸುವ ಮನೋಧರ್ಮವನ್ನು ಮೂಡಿಸುವುದು, ಸಾಮಾಜಿಕ ಕಾಳಜಿಯನ್ನು ಬೆಳೆಸುವುದು ಮೊದಲಾದವು ಪಠ್ಯ ಕ್ರಮದ ಪ್ರಥಮ ಪರಿಗಣನೆಯ ವಿಷಯಗಳಾಗಿವೆ. ಇವುಗಳನ್ನು ಬೆಳೆಸಲು ಸೂಚಿಸಲಾದ ಆಶಯ ವಲಯಗಳನ್ನು ಕೆಳಗೆ ನೀಡಲಾಗಿದೆ.

**ಪ್ರಜಾಪ್ರಭುತ್ವ ಪ್ರಜ್ಞೆ**

ವಿವಿಧ ವಿಷಯಗಳನ್ನು ಆಯ್ಕೆ ಮಾಡುವಾಗ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಬಂಧಿಸಿದ ದೃಷ್ಟಿಕೋನಗಳನ್ನು ಪರಿಗಣಿಸಬೇಕು. ಕಲಿಕಾ ಚಟುವಟಿಕೆಗಳ ಯೋಜನೆಯಲ್ಲಿಯೂ ವಿನಿಮಯ ಪ್ರಕ್ರಿಯೆಯಲ್ಲಿಯೂ ಪ್ರಜಾಪ್ರಭುತ್ವದ ಸಮೀಪನ ಇರಬೇಕಾಗಿದೆ. ಪ್ರಜಾಪ್ರಭುತ್ವ ರೀತಿಯ ತರಗತಿ, ಶಾಲಾ ಪ್ರದೇಶಗಳು (ಪ್ರಜಾಪ್ರಭುತ್ವ ರೀತಿಯ ವೇದಿಕೆಗಳು), ಪ್ರಜಾಪ್ರಭುತ್ವ ಜೀವನ ಸಮೀಪನ ಮೊದಲಾದವುಗಳಿಂದ ಈ ಪ್ರಜ್ಞೆಯನ್ನು ಬೆಳೆಸುವುದು ಪಠ್ಯಕ್ರಮದ ಉದ್ದೇಶವಾಗಿದೆ.

**ಸಾಂವಿಧಾನಿಕ ಮೌಲ್ಯಗಳು**

ನಮ್ಮ ಸಂವಿಧಾನವು ಎತ್ತಿ ಹಿಡಿದಿರುವ ಮೌಲ್ಯಗಳನ್ನೂ ಗುರಿಗಳನ್ನೂ ಪಠ್ಯಕ್ರಮವು ಪ್ರತಿಫಲಿಸುವಂತಿರಬೇಕು. ಸಾಂವಿಧಾನಿಕ ಮೌಲ್ಯಗಳನ್ನು ಸಾಧಿಸುವುದಕ್ಕಾಗಿ ವಿದ್ಯಾರ್ಥಿಗಳನ್ನು ಸಮರ್ಥರನ್ನಾಗಿಸುವ ಪಾಠಗಳನ್ನೂ ವಿನಿಮಯ ಪ್ರಕ್ರಿಯೆಗಳನ್ನೂ ಆಯ್ಕೆ ಮಾಡುವತ್ತ ಗಮನಿಸಬೇಕು.

**ಜಾತ್ಯತೀತ ಮನೋಭಾವ**

ಜಾತ್ಯತೀತ ಮನೋಧರ್ಮವನ್ನು ಬೆಳೆಸುವಂಥ ವಿಷಯಗಳನ್ನು ಪಾಠಪುಸ್ತಕದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ಕಲಿಕಾ ರೀತಿಯನ್ನು ಸ್ವೀಕರಿಸಬೇಕು.

**ಸಹಿಷ್ಣುತೆ**

ಭಿನ್ನಾಭಿಪ್ರಾಯವುಳ್ಳವರನ್ನೂ ಸಹನೆಯಿಂದ ಕಾಣುವುದು ಎಂಬ ಮೂಲ ತತ್ವವನ್ನು ಪಠ್ಯಕ್ರಮವು ಗುರಿಯಾಗಿಸಬೇಕು.

**ಕ್ರಿಯಾಶೀಲ – ಸೃಜನಶೀಲ ಚಿಂತನೆ**

ವಿದ್ಯಾರ್ಥಿಗಳಲ್ಲಿ ಕ್ರಿಯಾಶೀಲವೂ ಸೃಜನಶೀಲವೂ ಆಗಿರುವ ಚಿಂತನೆಗಳನ್ನೂ, ಸಂಶೋಧನ ಬುದ್ಧಿಯನ್ನೂ ಬೆಳೆಸಬೇಕಾಗಿದೆ. ಪಠ್ಯಕ್ರಮದ ಪಠ್ಯ ವಿಷಯಗಳಲ್ಲಿ ಹಾಗೂ ಕಲಿಕಾ ತಂತ್ರಗಳಲ್ಲಿ ಸೃಜನಶೀಲ ಹುಡುಕಾಟಕ್ಕೆ ಅವಕಾಶವಿರಬೇಕು. ಬಹುಮುಖ ಬೌದ್ಧಿಕತೆ (multiple intelligence) ಯ ಹಂತಗಳನ್ನು ಇದಕ್ಕಾಗಿ ಪರಿಗಣಿಸಬೇಕು.

**ಸಂಸ್ಕೃತಿ ಹಾಗೂ ಪರಂಪರೆಯನ್ನು ಗೌರವಿಸುವುದು**

ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ಇತಿಹಾಸವನ್ನು ಗೌರವಿಸುವ ಮನೋಧರ್ಮದ ನಿರ್ಮಾಣ ಎಂಬುದು ಪಠ್ಯಕ್ರಮವು ಪೂರೈಸಬೇಕಾದ ಮುಖ್ಯ ಗುರಿಗಳಲ್ಲಿ ಒಂದಾಗಿದೆ.

**ಸಮತ್ವ ಎಂಬ ಆಶಯ**

ಬೇರೆ ಬೇರೆ ಸಂದರ್ಭಗಳಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಸಮಾನತೆ, ಸಮತ್ವ ಮೊದಲಾದವುಗಳನ್ನು ದೃಢಪಡಿಸಬೇಕಾದುದು ಅನಿವಾರ್ಯವಾಗಿದೆ.

**ನಾಯಕತ್ವಗುಣ**

ಹೊಸ ಸಹಸ್ರಮಾನದ ಸವಾಲುಗಳನ್ನು ಎದುರಿಸಲೂ, ಸಾಧ್ಯತೆಗಳನ್ನು ವಿನಿಯೋಗಿಸಲೂ ಸಮರ್ಥರಾದ ನಾಯಕರನ್ನು ಸೃಷ್ಟಿಸಲು ಯೋಗ್ಯವಾದ ಕಲಿಕಾ ತಂತ್ರಗಳನ್ನು ಅಭಿವೃದ್ಧಿ ಪಡಿಸಬೇಕಾಗಿದೆ. ತರಗತಿಯ ಚಟುವಟಿಕೆಗಳಲ್ಲಿ ಎಲ್ಲ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ದೃಢಗೊಳಿಸಿ, ನಾಯಕತ್ವ ಗುಣಗಳನ್ನು ಅಭಿವೃದ್ಧಿ ಪಡಿಸುವ ಪರಿಸರವನ್ನು ಸೃಷ್ಟಿಸಬೇಕಾದ ಅಗತ್ಯವಿದೆ.

**ಜೀವನ ಕೌಶಲ್ಯ ಶಿಕ್ಷಣ**

ದೈನಂದಿನ ಬದುಕಿನಲ್ಲಿ ವ್ಯಕ್ತಿಗಳು ಅನುಭವಿಸುವ ಸಮಸ್ಯೆ ಹಾಗೂ ಸವಾಲುಗಳನ್ನು ಫಲಪ್ರದವಾಗಿ ಎದುರಿಸಲು ಸಹಾಯಕವಾದ ಸ್ವಭಾವಗಳನ್ನು ಗಳಿಸಿಕೊಳ್ಳುವ ಸಾಮರ್ಥ್ಯವೇ ಜೀವನ ಕೌಶಲ್ಯಗಳು. ತನ್ನನ್ನು ತಾನು ಅರಿತುಕೊಳ್ಳುವುದು, ಇತರರನ್ನು ಅರಿತುಕೊಳ್ಳುವುದು, ವಿಚಾರ ವಿನಿಮಯ ಸಾಮರ್ಥ್ಯ, ವ್ಯಕ್ತಿಗಳ ನಡುವಿನ ಸಂಬಂಧ, ಸೃಜನಶೀಲ ಚಿಂತನೆ, ವಿಮರ್ಶಾತ್ಮಕ ಚಿಂತನೆ, ತೀರ್ಮಾನಗಳನ್ನು ಕೈಗೊಳ್ಳುವ ಸಾಮರ್ಥ್ಯ, ಸಮಸ್ಯೆಗಳ ಪರಿಹಾರ, ಭಾವನಾತ್ಮಕ ಸಮತೋಲನ, ಒತ್ತಡದ ನಿಭಾಯಿಸುವಿಕೆ ಮೊದಲಾದವು ಜೀವನಕೌಶಲ್ಯಗಳಾಗಿವೆ. ಮಕ್ಕಳ ಪರಿಸರವನ್ನು ಹೊಂದಿಕೊಂಡು ಈ ವಲಯಗಳ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕಾಗಿದೆ. ಬದುಕಿನಲ್ಲಿ ಆತ್ಮವಿಶ್ವಾಸದೊಂದಿಗೆ ಮುಂದುವರಿಯಲು ಇಂತಹ ಕೌಶಲ್ಯಗಳು ವಿದ್ಯಾರ್ಥಿಗೆ ಸಹಾಯಕವಾಗುತ್ತವೆ.

**ಪೌರಧರ್ಮ**

ರಾಷ್ಟ್ರಗಳು ಪ್ರಜೆಗಳಿಗೆ ಹೇಗೋ ಹಾಗೆಯೇ ಪ್ರಜೆಗಳು ರಾಷ್ಟ್ರಕ್ಕೆ ಸಲ್ಲಿಸಬೇಕಾದ ಕೆಲವು ಧರ್ಮಗಳೂ, ಕರ್ತವ್ಯಗಳೂ ಇವೆ. ಒಂದು ರಾಷ್ಟ್ರದ ಅಭಿವೃದ್ಧಿ ಎಂದರೆ ಮಾನವ ಸಂಪನ್ಮೂಲದ ಅಭಿವೃದ್ಧಿ ಎಂದು ತಿಳಿಯುವ ಈ ಕಾಲದಲ್ಲಿ ಪೌರಪ್ರಜ್ಞೆಯಿರುವ ಜನರನ್ನು ಸೃಷ್ಟಿಸುವುದು ಶಿಕ್ಷಣದ ಪ್ರಧಾನ ಕರ್ತವ್ಯವಾಗಿದೆ. ಸ್ವತಂತ್ರವಾದ ಸಮಾಜ ಸೃಷ್ಟಿಯೊಂದಿಗೆ ಜವಾಬ್ದಾರಿ ಮತ್ತು ಶಿಸ್ತಿನಿಂದ ಕೂಡಿದ ಪ್ರಜೆಗಳನ್ನು ಸೃಷ್ಟಿಸುವುದು ಶಿಕ್ಷಣ ವ್ಯವಸ್ಥೆಯ ಗುರಿಯಾಗಿದೆ.

**ಮಾನವ ಹಕ್ಕುಗಳು**

ಮಾನವ ಎಂಬ ನೆಲೆಯಲ್ಲಿ ಈ ಭೂಮಿಯಲ್ಲಿ ಗೌರವದಿಂದ ಬದುಕುವ ವ್ಯಕ್ತಿಯ ಹಕ್ಕುಗಳೇ ಮಾನವ ಹಕ್ಕುಗಳು. ಸಂಯುಕ್ತರಾಷ್ಟ್ರ ಸಂಘದ ಮಾನವ ಹಕ್ಕುಗಳ ಘೋಷಣೆಯಲ್ಲಿ ಸಾರ್ವತ್ರಿಕವಾಗಿ ಅಂಗೀಕಾರ ಲಭಿಸಿದ ಮಾನವ ಹಕ್ಕು ಗಳಿಗೆ ಪಠ್ಯಕ್ರಮದಲ್ಲಿಯೂ ಪಾಠವಿನಿಮಯ ಪ್ರಕ್ರಿಯೆಯಲ್ಲಿಯೂ ಸೂಕ್ತ ಪ್ರಾಧಾನ್ಯವನ್ನು ನೀಡಬೇಕಾಗಿದೆ.

**ಮಕ್ಕಳ ಹಕ್ಕುಗಳು**

ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸಬೇಕಾದ ಜವಾಬ್ದಾರಿ ನಮ್ಮ ಕರ್ತವ್ಯವಾಗಿದೆ.

**ಪ್ರಕೃತಿ – ಪ್ರಕೃತಿ ಸಂಪನ್ಮೂಲ ಸಂರಕ್ಷಣೆ, ಪರಿಸರ ಶುಚಿತ್ವ**

ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆ, ಪರಿಸರ ಶುಚಿತ್ವ, ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳ ಕುರಿತು ಪ್ರಾಥಮಿಕ ದೃಷ್ಟಿಕೋನಗಳನ್ನು ಪ್ರಾಥಮಿಕ ತರಗತಿಗಳಿಂದಲೇ ಅಳವಡಿಸಿಕೊಳ್ಳಬೇಕು. ವ್ಯಕ್ತಿ ಶುಚಿತ್ವದಂತೆಯೇ ಪರಿಸರ ಶುಚಿತ್ವವೂ ಅಗತ್ಯ ಎಂಬ ಶುಚಿತ್ವದ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಬೇಕಾಗಿದೆ. ಪ್ರಕೃತಿ ಮತ್ತು ಪ್ರಾಕೃತಿಕ ಸಂಪನ್ಮೂಲಗಳು ಕೇವಲ ಮಾನವನಿಗೆ ಮಾತ್ರ ಸೇರಿದ್ದಲ್ಲ ಮತ್ತು ಪ್ರಕೃತಿಯ ಸಮತೋಲನವನ್ನು ಕಾಪಾಡದಿದ್ದರೆ ವ್ಯಾಪಕವಾದ ದುರಂತಗಳಿಗೆ ಕಾರಣವಾಗುವುದು ಎಂಬ ಮನೋಭಾವವನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಪ್ರಾಕೃತಿಕ ಸಂಪನ್ಮೂಲ ಸಂರಕ್ಷಣೆ ಹಾಗೂ ಪರಿಸರ ಶುಚಿತ್ವವನ್ನು ಒಂದು ಜೀವನ ಮೌಲ್ಯವಾಗಿ ಮತ್ತು ಮನೋಧರ್ಮವಾಗಿ ಬದಲಾಯಿಸುವ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಬೇಕು.

**ಶಾಂತಿಯ ಶಿಕ್ಷಣ**

ವೈಯುಕ್ತಿಕವಾಗಿಯೂ ಸಾಮಾಜಿಕವಾಗಿಯೂ ಶಾಂತಿ ಮತ್ತು ಸಮಾಧಾನವನ್ನು ಕಾಪಾಡುವ ಸಾಮರ್ಥ್ಯ ಮತ್ತು ಮನೋಭಾವಗಳನ್ನು ಬೆಳೆಸುವುದು ಶಾಂತಿ ಶಿಕ್ಷಣದ ಮುಖ್ಯ ಗುರಿ. ಸಂಘರ್ಷಗಳು ಹಾಗೂ ಅವುಗಳಿಗೆ ಕಾರಣವಾಗುವ ಹಿನ್ನೆಲೆಗಳನ್ನು ಬಿಟ್ಟು ಶಾಂತಿ, ಸೌಹಾರ್ದ ಹಾಗೂ ಸಮಾಧಾನದ ಸಾಧ್ಯತೆಗಳನ್ನು ಪಠ್ಯಕ್ರಮದ ವಿವಿಧ ವಿಷಯಗಳಲ್ಲಿ ಅಳವಡಿಸಬೇಕಾದುದು ಈ ಶಿಕ್ಷಣ ನೀತಿಯ ಅಗತ್ಯವಾಗಿದೆ.

**ಕಾನೂನು ಸಾಕ್ಷರತೆ**

ಕಾನೂನು ಸಂಬಂಧವಾದ ತಿಳುವಳಿಕೆಯು ಪ್ರಜಾಪ್ರಭುತ್ವ ದೇಶದ ಪ್ರಜೆಗಳಿಗೆ ಅತಿ ಅಗತ್ಯವಾಗಿದೆ. ಕಾನೂನು ಸಾಕ್ಷರತೆಯನ್ನು ದೃಢಪಡಿಸುವ ಪಾಠಭಾಗಗಳನ್ನು ವಿಷಯಕ್ಕೆ ಹೊಂದಿಕೊಂಡು ಅಳವಡಿಸಬೇಕಾದುದು ಕಾಲದ ಅಗತ್ಯವಾಗಿದೆ. ಕಾನೂನು ಸಹಾಯ ವೇದಿಕೆ, ಕಾನೂನು ಕ್ಲಬ್‌ಗಳು, ಕಾನೂನು ಕ್ಲಿನಿಕ್‌ಗಳು, ಕಾನೂನು ತಿಳುವಳಿಕಾ ಶಿಬಿರಗಳು ಮೊದಲಾದ ವಿಭಿನ್ನ ಚಟುವಟಿಕೆಗಳನ್ನು ಆಯೋಜಿಸಬಹುದು.

**ಸೈಬರ್ ಅಪರಾಧಗಳ ಕುರಿತಾಗಿರುವ ತಿಳುವಳಿಕೆ**

ಮಾಹಿತಿ ತಂತ್ರಜ್ಞಾನದ ಬಳಕೆಯಿರುವ ಸಮಕಾಲೀನ ಜಗತ್ತಿನಲ್ಲಿ ಪ್ರತಿದಿನವೆಂಬಂತೆ ಸೈಬರ್ ದುರುಪಯೋಗ ಮತ್ತು ಅಪರಾಧ ಚಟುವಟಿಕೆಗಳು ಹೆಚ್ಚುತ್ತಿವೆ. ಮಕ್ಕಳನ್ನು ಇಂತಹ ಚಟುವಟಿಕೆಗಳಿಂದ ದೂರವಿರಿಸುವ ತಿಳುವಳಿಕೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಬೇಕು. ಇ–ಮೈಲ್, ಇಂಟರ್‌ನೆಟ್, ಸಾಮಾಜಿಕ ಜಾಲತಾಣಗಳು ಮೊದಲಾದವುಗಳ ಉಪಯೋಗವನ್ನು ಕುರಿತು ಸ್ಪಷ್ಟವಾದ ತಿಳುವಳಿಕೆಯನ್ನೂ ಅವುಗಳ ಬಳಕೆಯ ಗುಣ ದೋಷಗಳನ್ನೂ ಮಕ್ಕಳಿಗೆ ಒದಗಿಸಬೇಕು.

ಸೈಬರ್ ಅಪರಾಧಗಳಿಗಿರುವ ಶಿಕ್ಷೆ ಹಾಗೂ ಇಂಟರ್‌ನೆಟ್ ಬಳಕೆಯ ನೈತಿಕತೆಯನ್ನು ಪಠ್ಯಕ್ರಮದ ಮೂಲಕ ತಿಳಿಸಬೇಕು.

**ಮಾಧ್ಯಮ ತಿಳುವಳಿಕೆ**

ಪತ್ರಿಕೆ ಹಾಗೂ ದೃಶ್ಯಮಾಧ್ಯಮಗಳಿಗೆ ನಮ್ಮ ಸಮಾಜದಲ್ಲಿ ಬಹಳ ಪ್ರಾಧಾನ್ಯವಿದೆ. ದೃಶ್ಯಮಾಧ್ಯಮಗಳು ಮಕ್ಕಳ ಮೇಲೆ ಬೀರುವ ಪರಿಣಾಮ ಅಪಾರ. ಹೀಗೆ ಮಾಧ್ಯಮ ಸಂಬಂಧಿ ಮಾಹಿತಿಗಳನ್ನು ನೀಡುವ ಘಟಕಗಳನ್ನು ಪಠ್ಯಕ್ರಮದಲ್ಲಿ ಸೇರ್ಪಡೆಗೊಳಿಸುವುದು ಅಗತ್ಯವಾಗಿದೆ.

**ಶಾಶ್ವತ ಅಭಿವೃದ್ಧಿ ದೃಷ್ಟಿಕೋನ**

ಈ ಭೂಮಿಯು ಮಾನವನಿಗೆ ಮಾತ್ರ ಸೇರಿದ್ದಲ್ಲ ಎಂಬ ಪರಿಸರ ಪ್ರಜ್ಞೆಯನ್ನು ಪಠ್ಯಕ್ರಮವು ಒದಗಿಸಬೇಕಾಗಿದೆ. ಪರಿಸರ ಸಂಬಂಧವಾದ ಸವಾಲುಗಳು, ಪರಿಸರ ನಾಶಕ್ಕೆ ಕಾರಣವಾಗುವ ಮಾನವನ ಕೈವಾಡಗಳು ಹಾಗೂ ಪರಿಸರವನ್ನು ದುರಂತಗಳಿಂದ ಪಾರುಮಾಡುವ ದಾರಿಗಳ ಕುರಿತು ಪ್ರಜ್ಞೆಯನ್ನು ಮೂಡಿಸಬೇಕಾದುದು ಇಂದಿನ ಅಗತ್ಯವಾಗಿದೆ. ಪರಿಸರ ಮತ್ತು ಅಭಿವೃದ್ಧಿಯನ್ನು ಸಂಯೋಜಿಸುವುದು ಹೇಗೆ ಎಂಬುದನ್ನೂ ಶಾಶ್ವತವಾದ ಅಭಿವೃದ್ಧಿಯ ದೃಷ್ಟಿಕೋನಗಳನ್ನೂ ಸಂಶೋಧನೆಗಳನ್ನೂ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಸಮಗ್ರವಾದ ಪರಿಸರ ಪ್ರಜ್ಞೆಯನ್ನು ಹುಟ್ಟಿಸುವುದು ಪಠ್ಯಕ್ರಮದ ಮುಖ್ಯ ಉದ್ದೇಶಗಳಲ್ಲಿ ಒಂದು.

**ಬಾಲ್ಯ ಶಿಕ್ಷಣ**

ಮಕ್ಕಳ ಮನಶಾಸ್ತ್ರಜ್ಞರು, ಆರೋಗ್ಯ ಕಾರ್ಯಕರ್ತರು, ವೈದ್ಯರು ಹಾಗೂ ಅಧ್ಯಾಪಕರ ಸಂಯುಕ್ತ ಪರಿಶ್ರಮಗಳ ಮೂಲಕ ಬಾಲ್ಯ ಶಿಕ್ಷಣಕ್ಕೆ ಯೋಗ್ಯವಾದ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲು ಪರಿಗಣಿಸಬೇಕು. ವಿದ್ಯಾರ್ಥಿಗಳ ಆರೋಗ್ಯ, ಶುಚಿತ್ವ ಇವುಗಳಿಗೆ ಸಂಬಂಧಿಸಿದ ಸಂಶಯಗಳನ್ನು ಪರಿಹರಿಸಲು ವೈಜ್ಞಾನಿಕವಾದ ಮಾಹಿತಿಗಳನ್ನು ಪರಿಗಣಿಸುವುದು ಅಗತ್ಯವಾಗಿದೆ.

**ಉಪಭೋಗ ಸಂಸ್ಕೃತಿ–ದುಷ್ಪರಿಣಾಮಗಳು**

ಉಪಭೋಗ ಸಂಸ್ಕೃತಿಯ ದುಷ್ಪರಿಣಾಮಗಳ ಕುರಿತಾದ ಸತ್ಯಾಂಶಗಳನ್ನು ಪ್ರಾಥಮಿಕ ಶಾಲಾ ಮಟ್ಟದಿಂದಲೇ ಪಠ್ಯಕ್ರಮದಲ್ಲಿ ಅಳವಡಿಸಬೇಕು. ಬಳಕೆದಾರ ಎಂಬ ನೆಲೆಯಲ್ಲಿ ನಮ್ಮ ಹಕ್ಕುಗಳನ್ನೂ, ಬಳಕೆದಾರರಿಗೆ ನೆರವಾಗುವ ಕಾನೂನುಗಳನ್ನೂ ಮಕ್ಕಳಿಗೆ ತಿಳಿಸಿಕೊಡಬೇಕು.

**ಮಾದಕ ದ್ರವ್ಯ ವಿರೋಧಿ ನಿಲುವು**

ಮದ್ಯ, ಮಾದಕ ವಸ್ತುಗಳು, ಹೊಗೆ ಸೊಪ್ಪು ಹಾಗೂ ಇತರ ಮಾದಕ ದ್ರವ್ಯಗಳ ಬಳಕೆಯು ಹೊಸ ತಲೆಮಾರಿನ ಆರೋಗ್ಯವನ್ನು ಕೆಡಿಸುತ್ತದೆ ಎಂಬ ಅರಿವು ನಮ್ಮದಾಗಬೇಕು. ಮುಂದಿನ ತಲೆಮಾರನ್ನು

ಇವುಗಳಿಂದ ಮುಕ್ತಗೊಳಿಸಿ ರಕ್ಷಿಸಬೇಕು. ಅದಕ್ಕಾಗಿ ಮಾದಕದ್ರವ್ಯಗಳ ಉಪಯೋಗದಿಂದ ಉಂಟಾಗುವ ದೈಹಿಕ ಮಾನಸಿಕ ತೊಂದರೆಗಳನ್ನು ತಿಳಿಸುವ ಚಿತ್ರಗಳು, ಲಘು ಬರಹಗಳು, ದೃಶ್ಯಗಳನ್ನು ಪಠ್ಯಕ್ರಮದ ವಿಷಯಗಳಲ್ಲಿ ಅಳವಡಿಸಬೇಕು. ಮಾದಕ ದ್ರವ್ಯ ವಿರೋಧಿ ನಿಲುವನ್ನು ಸೃಷ್ಟಿಸುವುದು ಇವುಗಳ ಮುಖ್ಯ ಗುರಿಯಾಗಿರಬೇಕು.

**ಲಿಂಗ ಸಮಾನತೆ**

ಪಠ್ಯಕ್ರಮವು ಲಿಂಗ ಸಮಾನತೆಯನ್ನು ದೃಢಪಡಿಸುವಂತಿರಬೇಕು. ಗಂಡು – ಹೆಣ್ಣು ಎಂಬ ಭೇದಭಾವಗಳು ಪಠ್ಯಕ್ರಮದಲ್ಲಿ ನುಸುಳಬಾರದು. ಪಾಠಪುಸ್ತಕಗಳ ಚಿತ್ರಗಳಲ್ಲಿ ಕೂಡಾ ಲಿಂಗ ಸಮಾನತೆಯ ದೃಷ್ಟಿಕೋನವಿರಬೇಕು. ಕಲಿಕಾ ಚಟುವಟಿಕೆಗಳ ಸಂದರ್ಭಗಳಲ್ಲಿಯೂ ಈ ಲಿಂಗ ಸಮಾನತೆಯನ್ನು ದೃಢಪಡಿಸಬೇಕಾದುದು ಅಧ್ಯಾಪಕರ ಕರ್ತವ್ಯವಾಗಿದೆ.

**ಮಿತವ್ಯಯ ಗುಣ**

ಪ್ರಾಥಮಿಕ ಶಾಲಾ ಹಂತದಲ್ಲಿಯೇ ಮಿತವ್ಯಯ ಗುಣವನ್ನು ಮಕ್ಕಳಿಗೆ ಕಲಿಸಬೇಕು. ಮಿತವ್ಯಯ ಗುಣದ ಅಗತ್ಯ ಮತ್ತು ಮಹತ್ವವನ್ನು ತಿಳಿಸಿಕೊಡಬೇಕು. ಮಿತವ್ಯಯವನ್ನು ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿಸಿಕೊಡಬೇಕು.

**ರಸ್ತೆ ಸುರಕ್ಷೆ**

ರಸ್ತೆಯಲ್ಲಿ ಪಾಲಿಸಬೇಕಾದ ನಿಮಯಗಳು, ರಸ್ತೆ ಅಪಘಾತಗಳನ್ನು ತಪ್ಪಿಸಲು ಇರುವ ಪ್ರಾಯೋಗಿಕ ಸೂಚನೆಗಳು, ಚಟುವಟಿಕೆಗಳು ಮೊದಲಾದವು ರಸ್ತೆ ಸುರಕ್ಷೆಯ ಘಟಕಗಳಾಗಿವೆ. ರಸ್ತೆಯು ಸಾರ್ವಜನಿಕ ಸ್ಥಳವೆಂದೂ, ನಮ್ಮ ಹಾಗೆ ಇತರರಿಗೂ ರಸ್ತೆಯನ್ನು ಬಳಸುವ ಸ್ವಾತಂತ್ರ್ಯವಿದೆ ಎಂದೂ ಪೌರಪ್ರಜ್ಞೆಯನ್ನು ಹುಟ್ಟಿಸಬೇಕು. ರಸ್ತೆ ಸುರಕ್ಷತೆಯ ಸಂಬಂಧವಾಗಿ ಚಟುವಟಿಕೆಗಳಿಗೆ ಪ್ರಾಧಾನ್ಯ ನೀಡಬೇಕು.

ಪಠ್ಯಕ್ರಮದ ಸ್ವಾಭಾವಿಕವಾದ ವಿನಿಮಯದಲ್ಲಿ ಈ ಘಟಕಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಕಲಿಕಾ ಸಾಧನೆಗಳನ್ನು ದೃಢಪಡಿಸಬೇಕು. ವಿವಿಧ ವಿಷಯಗಳ ಒಳ ಹೂರಣದ ಆಶಯಗಳ ಆಯ್ಕೆಯಲ್ಲಿಯೂ ಕಲಿಕಾ ಚಟುವಟಿಕೆಗಳನ್ನು ಕ್ರಮೀಕರಿಸುವಾಗಲೂ ಸಾಕಷ್ಟು ಪರಿಗಣನೆಯನ್ನು ನೀಡಬೇಕಾಗಿದೆ. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಗಳಲ್ಲಿ ಸಾಗುವಾಗ ಇಂತಹ ಆಶಯಗಳಿಗೆ ಸಂಬಂಧಿಸಿದ ತಿಳುವಳಿಕೆ, ಕೌಶಲ್ಯ, ಮನೋಭಾವ ಇವುಗಳಿಗೆ ಒತ್ತು ನೀಡಬೇಕು. ನಿರಂತರ ಮೌಲ್ಯಮಾಪನ ಪ್ರಕ್ರಿಯೆಗಳ ಮೂಲಕ ಈ ಗುರಿಗಳನ್ನು ಈಡೇರಿಸಲು ಸಾಧ್ಯವಾಗಿದೆಯೇ ಎಂದು ಪರಿಶೋಧಿಸಲು ಸಾಧ್ಯವಾಗಬೇಕು. ವಿವಿಧ ಕ್ಲಬ್‌ಗಳ ಚಟುವಟಿಕೆಗಳು, SPC, NCC, Scouts & Guides, JRC, ವಿದ್ಯಾರಂಗ ಕಲಾ ಸಾಹಿತ್ಯವೇದಿಕೆ, ಗಾಂಧೀದರ್ಶನ ಮೊದಲಾದ ವ್ಯವಸ್ಥೆಗಳು ಮೌಲ್ಯಗಳನ್ನೂ ಮನೋಧರ್ಮಗಳನ್ನೂ ಕಾಳಜಿಯನ್ನೂ ಬೆಳೆಸುವ ವೇದಿಕೆಗಳಾಗಬೇಕು.

## 1.11 ಹಕ್ಕು ಆಧಾರಿತ ಶಿಕ್ಷಣ (Right Based Education)

ಮಕ್ಕಳ ಹಕ್ಕುಗಳನ್ನು ನಿರ್ಣಯಿಸಿ ಜಗತ್ತಿನಾದ್ಯಂತ ಅನುಷ್ಠಾನಗೊಳಿಸಲು ಯುನೆಸ್ಕೋ ನೇತೃತ್ವ ವಹಿಸಿದೆ. ಈ ಹಿನ್ನೆಲೆಯಲ್ಲಿ ವಿವಿಧ ದೇಶಗಳಲ್ಲಿ ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಅನೇಕ ಕಾನೂನುಗಳನ್ನು ರಚಿಸಲಾಗಿದೆ. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ ಹಕ್ಕು ನಿಯಮ– 2009 ಕಾರ್ಯಗತವಾಗಿರುವುದು ಈ ನಿಟ್ಟಿನಲ್ಲಿ ಒಂದು ಮೈಲಿಗಲ್ಲು. ಮಕ್ಕಳ ಎಲ್ಲ ರೀತಿಯ ಹಕ್ಕುಗಳನ್ನು ಸಂರಕ್ಷಿಸುವ ಜವಾಬ್ದಾರಿಯು ಹಿರಿಯರಾದ ನಮ್ಮ ಕರ್ತವ್ಯವಾಗಿದೆ. ಶಿಕ್ಷಣ ಹಕ್ಕುಗಳ ಕುರಿತು ಹೇಳುವಾಗ ಅವುಗಳನ್ನು ಮೂರು ಮುಖ್ಯ ಘಟಕಗಳಾಗಿ ವಿಂಗಡಿಸಬಹುದು.

- ಭಾಗವಹಿಸುವಿಕೆ (Participation)
- ಲಭ್ಯತೆ (Provision)
- ಸಂರಕ್ಷಣೆ (Protection)

**ಭಾಗವಹಿಸುವಿಕೆ (Participation)**

- ಮಕ್ಕಳಿಗೆ ಸಂಬಂಧಿಸಿದ ಎಲ್ಲ ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯವನ್ನು ಕೇಳುತ್ತಾರೆ.
- ತೀರ್ಮಾನಗಳಲ್ಲಿ ನನ್ನ ಅಭಿಪ್ರಾಯಕ್ಕೆ ಮುಖ್ಯ ಪರಿಗಣನೆ ಇದೆ.
- ನನ್ನ ಸಾಮರ್ಥ್ಯ ಹಾಗೂ ಮಿತಿಗಳಿಗೆ ಹೊಂದಿಕೊಂಡು ನೀಡಲಾಗುವ ಚಟುವಟಿಕೆಗಳಲ್ಲಿ ಭಾಗವಹಿಸಲು ನನಗೆ ಅವಕಾಶ ಲಭಿಸುತ್ತದೆ.
- ನನ್ನ ಸಾಮರ್ಥ್ಯಗಳನ್ನು ಪೋಷಿಸಲೂ ಮಿತಿಗಳನ್ನು ದಾಟಲೂ ಯೋಗ್ಯವಾದ ಕಲಿಕಾ ಪ್ರಕ್ರಿಯೆಗಳ ಮೂಲಕ ಸಾಗಲು ಸಾಧ್ಯವಾಗುತ್ತದೆ.
- ತರಗತಿಯಲ್ಲಿ ನಡೆಯುವ ಚಟುವಟಿಕೆಗಳಲ್ಲಿ ನನಗೂ ಸಹಪಾಠಿಗಳಿಗೂ ಕ್ರಿಯಾಶೀಲವಾದ ಭಾಗವಹಿಸುವಿಕೆ ಲಭಿಸುತ್ತಿದೆ.
- ನನ್ನ ಸಾಮರ್ಥ್ಯಗಳನ್ನು ಪ್ರದರ್ಶಿಸಲು ನನಗೆ ಅವಕಾಶ ಸಿಗುತ್ತದೆ.

**ಲಭ್ಯತೆ (Provision)**

- ಸರಿಯಾದ ಶೈಕ್ಷಣಿಕ ಯೋಗ್ಯತೆಯಿರುವ, ಜ್ಞಾನವನ್ನು ಕಾಲಕ್ಕನುಸರಿಸಿ ನವೀಕರಿಸುವ ಅಧ್ಯಾಪಕರ ಸೇವೆ ನನಗೆ ಲಭಿಸುತ್ತಿದೆ.
- ನಿರ್ದಿಷ್ಟ ಸಮಯದಲ್ಲಿ ಕಲಿಕಾನುಭವಗಳು ಸರಿಯಾದ ಕಾಲಕ್ಕೆ ಸಿಗುತ್ತಿವೆ.
- ದೈಹಿಕ, ಮಾನಸಿಕ ಬೆಳವಣಿಗೆಗೆ ಪೂರಕವಾಗಿರುವ ತರಗತಿ ಪರಿಸರ ನನಗೆ ಲಭಿಸುತ್ತಿದೆ.

- ಕಲಿಕಾ ಚಟುವಟಿಕೆಗಳಿಗೆ ಅಗತ್ಯವಾದ ಕಲಿಕೋಪಕರಣಗಳನ್ನು ಯಥಾಕಾಲಕ್ಕೆ ಒದಗಿಸಿಕೊಡಲು ನನ್ನ ಅಧ್ಯಾಪಕರಿಗೆ ಸಾಧ್ಯವಾಗುತ್ತದೆ.
- ಕಲೆ ಮತ್ತು ಕ್ರೀಡೆಯ ಬೆಳವಣಿಗೆಗೆ ಅಗತ್ಯವಾದ ಉಪಕರಣಗಳೂ ಅವಕಾಶಗಳೂ ನನಗೆ ಸಿಗುತ್ತಿವೆ.

**RTE 2009 ಹೀಗೆ ಹೇಳುತ್ತದೆ**

- 1 ರಿಂದ 5 ರ ವರೆಗಿನ ತರಗತಿಗಳಲ್ಲಿ ಕಲಿಯುವ ಮಕ್ಕಳಿಗೆ 200 ಕಲಿಕೆಯ ದಿವಸಗಳೂ 800 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.
- 6 ರಿಂದ 8 ರ ವರೆಗಿನ ತರಗತಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ 220 ಕಲಿಕೆಯ ದಿವಸಗಳೂ 1000 ಗಂಟೆಗಳ ಬೋಧನ ಸಮಯವೂ ಲಭಿಸಬೇಕು.

**ಸಂರಕ್ಷಣೆ (Protection)**

- ಶಾಲೆಯಲ್ಲಿ ಹಾಗೂ ಹೊರಗೆ ಯಾವುದೇ ಭೇದಭಾವವನ್ನು ನಾನು ಅನುಭವಿಸುವುದಿಲ್ಲ.
- ನನ್ನನ್ನು ಯಾರೂ ಕೂಡಾ ಯಾವುದೇ ರೀತಿಯಲ್ಲಿ ಕಡೆಗಣಿಸುವುದಿಲ್ಲ.
- ಯಾರೂ ಕೂಡಾ ದೈಹಿಕ ಅಥವಾ ಮಾನಸಿಕ ದೌರ್ಜನ್ಯವೆಸಗುವುದಿಲ್ಲ.
- ಅಧ್ಯಾಪಕರಲ್ಲಿ ನಿರ್ಭೀತಿಯಿಂದ ವ್ಯವಹರಿಸಲು ನನಗೆ ಸಾಧ್ಯವಾಗುತ್ತದೆ.
- ಮಗುವಾದರೂ ನನಗೆ ಖಾಸಗಿತನವಿದೆ. ನನ್ನನ್ನು ಎಲ್ಲರೂ ಅಂಗೀಕರಿಸುತ್ತಾರೆ.
- ಶಾಲೆಯಲ್ಲಿಯೂ ಮನೆಯಲ್ಲಿಯೂ ನಾನು ಸುರಕ್ಷಿತನಾಗಿದ್ದೇನೆ ಎಂಬ ಭರವಸೆ ನನಗಿದೆ.

**ಕೇರಳ ರಾಜ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

2002 ಮೇ ತಿಂಗಳಲ್ಲಿ ಸೇರಿದ ಸಂಯುಕ್ತ ರಾಷ್ಟ್ರ ಸಭೆಯ ಮಕ್ಕಳಿಗಾಗಿರುವ ವಿಶೇಷ ಸಮ್ಮೇಳನವು 'ಮಕ್ಕಳಿಗೆ ಯೋಗ್ಯವಾದ ಒಂದು ಜಗತ್ತು' ಎಂಬ ಶೀರ್ಷಿಕೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ಕೇಂದ್ರ ಸರಕಾರವು ನಿರ್ಮಿಸಿದ 2005ರ ಬಾಲಕರ ಹಕ್ಕು ಸಂರಕ್ಷಣ ಆಯೋಗ ಕಾಯಿದೆಯ ಹಾಗೂ 2012ರ ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ನಿಯಮಗಳ ಆಧಾರದಲ್ಲಿ 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಆಯೋಗ' ಕಾರ್ಯಾಚರಿಸುತ್ತಿದೆ. ನಮ್ಮ ಸಂವಿಧಾನವು ಹೇಳುವ ಮೂಲಭೂತ ಹಕ್ಕುಗಳನ್ನು ಹಾಗೂ ಮಕ್ಕಳ ಹಕ್ಕುಗಳನ್ನು ಸಂರಕ್ಷಿಸುವುದು ಆಯೋಗದ ಕೆಲಸವಾಗಿದೆ.

ಈ ಮಕ್ಕಳ ಹಕ್ಕುಗಳನ್ನು ದೃಢಪಡಿಸಲು ತಾನು ಏನು ಮಾಡಿದೆನೆಂದೂ ಇನ್ನು ಏನು ಮಾಡಬಹುದೆಂದೂ ಪ್ರತಿಯೊಬ್ಬ ಅಧ್ಯಾಪಕನೂ ಯೋಚಿಸಬೇಕಾಗಿದೆ.

## 1.12 ಮೆಂಟರಿಂಗ್

ರಾಷ್ಟ್ರೀಯ ಶಿಕ್ಷಣ ಹಕ್ಕು ಕಾಯ್ದೆಯು ಅಧ್ಯಾಪಕ/ಅಧ್ಯಾಪಿಕೆಯನ್ನು ಮೆಂಟರ್ (mentor) ಎಂಬುದಾಗಿ ಪರಿಗಣಿಸುತ್ತದೆ. ಸಮಗ್ರ ಶಾಲಾ ಅಭಿವೃದ್ಧಿ ವಲಯದಲ್ಲಿ ಮೆಂಟರಿಂಗ್‌ಗೆ ಬಹಳಷ್ಟು ಪ್ರಾಧಾನ್ಯವಿದೆ. ಕಲಿಕೆಯ ಸಾಧನೆಗಳನ್ನು ರುಜುವಾತುಪಡಿಸಲು ಸಮಗ್ರವಾದ ಮಾರ್ಗಸೂಚಿಗಳು ಅತಿ ಅವಶ್ಯಕ.

ಶಿಕ್ಷಣ ಪ್ರಕ್ರಿಯೆಯ ಮುಖ್ಯ ಘಟಕವಾದ ಅಧ್ಯಾಪಕ – ವಿದ್ಯಾರ್ಥಿ ಸಂಬಂಧದಲ್ಲಿ ಇಂದು ಬಹಳಷ್ಟು ವ್ಯತ್ಯಾಸಗಳಾಗಿವೆ. ವಿದ್ಯಾರ್ಥಿಗೆ ಜ್ಞಾನವನ್ನು ಹಸ್ತಾಂತರಿಸುವ ವ್ಯಕ್ತಿ ಮಾತ್ರವಲ್ಲದೆ ವಿದ್ಯಾರ್ಥಿಗಳಿಗೆ ಜ್ಞಾನವನ್ನು ಗಳಿಸಲಿರುವ ವೈವಿಧ್ಯಪೂರ್ಣ ಅವಕಾಶಗಳನ್ನು ಒದಗಿಸಿಕೊಡುವ ವ್ಯಕ್ತಿಯಾಗಿಯೂ ಅಧ್ಯಾಪಕ/ಅಧ್ಯಾಪಿಕೆ ಕಾರ್ಯನಿರ್ವಹಿಸಬೇಕಾಗಿದೆ.

ಮನೆಯನ್ನು ಹೊರತುಪಡಿಸಿದರೆ ವಿದ್ಯಾರ್ಥಿಗೆ ಶಾಲೆ ಎಂಬುದು ಮತ್ತೊಂದು ಮನೆಯಿದ್ದಂತೆ. ಶಾಲೆ ಮನೆಯೇ ಆದಾಗ ವಿದ್ಯಾರ್ಥಿಗೆ ಅಧ್ಯಾಪಕ ವೃಂದವು ಮನೆಯ ಸದಸ್ಯರೇ ಆಗುತ್ತಾರೆ. ವಿದ್ಯಾರ್ಥಿಗೆ ಮನೆಯಿಂದ ಲಭಿಸುವ ಪ್ರೀತಿ, ಕಾಳಜಿ, ರಕ್ಷಣೆ, ಅಂಗೀಕಾರ ಮುಂತಾದವುಗಳು ಗರಿಷ್ಠ ಅಥವಾ ಕನಿಷ್ಠ ಮಟ್ಟದಲ್ಲಿ ಲಭಿಸುತ್ತಿವೆ ಎಂಬುದನ್ನು ಪ್ರತಿಯೊಬ್ಬ ಅಧ್ಯಾಪಕ ಅಥವಾ ಅಧ್ಯಾಪಿಕೆ ಮನದಟ್ಟು ಮಾಡಿಕೊಳ್ಳಬೇಕು. ಇದನ್ನು ತಿಳಿದಾದ ಬಳಿಕ ಪ್ರತಿಯೊಂದು ಮಗುವಿಗೂ ಅವಶ್ಯಕವಾದ ರೀತಿಯಲ್ಲಿ ಇವುಗಳನ್ನು ನೀಡುವ ಹೊಣೆಗಾರಿಕೆ ಅಧ್ಯಾಪಕರಿಗಿದೆ. ಹೀಗಾದಾಗ ಮಾತ್ರ ಶಾಲೆಯೂ ಮನೆಯೆನಿಸಿಕೊಳ್ಳುವುದು.

ಪ್ರತಿಯೊಂದು ಮಗುವಿನ ವ್ಯಕ್ತಿಗತವಾದ ಮತ್ತು ಕೌಟುಂಬಿಕವಾದ ಹಿನ್ನೆಲೆಗಳನ್ನು ಅರ್ಥಮಾಡಿಕೊಳ್ಳಲು ಅಧ್ಯಾಪಕರು ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾಗುತ್ತದೆ.

- ಗೃಹ ಸಂದರ್ಶನ
- ಹೆತ್ತವರೊಂದಿಗಿನ ಆಶಯ ವಿನಿಮಯ
- ಮಗುವಿನ ನಿರಂತರ ನಿರೀಕ್ಷಣೆ

ಹೀಗೆ ಮಗುವಿಗೆ ಪ್ರೀತಿ, ಅಂಗೀಕಾರ ಮತ್ತು ಸಂರಕ್ಷಣೆ ಇತ್ಯಾದಿಗಳನ್ನು ನೀಡಿ, ನಾವು ಅಧ್ಯಾಪಕರು ಮಗುವಿನ ಸಹರಕ್ಷಕರಾಗಿ ಜವಾಬ್ದಾರಿ ವಹಿಸಿಕೊಂಡಾಗ ಮಾತ್ರ ಹೊಸ ಕಾಲಮಾನದ ಅಧ್ಯಾಪಕ/ಅಧ್ಯಾಪಿಕೆಯಾಗಿ ನಾವು ಗುರುತಿಸಿಕೊಳ್ಳಬಹುದು.

ಮೆಂಟರಿಂಗ್ ಮೂಲಕ ಮಾರ್ಗದರ್ಶನ, ಸಲಹೆ, ಬೆಂಬಲ, ಜ್ಞಾನವನ್ನು ಉತ್ತಮಪಡಿಸಲು ಬೇಕಾದ ಅವಕಾಶ ಮುಂತಾದುವುಗಳನ್ನು ಅಧ್ಯಾಪಕರು ಮಗುವಿಗೆ ಒದಗಿಸಿಕೊಡುತ್ತಾರೆ. ಅನುಭವಿಯಾದ ನೇತಾರ ಎಂಬ ನೆಲೆಯಲ್ಲಿಯೂ ಅನುಕರಣೀಯ ಆದರ್ಶ ವ್ಯಕ್ತಿ ಎಂಬ ನೆಲೆಯಲ್ಲಿಯೂ ಮೆಂಟರಿಂಗ್‌ನ ಕಾರ್ಯಚಟುವಟಿಕೆಗಳು ಮುಂದುವರಿಯಬೇಕು. ಬೋಧನೆಗೆ ಬೇಕಾದ ಸೂಚನೆಗಳು, ಕೌನ್ಸಿಲಿಂಗ್ ಇತ್ಯಾದಿಗಳೆಲ್ಲ ಇದರ ಭಾಗಗಳಾಗಿವೆ. ವಿದ್ಯಾರ್ಥಿಯ ಒಳಗೆ ಸುಪ್ತವಾಗಿರುವ ಪ್ರತಿಭೆಯನ್ನು ಹೊರಗೆ ತರಲು ಸಮರ್ಥ ಮೆಂಟರ್‌ನಿಂದ ಮಾತ್ರ ಸಾಧ್ಯ.

**ಮೆಂಟರಿಂಗ್ ಮೂಲಕ**

- ಅಧ್ಯಾಪಕ ಹಾಗೂ ವಿದ್ಯಾರ್ಥಿಗೆ ಉತ್ತಮ ಶಿಕ್ಷಣ ಅನುಭವಗಳು ಲಭಿಸುತ್ತವೆ.
- ಅಧ್ಯಾಪಕ ಹಾಗೂ ವಿದ್ಯಾರ್ಥಿಯ ಜ್ಞಾನ ವಲಯ ವಿಸ್ತಾರಗೊಳ್ಳುತ್ತದೆ.
- ವಿದ್ಯಾರ್ಥಿ ಮತ್ತು ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುತ್ತದೆ.
- ವಿದ್ಯಾರ್ಥಿಯ ಕಲಿಕೆಯಲ್ಲಿ ಪ್ರಗತಿ ಹಾಗೂ ವ್ಯಕ್ತಿತ್ವ ವಿಕಾಸ ಉಂಟಾಗುತ್ತದೆ.
- ಚಟುವಟಿಕೆಗಳ ಮೂಲಕ ಸಾಮಾಜಿಕ ಪ್ರಜ್ಞೆ ಬೆಳೆಸಲು ಮತ್ತು ತೀರ್ಮಾನಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.
- ಹೆತ್ತವರು ಹಾಗೂ ಶಾಲೆಯ ಪರಸ್ಪರ ಸಂಬಂಧ ಗಟ್ಟಿಗೊಳ್ಳುವುದಲ್ಲದೆ ವಿದ್ಯಾರ್ಥಿಯ ಕಲಿಕೆಯ ಗುಣಮಟ್ಟದ ಕುರಿತು ತಿಳಿಯಲು ಸಾಧ್ಯವಾಗುತ್ತದೆ.
- ಕಲೆ, ಕ್ರೀಡೆ, ಆರೋಗ್ಯ, ವೃತ್ತಿ ಪರಿಚಯ ಮೊದಲಾದ ಕಲಿಕಾ ವಲಯಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಮತ್ತು ಮೌಲ್ಯಮಾಪನವನ್ನು ಗಟ್ಟಿಗೊಳಿಸುತ್ತದೆ.

ಮೆಂಟರಿಂಗ್‌ಗೆ ಸಾಧ್ಯವಿರುವ ರೀತಿಯಲ್ಲಿ ನಕಾಶೆಗಳನ್ನು ರೂಪಿಸಿ, ಇದೊಂದು ಪರಿಹಾರ ಬೋಧನೆ ಪ್ರಕ್ರಿಯೆಯಾಗಿಯೂ ನಿರಂತರ ಮೌಲ್ಯನಿರ್ಣಯ ಮತ್ತು ವಿದ್ಯಾರ್ಥಿಯ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುವ ಪ್ರಕ್ರಿಯೆಯನ್ನಾಗಿಯೂ ರೂಪುಗೊಳಿಸಬೇಕಾಗಿದೆ.

ಶಾಲೆಯ ಎಲ್ಲಾ ಅಧ್ಯಾಪಕರನ್ನು 'ಮೆಂಟರ್ಸ್' ಎಂಬುದಾಗಿಯೂ ವಿದ್ಯಾರ್ಥಿಗಳನ್ನು 'ಮೆಂಟಿ' ಗಳನ್ನಾಗಿಯೂ ಪರಿಗಣಿಸುವ ಮೂಲಕ ಮೆಂಟರಿಂಗ್ ರೂಪುಗೊಳ್ಳಬೇಕು. ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನು ಸಣ್ಣ ಸಣ್ಣ ಗುಂಪುಗಳೆಂದು ಭಾವಿಸಿಕೊಂಡು, ಪ್ರತಿಯೊಂದು ಗುಂಪಿನ ಪ್ರಗತಿಯನ್ನು ಸಮರ್ಪಕ ರೀತಿಯಲ್ಲಿ ತಿಳಿಯಲು ಆಯಾ ತರಗತಿಯಲ್ಲಿ ಕಲಿಸುವ ಅಧ್ಯಾಪಕರಿಗೆ ಗುಂಪಿನ ಜವಾಬ್ದಾರಿಯನ್ನು ನೀಡಬಹುದು.

## 1.13 ಅಧ್ಯಾಪಕರು ಪಾಲಿಸಬೇಕಾದ ಪ್ರಮುಖ ವೃತ್ತಿಪರ ನೀತಿಸಂಹಿತೆ

(Code of Professional Ethics for School Teachers)

**1. ವಿದ್ಯಾರ್ಥಿಗಳೊಂದಿಗಿರುವ ಜವಾಬ್ದಾರಿಗಳು**

1.1 ಎಲ್ಲ ವಿದ್ಯಾರ್ಥಿಗಳೊಂದಿಗೆ ಪ್ರೀತಿ, ವಾತ್ಸಲ್ಯದಿಂದ ವರ್ತಿಸುವುದು.

- ಎಲ್ಲ ವಿದ್ಯಾರ್ಥಿಗಳೊಂದಿಗೆ ಸಮಾನ ರೀತಿಯಿಂದ ವರ್ತಿಸುವುದು.
- ಕಲಿಕೆಯಲ್ಲಿ ಹಿಂದಿರುವ ವಿದ್ಯಾರ್ಥಿಗಳಿಗೆ ವಿಶೇಷ ಪರಿಗಣನೆ ನೀಡುವುದು.
- ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ಆಸಕ್ತಿ ಮುಂತಾದುವುಗಳನ್ನು ಮೂಡಿಸುವ ರೀತಿಯಲ್ಲಿ ವ್ಯವಹರಿಸುವುದು.

1.2 ಜಾತಿ, ಮತ, ವರ್ಗ, ವರ್ಣ, ಆರ್ಥಿಕ ಸ್ಥಿತಿಗತಿ, ಭಾಷೆ, ಲಿಂಗ, ಜನ್ಮಸ್ಥಳ ಎಂಬೀ ವಿಷಯಗಳಲ್ಲಿ ಭೇದಭಾವವಿಲ್ಲದೆ, ನಿಷ್ಪಕ್ಷಪಾತ ಹಾಗೂ ನ್ಯಾಯಯುತವಾದ ಮೌಲ್ಯಗಳನ್ನು ಗೌರವಿಸುವುದು.

- ಪ್ರಜಾಪ್ರಭುತ್ವ ತತ್ವಸಿದ್ಧಾಂತಗಳಲ್ಲಿ, ಸಹಿಷ್ಣುತೆಯ ವಿಷಯಗಳಲ್ಲಿ, ಸಾಮಾಜಿಕ ವಿಚಾರಗಳಲ್ಲಿ ಅಧ್ಯಾಪಕರಿಗಿರುವ ನಂಬಿಕೆ ಮತ್ತು ವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿಯೂ ಮೂಡಿಸುವುದು.

- ಅಧ್ಯಾಪಕರ ವ್ಯಕ್ತಿಗತವಾದ ನಂಬಿಕೆಗಳು ಸಂವಿಧಾನದ ತತ್ವಗಳಿಗೆ ವಿರುದ್ಧವಾದರೆ ಅದು ಶಾಲೆಯ ಒಟ್ಟು ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರಬಹುದು.

1.3 ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಸದಾಚಾರಗಳ ಬೆಳವಣಿಗೆಗಳಿಗೆ ಸೂಕ್ತ ವಾತಾವರಣದ ಸೃಷ್ಟಿ.

- ಶಾಲಾ ಶಿಕ್ಷಣವು ವಿದ್ಯಾರ್ಥಿಯ ಶಾರೀರಿಕ ಮತ್ತು ಬೌದ್ಧಿಕವಾದ ಕೌಶಲ್ಯಗಳನ್ನು ಪರಿಪೂರ್ಣತೆಯತ್ತ ಕೊಂಡೊಯ್ಯುವ ಕಾಲಘಟ್ಟವಾಗಿದೆ.
- ಶಿಕ್ಷಣವು ವಿದ್ಯಾರ್ಥಿಯ ಬೌದ್ಧಿಕ ಬೆಳವಣಿಗೆಗೆ ಮಾತ್ರ ಸೀಮಿತವಾಗಿರಬಾರದು.
- ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯು ಶಿಕ್ಷಣದ ಮುಖ್ಯ ಲಕ್ಷ್ಯವಾಗಿರಬೇಕು.

1.4 ಶಾಲಾ ಶಿಕ್ಷಣದ ಎಲ್ಲಾ ಘಟ್ಟಗಳಲ್ಲಿಯೂ ವಿದ್ಯಾರ್ಥಿಯ ವ್ಯಕ್ತಿತ್ವವು ಗೌರವಿಸಲ್ಪಡಬೇಕು.

- ವ್ಯಕ್ತಿ ಎಂಬ ನೆಲೆಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗಿರುವ ಪ್ರಜಾಪ್ರಭುತ್ವ ಪರವಾದ ಹಕ್ಕುಗಳು ಹಾಗೂ ಸ್ಥಾನಮಾನಗಳನ್ನು ಗಮನಿಸಬೇಕು.
- ಅಧ್ಯಾಪಿಕೆಯ ಭಾಗದಿಂದ ಬರಬಹುದಾದ ಯಾವುದೇ ಪ್ರತಿಕೂಲ ಅಭಿಪ್ರಾಯಗಳು ವಿದ್ಯಾರ್ಥಿಯ ಸ್ವಾಭಿಮಾನವನ್ನು ಘಾಸಿಗೊಳಿಸುವುದಲ್ಲದೆ ಅವು ಆತನ ಕಲಿಕೆಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಬಹುದು.
- ಶಾಲೆಯ ಎಲ್ಲಾ ಕಾರ್ಯಚಟುಟಿಕೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳ ಸಕ್ರಿಯವಾದ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಬೇಕು.
- ಸಂಯುಕ್ತ ರಾಷ್ಟ್ರ ಸಂಘ ಅಂಗೀಕರಿಸಿದ ಹಾಗೂ ಭಾರತವು ಒಪ್ಪಿರುವ ಮತ್ತು ಪಾಲಿಸಿಕೊಂಡು ಬಂದಿರುವ ಮಕ್ಕಳ ಹಕ್ಕು ಕಾಯ್ದೆಗಳನ್ನು ಹಾಗೂ ಮಕ್ಕಳ ಹಕ್ಕು ಸಂರಕ್ಷಣಾ ಸಮಿತಿಯ ವರದಿಗಳನ್ನು ಅಧ್ಯಾಪಕರು ಗಮನದಲ್ಲಿಟ್ಟು ವ್ಯವಹರಿಸಬೇಕಾಗಿದೆ.
- ಶಾಲೆಯ ಶಿಸ್ತುಕ್ರಮ ಪಾಲನೆಗಾಗಿ ರೂಪಿಸುವ ನಿಯಮಾವಳಿಗಳು ವಿದ್ಯಾರ್ಥಿಯ ಮಾನವೀಯ ಹಕ್ಕುಗಳಿಗೆ ಧಕ್ಕೆಯನ್ನುಂಟುಮಾಡಬಾರದು.

1.5 ವಿದ್ಯಾರ್ಥಿಯಲ್ಲಿ ಸುಪ್ತವಾಗಿರುವ ಕೌಶಲ್ಯ ಮತ್ತು ಪ್ರತಿಭೆಯು ಪ್ರಕಟಗೊಳ್ಳಲು ಸೂಕ್ತವಾದ ಹಾಗೂ ಅಚ್ಚುಕಟ್ಟಾದ ಯೋಜನೆಗಳನ್ನು ರೂಪಿಸಬೇಕು.

- ಶೈಕ್ಷಣಿಕ ಸಾಧನೆ ಮಾತ್ರವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ವಿಶೇಷ ಕೌಶಲ್ಯ ಮತ್ತು ಪ್ರತಿಭೆಯನ್ನು ಗುರುತಿಸುವುದು ಅಧ್ಯಾಪಿಕೆಯ ಬಹುಮುಖ್ಯ ಕರ್ತವ್ಯವಾಗಿದೆ.
- ವಿದ್ಯಾರ್ಥಿಯ ಎಲ್ಲಾ ವಿಧದ ಕೌಶಲ್ಯಗಳನ್ನು ಬೆಳೆಸುವ ಚಟುವಟಿಕೆಗಳು ಇರಬೇಕು.

1.6 ಪಠ್ಯಕ್ರಮವು ಸಂವಿಧಾನವು ತಿಳಿಸುವ ಮೌಲ್ಯಗಳು ಮತ್ತು ವಿಚಾರಧಾರೆಗಳನ್ನು ಒಳಗೊಂಡಿರಬೇಕು.

- ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮತ್ವ, ನೈತಿಕತೆ, ಸ್ವಾತಂತ್ರ್ಯ ಮುಂತಾದ ಸಂವಿಧಾನದ ಮೌಲ್ಯಗಳು ಪಠ್ಯಕ್ರಮ ಯೋಜನೆಯ ಪ್ರಧಾನ ಅಂಶಗಳಾಗಿರಬೇಕು.

- ಪೌರರ ಕರ್ತವ್ಯಗಳ ಕುರಿತು ಹೇಳಿರುವ ಸಂವಿಧಾನದ ಪರಿಚ್ಛೇದ (ಆರ್ಟಿಕಲ್) 51 ಎ ಯನ್ನು ಅರ್ಥಮಾಡಿಕೊಂಡು, ಅದರಲ್ಲಿನ 'ಎ' ಯಿಂದ 'ಕೆ' ವರೆಗಿನ ಆಶಯಗಳನ್ನು ಗಮನದಲ್ಲಿಟ್ಟುಕೊಂಡು ವ್ಯವಹರಿಸಬೇಕು.

1.7 ವಿದ್ಯಾರ್ಥಿಗಳ ಅಗತ್ಯಗಳಿಗನುಸಾರ ಅಧ್ಯಾಪಿಕೆಯ/ಅಧ್ಯಾಪಕನ ಬೋಧನ ರೀತಿಯನ್ನು ಪರಿಷ್ಕರಿಸಬೇಕು.

- ನಿರಂತರ ಮೌಲ್ಯನಿರ್ಣಯದ ಆಧಾರದಲ್ಲಿ ವಿದ್ಯಾರ್ಥಿಯ ಸ್ವಭಾವ, ಗಳಿಸಿದ ಜ್ಞಾನ, ಅಭಿರುಚಿ, ಕಲಿಕೆಯ ರೀತಿ ಮುಂತಾದುವುಗಳನ್ನು ಪರಿಗಣಿಸಿ, ಬೋಧನೆಯ ವಿಧಾನಗಳಲ್ಲಿ ಅಗತ್ಯವಾದ ಪರಿಷ್ಕಾರವನ್ನು ನಿರಂತರ ನಡೆಸುತ್ತಿರಬೇಕು.

1.8 ವಿದ್ಯಾರ್ಥಿಗಳು ನೀಡುವ ಅವರ ವ್ಯಕ್ತಿಗತವಾದ ವಿಚಾರಗಳ ಗೌಪ್ಯತೆಯನ್ನು ಕಾಪಾಡುವುದು ಮತ್ತು ಇಂತಹ ವಿಷಯಗಳನ್ನು ಕಾನೂನುಬದ್ಧವಾಗಿ ಯಾರಿಗೆ ತಿಳಿಸಬಹುದೋ ಅವರಿಗೆ ಮಾತ್ರ ತಿಳಿಸುವುದು.

- ಕೌನ್ಸಿಲರ್ ಕೂಡಾ ಆಗಿರುವ ಅಧ್ಯಾಪಿಕೆಗೆ ವಿದ್ಯಾರ್ಥಿಯ ವ್ಯಕ್ತಿಗತವಾದ ವಿಷಯಗಳನ್ನು ತಿಳಿಯಲು ಸಾಧ್ಯ.
- ಈ ವಿವರಗಳನ್ನು ವಿದ್ಯಾರ್ಥಿಯ ಒಳಿತಿಗಾಗಿ ವಿವೇಕದಿಂದ ಉಪಯೋಗಿಸತಕ್ಕದ್ದು.

1.9 ವಿದ್ಯಾರ್ಥಿಗಳನ್ನು ಗದರಿಸುವುದು, ಆತಂಕಕ್ಕೀಡುಮಾಡುವುದು, ಶಾರೀರಿಕವಾಗಿ, ಮಾನಸಿಕವಾಗಿ, ಭಾವನಾತ್ಮಕವಾಗಿ ದೌರ್ಜನ್ಯವೆಸಗುವುದು ಮುಂತಾದುವುಗಳನ್ನು ಮಾಡಬಾರದು.

- ಲೈಂಗಿಕ ದೌರ್ಜನ್ಯದಿಂದ, ಕಡೆಗಣಿಸುವಿಕೆಯಿಂದ, ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವ ಜವಾಬ್ದಾರಿ ಅಧ್ಯಾಪಕರಿಗಿದೆ.
- ಉತ್ತಮ ಕಲಿಯುವಿಕೆಗೆ ಶಿಕ್ಷೆ ಸಹಕಾರಿ ಎಂಬ ತಪ್ಪು ಕಲ್ಪನೆ ದೂರವಾಗಬೇಕು.
- ಇಂತಹ ಸನ್ನಿವೇಶಗಳಲ್ಲಿ ವಿದ್ಯಾರ್ಥಿಗೆ ಲಭಿಸುವ ಕಾನೂನು ರಕ್ಷಣೆಗಳ ಕುರಿತು ಅಧ್ಯಾಪಕರು ತಿಳಿದಿರಬೇಕು.

1.10 ಯಾವುದೇ ರೀತಿಯ ಲೈಂಗಿಕ ಶೋಷಣೆಯಿಂದ ವಿದ್ಯಾರ್ಥಿಯನ್ನು ಸಂರಕ್ಷಿಸುವುದು.

- ಯಾವುದೇ ರೀತಿಯ ಲೈಂಗಿಕ ಶೋಷಣೆ, ದೈಹಿಕ ಗಾಯಗಳು ಮಾತ್ರವಲ್ಲದೆ, ದೀರ್ಘಕಾಲ ಉಳಿದುಕೊಳ್ಳುವ ಮಾನಸಿಕ ಆಘಾತವೂ ವಿದ್ಯಾರ್ಥಿಯನ್ನು ಅಧೀರನನ್ನಾಗಿಸುತ್ತದೆ.

  ಉದ್ಯೋಗ ಸ್ಥಳಗಳಲ್ಲೂ, ಶಾಲೆಗಳಲ್ಲೂ ನಡೆಯುವ ಲೈಂಗಿಕ ಶೋಷಣೆಯ ವಿರುದ್ಧ ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟು ಮತ್ತು ಎನ್.ಸಿ.ಪಿ. ನೀಡಿದ ಮಾರ್ಗಸೂಚಿಗಳನ್ನು ಅಧ್ಯಾಪಕರು ಪಾಲಿಸಬೇಕಾಗಿದೆ.

**2. ರಕ್ಷಕರು ಮತ್ತು ಸಮಾಜದೊಂದಿಗೆ ಇರಬೇಕಾದ ಜವಾಬ್ದಾರಿಗಳು**

2.1 ತಂದೆ–ತಾಯಿಯರೊಂದಿಗೆ ಮತ್ತು ರಕ್ಷಕರೊಂದಿಗೆ ವಿನಯಪೂರ್ವಕವಾದ ವರ್ತನೆ ಇರಬೇಕು.

- ವಿದ್ಯಾರ್ಥಿಗಳ ಕುರಿತು ಹೆಚ್ಚು ತಿಳಿಯುವುದಕ್ಕಾಗಿ ಅವರ ಹೆತ್ತವರೊಂದಿಗೂ ಗೆಳೆಯರೊಂದಿಗೂ ಉತ್ತಮ ಸಂಪರ್ಕ ಇಟ್ಟುಕೊಳ್ಳುವುದು ಅಗತ್ಯ.
- ಅಧ್ಯಾಪಿಕೆ ಮತ್ತು ಹೆತ್ತವರ ಬಾಂಧವ್ಯವು ವಿದ್ಯಾರ್ಥಿ ಮತ್ತು ಅಧ್ಯಾಪಿಕೆಯ ಸಂಬಂಧವನ್ನು ಹೆಚ್ಚು ನಿಕಟಗೊಳಿಸುತ್ತದೆ.
- ತಮ್ಮ ಮಕ್ಕಳ ಶಾಲೆಯೊಳಗಿನ ಮತ್ತು ಹೊರಗಿನ ಚಟುವಟಿಕೆಗಳ ಕುರಿತು ಅಧ್ಯಾಪಕರಿಂದ ತಿಳಿಯಲು ಹೆಚ್ಚಿನ ಹೆತ್ತವರು ಬಯಸುತ್ತಾರೆ.
- ಬೆಳವಣಿಗೆಯ ಸಂದರ್ಭದಲ್ಲಿ ವಿದ್ಯಾರ್ಥಿಗೆ ಉಂಟಾಗುವ ಪ್ರಮಾದಗಳನ್ನು ಹೆತ್ತವರೊಂದಿಗೆ ಚರ್ಚಿಸುವುದರಿಂದ ಮುಂದೆ ಸಂಭವಿಸಬಹುದಾದ ಹೊಸ ದುರಂತಗಳನ್ನು ತಪ್ಪಿಸಲು ಸಾಧ್ಯವಾಗಬಹುದು.

2.2 ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ತರುವ ಚಟುವಟಿಕೆಗಳಿಂದ ದೂರವಿರುವುದು.

- ಇತರ ವಿದ್ಯಾರ್ಥಿಗಳ ಮುಂದೆ ವಿದ್ಯಾರ್ಥಿಯ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುವ ರೀತಿಯಲ್ಲಿ ಮಾತನಾಡುವುದನ್ನು ಬಿಟ್ಟುಬಿಡಬೇಕು.
- ಅದೇ ರೀತಿಯಲ್ಲಿ ಹೆತ್ತವರ ಸ್ವಾಭಿಮಾನವನ್ನು ಪ್ರಶ್ನಿಸಬಾರದು.
- ಯಾವುದಾದರೂ ಒಂದು ವಿಭಾಗದ ವಿದ್ಯಾರ್ಥಿಗಳನ್ನು ಮಾತ್ರ ಹಿನ್ನೆಲೆಯಾಗಿರಿಸಿ (ಜಾತಿ, ಮತ, ಆರ್ಥಿಕ ಸ್ಥಿತಿ, ...) ಹೊಗಳುವುದರಿಂದ ಉಳಿದ ವಿದ್ಯಾರ್ಥಿಗಳಲ್ಲಿ ದ್ವೇಷ ಮನೋಭಾವ ಉಂಟಾಗುವುದು.

2.3 ಭಾರತದ ಸಾಂಸ್ಕೃತಿಕ ಪರಂಪರೆಯ ಕುರಿತು ವಿದ್ಯಾರ್ಥಿಗಳಿಗೆ ಆದರ ಹಾಗೂ ಗೌರವ ಉಂಟಾಗುವಂತೆ ಮಾಡುವುದು.

- ಭಾರತವು ವಿವಿಧ ಸಂಸ್ಕೃತಿ, ಭಾಷೆ, ಮತ, ನಂಬಿಕೆಗಳ ದೇಶ. ಈ ವೈವಿಧ್ಯವನ್ನು ಪ್ರತಿಯೊಂದು ತರಗತಿಗಳಲ್ಲೂ ಕಾಣಬಹುದು.
- ಭಾರತದಲ್ಲಿ ವಿವಿಧತೆಯಲ್ಲಿ ಏಕತೆಯಿದೆ.
- ಪ್ರತಿಯೊಬ್ಬನಲ್ಲೂ ಪರಸ್ಪರ ಸಹಿಷ್ಣುತೆ ಮತ್ತು ಎಲ್ಲಾ ಸಂಸ್ಕೃತಿಗಳನ್ನು ಗೌರವಿಸುವ ಮನೋಭಾವ ಇರಬೇಕು.
- ಈ ಮನೋಭಾವ ಅಥವಾ ತತ್ವಗಳನ್ನು ಪಠ್ಯಕ್ರಮದ ಮೂಲಕ ಬೆಳೆಸುವ ಪ್ರಜ್ಞಾಪೂರ್ವಕ ಪ್ರಯತ್ನ ಅಗತ್ಯವಾಗಿದೆ.

2.4 ವಿವಿಧ ಜನಸಮುದಾಯಗಳೊಳಗೆ ಪರಸ್ಪರ ದ್ವೇಷ, ಹಗೆತನವನ್ನು ಬೆಳೆಸುವ ರೀತಿಯ ಕಾರ್ಯಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು.

- ಎಲ್ಲ ಮತ, ನಂಬಿಕೆ ಮತ್ತು ಭಾಷೆಗಳಲ್ಲಿ ಸಮಾನ ಗೌರವವನ್ನು ಉಂಟುಮಾಡುವ ರೀತಿಯ ಚಟುವಟಿಕೆಗಳು ತರಗತಿಯಲ್ಲಿ ನಡೆಯಬೇಕು.
- ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ಪ್ರತಿಯೊಬ್ಬನೂ ಮೊದಲಿಗೆ ಭಾರತೀಯ. ಬಳಿಕ ಮಾತ್ರವೇ ಒಂದು ಸಮುದಾಯದ ಸದಸ್ಯ ಎಂಬುದು ಮುಖ್ಯ ವಿಷಯವಾಗಬೇಕು.

- ಯಾವುದಾದರೂ ಒಂದು ನಿರ್ದಿಷ್ಟ ಗುಂಪಿನ ಪ್ರಚಾರಕ್ಕಾಗಿ ಶಾಲೆ/ತರಗತಿಯನ್ನು ಬಳಸಬಾರದು.
- ಸಮಕಾಲೀನ ಸಾಮಾಜಿಕ, ರಾಜಕೀಯ ಬೆಳವಣಿಗೆಗಳನ್ನು ಚರ್ಚೆ ಮಾಡುವಾಗ ಅಧ್ಯಾಪಕ/ಅಧ್ಯಾಪಿಕೆ ಯಾವುದಾದರೂ ಒಂದು ಪಕ್ಷದ ಪರವಾಗಿ ಮಾತನಾಡಬಾರದು.

**3. ಅಧ್ಯಾಪನ ವೃತ್ತಿಯಲ್ಲಿ ಹಾಗೂ ಸಹೋದ್ಯೋಗಿಗಳೊಡನೆ ಇರಬೇಕಾದ ಜವಾಬ್ದಾರಿಗಳು**

3.1 ವೃತ್ತಿ ಪರಿಣತಿಯನ್ನು ಬೆಳೆಸಲು ನಿರಂತರ ಪ್ರಯತ್ನಿಸುವುದು.

- ಒಬ್ಬ ವಿದ್ಯಾರ್ಥಿಯನ್ನು ನಿರಂತರ ಕಲಿಕೆಯವನನ್ನಾಗಿ ಮಾಡುವುದರೊಂದಿಗೆ ಅಧ್ಯಾಪಕನು ತಾನೂ ಕಲಿಯುತ್ತಿರಬೇಕು.
- ನಿರಂತರವಾಗಿ ಬೆಳೆಯುತ್ತಿರುವ ಜ್ಞಾನ ವಲಯಗಳ ಕುರಿತು, ಅಧ್ಯಾಪನ ರೀತಿಯ ಕುರಿತು ಜ್ಞಾನವನ್ನು ಸಂಪಾದಿಸಲೂ ಅದನ್ನು ಕಾರ್ಯರೂಪಕ್ಕೆ ತರಲೂ ಸಾಧ್ಯವಾಗಬೇಕು.
- ಯಾವ ಯಾವ ಮೂಲಗಳಿಂದ ತನಗೆ ಹೊಸ ಅರಿವು ಲಭಿಸಬಹುದೆಂಬ ಹುಡುಕಾಟ ಅಧ್ಯಾಪಕನ ಕರ್ತವ್ಯವಾಗಿರಬೇಕು.

3.2 ಸಹೋದ್ಯೋಗಿಗಳೊಂದಿಗೆ ಹಾಗೂ ಇತರರೊಂದಿಗೆ ಪರಸ್ಪರ ಆಶಯ ವಿನಿಮಯ ಮಾಡುವುದರಿಂದ ಹೊಸತಾದ ಜ್ಞಾನ ವಲಯ ಸೃಷ್ಟಿಯಾಗುವುದು.

- ಶಾಲೆಯಲ್ಲಿ ಶೈಕ್ಷಣಿಕ ಜಾಗೃತಿಯನ್ನು ಮೂಡಿಸುವುದು ಮತ್ತು ಎಲ್ಲ ಅಧ್ಯಾಪಕರಿಗೆ ತಮ್ಮದೇ ಆದ ಕೊಡುಗೆ ನೀಡುವ ಅವಕಾಶವನ್ನು ಕಲ್ಪಿಸಿ ಉತ್ತಮ ವಾತಾವರಣವನ್ನು ಉಂಟುಮಾಡುವುದು.
- ಇಂತಹ ಸನ್ನಿವೇಶವುಂಟಾಗಲು ಪೂರ್ವಯೋಜನೆ ಮತ್ತು ಫಲಪ್ರದವಾದ ಸಹಕಾರ ಮನೋಭಾವ ಎಲ್ಲ ಅಧ್ಯಾಪಕರಲ್ಲೂ ನಿರ್ಮಾಣವಾಗಬೇಕು.
- ಶಾಲೆಯ ಯಾವುದೇ ರೀತಿಯ ಸಮಸ್ಯೆಗಳನ್ನು ಪರಿಹಾರ ಮಾಡುವಲ್ಲಿ ಎಲ್ಲ ಅಧ್ಯಾಪಕರ ಒಗ್ಗಟ್ಟು, ಚರ್ಚೆ, ಕ್ರಿಯಾತ್ಮಕ ಮಾರ್ಗದರ್ಶನ ಹಾಗೂ ಫಲಪ್ರದ ಕಾರ್ಯಚಟುವಟಿಕೆ ಇರಬೇಕು.
- ಅಧ್ಯಾಪಕರನ್ನು ಮಾತ್ರವಲ್ಲದೆ ಶಾಲೆಯ ವಿಷಯಗಳಲ್ಲಿ ಮುತುವರ್ಜಿಯಿರುವ ಎಲ್ಲರನ್ನು ಇಂತಹ ಕ್ರಿಯಾಚಟುವಟಿಕಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಅಧ್ಯಾಪಕನಿಗೆ ಸಾಧ್ಯವಾಗಬೇಕು.

3.3 ಸಹೋದ್ಯೋಗಿಗಳೊಡನೆ ಗೌರವಾದರಗಳೊಂದಿಗೆ ವ್ಯವಹರಿಸಬೇಕು.

- ಶಾಲೆಯ ಎಲ್ಲ ಅಧ್ಯಾಪಕರೊಡನೆ ಅವರ ವಿದ್ಯಾಭ್ಯಾಸ ಯೋಗ್ಯತೆ, ಅವರು ಯಾವ ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದಾರೆ ಎಂಬುದನ್ನು ನೋಡದೆ ಅವರೊಂದಿಗೆ ಗೌರವಾದರಗಳಿಂದ ವ್ಯವಹರಿಸಬೇಕು.

3.4 ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ತರಗತಿಗಳನ್ನು ನಡೆಸುವುದು ಅಥವಾ ಇತರ ಖಾಸಗಿ ಶಿಕ್ಷಣ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಸಮರ್ಪಕವಲ್ಲ.

- ಅಧ್ಯಾಪಕರು ಖಾಸಗಿಯಾಗಿ ಟ್ಯೂಶನ್ ನಡೆಸುವುದರಿಂದ ಅಧ್ಯಾಪಕನ ಶಾಲಾ ಚಟುವಟಿಕೆಗಳ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು.

- ಖಾಸಗಿ ಟ್ಯೂಶನ್ ನಡೆಸುವುದರಿಂದ ಶಾಲೆಯ ನೈತಿಕ ತತ್ವ ಸಿದ್ಧಾಂತಗಳಿಗೆ ಧಕ್ಕೆಯುಂಟಾಗುವಂಥ ವ್ಯವಹಾರಗಳಿಗೆ ಕಾರಣವಾಗುವುದು.

3.5 ತನ್ನ ಚಟುವಟಿಕೆಗಳು ಮತ್ತು ತೀರ್ಮಾನಗಳು ಪರರ ಪ್ರಭಾವಕ್ಕೊಳಗಾಗದಂತೆ ನೋಡಿಕೊಳ್ಳಲು ಯಾವುದೇ ವಿಧವಾದ ಉಡುಗೊರೆ ಅಥವಾ ಇತರ ಸಹಾಯಗಳನ್ನು ಸ್ವೀಕರಿಸುವುದಿಲ್ಲ.

- ಯಾವುದೇ ರೀತಿಯ ಸೌಲಭ್ಯಗಳನ್ನು ನಿರೀಕ್ಷಿಸಿಕೊಂಡು ಕೊಡಮಾಡುವ ಬೆಲೆಬಾಳುವ ಉಡುಗೊರೆಗಳನ್ನು ಅಧ್ಯಾಪಕರು ವಿದ್ಯಾರ್ಥಿಯಿಂದ ಅಥವಾ ಹೆತ್ತವರಿಂದ ಸ್ವೀಕರಿಸಬಾರದು.

3.6 ಸಹೋದ್ಯೋಗಿಗಳಿಗೆದುರಾಗಿ ಮತ್ತು ಮೇಲಿನ ಅಧಿಕಾರಿಗಳಿಗೆದುರಾಗಿ ಅನಗತ್ಯವಾದ ಆರೋಪಗಳನ್ನು ಮಾಡುವುದಿಲ್ಲ.

- ಪರಸ್ಪರ ತಪ್ಪು ಹೊರಿಸುವ ಗುಂಪುಗಾರಿಕೆ ಅಧ್ಯಾಪಕರಲ್ಲಿ ಇರಬಾರದು.
- ಸಾಕ್ಷ್ಯಗಳಿಲ್ಲದೆ ಸಹೋದ್ಯೋಗಿಗಳ ಮೇಲೆ ಆರೋಪ ಮಾಡಬಾರದು.
- ಯಾವುದಾದರೂ ಸಹೋದ್ಯೋಗಿ/ಸಹೋದ್ಯೋಗಿಗಳಲ್ಲಿ ಗಂಭೀರವಾದ ಅಪರಾಧ ಕಂಡುಬಂದರೆ ಅದನ್ನು ಹಿರಿಯ ಅಧ್ಯಾಪಕರ ಗಮನಕ್ಕೆ ತರಬೇಕು.

3.7 ಸಹೋದ್ಯೋಗಿಗಳ, ವಿದ್ಯಾರ್ಥಿಗಳ ಅಥವಾ ಹೆತ್ತವರ ಎದುರಲ್ಲಿ ಸಹೋದ್ಯೋಗಿಯೊಬ್ಬನ ಮೇಲೆ ದೋಷಾರೋಪಣೆ ಮಾಡಬಾರದು.

- ಅಧ್ಯಾಪಕರ ಬಗ್ಗೆ ವಿಭಿನ್ನ ರೀತಿಯ ಅಭಿಪ್ರಾಯಗಳಿರಬಹುದು. ಅವುಗಳನ್ನು ಯೋಗ್ಯ ರೀತಿಯಲ್ಲಿ ವ್ಯಕ್ತಪಡಿಸಬೇಕು.
- ಸಹೋದ್ಯೋಗಿಯ ಅಧ್ಯಾಪನ ರೀತಿಯನ್ನು ಅಪಹಾಸ್ಯ ಮಾಡುವ ರೀತಿಯಲ್ಲಿ ಮಾತನಾಡಬಾರದು.

3.8 ಸಹೋದ್ಯೋಗಿಗಳ ಬೋಧನ ಗುಣಮಟ್ಟವನ್ನು ಗೌರವಿಸುವುದು.

- ಅಧ್ಯಾಪನದಲ್ಲಿ ಉತ್ತಮ ಸಾಧನೆ ಮಾಡಿದವರ ಚಟುವಟಿಕೆಗಳನ್ನು ಶ್ಲಾಘಿಸಬೇಕು. ಮಾತ್ರವಲ್ಲದೆ ಅಂತಹ ಸಾಧನೆಯನ್ನು ಮಾಡಲು ಪ್ರಯತ್ನಿಸಬೇಕು. ಆದರೆ ಅದು ಅಂಧಾನುಕರಣೆಯಾಗಲೇಬಾರದು.

3.9 ಸಹೋದ್ಯೋಗಿಗಳ ಕುರಿತು ತಿಳಿದಿರುವ ವೈಯಕ್ತಿಕ ವಿವರಗಳನ್ನು ಗೌಪ್ಯವಾಗಿಡಬೇಕು. ಅಗತ್ಯವಾದಾಗ ಮಾತ್ರ ಕಾನೂನು ಪ್ರಕಾರ ತಿಳಿಯಪಡಿಸುವುದು.

- ಯಾವುದಾದರೂ ಅಗತ್ಯಕ್ಕಾಗಿ ಸಂಗ್ರಹಿಸಲ್ಪಟ್ಟ ಸಹೋದ್ಯೋಗಿಗಳ ವೈಯಕ್ತಿಕ ವಿವರಗಳು ಗೌಪ್ಯವಾಗಿಡುವಂಥವುಗಳಾಗಿದ್ದಲ್ಲಿ ಅವುಗಳನ್ನು ಕಾನೂನುಬದ್ಧವಾದ ಕಾರ್ಯಗಳಿಗೆ ಮಾತ್ರ ತಿಳಿಯಪಡಿಸತಕ್ಕದ್ದು.

## 1.14 ಟೀಚಿಂಗ್ ಮ್ಯಾನುವೆಲ್

ಕಲಿಕಾ ಸಾಧನೆಗಳನ್ನು ಉದ್ದೇಶವಾಗಿಟ್ಟು ತಮ್ಮ ಕಾರ್ಯಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಪ್ರತಿಯೋರ್ವ ಅಧ್ಯಾಪಕನಿಗೂ ಸಾಧ್ಯವಾಗಬೇಕು. ಪಠ್ಯಪುಸ್ತಕದಲ್ಲಿ ಮತ್ತು ಅಧ್ಯಾಪಕರ ಪಠ್ಯದಲ್ಲಿ ನೀಡಿರುವ ಚಟುವಟಿಕೆಗಳನ್ನು ತರಗತಿಯ ಮಕ್ಕಳಿಗೆ ಅನುಕೂಲವಾದ ರೀತಿಯಲ್ಲಿ ತಿದ್ದಿಕೊಳ್ಳುವ ಅಥವಾ ಸೇರಿಸಿಕೊಳ್ಳುವ ಯೋಜನೆಯಿರಬೇಕು. ಪ್ರತಿಯೊಂದು ಕಲಿಕಾಸಾಧನೆ ಈಡೇರಲು ಬೇಕಾಗುವಷ್ಟು ಕಾರ್ಯಚಟುವಟಿಕೆಗಳು ಯೋಜನೆಯಲ್ಲಿರಬೇಕು.

ಕಲಿಕಾ ಚಟುವಟಿಕೆಗಳ ಜೊತೆಗೆ ಮೌಲ್ಯನಿರ್ಣಯವನ್ನೂ ಒಳಗೊಂಡಿರುವ ಯೋಜನೆಗಳು ಪಾಠಪ್ರಕ್ರಿಯೆಯ ಪುಟದಲ್ಲಿರಬೇಕು. ನಿರಂತರ ಮೌಲ್ಯಮಾಪನದಲ್ಲಿ ಲಭಿಸುವ ವಿವರಗಳ ದಾಖಲಾತಿಯು ಮೌಲ್ಯನಿರ್ಣಯ ಪುಟದಲ್ಲಿರಬೇಕು.

ಮುಂದಿನ ಒಂದು ವಾರಕ್ಕೆ ಬೇಕಾಗಿ ತಯಾರಿಸುವ ಟೀಚಿಂಗ್ ಮ್ಯಾನುವೆಲ್, ಸ್ಕೂಲ್ ರಿಸೋರ್ಸ್ ಗ್ರೂಪ್ (SRG) ನಲ್ಲಿ / ವಿಷಯ ಸಮಿತಿಗಳಲ್ಲಿ (Subject Councils) ಮಂಡಿಸುವುದು ಉತ್ತಮ. ಒಂದು ವಾರದ ಮೌಲ್ಯಮಾಪನ ಪುಟದ ವಿವರಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಾಪಕನು ಸರಳವಾದ ಅವಲೋಕನ ಟಿಪ್ಪಣಿ (Reflection Note) ತಯಾರಿಸಿ, **SRG/SC** ಯಲ್ಲಿ ಚರ್ಚೆ ಮಾಡಬಹುದು. ಈ ಟಿಪ್ಪಣಿಯ ಆಧಾರದಲ್ಲಿ ಅಧ್ಯಾಪಕನ ಮುಂದಿನ ಯೋಜನಾ ಟಿಪ್ಪಣಿಗಳು ತಯಾರಾಗಬೇಕು.

ಟೀಚಿಂಗ್ ಮ್ಯಾನುವೆಲ್‌ನ ನಮೂನೆಯನ್ನು ಕೆಳಗೆ ಕೊಡಲಾಗಿದೆ.

## ಟೀಚಿಂಗ್ ಮ್ಯಾನುವೆಲ್

| | | |
|---|---|---|
| ಪಾಠದ ಹೆಸರು | : | |
| ದಿನಾಂಕ | : | |
| ಸಮಯ | : | |
| ವಿಷಯ (Theme) | : | |
| ಕಲಿಕಾ ಸಾಧನೆಗಳು | : | |
| ಆಶಯಗಳು | : | |
| ಕೌಶಲ್ಯಗಳು | : | |
| ಭಾಷಾ ಸತ್ಯಾಂಶಗಳು (ಭಾಷೆಗೆ ಮಾತ್ರ) | : | |
| ವ್ಯವಹಾರ ರೂಪಗಳು (ಭಾಷಾ ವಿಷಯಕ್ಕೆ ಮಾತ್ರ) | : | |
| ಮೌಲ್ಯಗಳು – ಮನೋಭಾವಗಳು | : | |
| ಕಲಿಕೋಪಕರಣಗಳು | : | |
| ಉತ್ಪನ್ನಗಳು | : | |

| ಪ್ರಕ್ರಿಯೆ | ಮೌಲ್ಯನಿರ್ಣಯ |
|---|---|
| ಚಟುವಟಿಕೆ ಮತ್ತು ಮೌಲ್ಯಮಾಪನಗಳನ್ನೊಳಗೊಂಡ ಪ್ರಕ್ರಿಯೆ | (ಮೌಲ್ಯನಿರ್ಣಯದ ವಿವರಗಳನ್ನು ಇಲ್ಲಿ ದಾಖಲಿಸಬೇಕು) |

ಪ್ರಾಂಶುಪಾಲರ ಸಹಿ

ಅಧ್ಯಾಪಕ/ಅಧ್ಯಾಪಿಕೆಯ ಸಹಿ

**ಅವಲೋಕನ ಟಿಪ್ಪಣಿ (Reflections)**

ನನ್ನ ನಿಗಮನಗಳು ಮತ್ತು ಹೊಸ ಅರಿವುಗಳು (ಕಲಿಕಾ ಚಟುವಟಿಕೆಗಳು ಮತ್ತು ಮೌಲ್ಯನಿರ್ಣಯ ಪ್ರಕ್ರಿಯೆಗಳಿಂದ ಲಭಿಸಿದ ಮಾಹಿತಿಗಳ ಆಧಾರದಲ್ಲಿ)

■

■

■

■

ಮುಂದುವರಿದ ಚಟುವಟಿಕೆಗಳು ಮತ್ತು ಪರಿಹಾರ ಚಟುವಟಿಕೆಗಳು

■

■

■

■

■

**ಅವಲೋಕನ ಟಿಪ್ಪಣಿ (Reflection note) ಯಾಕೆ?**

ನಿರ್ದಿಷ್ಟ ಕಲಿಕಾ ಸಾಧನೆಗಳಿಗನುಸಾರವಾಗಿ ನಡೆಸಲಾದ ಕಲಿಕಾ ಚಟುವಟಿಕೆಗಳು ಪೂರ್ತಿಯಾದ ಬಳಿಕ ಅವಲೋಕನ ಟಿಪ್ಪಣಿ ತಯಾರಿಸಬೇಕು.

- ಈ ಟಿಪ್ಪಣಿಗಳನ್ನು ಪ್ರತಿವಾರದ **SRG** ಸಭೆಯಲ್ಲಿ ಮಂಡಿಸಬೇಕು.
- ಮುಂದಿನ ಯೋಜನೆಗಳಿಗೆ ಸೂಕ್ತ ಮಾರ್ಗದರ್ಶನ ನೀಡಲು.
- ಒಂದು ಅವಧಿಯ **C.E.** ಕ್ರೋಡೀಕರಿಸುವುದಕ್ಕಾಗಿ.

# ಮೌಲ್ಯಮಾಪನ ಸಮೀಪನಗಳು

ಶಾಲೆಯಲ್ಲಿ ಕಲಿಕೆಯು ಸಹಜವೂ ನಿರಂತರೂ ಆಗಿ ನಡೆಯಬೇಕಾದ ಪ್ರಕ್ರಿಯೆಯಾಗಿದೆ. ಕಲಿಕೆಯು ಪರಿಣಾಮಕಾರಿಯಾಗಬೇಕಾದರೆ ಕಲಿಕೆಯ ಅನುಭವಗಳು ನಿರ್ದಿಷ್ಟ ಉದ್ದೇಶವನ್ನು ಹೊಂದಿರಬೇಕು ಹಾಗೂ ಕಲಿಕಾ ಪ್ರಕ್ರಿಯೆ ಮೂಲಕ ಗಳಿಸಬೇಕಾದ ನೈಪುಣ್ಯಗಳ ಹಾಗೂ ತಿಳುವಳಿಕೆಗಳ ಕುರಿತು ಅಧ್ಯಾಪಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸ್ಪಷ್ಟವಾದ ಅರಿವು ಇರಬೇಕು. ಪ್ರತಿಯೊಂದು ಪಾಠಭಾಗಕ್ಕೆ ಸಂಬಂಧಿಸಿ ಗಳಿಸಬೇಕಾದ ಸಾಧನೆಗಳನ್ನು ಪೂರ್ವಭಾವಿಯಾಗಿ ತಿಳಿದುಕೊಂಡು ಕಲಿಕಾ ಚಟುವಟಿಕೆಗಳನ್ನು ರೂಪಿಸಬೇಕು. ಇವುಗಳನ್ನು ನಿಜ ಜೀವನಕ್ಕೆ ಹೊಂದಿಸಿಕೊಂಡು ಪ್ರಸ್ತುತ ಪಡಿಸಬೇಕು.

ಗಳಿಸಿದ ನೈಪುಣ್ಯಗಳು, ತಿಳುವಳಿಕೆಗಳು ಕಲಿಕಾ ಸಾಧಣೆಯನ್ನು ಖಾತರಿಪಡಿಸುವಲ್ಲಿ ಎಷ್ಟರಮಟ್ಟಿಗೆ ಸಮರ್ಥವಾಗಿವೆ? ಕಲಿಕಾ ಸಾಧನೆಯನ್ನು ಗಳಿಸುವಲ್ಲಿ ಹಿಂದುಳಿದವರು ಯಾರು? ಅವರಿಗೆ ನೀಡಬೇಕಾದ ಮುಂದುವರಿದ ಚಟುಟಿಕೆಗಳು ಯಾವುವು? ಅವುಗಳನ್ನು ಹೇಗೆ ಅಳವಡಿಸಬಹುದು? ಈ ರೀತಿಯ ಆಲೋಚನೆಗಳು ಮೌಲ್ಯಮಾಪನದ ಅಂಗವಾಗಿ ಅಧ್ಯಾಪಕರು ಮಾಡಬೇಕು.

ಪಠ್ಯಭಾಗದ/ಘಟಕದ ವಿನಿಮಯದ ನಂತರ "ಯಾವೆಲ್ಲಾ ಕಲಿಕಾ ಸಾಧನೆಗಳನ್ನು ಗಳಿಸಿದ್ದಾರೆ" ಎಂದು ಮೌಲ್ಯಮಾಪನ ಮಾಡುವ ವಿಧಾನವನ್ನು ಕಲಿಕೆಯ ಮೌಲ್ಯಮಾಪನ (Assessment of Learning) ಎಂದು ಕರೆಯುವರು. ಕಲಿಕೆಯ ನಂತರ ವಿದ್ಯಾರ್ಥಿಯ ಸಾಮರ್ಥ್ಯ ಹಾಗೂ ಗುಣಮಟ್ಟ ಎಂಬಿವುಗಳನ್ನು ಇಲ್ಲಿ ಮೌಲ್ಯಮಾಪನ ಮಾಡಬೇಕು. ಇದು ಮೌಲ್ಯಮಾಪನದ ಒಂದು ಹಂತ ಮಾತ್ರವಾಗಿದೆ.

ಕಲಿಕೆಯನ್ನು ದೃಢಪಡಿಸುವುದಕ್ಕಾಗಿರುವ ಮೌಲ್ಯಮಾಪನಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಬೇಕು. ಕಲಿಕೆಯ ಸಂದರ್ಭದಲ್ಲಿ ಅದರ ಕಾರ್ಯದಕ್ಷತೆಗಾಗಿ ಅಧ್ಯಾಪಕರಿಂದಲೋ ಸಹಪಾಠಿಗಳಿಂದಲೋ ವಿವಿಧ ರೀತಿಯ ಸಹಕಾರಗಳನ್ನು ನಿರೀಕ್ಷಿಸಬಹುದು. ಕಲಿಕೆಯೊಂದಿಗಿನ ಸಹಕಾರ ಹಾಗೂ ಪುನರವಲೋಕನ ಮೌಲ್ಯಮಾಪನದ ಇನ್ನೊಂದು ಘಟ್ಟವಾಗಿದೆ. ಇದನ್ನು ಕಲಿಕೆಗಾಗಿರುವ ಮೌಲ್ಯಮಾಪನ ಎಂದು ಕರೆಯುವರು. ಕಲಿಕಾಭಿವೃದ್ಧಿಗೆ ನಿರಂತರವಾಗಿ ನಿರ್ವಹಿಸಬೇಕಾದ ಕಲಿಕಾ ಚಟುವಟಿಕೆಗಳೊಂದಿಗೆ ಇದು ಸೇರ್ಪಡೆಗೊಳ್ಳಬೇಕು.

ಕಲಿಕೆಯಿಂದ ಪಡೆದ ಆಶಯಗಳನ್ನು ಮತ್ತು ತಿಳುವಳಿಕೆಗಳನ್ನು ವಿಮರ್ಶಾತ್ಮಕವಾಗಿ ಕಂಡುಕೊಂಡು ಅದರಲ್ಲಿನ ಬದಲಾವಣೆಗಳನ್ನು ತಿಳಿದುಕೊಂಡು ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗಿದೆ. ಇದನ್ನು ಸ್ವಯಂ ಮೌಲ್ಯಮಾಪನ ಎಂದು ತಿಳಿಯಬಹುದು. ಈ ರೀತಿಯಲ್ಲಿ ಸ್ವತಃ ನಡೆಸಿದಾಗಲೇ ಮೌಲ್ಯಮಾಪನದ ಮೂಲಕ ಕಲಿಕೆಯು ಸಾಧ್ಯವಾಗುತ್ತದೆ. ಇದನ್ನು ಮೌಲ್ಯಮಾಪನ ಕಲಿಕೆ (Assessment of Learning) ಎಂದು ಕರೆಯುವರು. ಈ ರೀತಿಯಲ್ಲಿ ಉತ್ತಮ ಕಲಿಕೆ ಹೇಗೆ ಸಾಧ್ಯ? ಎಂದು ವಿದ್ಯಾರ್ಥಿಯು ತಿಳಿದುಕೊಳ್ಳುವನು.

ಕಲಿಕೆಯು ಇನ್ನಷ್ಟು ಕಾರ್ಯದಕ್ಷವಾಗಲು 'ಕಲಿಕೆಗಾಗಿ ಮೌಲ್ಯಮಾಪನ', 'ಮೌಲ್ಯಮಾಪನವೇ ಕಲಿಕೆ'

ಎಂಬಿವುಗಳಿಗೆ ಒತ್ತು ನೀಡಬೇಕಾಗಿದೆ. ಕಲಿಕೆಯು ಪ್ರಯೋಜನಕಾರಿಯಾಗಲು ಮೌಲ್ಯಮಾಪನ ಪ್ರಕ್ರಿಯೆಗಳಿಗೆ ಪ್ರಾಧಾನ್ಯ ನೀಡುವ ಸಮೀಪನವನ್ನು ಸ್ವೀಕರಿಸಬೇಕಾಗಿದೆ.

ಕಲಿಕಾ ಸಾಧನೆಗಳನ್ನು ಖಾತರಿಪಡಿಸುವ ರೀತಿಯ ಕಲಿಕಾ ಸಮೀಪನವನ್ನು ಅಳವಡಿಸುವಾಗ ಅದಕ್ಕನುಗುಣವಾದ ಮೌಲ್ಯಮಾಪನ ಸಮೀಪನವನ್ನು ಸ್ವೀಕರಿಸಬೇಕು. ಆದುದರಿಂದ ಕಲಿಕಾ ಸಾಧನೆಗಳಿಗೆ ಒತ್ತು ನೀಡುವ ಮೌಲ್ಯಮಾಪನ ಸಮೀಪನವನ್ನು (Out come focused assessment approach) ಸ್ವೀಕರಿಸಬೇಕು. ಕಲಿಕಾ ಸಾಧನೆಗಳಿಗೆ ಒತ್ತುನೀಡಿ ರೂಪಿಸುವ ಕಲಿಕಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಯ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಬೇಕು. ಕಲಿಕ ಸಾಧನೆಗಳನ್ನು ಖಾತರಿಪಡಿಸಿಕೊಂಡೇ ಮುಂದುವರಿಯಲು ಸಾಧ್ಯ. ಕಲಿಕಾ ಸಾಧನೆಗಳ ಕುರಿತು ವಿದ್ಯಾರ್ಥಿ, ಅಧ್ಯಾಪಕ, ಪೋಷಕರಿಗೆ ಸಮಾನವಾದ ಪರಿಕಲ್ಪನೆ ಇರಬೇಕು. ಕಲಿಕಾ ಸಾಧನೆಗಳನ್ನು ಖಾತರಿಪಡಿಸಿಕೊಂಡೇ ಮುಂದುವರಿಯಲು ಸಾಧ್ಯ. ವಿದ್ಯಾರ್ಥಿಗಳಲ್ಲಿ ಕೇಂದ್ರಿತರವಾಗಿರುವುದು, ಸಾಮಾಜಿಕ ಸಮಸ್ಯೆಗಳನ್ನು ಗುರುತಿಸುವುದಕ್ಕಿರುವ ಸಾಮರ್ಥ್ಯಗಳನ್ನು ಬೆಳೆಸುವುದು, ಕ್ರಿಯಾತ್ಮಕ, ವಿಮರ್ಶಾತ್ಮಕ ಹಾಗೂ ನ್ಯಾಯ ಸಮ್ಮತವಾದ ಚಿಂತನೆಗಳನ್ನು ಪ್ರೋತ್ಸಾಹಿಸುವುದು ಮೊದಲಾದುವು ಕಲಿಕಾ ಸಾಧನೆಗಳಿಗೆ ಒತ್ತು ನೀಡಿರುವ ಕಲಿಕಾ ವಿಶೇಷತೆಗಳಾಗಿವೆ.

## ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (CCE)

ಕಲಿಕೆಯು ವಿದ್ಯಾರ್ಥಿಗಳಲ್ಲಿ ನಿರಂತರವಾಗಿ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ. ಆದುದರಿಂದ ನೈಪುಣ್ಯ ಹಾಗೂ ಅರಿವು ಎಷ್ಟರ ಮಟ್ಟಿಗೆ ಸಾಧಿಸಲಾಗಿದೆ ಎಂದು ತಿಳಿದುಕೊಳ್ಳುವ ಮೌಲ್ಯಮಾಪನ ಪ್ರಕ್ರಿಯೆಯೂ ನಿರಂತರವಾಗಿರಬೇಕು. ಸಮಗ್ರ ಮೌಲ್ಯಮಾಪನ ಎಂದರೆ ವಿದ್ಯಾರ್ಥಿಯ ವೈಜ್ಞಾನಿಕ, ಸಾಮಾಜಿಕ–ಭಾವನಾತ್ಮಕ ವಲಯಗಳ ಮೌಲ್ಯಮಾಪನವಾಗಿದೆ. ಈ ರೀತಿಯ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ರೀತಿಯನ್ನು ಸ್ವೀಕರಿಸಲಾಗಿದೆ.

### CCE ವಲಯಗಳು

CCE ಯನ್ನು ಎರಡು ವಲಯಗಳ ಮೂಲಕ ನಿರ್ವಹಿಸಲಾಗುವುದು.

1. ವೈಜ್ಞಾನಿಕ ವಲಯ
2. ಸಾಮಾಜಿಕ–ಭಾವನಾತ್ಮಕ

## ವೈಜ್ಞಾನಿಕ ವಲಯದ ಬೆಳವಣಿಗೆಗೆ ಸಂಬಂಧಿಸಿದ ಮೌಲ್ಯಮಾಪನ

ಹೈಯರ್ ಸೆಕಂಡರಿ ವಲಯದಲ್ಲಿನ ಕಲಿಕೆಯ ವಿಷಯಗಳಾದ ಭಾಷೆ, ವಿಜ್ಞಾನ, ಮಾನವಿಕ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ಆರೋಗ್ಯ ಕ್ರೀಡಾ ವಿದ್ಯಾಭ್ಯಾಸ ಮೊದಲಾದುವುಗಳು ವೈಜ್ಞಾನಿಕ ವಲಯಗಳಲ್ಲಿ ಒಳಪಡುತ್ತವೆ. ಪ್ರತಿಯೊಂದು ವಿಷಯದಲ್ಲಿಯೂ ಗಳಿಸಿದ ಸಾಧನೆಗಳನ್ನು ಮೌಲ್ಯಮಾಪನ ಮಾಡಬೇಕು. ಕೆಳಗೆ ಎರಡು ರೀತಿಯ ಮೌಲ್ಯಮಾಪನಗಳನ್ನು ಸೂಚಿಸಲಾಗಿದೆ.

1. ನಿರಂತರ ಮೌಲ್ಯಮಾಪನ (CE)
2. ಅವಧಿ ಮೌಲ್ಯಮಾಪನ (TE)

## ನಿರಂತರ ಮೌಲ್ಯಮಾಪನ

ಮೂರು ರೀತಿಯ ನಿರಂತರ ಮೌಲ್ಯ ಮಾಪನಗಳನ್ನು ನಿರ್ದೇಶಿಸಲಾಗಿದೆ.

- ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ
- Portfolio ಮೌಲ್ಯಮಾಪನ
- ಘಟಕದ ಮೌಲ್ಯಮಾಪನ

## ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ

ಕಲಿಕಾ ಸಾಧನೆಯನ್ನು ಪಡೆಯುವುದಕ್ಕಾಗಿ ವಿದ್ಯಾರ್ಥಿ ಹಾಗೂ ಅಧ್ಯಾಪಕರು ವಿವಿಧ ರೀತಿಯ ಚಟುವಟಿಕೆಗಳನ್ನು ಆಯೋಜಿಸಬಹುದು. ಚಟುವಟಿಕೆಯಲ್ಲಿ ವಿದ್ಯಾರ್ಥಿಯ ಪಾಲ್ಗೊಳ್ಳುವಿಕೆ, ವಿದ್ಯಾರ್ಥಿಯ ಮಂಡನೆ ಹಾಗೂ ಪ್ರಕಟಪಡಿಸುವಿಕೆಯಲ್ಲಿನ ಗುಣಮಟ್ಟ, ವಿದ್ಯಾರ್ಥಿಯ ಸೃಜನಾತ್ಮಕತೆ, ನಿಗದಿತ ನೈಪುಣ್ಯಗಳನ್ನು ಎಷ್ಟರಮಟ್ಟಿಗೆ ಪಡೆಯಲು ಸಾಧ್ಯವಾಗಿದೆ ಮುಂತಾದ ವಿಚಾರಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಬೇಕು. ಕೆಳಗೆ ನೀಡಲಾದ ಸೂಚಕಗಳನ್ನು ಮೌಲ್ಯಮಾಪನಕ್ಕೆ ಅಳವಡಿಸಬೇಕು.

- ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆ
- ಆಶಯದ ಅರಿವು
- ನೈಪುಣ್ಯಗಳ ಗಳಿಕೆ
- ಮಂಡನೆ/ಪ್ರಕಟಪಡಿಸುವಿಕೆ
- ದಾಖಲಿಸುವಿಕೆ/ತಯಾರಿಸುವಿಕೆ

ಚಟುವಟಿಕೆಗಳ ಮೌಲ್ಯಮಾಪನ ಮಾಡುವಾಗ, ಪ್ರತಿಯೊಂದು ಸೂಚಕದ ಆಧಾರದಲ್ಲಿ ಮೌಲ್ಯಮಾಪನ ನಡೆಸಬೇಕು. ಉದಾ: ಚಟುವಟಿಕೆಗಳಲ್ಲಿನ ಪಾಲ್ಗೊಳ್ಳುವಿಕೆ ಎಂಬ ಸೂಚಕದ ಆಧಾರದಲ್ಲಿ ಮೌಲ್ಯಮಾಪನ ಮಾಡುವಾಗ ಅತ್ಯಂತ ಉತ್ತಮ ರೀತಿಯಲ್ಲಿ ಪಾಲ್ಗೊಂಡವರು, ಉತ್ತಮ ರೀತಿಯಲ್ಲಿ ಪಾಲ್ಗೊಂಡವರು ಇನ್ನೂ ಉತ್ತಮಪಡಿಸಬೇಕಾದವರು ಎಂದು ಸೂಚಿಸುವ ಟಿಪ್ಪಣಿಗಳು Teacher Plannerನ ಮೌಲ್ಯಮಾಪನದ ಪುಟದಲ್ಲಿ ದಾಖಲಿಸಬೇಕು. ಒಂದು ಅವಧಿಯಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಚಟುಟಿಕೆಯ ಅಂಗವಾಗಿ ಮೌಲ್ಯಮಾಪನ ನಡೆಸಿ ದಾಖಲಿಸಬೇಕು.

ಪ್ರಕ್ರಿಯೆಯ ಮೌಲ್ಯಮಾಪನದಲ್ಲಿ–ಸ್ವಯಂ ಮೌಲ್ಯಮಾಪನ, ಪರಸ್ಪರ ಮೌಲ್ಯಮಾಪನ, ಅಧ್ಯಾಪಕರಿಂದ ಮೌಲ್ಯಮಾಪನ ಎಂಬಿವುಗಳಿಗೆ ಅವಕಾಶವಿರಬೇಕು.

ನಿರಂತರ ಮೌಲ್ಯಮಾಪನದ ಅಂಗವಾಗಿ ವಿವಿಧ ವಿಷಯಗಳಲ್ಲಿ ಕಲಿಕಾ ಪ್ರಕ್ರಿಯೆಯನ್ನು ಮೌಲ್ಯಮಾಪನ ಮಾಡುವುದು ಹೇಗೆಂದು ನೋಡೋಣ.

**ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ**

- ಚಟುವಟಿಕೆಗಳನ್ನು ಮಾಡಿದ್ದಾರೆಯೇ?
- ವೈಯಕ್ತಿಕವಾಗಿ ನಿರ್ವಹಿಸಲು ಪ್ರಯತ್ನಿಸಿದ್ದಾರೆಯೇ?
- ಗುಂಪಿನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆಯೇ?
- ಆಶಯಗಳನ್ನು ಹಂಚಿಕೊಂಡಿದ್ದಾರೆಯೇ?
- ಇತರರ ಪಾಲ್ಗೊಳ್ಳುವಿಕೆಗೆ ಪ್ರೋತ್ಸಾಹ ನೀಡಿದ್ದಾರೆಯೇ?

**ಆಶಯದ ಅರಿವು**

ಒಳಹೂರಣದ ಅರಿವು

ಜ್ಞಾನ ನಿರ್ಮಾಣದ ಹಂತಗಳು

ಆಶಯದ ಗುಣಮಟ್ಟ

ಆಶಯದ ಪ್ರಯೋಗಾತ್ಮಕತೆ

– ಇವುಗಳಲ್ಲಿ ವಿದ್ಯಾರ್ಥಿಗಳ ಗುಣಮಟ್ಟ

### ನೈಪುಣ್ಯಗಳನ್ನು ಗಳಿಸುವುದು

- ಚಟುವಟಿಕೆಯ ನೈಪುಣ್ಯಗಳನ್ನು ಹೊಂದಲು ಬೇಕಾದ ಪೂರ್ವ ಪರಿಕಲ್ಪನೆ ಎಷ್ಟರ ಮಟ್ಟಿಗಿದೆ.
- ನಿಶ್ಚೈಸಲಾದ ಪ್ರಕ್ರಿಯೆಯ ಸಾಮರ್ಥ್ಯವನ್ನು ಪಡೆಯಲು ಈ ಚಟುವಟಿಕೆಯಿಂದ ಸಾಧ್ಯವಾಗಿದೆಯೇ.
- ಸಾಮರ್ಥ್ಯವನ್ನು ಪಡೆದವರಿಗೆ ಹೆಚ್ಚಿನ ಯಾವ ಚಟುವಟಿಕೆಗಳನ್ನು ನೀಡಬೇಕು.

### ಮಂಡನೆ/ಅಭಿವ್ಯಕ್ತಿ

- ವೈಯಕ್ತಿಕ ಚಟುವಟಿಕೆ ಹಾಗೂ ಗುಂಪಿನ ಚಟುವಟಿಕೆಗಳ ನಂತರ ಕಂಡುಕೊಂಡ ಕಾರ್ಯವನ್ನು ಮಂಡಿಸಲು ಪ್ರಯತ್ನ ನಡೆದಿದೆಯೇ?
- ನಿಗಮನಗಳಿಗೆ ಕಾರ್ಯವನ್ನು ಮಂಡಿಸಲು ಪ್ರಯತ್ನ ನಡೆದಿದೆಯೇ?
- ನಿಗಮನಗಳಿಗೆ ಯುಕ್ತವಾದ ಸಮರ್ಥನೆ ನೀಡಲು ಸಾಧ್ಯವಾಗಿದೆಯೇ?

### ದಾಖಲಿಸುವುದು/ತಯಾರಿಸುವುದು

- ಚುಟವಟಿಕೆಗಳ ಮೂಲಕ ಹಾದುಹೋಗುವಾಗ ದಾಖಲಿಸಿಕೊಳ್ಳಲಾಗಿದೆಯೇ?
- ದಾಖಲೆಗಳು ಇತರರಿಗೆ ಅರ್ಥವಾಗುವ ರೀತಿಯಲ್ಲಿವೆಯೇ?
- ದಾಖಲೆಗಳಿಗೆ ಸುಂದರವಾದ ಚೌಕಟ್ಟು ನೀಡಲಾಗಿದೆಯೇ?

ವ್ಯಕ್ತಿಗತವಾಗಿಯೂ ಗುಂಪಿನ ಚರ್ಚೆಯ ಬಳಿಕವೂ ಸಾಮಾನ್ಯ ಚರ್ಚೆಗಳ ನಂತರವೂ ದಾಖಲೆಗಳನ್ನು ಮಾಡಲಾಗಿದೆಯೇ?

ನಿರಂತರ ಮೌಲ್ಯಮಾಪನದ ಅಂಗವಾಗಿ ಭಾಷೆಯ ಕಲಿಕಾ ಪ್ರಕ್ರಿಯೆಗಳನ್ನು ಮೌಲ್ಯ ಮಾಡಬೇಕಾದ ರೀತಿ ಹೇಗೆಂದು ನೋಡೋಣ:

ಭಾಷೆಯಲ್ಲಿ ಒಳಹೂರಣಕ್ಕನುಗುಣವಾಗಿ ಆಶಯ ಲಭಿಸುತ್ತದೆ. ವ್ಯವಹಾರ ಸಂಬಂಧವಾದ ತಿಳುವಳಿಕೆಯೂ, ಭಾಷಾ ನೈಪುಣ್ಯಗಳ ಅಭಿವೃದ್ಧಿಯೂ ಪ್ರಧಾನವಾಗಿದೆ. ಹಾಗಾದರೆ ಸೂಚಕಗಳನ್ನು ಪರಿಗಣಿಸಿಕೊಂಡು ಕಲಿಕಾ ಪ್ರಕ್ರಿಯೆಯನ್ನು ಹೇಗೆ ಮೌಲ್ಯಮಾಪನ ಮಾಡಬೇಕೆಂದು ನೋಡೋಣ.

### ಸಹಭಾಗಿತ್ವ

ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಯ ಆಸಕ್ತಿ, ಗುಂಪಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆ ಎಂಬಿವುಗಳನ್ನು ಇಲ್ಲಿ ಪರಿಗಣಿಸಬೇಕು.

## ಆಶಯದ ಅರಿವು

ಭಾಷೆಯಲ್ಲಿನ ಒಳ ಹೂರಣಕ್ಕನುಗುಣವಾದ ಅರಿವು ವ್ಯಾವಹಾರಿಕಗಳ ರೂಪುರೇಷೆ, ಮೌಲ್ಯಮಾಪನ ಸೂಚಕಗಳು, ವೈವಿಧ್ಯಮಯ ಭಾಷಾ ಕಲಿಕೆಯ ತಂತ್ರಗಳ ಮೂಲಕ ಜ್ಞಾನ ನಿರ್ಮಾಣದ ರೀತಿ, ಭಾಷಾ ಪರವಾದ ಗುಣಮಟ್ಟ ಎಂಬಿವುಗಳಲ್ಲಿ ವಿದ್ಯಾರ್ಥಿಯ ಸ್ಥಾನ ಏನೆಂದು ಅಧ್ಯಾಪಕರು ಕಂಡುಕೊಳ್ಳಬೇಕು.

## ನೈಪುಣ್ಯಗಳು

ಆಲಿಸುವಿಕೆ, ಮಾತುಗಾರಿಕೆ, ಓದುವಿಕೆ, ಬರವಣಿಗೆ, ಸೃಜನಾತ್ಮಕತೆ ಮೊದಲಾದ ನೈಪುಣ್ಯಗಳ ವಲಯಗಳಲ್ಲಿ ವಿದ್ಯಾರ್ಥಿಯ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡಿ ಪುನರವಲೋಕನ ಮಾಡಬೇಕು. ಇಲ್ಲಿ ಭಾಷೆಯ ವ್ಯಾವಹಾರಿಕಗಳು, ಭಾಷೆಯ ವಸ್ತುನಿಷ್ಠತೆ, ಅಭಿಪ್ರಾಯಗಳ ವಿನಿಮಯ ಎಂಬಿವುಗಳಲ್ಲಿ ವಿದ್ಯಾರ್ಥಿಗಳ ಅಭಿವ್ಯಕ್ತಿ ಸಾಮರ್ಥ್ಯವನ್ನು ಪರಿಗಣಿಸಬೇಕು.

## ಮಂಡನೆ/ಅಭಿವ್ಯಕ್ತಿ

ಆಶಯ ವಿನಿಮಯಕ್ಕೆ ಭಾಷೆಯಲ್ಲಿ ವೈವಿಧ್ಯಮಯವಾದ ಅವಕಾಶಗಳಿವೆ. ವಿದ್ಯಾರ್ಥಿಯ ಸೃಜನಾತ್ಮಕ ಗುಣದಂತೆಯೇ ಇತರ ಭಾಷಾ ನೈಪುಣ್ಯಗಳು – ಹಾಡುವಿಕೆ, ಅಭಿನಯ, ಚಿತ್ರರಚನೆ, ಮಾತುಗಾರಿಕೆ, ಶುದ್ಧ ಉಚ್ಚಾರ, ಸ್ಪಷ್ಟತೆ–ಇವುಗಳನ್ನು ಪರಿಗಣಿಸಿಕೊಂಡು ಅಧ್ಯಾಪಕರು ನಡೆಸಬೇಕು.

## ದಾಖಲಿಸುವಿಕೆ/ತಯಾರಿಸುವಿಕೆ

ಚಟುವಟಿಕೆಯ ಮೂಲಕ ಹಾದುಹೋದಾಗ ಅಗತ್ಯ ದಾಖಲೆಗಳನ್ನು ಮಾಡಲಾಗಿದೆಯೇ? ದಾಖಲೆಗಳು ಇತರರಿಗೆ ಅರ್ಥವಾಗುವ ರೀತಿಯಲ್ಲಿವೆಯೇ? ದಾಖಲೆಗಳು ಒಪ್ಪ ಓರಣವಾಗಿದೆಯೇ? ವೈಯಕ್ತಿಕ ರಚನೆಗಳಿವೆಯೇ? ತರಗತಿಯಲ್ಲಿನ ಚರ್ಚೆಯ ನಂತರ ಗುಂಪಿನಲ್ಲಿ ಉತ್ತಮಪಡಿಸಲಾಗಿದೆಯೇ? ತಪ್ಪಿಲ್ಲದೆ ರಚನೆಳನ್ನು ಬರೆಯಲು ವಿದ್ಯಾರ್ಥಿಗಳಿಗೆ ಸಾಧ್ಯವಾಗುತ್ತಿದೆಯೇ? ಮುಂತಾದುವುಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಬೇಕು.

ಕಲಿಕಾ ಚಟುವಟಿಕೆಗಳನ್ನು ಸೂಕ್ಷ್ಮ ರೀತಿಯಲ್ಲಿ ಯೋಜನೆ ಮಾಡುವಾಗ ನಿರಂತರ ಮೌಲ್ಯಮಾಪನವನ್ನು ಕ್ರಮಬದ್ಧವಾಗಿಸಲು ತಯಾರಿಸಬೇಕು. Teacher Planner ತಯಾರಿಸಬೇಕು.

## 1. Teacher Planner ವಿವರಗಳು

- ಕಲಿಕಾ ಸಾಧನೆ
- ಪರಿಕಲ್ಪನೆಗಳು
- ನೈಪುಣ್ಯಗಳು
- ಮೌಲ್ಯಗಳು/ಮನೋಭಾವಗಳು
- ಕಲಿಕಾ ಸಾಮಗ್ರಿಗಳು
- ನಿರೀಕ್ಷಿಸುವ ಉತ್ಪನ್ನಗಳು
- ಪಿರೇಡುಗಳ ಸಂಖ್ಯೆ

ಚಟುವಟಿಕೆ, ಮೌಲ್ಯಮಾಪನ ಮುಂತಾದ ಪ್ರಕ್ರಿಯೆಗಳು ಅಡಕವಾಗಿರುವ ಪುಟ ಹಾಗೂ ಮೌಲ್ಯಮಾಪನಗಳ ದಾಖಲಾತಿಯಾಗಿರುವ ಪುಟ, ಪ್ರತಿರೂಪ ನಿರ್ಮಿತಿಯೂ ಅಡಕವಾಗಿರುವಂತೆ, ಕಲಿಕಾ ಚಟುವಟಿಕೆಗಳ ಯೋಜನೆ, ಮೌಲ್ಯಮಾಪನ ಸಂದರ್ಭಗಳು, ತಂತ್ರಗಳು, ಪರಿಕರಗಳು ಎಂಬಿವುಗಳುTeacher Plannerನಲ್ಲಿ ಒಳಗೊಂಡಿರಬೇಕು. ಒಂದು ಆಶಯ, ವಿವಿಧ ಆಶಯಗಳು, ಒಂದು ಕಲಿಕಾ ಸಾಧನೆಯನ್ನು ಕೇಂದ್ರೀಕರಿಸಿ ಅಥವಾ ಘಟಕವನ್ನು ಸಮಗ್ರವಾಗಿ ಕಂಡುಕೊಂಡು Teacher Plannerನ್ನು ತಯಾರಿಸಬೇಕು.

## 2. ವಿಷಯಕ್ಕೆ ಸಂಬಂಧಿಸಿದ Activity log ನ ವಿಶದೀಕರಣ

ವಿದ್ಯಾರ್ಥಿಯ Activity log ಜ್ಞಾನವಲಯದ ಮೌಲ್ಯಮಾಪನಕ್ಕೆ ಅಳವಡಿಸಬೇಕಾದ ಪ್ರಧಾನ ದಾಖಲೆಯಾಗಿದೆ. ಕಲಿಕಾ ಪ್ರಕ್ರಿಯೆಗಳಿಗೆ ಅನುಗುಣವಾಗಿ ವಿವಿಧ ಚಟುವಟಿಕೆಗಳನ್ನು ಸಂಪೂರ್ಣಗೊಳಿಸಲು Activity log ಸಹಾಯಕವಾಗಿದೆ. ವಿದ್ಯಾರ್ಥಿಯ ಸೃಜನಾತ್ಮಕತೆ, ಚಿಂತನ ಪ್ರಕ್ರಿಯೆ, ಭಾಷಾ ನೈಪುಣ್ಯ, ಸಾಮಾಜಿಕ ಭಾವನಾತ್ಮಕ ಮಟ್ಟ ಮೊದಲಾದುವುಗಳು Activity logನಲ್ಲಿ ಪ್ರತಿಫಲಿಸುತ್ತವೆ. ಪಾಠಭಾಗವನ್ನು ವಿನಿಮಯ ಮಾಡಲು ಬಳಸಬಹುದಾದ ವಿವಿಧ ತಂತ್ರಗಳು, ಅವುಗಳನ್ನು ಈಡೇರಿಸಿಕೊಳ್ಳಲು ವಿದ್ಯಾರ್ಥಿಗಳು ನಡೆಸುವ ಪೂರ್ವ ತಯಾರಿ, ಚಟುವಟಿಕೆಗಳ ವಿವಿಧ ಹಂತಗಳಲ್ಲಿನ ವ್ಯವಹಾರವೇ ಮೊದಲಾಗಿ ಎಲ್ಲಾ ವಿವರಣೆಗಳು Activity logನಲ್ಲಿರಬೇಕು. ಚಟುವಟಿಕೆಯ ಮೂಲಕ ರೂಪುಗೊಂಡ ಕಲಿಕೋತ್ಪನ್ನಗಳಿಗೆ ಸಂಬಂಧಿಸಿದ ವಿವರಣೆಗಳು Activity logನಲ್ಲಿ ದಾಖಲಿಸಬೇಕಾಗಿದೆ. ಕಲಿಕಾ ಪ್ರಕ್ರಿಯೆಯನ್ನು ಬಲಪಡಿಸುವುದಕ್ಕಾಗಿ ಅಧ್ಯಾಪಕರು ನೀಡುವ ಹೆಚ್ಚಿನ ಮಾಹಿತಿಗಳನ್ನು Activity logನಲ್ಲಿ ದಾಖಲಿಸಬೇಕು.

ಕಾಲೋಚಿತವಾಗಿ ಸಾಧನೆಗಳನ್ನು ಮೌಲ್ಯಮಾಪನ ಮಾಡಿ ಕಲಿಕೆಯ ಅಭಿವೃದ್ಧಿಗೆ ಅಗತ್ಯವಾದ ನಿರ್ದೇಶಗಳನ್ನು ಹಾಗೂ ಸಹಾಯಗಳನ್ನು ಅಧ್ಯಾಪಕರು ನೀಡಬೇಕು. ಘಟಕವು ಕೊನೆಗೊಳ್ಳಲು ಆ ಘಟಕದಲ್ಲಿನ

ಕಲಿಕಾ ಸಾಧನೆಗಳನ್ನು ವಿದ್ಯಾರ್ಥಿ ಪಡೆದಿರುವನೋ ಎಂದು ಮೌಲ್ಯಮಾಪನ ಮಾಡುವುದಕ್ಕಿರುವ ಪುರಾವೆಯಾಗಿ Activity log ಪರಿಣಮಿಸಬೇಕು.

ಆಶಯದ ಸ್ಪಷ್ಟತೆ ಹಾಗೂ ಆಶಯದ ಕುರಿತಿರುವ ಯೋಗ್ಯವಾದ ವಿವರಣೆಯಿದ್ದು ಸ್ವಯಂ ಚಿಂತನೆಗಳನ್ನು ಪಡೆಯುವಂತೆಯೂ, ಪ್ರತಿಫಲಿಸುವಂತೆಯೂ Activity log ಇರಬೇಕು. ಹೇಳಬೇಕಾದ ಅಂಶಗಳನ್ನು ಮೌಲ್ಯಾಧಾರಿತವಾಗಿ ತಿಳಿಸಿರಬೇಕು. Activity log ಸಮಗ್ರವೂ ಮುಂದುವರಿಯುವಂತೆಯೂ ಇರಬೇಕು.

## Port folio ದ ಮೌಲ್ಯಮಾಪನ

Port folio ಕಲಿಕಾ ಪ್ರಕ್ರಿಯೆ ಮೂಲಕ ಹಾದು ಹೋಗುವಾಗ ರೂಪುಗೊಳ್ಳುವ ಪ್ರತಿಯೊಂದು ಕಲಿಕೋತ್ಪನ್ನದ ಕ್ರೋಡೀಕರಣವಾಗಿದೆ. Portfolio ವಿದ್ಯಾರ್ಥಿ, ರಕ್ಷಕರು ಹಾಗೂ ಅಧ್ಯಾಪಕರಿಗೆ ಕಲಿಕೆಯ ಕುರಿತು ಅವಲೋಕನ ನೀಡುತ್ತದೆ.

## Portfolio ದಲ್ಲಿ ದಾಖಲಿಸಬೇಕಾದವುಗಳು

- Activity log
- ಕಲಿಕೆಗೆ ಸಂಬಂಧಿಸಿದ ಇತರ ದಾಖಲೆಗಳು, ಚಿತ್ರಗಳು, ಸಂಗ್ರಹಗಳು, ರಚನೆಗಳು, ಕಲಿಕೋಪಕರಣಗಳು, ICTಯ ಮೂಲಕ ಸೃಷ್ಟಿಯಾದ ಉತ್ಪನ್ನಗಳು ಮೊದಲಾದವುಗಳು.
- ಸೃಜನಾತ್ಮಕ ರಚನೆಗಳು
- ವರ್ಕ್‌ಶೀಟ್‌ಗಳು

**Portfolio ವನ್ನು ಮೌಲ್ಯಮಾಪನ ಮಾಡುವಾಗ ಈ ಕೆಳಗಿನ ಸೂಚಕಗಳನ್ನು ಉಪಯೋಗಿಸಬಹುದು.**

- ಆಶಯ ಸ್ಪಷ್ಟತೆ
- ಅರಿವು ಪಡೆದಿರುವಿಕೆ
- ಅನುಗುಣವಾದ ಚೌಕಟ್ಟು
- ಸಂಪೂರ್ಣತೆ
- ನೈಜತೆ

## ಕಲಿಕಾ ಪ್ರಕ್ರಿಯೆ ಹಾಗೂ Port folioಗಳ ಅಂಕಗಳನ್ನು ಕಂಡುಕೊಳ್ಳುವ ರೀತಿ

ಪ್ರತಿಯೊಂದು ಚಟುವಟಿಕೆಯಲ್ಲೂ ಮೇಲೆ ಹೇಳಿದ ಸೂಚಕಗಳಿಗನುಸರಿಸಿ ಒಬ್ಬೊಬ್ಬ ವಿದ್ಯಾರ್ಥಿಯನ್ನು ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಿ ದಾಖಲಿಸಬೇಕೆಂದಿಲ್ಲ. ಸೂಚಕಗಳ ಆಧಾರದಲ್ಲಿ ಒಂದು ಅವಧಿಯ ಒಟ್ಟು ಅಭಿವ್ಯಕ್ತಿಯನ್ನು ಮೌಲ್ಯಮಾಪನ ಮಾಡಬೇಕು. Teacher Planner ನಲ್ಲಿರುವ ಟಿಪ್ಪಣಿಗಳು, Activity logನ ದಾಖಲೆಗಳು ಎಂಬಿವುಗಳನ್ನು ಪರಿಗಣಿಸಿಕೊಂಡು ಅವಧಿಯ ಕೊನೆಯಲ್ಲಿ ಇವುಗಳನ್ನು ಕ್ರೋಡೀಕರಿಸಿ, ಅತ್ಯಂತ ಉತ್ತಮ ರೀತಿಯಲ್ಲಿ ಪಾಲ್ಗೊಂಡವರು, ಇನ್ನೂ ಉತ್ತಮ ಪಡಿಸಬೇಕಾದವರು ಎಂಬಂತೆ ವಿಭಾಗಿಸಿ ಮೌಲ್ಯಮಾಪನ ಮಾಡಿ 4/3/2/1 ಎಂಬ ರೀತಿಯಲ್ಲಿ ಅಂಕಗಳನ್ನು ನೀಡಬೇಕು. 5 ಸೂಚಕಗಳನ್ನು ಕಂಡುಕೊಂಡು ಪ್ರತಿಯೊಂದು ಸೂಚಕಕ್ಕೂ ಅಂಕ ನೀಡುವಾಗ ಗರಿಷ್ಠ 20 ಅಂಕಗಳು ಎಂದು ಪರಿಗಣಿಸಬೇಕು.

## ಘಟಕ ಮಟ್ಟದ ಮೌಲ್ಯಮಾಪನ

ಒಂದು ಘಟಕದಲ್ಲಿ ಕಲಿಕಾ ಸಾಧನೆಗಳಿಗಿರುವ ಚಟುವಟಿಕೆಗಳು ಪರಸ್ಪರ ಹೊಂದಿಕೊಂಡು ಹಂಚಲಾಗಿದೆ. ಇದಕ್ಕೊಂಡು ಸಮಗ್ರತೆಯ ರೂಪವಿದೆ. ವಿದ್ಯಾರ್ಥಿಯ ಒಂದು ಘಟದ ಕಲಿಕೆಯನ್ನು ಮೌಲ್ಯಮಾಪನ ಮಾಡುವುದರಿಮದ ಈ ಸಮಗ್ರತೆಯ ತಿಳುವಳಿಕೆಯನ್ನು (ಸಂಪೂರ್ಣ ಕಲಿಕಾ ಸಾಧನೆಯನ್ನು ಪರಿಗಣಿಸಿಕೊಂಡು) ಮೌಲ್ಯಮಾಪನ ಮಾಡುವುದು. ಪ್ರಸ್ತುತ ಘಟಕದ ಮೌಲ್ಯಮಾಪನ ರೀತಿಯಲ್ಲಿದೆ ವಾಚಕ ಮೌಲ್ಯಮಾಪನ, ರಸಪ್ರಶ್ನೆ, ಮುಕ್ತ ಮೌಲ್ಯಮಾಪನ, ಪ್ರಶ್ನೆ ತಯಾರಿ, ಉತ್ತರ ಸೂಚಿಯನ್ನು ಕಂಡುಕೊಳ್ಳುವುದು, ಸೃಜನಾತ್ಮಕ ರಚನೆಗಳ ಮೌಲ್ಯಮಾಪನ ಮೊದಲಾದವುಗಳನ್ನು ಘಟಕದ ಮೌಲ್ಯಮಾಪನಕ್ಕೆ ಪರಿಗಣಿಸಬೇಕು. ನಿಗದಿತ ಘಟಕದ ಮೌಲ್ಯಮಾಪನದ ನಿಟ್ಟಿನಲ್ಲಿ ವಿದ್ಯಾರ್ಥಿಯ ಸ್ಥಾನವನ್ನು ಕಂಡುಕೊಳ್ಳಲು ಸಹಾಯಕರಾದ ರೇಟಿಂಗ್ ಸ್ಕೇಲ್, ಚೆಕ್‌ಲಿಸ್ಟ್ ಮೊದಲಾದವುಗಳನ್ನು ಉಪಯೋಗಿಸಬಹುದು. ಕಲಿಕಾ ಪ್ರಕ್ರಿಯೆಯೊಂದಿಗೆ ಘಟಕದ ಮೌಲ್ಯ ಮಾಪನವನ್ನೂ ಮಾಡಬೇಕು.

ಘಟಕದ ಮೌಲ್ಯಮಾಪನಕ್ಕೆ ಪರಿಗಣಿಸಲಾದ ಚಟುವಟಿಕೆಗಳ ಸೂಚಕಗಳ ಆಧಾರದಲ್ಲಿ ಅಂಕಗಳನ್ನು ನೀಡಿ, ಅವಧಿಯ ಕೊನೆಯಲ್ಲಿ ನಿಶ್ಚಿತ ಮಾದರಿಯಲ್ಲಿ ದಾಖಲಿಸಬೇಕು. ಇದಕ್ಕಾಗಿ ಬಳಸಲಾದ ಪರಿಕರಣಗಳಿಗೆ ಅನುಸರಿಸಿದ ಸೂಚಕಗಳನ್ನು ಅಧ್ಯಾಪಕರು ತಯಾರಿಸಬೇಕು. ಒಂದು ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಘಟಕಗಳ ಮೌಲ್ಯಮಾಪನ ಬೇಕಾಗಿರುವುದರಿಂದ ಪ್ರತಿ ಘಟಕದ ಮೌಲ್ಯಮಾಪನದ ಸರಾಸರಿ ಅಂಕಗಳನ್ನು ಅವಧಿಯ ಕೊನೆಯಲ್ಲಿ ಸೇರಿಸಬೇಕು.

## CE ಅಂಕಗಳನ್ನು ಕಂಡುಕೊಳ್ಳುವ ರೀತಿ

ಪ್ರತಿಯೊಂದು ವಿಷಯದ ಕಲಿಕಾ ಪ್ರಕ್ರಿಯೆ, Portpolio ಘಟಕ ಮಟ್ಟದ ಮೌಲ್ಯಮಾಪನ ಎಂಬಿವುಗಳಲ್ಲಿ ಪ್ರತಿಯೊಂದರ ಗರಿಷ್ಠ ಅಂಕಗಳು 20 ಆಗಿರುತ್ತದೆ. ಮೇಲಿನವುಗಳಲ್ಲಿ ಪಡೆದ ಅಂಕಗಳ ಸರಾಸರಿ ಅಂಕಗಳನ್ನು

ಕಂಡುಕೊಂಡು ಅವಧಿ ಮಟ್ಟದ ದಾಖಲಾತಿ ಮಾಡಬೇಕು. ಇವುಗಳನ್ನು ಕ್ರೋಡಿಕರಿಸಿ ದಾಖಲಿಸುವುದಕ್ಕಾಗಿ Annexure-I formatನ್ನು ಉಪಯೋಗಿಸಬಹುದು.

## ಅವಧಿ ಮೌಲ್ಯಮಾಪನ (TE)

ತರಗತಿಯ ಚಟುವಟಿಕೆಯ ಮೂಲಕ ಪ್ರತಿಯೊಂದು ವಿದ್ಯಾರ್ಥಿಯು ಪಡೆದಿರುವ ಕಲಿಕಾ ಸಾಧನೆಯೇನೆಂದು, ಪ್ರತಿ ಅವಧಿಯ ಕೊನೆಯಲ್ಲಿ ಮೌಲ್ಯಮಾಪನ ಮಾಡಬೇಕಾದುದು ಅತ್ಯಗತ್ಯ. ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ, ಅವಧಿಗಾಗಿ ಪರಿಗಣಿಸಲ್ಪಟ್ಟ ಘಟಕಗಳ ಕಲಿಕಾ ಸಾಧನೆಗಳನ್ನು ಆಧಾರವಾಗಿಟ್ಟುಕೊಂಡು, ವ್ಯಾವಹಾರಿಕಗಳು, ಭಾಷಾ ನೈಪುಣ್ಯ, ಭಾಷಿಕ ಅಂಶಗಳು ಎಂಬೀ ವಲಯಗಳನ್ನು ಪರಿಗಣಿಸಿಕೊಂಡು ಅವಧಿ ಮೌಲ್ಯಮಾಪನ ಮಾಡಬೇಕು. ಒಳಹೂರಣ ವಲಯಗಳಿಗೂ ನೈಪುಣ್ಯಗಳಿಗೂ ಒತ್ತು ನೀಡಿಕೊಂಡು ವೈವಿಧ್ಯವಾದ ಪ್ರಶ್ನಾವಳಿಗಳನ್ನು ಅಳವಡಿಸಬೇಕು. ಇತರ ವಿಷಯಗಳಿಗೆ ಅವಧಿ ಪರೀಕ್ಷೆಯಲ್ಲಿ ಪರಿಗಣಿಸುವ ಘಟಕಗಳ, ಒಳಹೂರಣ ವಲಯಗಳ ಆಧಾರದಲ್ಲಿ ಅವಧಿ ಮೌಲ್ಯಮಾಪನ ಮಾಡಬೇಕು. ಕಲಿಕಾ ಸಾಧನೆಗಳಿಗೆ ಒತ್ತು ನೀಡುವ ರೀತಿಯಲ್ಲಿ ತಿಳುವಳಿಕೆ ಹಾಗೂ ನೈಪುಣ್ಯಗಳನ್ನು ಮೌಲ್ಯಮಾಪನ ಮಾಡಲು ಒದಗುವ ಪ್ರಶ್ನೆಗಳನ್ನು ತಯಾರಿಸಬೇಕು.

ಪ್ರತಿಯೊಂದು ಘಟಕ/ಆಶಯದ ವಲಯಕ್ಕೂ ವೈವಿಧ್ಯಮಯವಾದ ಜ್ಞಾನ ಪ್ರಕ್ರಿಯೆಗಳಿಗೂ (ತಿಳಿವು ಪಡೆಯುವುದು, ಆಶಯಗಳು/ಅರಿವು ಎಂಬಿವುಗಳ ಪ್ರಯೋಗ, ವಿಶ್ಲೇಷಣೆ, ನಿಗಮನವನ್ನು ಕಂಡುಕೊಳ್ಳುವುದು. ಮೌಲ್ಯಮಾಪನ, ಸೃಜನಾತ್ಮಕತೆ ಮುಂತಾದ ಜ್ಞಾನ ಪ್ರಕ್ರಿಯೆ) ಸರಿಯಾದ ಪ್ರಾಧಾನ್ಯತೆ ನೀಡಿಕೊಂಡು ನೀಲಿನಕ್ಷೆ ತಯಾರಿಸಿ ವೈವಿಧ್ಯಮಯವಾದ ಪ್ರಶ್ನೆಗಳನ್ನು ಅಳವಡಿಸಲಾಗಿದೆಯೆಂದು ದೃಢೀಕರಿಸಿಕೊಂಡೇ ಪ್ರಶ್ನೆಪತ್ರಿಕೆಯನ್ನು ತಯಾರಿಸಬೇಕು. ಪ್ರಶ್ನೆಗಳಿಗೆ ಅನುಗುಣವಾದ ಸೂಚಕಗಳನ್ನು ನೀಡಿ, ಅವುಗಳ ಆಧಾರದಲ್ಲಿ ಮೌಲ್ಯಮಾಪನ ಮಾಡಬೇಕು.

ಕಲಿಕಾ ಪ್ರಕ್ರಿಯೆಯ ಅಂಗವಾಗಿ ನಡೆಸಲಾಗುವ ಪ್ರಯೋಗಿಕ ಪರೀಕ್ಷೆಗಳು, ಅದರ ದಾಖಲಾತಿಗಳು ಎಂಬಿವುಗಳು ನಿರಂತರವಾಗಿ ನಡೆಯಬೇಕಾಗಿದೆ. ಪ್ರಯೋಗಿಕ ಪರೀಕ್ಷೆಗಳಿಗೆ ಸಂಬಂಧಿಸಿದ ದಾಖಲಾತಿಗಳಿಗೆ Practical Diary ಯನ್ನು ಉಪಯೋಗಿಸಬೇಕು.

ಪ್ರಯೋಗಿಕ ಪರೀಕ್ಷೆ ಇರುವ ವಿಷಯಗಳಿಗೆ ಸಂಬಂಧಿಸಿದ ಪರೀಕ್ಷೆಯನ್ನು ಎರಡನೇ ವರ್ಷಗಳ ಪ್ರಯೋಗಿಕ ಪರೀಕ್ಷೆಗಳ ದಾಖಲಾತಿ ಮಾಡಲಾದ Practical Diary ಹಾಗೂ ಎರಡನೇ ವರ್ಷದ ಅಂತ್ಯದಲ್ಲಿ ನಡೆಸಲಾಗುವ ಪ್ರಯೋಗಿಕ ಪರೀಕ್ಷೆಗಳನ್ನು External Examiners ಪರಿಶೀಲಿಸಿ ಅಂಕಗಳನ್ನು ನೀಡಬೇಕು.

### ಆರೋಗ್ಯ–ಕ್ರೀಡಾ ವಿದ್ಯಾಭ್ಯಾಸದ ಮೌಲ್ಯಮಾಪನ ರೀತಿ

2014–15ರಿಂದ ಆರೋಗ್ಯ–ಕ್ರೀಡಾ ವಿದ್ಯಾಭ್ಯಾಸವನ್ನು ವಿಜ್ಞಾನ ವಿಷಯವೆಂಬುದಾಗಿ ಪರಿಗಣಿಸಲಾಗಿದೆ. ವಿದ್ಯಾರ್ಥಿಯ ದೈಹಿಕ, ಮಾನಸಿಕ ಅಭಿವೃದ್ಧಿಯು ಹದಿಹರೆಯದಲ್ಲಿ ಇನ್ನಷ್ಟೂ ಪ್ರಬಲಗೊಳ್ಳುತ್ತದೆ. ಉತ್ತಮ ಆರೋಗ್ಯಕ್ಕೆ ಬೇಕಾದ ಗುಣಸ್ವಭಾವಗಳಿಗೆ ಸಂಬಂಧಿಸಿ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕಾದ ಅಗತ್ಯಗಳ ಕುರಿತು ಸರಿಯಾದ ಅರಿವನ್ನು ಪಡೆಯಲು ಅವಕಾಶವನ್ನು ನೀಡಬೇಕು. ಆರೋಗ್ಯ–ಕ್ರೀಡಾ ವಿದ್ಯಾಭ್ಯಾಸವೆಂಬ ಹೈಯರ್ ಸೆಕೆಂಡರಿ ಮಟ್ಟದ ಆಕರ ಪತ್ರ ಪುಸ್ತಕದಲ್ಲಿ ನೀಡಲಾಗಿದೆ.

### ಸಾಮಾಜಿಕ–ಭಾವನಾತ್ಮಕ ವಲಯಗಳ ಮೌಲ್ಯಮಾಪನ

ವಿಜ್ಞಾನ ವಲಯದಂತೆಯೇ ಸಾಮಾಜಿಕ ಹಾಗೂ ಭಾವನಾತ್ಮಕ ವಲಯಗಳಲ್ಲೂ ಮೌಲ್ಯಮಾಪನವು ಅಗತ್ಯವಾಗಿದೆ. Learning to know, Learning to do, Learning to live together, Learning to be ಎಂಬಿವುಗಳಿಗೆ ಸಂಬಂಧಿಸಿ ನೈಪುಣ್ಯಗಳನ್ನು ಇಲ್ಲಿ ಪರಿಗಣಿಸಬೇಕು. ಸಾಮಾಜಿಕ–ಭಾವನಾತ್ಮಕ ವಲಯಗಳ ಮೌಲ್ಯಮಾಪನಗಳಿಗೆ ಸಂಬಂಧಿಸಿ ಕೆಳಗೆ ನೀಡಲಾದ ನೈಪುಣ್ಯಗಳನ್ನು ಮೌಲ್ಯಮಾಪನಕ್ಕೊಳಪಡಿಸಬೇಕು.

1. ಆಶಯಗಳ ಸಂವಹನ ಸಾಮರ್ಥ್ಯ (Communication Skill)
2. ಅಂತರ್ವ್ಯಕ್ತಿ ನೈಪುಣ್ಯ (Interpersonal skill)
3. ಸಹಭಾವನೆ (Empathy)
4. ಭಾವನೆಗಳೊಂದಿಗೆ ಹೊಂದಿಕೊಳ್ಳುವಿಕೆ (Coping with emotions)
5. ಮಾನಸಿಕ ಒತ್ತಡಗಳೊಂದಿಗೆ ಹೊಂದಿಕೊಳ್ಳುವಿಕೆ (Coping with emotional stress)
6. ಸಮಸ್ಯೆಯನ್ನು ಬಗೆಹರಿಸುವ ನೈಪುಣ್ಯ (Problem solving Skill)
7. ನಿಗಮನಕ್ಕೆ ಬರುವ ಸಾಮರ್ಥ್ಯ (Decision making)
8. ವಿಮರ್ಶಾತ್ಮಕ ಚಿಂತನೆ (Creatical thinking)
9. ಸೃಜನಾತ್ಮಕ ಚಿಂತನಾ ಸಾಮರ್ಥ್ಯ(Creative thinking Skill)

ವೈಜ್ಞಾನಿಕ ವಲಯದಲ್ಲಿ ವಿವಿಧ ವಿಷಯಗಳನ್ನು ನಿರ್ವಹಿಸುವ ಅಧ್ಯಾಪಕರೇ ಇವುಗಳನ್ನು ಮೌಲ್ಯಮಾಪನ ಮಾಡಬೇಕು. ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳ ಮೌಲ್ಯಮಾಪನದ ಅಂಗವಾಗಿ ಈ ಮೌಲ್ಯಮಾಪನವನ್ನು ಮಾಡಬೇಕು. ಇಲ್ಲಿ ಪ್ರಕ್ರಿಯಾ ಸಾಮರ್ಥ್ಯವನ್ನು ಮೌಲ್ಯಮಾಫನ ಮಾಡುವುದರೊಂದಿಗೆ ಮೌಲ್ಯಗಳು/ಮನೋಭಾವಗಳು ಎಂಬಿವುಗಳು ರೂಪುಗೊಳ್ಳುವುದಕ್ಕೆ ಸಂಬಂಧಿಸಿದ ಮೌಲ್ಯಮಾಪನವನ್ನೂ ಮಾಡಬೇಕು.

ಸಾಮಾಜಿಕ–ಭಾವನಾತ್ಮಕ ವಲಯದಲ್ಲಿ ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ಸಂಬಂಧಿಸಿದ ಗುಣೋನ್ಮುಖವಾದ ನೈಪುಣ್ಯವನ್ನು ಗುರುತಿಸಿ ಪ್ರೋತ್ಸಾಹ ನೀಡಬೇಕು. ಈ ಸಾಮರ್ಥ್ಯವನ್ನು Teacher Plannerನಲ್ಲಿ ಕ್ರೋಡೀಕರಿಸಲಾದ ವಿವರಣೆಗಳನ್ನು ಅನುಬಂಧ–2ರಲ್ಲಿ ನಮೂದಿಸಬೇಕು.

## ಕಲಾತ್ಮಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೃತ್ತಿಪರವಾದ ಸಾಮರ್ಥ್ಯಗಳು

ಹೈಯರ್ ಸೆಕೆಂಡರಿ ಮಟ್ಟದ ವಿದ್ಯಾರ್ಥಿಯ ಸರ್ವತೋಮುಖವಾದ ಅಭಿವೃದ್ಧಿಯನ್ನು ಖಚಿತಪಡಿಸುವುದಕ್ಕಾಗಿ ಕಲಿಕೆಯೊಂದಿಗೆ ಆಸ್ವಾದನ ಸಾಮರ್ಥ್ಯ, ಸೃಜನಾತ್ಮಕ ಸಾಮರ್ಥ್ಯ ಕಲಾಪರವಾದ ನೈಪುಣ್ಯಗಳು, ಸಾಮಾಜಿಕ, ಸಾಂಸ್ಕೃತಿಕ ಸೇವಾ ಚಟುವಟಿಕೆಗೆ ಪ್ರವೃತ್ತಿ ಮೊದಲಾದವುಗಳನ್ನು ನಿರ್ವಹಿಸುವುದಕ್ಕಿರುವ ಮನೋಭಾವಗಳನ್ನು ರೂಪಿಸಿಕೊಳ್ಳಬೇಕು. ತಿಂಗಳಿಗೊಮ್ಮೆಯಾದರೂ ಈ ರೀತಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಬೇಕು.

ಇದಕ್ಕಾಗಿ ಹೈಯರ್ ಸೆಕೆಂಡರಿ ಮಟ್ಟದಲ್ಲಿ ಕಲಾವೇದಿಕೆ, ಕರಿಯರ್ ಗೈಡೆನ್ಸ್, ಸಮಾಜ ಸೇವೆಗೆ ಸಂಬಂಧಿಸಿದ ಚಟುವಟಿಕೆ, ಎನ್.ಎಸ್.ಎಸ್., ಎನ್.ಸಿ.ಸಿ., ವಿವಿಧ ರೀತಿಯ ಕ್ಲಬ್‌ಗಳು ಮುಂತಾದವುಗಳನ್ನು ಉಪಯೋಗಿಸಿಕೊಳ್ಳಬೇಕು.

ಇದಕ್ಕಾಗಿ ಹೈಯರ್ ಸೆಕೆಂಡರಿ ಮಟ್ಟದಲ್ಲಿ ವ್ಯಾಸಂಗ ಮಾಡುವ ಎಲ್ಲ ವಿದ್ಯಾರ್ಥಿಗಳು ಯಾವುದಾದರೂ ಒಂದು ಚಟುವಟಿಕೆಯಲ್ಲಿ ಪಾಲ್ಗೊಳ್ಳಲೇ ಬೇಕು. ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ ಸಾಮರ್ಥ್ಯಕ್ಕೆ ಪ್ರತ್ಯೇಕ ಗ್ರೇಡ್ ಸರ್ಟಿಫಿಕೇಟ್ ನೀಡಬೇಕು.

| | | |
|---|---|---|
| ಅತ್ಯಂತ ಉನ್ನತ ಮಟ್ಟದ ಚಟುವಟಿಕೆಗೆ | – | A ಗ್ರೇಡ್ |
| ಉತ್ತಮ ಚಟುವಟಿಕೆಗೆ | – | B ಗ್ರೇಡ್ |
| ತೃಪ್ತಿಕರ ಚಟುವಟಿಕೆ | – | C ಗ್ರೇಡ್ |
| ಕೇವಲ ಪಾಲ್ಗೊಳ್ಳುವಿಕೆ | – | D ಗ್ರೇಡ್ |

## ಮೌಲ್ಯಮಾಪನ–ವಾರ್ಷಿಕ ಕ್ರೋಡೀಕರಣ

ಅವಧಿ ಮೌಲ್ಯಮಾಪನದಲ್ಲಿ ದೊರಕುವ CE ಅಂಕಗಳನ್ನು ಪರಿಗಣಿಸುವಾಗ, ಮೂರು ಅವಧಿಗಳಲ್ಲಿ ವಿದ್ಯಾರ್ಥಿಗೆ ಲಭಿಸಿದ ಅತ್ಯಂತ ಉತ್ತಮವಾದ ಅಂಕಗಳನ್ನೇ CEಯ ವಾರ್ಷಿಕ ಅಂಕಗಳಾಗಿ ಆಯ್ದುಕೊಳ್ಳಬೇಕು. ಈ ಅಂಕಗಳನ್ನು ಅನುಬಂಧ–2ರ ಫಾರ್ಮನಲ್ಲಿ ಅಂತಿಮ ಅಂಕಗಳು ಎಂಬ ಕಾಲಂನಲ್ಲಿ ನಮೂದಿಸಬೇಕು. ಇದು ವಿದ್ಯಾರ್ಥಿಯ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಅಂತಿಮವಾದ CE ಅಂಕಗಳಾಗಿವೆ. ಮುಂದೆ

ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಅವಧಿಯ ಅಂಕಗಳನ್ನು (TE) ಕಂಡುಕೊಂಡು ಅನಂತರ CE, TE ಎಂಬಿವುಗಳ ಒಟ್ಟು ಅಂಕಗಳನ್ನು ಕೂಡಿಸಿ ಹಾಕಬೇಕು. ಇದು ಒಬ್ಬ ವಿದ್ಯಾರ್ಥಿ ಗಳಿಸಿದ ಒಟ್ಟು ಅಂಕವಾಗಿರುತ್ತದೆ. ಪ್ರಯೋಗಿಕ ಪರೀಕ್ಷೆ ಇರುವ ವಿಷಯಗಳಿಗೆ ಸಂಬಂಧಿಸಿದ ಅಂಕಗಳನ್ನು ಕೂಡ ಪರಿಗಣಿಸಿಕೊಂಡು ಒಟ್ಟು ಅಂಕಗಳನ್ನು ಕಂಡುಕೊಳ್ಳಬೇಕು.

ಹೈಯರ್ ಸೆಕೆಂಡರಿಯ ಅವಧಿ ಪರೀಕ್ಷೆಯು ಸಾರ್ವಜನಿಕ ಪರೀಕ್ಷೆ ಆದುದರಿಂದ TEಯ ಲಿಖಿತ ಪರೀಕ್ಷೆ, ಪ್ರಾಯೋಗಿಕ ಪರೀಕ್ಷೆ ಎಂಬಿವುಗಳ ಅಂತಿಮ ಅಂಕಗಳೇ ಸಾರ್ವಜನಿಕ ಪರೀಕ್ಷೆಯ ಅಂಕಗಳಾಗಿರುತ್ತವೆ.

ಸಾಮಾಜಿಕ–ಭಾವನಾತ್ಮಕ ವಲಯದ ನೈಪುಣ್ಯಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಗೆ ಸಂಬಂಧಿಸಿದವುಗಳಲ್ಲಿ ಉನ್ನತವಾದುದನ್ನೂ ಅದಕ್ಕಾಗಿ ಕಾದಿರಿಸಿದ ಕಾಲಂಗಳಲ್ಲಿ ನಮೂದಿಸಬೇಕು. ಸಾಮರ್ಥ್ಯ ಪ್ರಕಟಪಡಿಸಿದ ನೈಪುಣ್ಯಗಳಿದ್ದರೆ ಅವುಗಳನ್ನು, ಸಾಮರ್ಥ್ಯ ಪ್ರಕಟಪಡಿಸಿಲ್ಲ ಎಂಬ ರೀತಿಯಲ್ಲಿ ನಮೂದಿಸಬೇಕಾಗಿಲ್ಲ.

## ಗ್ರೇಡಿಂಗ್ ರೀತಿ

ಹೈಯರ್ ಸೆಕಂಡರಿ ಹಂತದಲ್ಲಿ ವೈಜ್ಞಾನಿಕ ವಿಷಯಗಳ ಮೌಲ್ಯಮಾಪನಕ್ಕಾಗಿ ಗ್ರೇಡಿಂಗ್ ರೀತಿಯನ್ನು ಬಳಸಲಾಗುತ್ತಿದೆ. ಇದಕ್ಕಾಗಿ 9 ಪೋಯಿಂಟ್ ಆಬ್ಸಲ್ಯೂಟ್ ಗ್ರೇಡಿಂಗ್ ಉಪಯೋಗಿಸಲಾಗುತ್ತಿದೆ.

| ಸ್ಕೋರ್ | ಗ್ರೇಡ್ |
|---|---|
| 90–100 | A+ |
| 80–89 | A |
| 70–79 | B+ |
| 60–69 | B |
| 50–59 | C+ |
| 40–49 | C |
| 30–39 | D+ |
| 20–29 | D |
| Below 20 | E |

ವಿದ್ಯಾರ್ಥಿ ಉನ್ನತ ವ್ಯಾಸಂಗಕ್ಕಾಗಿ ಅರ್ಹತೆ ಪಡೆಯಬೇಕಾದರೆ ಹೈಯರ್ ಸೆಕಂಡರಿ ಮಟ್ಟದಲ್ಲಿ (ಹಂತದಲ್ಲಿ) ಪ್ರತಿಯೊಂದು ವಿಷಯದಲ್ಲೂ CE+TE (ಸಾರ್ವತ್ರಿಕ ಪರೀಕ್ಷೆ) ಯಲ್ಲಿ ಕನಿಷ್ಠ D+ ಗ್ರೇಡ್ (30–39 ಶೇ.) ಆದರೂ ಪಡೆದಿರಬೇಕು. ಇದರೊಂದಿಗೆ ಸಾರ್ವಜನಿಕ ಪರೀಕ್ಷೆಯಲ್ಲಿ (TE) ಮಾತ್ರವಾಗಿ ಕನಿಷ್ಠ D+ ಪಡೆದಿರಬೇಕು.

ಈ ರೀತಿಯಲ್ಲಿ ವೈಜ್ಞಾನಿಕ ಹಂತದಲ್ಲೂ ಸಾಮಾಜಿಕ ಭಾವನಾತ್ಮಕ ಹಂತದಲ್ಲೂ ವಿದ್ಯಾರ್ಥಿಯ ಮಟ್ಟವನ್ನು ಅಳೆದು ಕಲಿಕಾ ಸಾಧನೆಗಳನ್ನು ಖಚಿತಪಡಿಸಲು ಅಗತ್ಯದ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಮೌಲ್ಯಮಾಪನವು ನಿರಂತರವೂ ಸಮಗ್ರವೂ ಆಗಿ ನಡೆಸಲು ಒಟ್ಟಾಗಿ ಪ್ರಯತ್ನಿಸುವುದು ಅಗತ್ಯಗತ್ಯವಾಗಿದೆ. ಅದು ಸಾಧ್ಯವಾಗುವುದಕ್ಕಾಗಿ ಕ್ಲಸ್ಟರ್ ಮಟ್ಟದ ಸಭೆಯಲ್ಲಿನ ಮೌಲ್ಯಮಾಪನ ಹೆಚ್ಚು ಸಹಕಾರಿಯಾಗುವುದು.

ಮೌಲ್ಯಮಾಪನಕ್ಕೆ ಬೇಕಾದ ಫೋರ್ಮೇಟುಗಳು ಅನುಬಂಧದಲ್ಲಿ ನೀಡಲಾಗಿದೆ.

## ಮೌಲ್ಯಮಾಪನ ಒಂದೇ ನೋಟದಲ್ಲಿ

**ಮೌಲ್ಯಮಾಪನ**

**ಸಮೀಪನ : ಕಲಿಕಾ ಸಾಧನೆಗಳಿಗೆ ಒತ್ತು ಕೊಡುವ ಸಮೀಪನ**

**ನಿರಂತರ ಹಾಗೂ ಸಮಗ್ರವಾದ ಮೌಲ್ಯಮಾಪನ (CCE)**

- **ವೈಜ್ಞಾನಿಕ ವಲಯ**
  - ನಿರಂತರ ಮೌಲ್ಯಮಾಪನ
    - ಕಲಿಕಾ ಪ್ರಕ್ರಿಯೆಯ ಮೌಲ್ಯಮಾಪನ
    - ಪೋರ್ಟ್‌ಫೋಲಿಯೋ ಮೌಲ್ಯಮಾಪನ
    - ಘಟಕ ಮಟ್ಟದ ಮೌಲ್ಯಮಾಪನ
  - ಅವಧಿ ಮೌಲ್ಯಮಾಪನ
    - ಆಶಯಗಳು ಪ್ರಕ್ರಿಯೆಗಳು ಮೊದಲಾದುವು
- **ಸಾಮಾಜಿಕ, ಭಾವನಾತ್ಮಕ ವಲಯ**
  1. ವಿಚಾರ ವಿನಿಮಯ ಸಾಮರ್ಥ್ಯ (Communication Skills)
  2. ಅಂತರ್ವ್ಯಕ್ತಿ ನೈಪುಣ್ಯ (Interpersonal Skills)
  3. ಸಹಭಾವ (Empathy)
  4. ಭಾವನೆಗಳೊಂದಿಗೆ ಹೊಂದಿಕೆ (Coping with emotions)
  5. ಮಾನಸಿಕ ಒತ್ತಡದೊಂದಿಗೆ ಹೊಂದಾಣಿಕೆ (Coping with stress)
  6. ಸಮಸ್ಯೆ ಪರಿಹಾರ ಕೌಶಲ (Problem Solving Skills)
  7. ತೀರ್ಮಾನ ಕೈಗೊಳ್ಳುವುದು (Decision making)
  8. ವಿಮರ್ಶಾತ್ಮಕ ಚಿಂತನೆ (Critical thinking)
  9. ಸೃಜನಶೀಲ ಚಿಂತನ ಕೌಶಲ (Creative thinking skills)
  10. ಸ್ವನಿರ್ವಹಣೆ (Self management)

## ಕಲಿಕಾ ಸಾಧನೆಗಳು

- ಹಳೆಗನ್ನಡ ಸಾಹಿತ್ಯದ ಚಂಪೂ ಹಾಗೂ ಗದ್ಯವನ್ನು ಅಧ್ಯಯನಮಾಡಿ ಆಶಯಗಳನ್ನು ಸೂಕ್ತ ಸಂದರ್ಭಗಳಲ್ಲಿ ಬಳಸುವರು.
- ಹಳೆಗನ್ನಡ ಕಾವ್ಯ ಭಾಗಗಳನ್ನು ಸ್ವರಭಾರಯುಕ್ತವಾಗಿ, ಸ್ಪುಟವಾಗಿ ವಾಚನ ಮಾಡುವರು.
- ಹಳೆಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಆಸ್ವಾದನ ಟಿಪ್ಪಣಿ, ವಿಮರ್ಶಾ ಲೇಖನಗಳನ್ನು ಬರೆಯಲು ಸಮರ್ಥರಾಗುವರು.
- ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾಗುವ ಜೀವನ ಮೌಲ್ಯಗಳನ್ನು ಅರ್ಥೈಸಿಕೊಂಡು ಅವುಗಳನ್ನು ಸೃಜನಾತ್ಮಕ ಬರಹಗಳಲ್ಲಿ ವ್ಯಕ್ತಪಡಿಸುವರು.
- ಕಾವ್ಯ ಭಾಗಗಳಲ್ಲಿ ಬಂದಿರುವ ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿಗಳನ್ನು ಗುರುತಿಸಿ ಸೂಕ್ತ ಸಂದರ್ಭಗಳಲ್ಲಿ ಅಳವಡಿಸಿಕೊಳ್ಳುವರು.
- ಗಾದೆ, ಒಗಟು, ನಾಣ್ನುಡಿ, ನುಡಿಗಟ್ಟುಗಳನ್ನು ತಿಳಿದುಕೊಂಡು ಸೂಕ್ತ ಸಂದರ್ಭಗಳಲ್ಲಿ ಪ್ರಯೋಗಿಸುವರು.
- ನಡುಗನ್ನಡ ಕಾಲದ ಕಾವ್ಯ ಪ್ರಕಾರಗಳಾದ ರಗಳೆ, ಸಾಂಗತ್ಯ, ಷಟ್ಪದಿ ಕೃತಿಗಳನ್ನು ಅಧ್ಯಯನ ಮಾಡಿ, ಆಶಯಗಳನ್ನು ತಿಳಿದು, ಸೂಕ್ತ ಸಂದರ್ಭಗಳಲ್ಲಿ ಬಳಸಲು ಸಮರ್ಥರಾಗುವರು.
- ನಡುಗನ್ನಡ ಕವಿಗಳ ದೃಷ್ಟಿಕೋನಗಳನ್ನು ವಿಶ್ಲೇಷಿಸಿ ಅಲ್ಲಿನ ಆಶಯವನ್ನು ಗುರುತಿಸಿ ಬರಹಗಳಲ್ಲಿ ಸೂಕ್ತವಾಗಿ ನಿರೂಪಿಸುವರು.
- ನಡುಗನ್ನಡ ಕಾವ್ಯಗಳನ್ನು ಹಾಡುವ/ವಾಚಿಸುವ ವಿಧಾನವನ್ನು ತಿಳಿದುಕೊಂಡು ಸ್ವರಭಾರದೊಂದಿಗೆ ಹಾಡುವರು/ ವಾಚಿಸುವರು.
- ನಡುಗನ್ನಡ ಸಾಹಿತ್ಯ ಕೃತಿಗಳನ್ನು ಅಭ್ಯಾಸಮಾಡಿ ಅವುಗಳಲ್ಲಿ ಮೂಡಿ ಬಂದಿರುವ ಸಾಮಾಜಿಕ ಜೀವನ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುವರು.
- ನಡುಗನ್ನಡ ಕಾಲದ ಸಾಮಾಜಿಕ ಬದುಕಿನ ವೈಶಿಷ್ಟ್ಯವನ್ನು ಗುರುತಿಸಿಕೊಂಡು ಸಮಕಾಲಿನ ಪರಿಸ್ಥಿತಿಯೊಂದಿಗೆ ಅನ್ವಯಿಸಿ ಲೇಖನವನ್ನು ತಯಾರಿಸುವರು.
- ಕಾವ್ಯಗಳಲ್ಲಿ ಬಳಕೆಯಾದ ಛಂದೋಪ್ರಕಾರಗಳನ್ನು ಗುರುತಿಸಿ, ಅದರ ವೈಶಿಷ್ಟ್ಯಗಳನ್ನು ತಿಳಿದುಕೊಂಡು ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ಬಳಸಲು ಸಮರ್ಥರಾಗುವರು.
- ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಹಳೆಗನ್ನಡ, ನಡುಗನ್ನಡ ಕೃತಿಗಳ ಹಿನ್ನಲೆಯಲ್ಲಿ ಗುರುತಿಸಿಕೊಂಡು ಆ ಬಗೆಗೆ ತಮ್ಮ ನಿಲುವುಗಳನ್ನು ಪ್ರಕಟಿಸುವರು.
- ಹೊಸಗನ್ನಡ ಗದ್ಯಮಾದರಿಗಳನ್ನು ಪರಿಚಯ ಮಾಡಿಕೊಳ್ಳುವರು. ಅಂಥ ಬರವಣಿಗೆಯನ್ನು ಅಭ್ಯಾಸ ಮಾಡುವರು. ಅವುಗಳಲ್ಲಿನ ಆಶಯವನ್ನು ತಿಳಿದು ವಿಮರ್ಶಾ ಲೇಖನಗಳನ್ನು ತಯಾರಿಸುವರು.
- ಸಾಹಿತ್ಯ ಕೃತಿಗಳನ್ನು ಭಾಷಾ ದೃಷ್ಟಿಯಿಂದಲೂ ವಸ್ತುವಿನ ದೃಷ್ಟಿಯಿಂದಲೂ ಕಂಡುಕೊಂಡು ಸ್ವಂತ ರಚನೆಯಲ್ಲಿ ತೊಡಗುವರು.
- ಪ್ರಾಚೀನ ತುಳು ಸಾಹಿತ್ಯವನ್ನು ಪರಿಚಯ ಮಾಡಿಕೊಂಡು ಭಾಷಾಪರವೂ ಆಶಯಪರವೂ ಆದ ಅಂಶಗಳನ್ನು ಅವಲೋಕಿಸಿ ಟಿಪ್ಪಣಿ ಬರೆಯುವರು.
- ಭಾಷೆಯ ಹುಟ್ಟು, ಬೆಳವಣಿಗೆಗಳ ಸ್ವರೂಪಗಳನ್ನು ತಿಳಿದುಕೊಂಡು ಆನ್ವಯಿಕವಾಗಿ ವಿಶ್ಲೇಷಿಸುವರು.
- ಭಾಷೆ ಹಾಗೂ ಸಾಹಿತ್ಯಗಳಲ್ಲಿನ ಸೌಂದರ್ಯವನ್ನು ಕಂಡುಕೊಂಡು ಲೇಖನ, ವಿಮರ್ಶೆಗಳ ಮೂಲಕ ಅದನ್ನು ಅಭಿವ್ಯಕ್ತಿಗೊಳಿಸುವರು.
- ಶಬ್ದಗಳ ವ್ಯುತ್ಪತ್ತಿ, ಸ್ಥಳನಾಮಗಳ ಹುಟ್ಟು – ಇವುಗಳ ಕುರಿತು ಅರಿವನ್ನು ಪಡೆಯುವರು.
- ಆತ್ಮಕಥೆಯನ್ನು ಓದಿ ಜೀವನವನ್ನು ಧೈರ್ಯದಿಂದ ಎದುರಿಸುವ, ಸಾಧನೆ ಮಾಡುವ ಮನೋಭಾವವನ್ನು ಬೆಳಸುವರು. ಅದನ್ನು ಬರವಣಿಗೆಯ ಮೂಲಕವೂ ವ್ಯಕ್ತಪಡಿಸುವರು.
- ಜೀವನಾನುಭವಗಳನ್ನು ಸೃಜನಶೀಲವಾಗಿ ಅಭಿವ್ಯಕ್ತಿಗೊಳಿಸುವರು.
- ಅಭಿನಯ ಕಲೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವರು, ಅಭಿನಯಿಸುವರು.
- ಕಥೆಯನ್ನು ನಾಟಕ ರೂಪಕ್ಕೆ ಬದಲಾಯಿಸುವ ಕೌಶಲವನ್ನು ಪಡೆದುಕೊಂಡು ಪ್ರಯೋಗಿಸುವರು.
- ನಾಟಕ ರಚನಾ ತಂತ್ರಗಳನ್ನು ಅರಿತುಕೊಳ್ಳುವರು, ನಾಟಕ ರಚಿಸುವರು.
- ಸಾಮಾಜಿಕ ಜೀವನದಲ್ಲಿ ದೃಶ್ಯಮಾಧ್ಯಮಗಳ ಪ್ರಭಾವವನ್ನು ಸೂಕ್ಷ್ಮವಾಗಿ ಗಮನಿಸಿ ವಿಮರ್ಶೆಯನ್ನು ಬರೆಯುವರು.
- ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ದೃಶ್ಯಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವರು.
- ಕನ್ನಡ ನಾಟಕ ಸಾಹಿತ್ಯದ ಹುಟ್ಟು ಬೆಳವಣಿಗೆಯ ಪರಿಚಯವನ್ನು ಮಾಡಿಕೊಳ್ಳುವರು. ಲೇಖನ ಬರೆಯುವರು.
- ನಾಟಕವನ್ನು ಓದಿ ಆಸ್ವಾದಿಸಿ ಆಸ್ವಾದನಾ ಟಿಪ್ಪಣಿಯನ್ನು ಬರೆಯುವರು.
- ಪುರಾಣ ಕಥೆಗಳಲ್ಲಿಯೂ ಹುದುಗಿರುವ ಸಮಕಾಲೀನ ಅಂಶಗಳನ್ನು ತಿಳಿದುಕೊಳ್ಳುವರು. ವಿಮರ್ಶಾಲೇಖನವನ್ನು ಬರೆಯುವರು.

# ವಾರ್ಷಿಕ ಯೋಜನೆ

| ತಿಂಗಳು | ಘಟಕ | ಪಾಠಭಾಗ | ಪಿರೇಡು |
|---|---|---|---|
| ಜೂನ್ | 1 | ಸಲಿಸುವೆಂ ನೂರಂವರಂ – ಪಂಪ | 30 |
| | 3 | ಕಾಡಿಗೆ ಹೊದ್ದಿಸಿದ ಮಂಜಿನ ಪರದೆ – ಜಿ.ಪಿ. ಬಸವರಾಜು | |
| ಜುಲೈ | 1 | ಶ್ರೀಮತಿ ಸ್ವಯಂವರ – ಮುದ್ದಣ | 25 |
| | 3 | ಹರಳುಗಟ್ಟಿದ ಬಗೆ–ಡಾ.ಅನುಪಮಾ ನಿರಂಜನ | |
| ಆಗಸ್ಟ್ | 2 | ಇಳೆಯಾಂಡಗುಡಿಮಾರ–ಹರಿಹರ | 20 |
| | 3 | ಇಡ್ಲಿಯ ಇತಿಹಾಸ–ಸೇಡಿಯಾಪು ಕೃಷ್ಣಭಟ್ಟ | |
| ಸೆಪ್ಟೆಂಬರ್ | 2 | ಧರೆಮೆಚ್ಚದಣ್ಣ ಸೋದರ ಕಾಳಗಕೆ ರತ್ನಾಕರವರ್ಣಿ | 15 |
| ಅಕ್ಟೋಬರ್ | 2 | ಉಲ್ಲಂಘಿಸುವರುಂಟೆ ವಿಧಿಕೃತವನು – ಲಕ್ಷ್ಮೀಶ | |
| | 3 | ಪ್ರಾಚೀನ ತುಳುಸಾಹಿತ್ಯ – ಡಾ. ವೆಂಕಟರಾಜ ಪುಣಂಚಿತ್ತಾಯ | 25 |
| ನವೆಂಬರ್ | 3 | ಭಾಷೆ ಮತ್ತು ಭಾಷಾ ವಿಜ್ಞಾನ | 20 |
| | 4 | ಕನ್ನಡದಲ್ಲಿ ನಾಟಕ ಸಾಹಿತ್ಯ | |
| ಡಿಸೆಂಬರ್ | 4 | ಮಂಥರಾ – ಡಾ. ಎಚ್.ಎಸ್. ವೆಂಕಟೇಶ ಮೂರ್ತಿ | 25 |
| ಜನವರಿ | 4 | ಮಂಥರಾ – ಡಾ. ಎಚ್.ಎಸ್. ವೆಂಕಟೇಶ ಮೂರ್ತಿ | |

# TEACHER PLANNER

| | | |
|---|---|---|
| ಪಾಠದ ಹೆಸರು | : | ಸಲಿಸುವೆಂ ನೂಱುವರಂ |
| ದಿನಾಂಕ | : | |
| ನಿರೀಕ್ಷಿಸುವ ಸಮಯ | : | 20 ಪಿರೇಡುಗಳು |
| ವಿಷಯ | : | ಶಿಶುಪಾಲವಧಾ ಪ್ರಕರಣದ ಮುಖಾಂತರ ಹಿರಿಯರಿಗೆ, ಯೋಗ್ಯರಿಗೆ ಗೌರವ ಸಲ್ಲಿಸುವುದು. ಅಹಂಕಾರದ ವರ್ತನೆ, ಅವಿಧೇಯತೆಗಳು ನಮ್ಮ ಸರ್ವನಾಶಕ್ಕೆ ಕಾರಣವಾಗುವುದು. |
| ಕಲಿಕಾ ಸಾಧನೆಗಳು | : | ಬಾಯ್ದೆರೆಯಾಗಿ ಹಾಡುವುದು. ಕಾವ್ಯಭಾಗವನ್ನು ಕಥಾ ರೂಪಕ್ಕೆ ಪರಿವರ್ತನೆ ಮಾಡುವುದು. ಕಾವ್ಯವಾಚನ - ಪ್ರವಚನ ನಡೆಸುವುದು. ಪಾತ್ರ ಚಿತ್ರಣ ಮಾಡುವುದು. ಹೊಸಗನ್ನಡ ರೂಪಕ್ಕೆ ಪರಿವರ್ತನೆ. ಮತ್ತೇಭವಿಕ್ರೀಡಿತ ಮತ್ತು ಕಂದ ಪದ್ಯದ ಛಂದೋರೂಪವನ್ನು ಅರಿತುಕೊಳ್ಳುವುದು. |
| ಆಶಯಗಳು | : | ಸಹನಶೀಲತೆ, ವ್ಯಕ್ತಿಗಳನ್ನು ಗೌರವಿಸುವುದು, ಸ್ವಯಂ ನಿಯಂತ್ರಣ, ಅಹಂಕಾರ ನಾಶ, ಕೊಟ್ಟ ಮಾತಿನಂತೆ ನಡೆದುಕೊಳ್ಳುವುದು - ಈ ಮುಂತಾದ ಮೌಲ್ಯಗಳನ್ನು, ವಿಚಾರಗಳನ್ನು ತಿಳಿದುಕೊಳ್ಳುವುದು. |
| ನೈಪುಣ್ಯಗಳು | : | ಹಾಡುವುದು, ಕಥಾರಚನೆ ಮಾಡುವುದು. ವಿವಿಧ ವ್ಯಾವಹಾರಿಕ ರೂಪಗಳನ್ನು ಪ್ರಯೋಗಿಸುವುದು. |
| ಭಾಷಾ ಅಂಶಗಳು | : | ಪದ ವಿಂಗಡಣೆ, ಹೊಸಗನ್ನಡ ರೂಪ, ಪರ್ಯಾಯ ಪದ, ತದ್ಧಿತ ಪ್ರತ್ಯಯ, ಸಂಧಿಗಳು, ಸಂಸ್ಕೃತ-ತದ್ಭವ. |
| ವ್ಯಾವಹಾರಿಕ ರೂಪಗಳು | : | ಲೇಖನ ಭಾಷಾರೂಪ ಮತ್ತು ಸಾಹಿತ್ಯರೂಪ ಪರಿವರ್ತನೆ. |
| ಮೌಲ್ಯಮನೋಭಾವಗಳು | : | ಹಿರಿಯರನ್ನು ಗೌರವಿಸುವುದು, ಕ್ಷಮಾಶೀಲರು, ಯೋಗ್ಯರಾದವರು ಕಿರಿಯರಾದರೂ ಗೌರವಿಸುವ ಗುಣ, ಅತಿಥಿ ಸತ್ಕಾರದ ಗುಣ, ಈ ಮುಂತಾದ ಮನೋಭಾವಗಳನ್ನು ಮೂಡಿಸುವುದು. |
| ನಿರೀಕ್ಷಿಸುವ ಉತ್ಪನ್ನಗಳು | : | ಟಿಪ್ಪಣಿ, ಕಥಾರೂಪಕ್ಕೆ ಪರಿವರ್ತನೆ, ಪಾತ್ರ ಚಿತ್ರಣ, ಹೊಸಗನ್ನಡ ರೂಪಾಂತರ, ಛಂದಸ್ಸನ್ನು ಪ್ರಯೋಗಿಸುವುದು, ವಾಚನ-ಪ್ರವಚನ ನಡೆಸುವಿಕೆ. |
| ಕಲಿಕಾ ಸಾಮಗ್ರಿಗಳು | : | ಪಠ್ಯಪುಸ್ತಕ, ಗಣಕಯಂತ್ರ, ಅಡಕ ಮುದ್ರಿಕೆ, ಪರಾಮರ್ಶನ ಗ್ರಂಥಗಳು. |

| ಪ್ರಕ್ರಿಯೆ/ ಚಟುವಟಿಕೆ | ಮೌಲ್ಯಮಾಪನ |
|---|---|
| • ಸಾಹಿತ್ಯ ಚರಿತ್ರೆಯ ಕುರಿತಾದ ಪೂರ್ವಜ್ಞಾನದ ಪ್ರಶ್ನೆಗಳನ್ನು ಕೇಳುವುದು. ಅದರ ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿಸುವುದು. | ಪೂರ್ವಜ್ಞಾನ |
| • ಪಂಪ ಕವಿಯ ಪರಿಚಯವನ್ನು ಮಾಡುವುದು. | |
| • ಅಡಕ ಮುದ್ರಿಕೆಯನ್ನು ಕೇಳಿಸುವುದು. | |
| • ವಿದ್ಯಾರ್ಥಿಗಳಿಂದ ಹಾಡಿಸುವುದು | ಕಾವ್ಯವಾಚನ |
| • ಅಧ್ಯಾಪಕರು ಹಾಡುವುದು | |
| • ಪದದ ಅರ್ಥವನ್ನು ತಿಳಿದುಕೊಳ್ಳುವುದು | ಪದದ ಅರ್ಥ ವಿವರಣೆ |
| • ಪದ ವಿಂಗಡಣೆಯನ್ನು ಮಾಡುವುದು | ಪದ ವಿಂಗಡಣೆ |
| • ಕಾವ್ಯಭಾಗವನ್ನು ಕತೆಗೆ ರೂಪಾಂತರಿಸುವುದು | ಕಥಾರಚನೆ |
| • ಟಿಪ್ಪಣಿಯನ್ನು ಬರೆಯುವುದು | ಟಿಪ್ಪಣಿ |
| • ಪಾತ್ರ ಚಿತ್ರಣವನ್ನು ಮಾಡುವುದು | ಪಾತ್ರಚಿತ್ರಣ |
| • ಹಳೆಗನ್ನಡದಿಂದ ಹೊಸಗನ್ನಡಕ್ಕೆ ರೂಪಾಂತರ | ಹೊಸಗನ್ನಡ ರೂಪ |
| • ವರ್ಣಗಣ ಛಂದಸ್ಸಾದ ಮತ್ತೇಭವಿಕ್ರೀಡಿತ ವೃತ್ತ ಮತ್ತು ಮಾತ್ರಾಗಣ ಛಂದಸ್ಸಾದ ಕಂದಪದ್ಯದ ಛಂದಸ್ಸಿನ ಸ್ವರೂಪಗಳನ್ನು ಅರಿತುಕೊಳ್ಳುವುದು. ಹಾಗೂ ಪ್ರಸ್ತಾರ ಹಾಕಿ, ಗಣವಿಭಾಗ ಮಾಡುವುದು. | ಛಂದಸ್ಸಿನ ಗುರುತಿಸುವಿಕೆ |
| • ಪರ್ಯಾಯ ಪದಗಳನ್ನು ಪಟ್ಟಿ ಮಾಡುವುದು. | ಪರ್ಯಾಯ ಪದಗಳ ಪಟ್ಟಿ. |
| • ತದ್ಧಿತ ಪ್ರತ್ಯಯಗಳನ್ನು ಅರಿತುಕೊಂಡು ಗುರುತಿಸುವುದು. ವಾಕ್ಯದಲ್ಲಿ ಪ್ರಯೋಗಿಸುವುದು. | ತದ್ಧಿತ ಪ್ರತ್ಯಯ ಪ್ರಯೋಗಗಳಿಂದೊಡಗೂಡಿದ ವಾಕ್ಯ |
| • ಸವರ್ಣಧೀರ್ಘ ಸಂಧಿಯ ನಿಯಮವನ್ನು ಅರಿತುಕೊಂಡು ಸಂಧಿವಿಂಗಡಣೆಯೊಂದಿಗೆ ಸಂಧಿಯನ್ನು ಹೆಸರಿಸುವುದು, ಅರಿತುಕೊಳ್ಳುವುದು. | ಸವರ್ಣದೀರ್ಘ ಸಂಧಿಯನ್ನು ಗುರುತಿಸುವುದು |
| • ಸಂಸ್ಕೃತ–ತದ್ಭವ ಪದಗಳನ್ನು ಗುರುತಿಸುವುದು. | ಸಂಸ್ಕೃತ –ತದ್ಭವಗಳ ಪಟ್ಟಿ |

**ನಿರಂತರ ಮೌಲ್ಯಮಾಪನ (CE), ಅವಧಿ ಮೌಲ್ಯಮಾಪನ (TE) ಇವುಗಳನ್ನು ಪ್ರತಿಯೊಂದು ಅವಧಿಯಲ್ಲೂ ದಾಖಲಿಸಲಿರುವ ವಿಷಯಾಧಾರಿತ ಕ್ರೋಢೀಕೃತ ನಮೂನೆ**

ಅವಧಿ : 1/2/3

ವಿಷಯ ........................................ ತರಗತಿ ..................... ವಿಭಾಗ ................................

| ಕ್ರಮ ಸಂಖ್ಯೆ | ವಿದ್ಯಾರ್ಥಿಯ ಹೆಸರು | CE ವಿಭಾಗ | | | ಒಟ್ಟು CE ಸ್ಕೋರ್ | TE ಸ್ಕೋರ್ | ಒಟ್ಟು ಗ್ರೇಡ್ |
|---|---|---|---|---|---|---|---|
| | | ಪ್ರಕ್ರಿಯೆ | ಪೋರ್ಟ್ ಫೋಲಿಯೋ | ಘಟಕ ಮೌಲ್ಯಮಾಪನ | | | |
| | | | | | | | |

**Annual Consolidation Format - Higher Secondary Level**

Class : Division :

Year :

| Sl. No. | Name of Student | Term | Part 1 (Language) | | | Part 2 (2nd Language) | | | Part 3 | | | | | | | | | | | | | | | | Socio-Emotional skills |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | Paper 1 | | | Paper 2 | | | Paper 3 | | | Paper 4 | | | Health & Physical Edn. | | | | |
| | | | CE | TE | Total | CE | TE | Total | CE | TE | Total | CE | TE | Total | CE | TE | Total | CE | TE | Total | CE | TE | Total | | |
| | | I | | | | | | | | | | | | | | | | | | | | | | | |
| | | II | | | | | | | | | | | | | | | | | | | | | | | |
| | | III | | | | | | | | | | | | | | | | | | | | | | | |
| | | Final Score | | | | | | | | | | | | | | | | | | | | | | | |
| | | | | | | | | | | | | | | | | | | | | | | | | | |

# 1. ಹಳೆಗನ್ನಡ ನುಡಿಬೆಡಗು

| | | |
|---|---|---|
| ಘಟಕ 1 | : | ಹಳೆಗನ್ನಡ ನುಡಿಬೆಡಗು |
| ಸಮಯ | : | 35 ಪಿರೇಡುಗಳು |

**ಕಲಿಕಾ ಸಾಮಗ್ರಿಗಳು** :

- ಪಠ್ಯಪುಸ್ತಕ
- ಅಡಕ ಮುದ್ರಿಕೆ
- ಗಣಕಯಂತ್ರ
- ಪರಾಮರ್ಶನ ಗ್ರಂಥಗಳು

**ಮೌಲ್ಯಗಳು ಮತ್ತು ಮನೋಭಾವಗಳು** :

- ಹಳೆಗನ್ನಡ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿ ಆಸ್ವಾದಿಸುವ ಮನೋಭಾವ.
- ಹಳೆಗನ್ನಡ ಕೃತಿಗಳನ್ನು ಕಾವ್ಯವಾಚನ – ಪ್ರವಚನದಲ್ಲಿ ಉಪಯೋಗಿಸಿಕೊಳ್ಳುವ ಮನೋಭಾವ.
- ಹಳೆಗನ್ನಡ ಕಾವ್ಯ ಕೃತಿಗಳನ್ನು ಅಧ್ಯಯನ ಮಾಡಿ ಅಲ್ಲಿರುವ ಶೈಲಿ ಛಂದಸ್ಸು ವ್ಯಾಕರಣಗಳನ್ನು ಗುರುತಿಸಿ ಪ್ರಯೋಗಿಸುವ ಮನೋಭಾವ.
- ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಹಾಗೂ ಗೌರವಿಸುವ ಮನೋಭಾವ.
- ಕಾವ್ಯಭಾಗದಲ್ಲಿ ಬರುವ ಸಾಂಸ್ಕೃತಿಕ ಮೌಲ್ಯಗಳನ್ನು ಅರಿತುಕೊಳ್ಳುವುದು.
- ಸಾಹಿತ್ಯದಲ್ಲಿ ಹಳೆಗನ್ನಡ ಕಾವ್ಯಗಳ ಸ್ಥಾನಮಾನವನ್ನು ಅರಿತುಕೊಳ್ಳುವುದು.

# ಪ್ರಸ್ತಾವನೆ

ಕವಿರಾಜಮಾರ್ಗದ ತರುವಾಯ ಕನ್ನಡ ಸಾಹಿತ್ಯಕ್ಕೆ ಗರಿಮೆಯ ಕಾವ್ಯಗಳನ್ನು ರಚಿಸಿ ಪಂಪನು 'ಆದಿಕವಿ' ಆದನು. ಈತನ ವಿಕ್ರಮಾರ್ಜುನ ವಿಜಯದಿಂದ ಆಯ್ದುಕೊಂಡ 'ಸಲಿಸುವೆಂ ನೂಱುವರಂ' ಭಾಗವನ್ನು ಮೊದಲ ಘಟಕದಲ್ಲಿ ಕೊಡಲಾಗಿದೆ. ತನ್ನ ಲೌಕಿಕ ಕಾವ್ಯವಾದ ಪಂಪಭಾರತದಲ್ಲಿ ಪುರಾಣ ಪಾತ್ರಗಳನ್ನು ವೈಭವೀಕರಿಸದೆ ಸಾಮಾನ್ಯ ಮನುಷ್ಯನಲ್ಲಿರುವ ಗುಣಗಳನ್ನೇ ಹೇರಿ ಕಾವ್ಯವನ್ನು ರಚಿಸಿದ್ದಾನೆ. ಶಿಶುಪಾಲನ ಅಹಂಕಾರ ಮತ್ತು ಶ್ರೀಕೃಷ್ಣನ ಯೋಗ್ಯತೆ, ತಾಳ್ಮೆಗಳನ್ನು ಈ ಕಾವ್ಯಭಾಗವು ಚಿತ್ರಿಸುತ್ತದೆ. ಮೂಲದ ಕತೆಗೆ ಚಿಕ್ಕಪುಟ್ಟ ಮಾರ್ಪಾಡುಗಳನ್ನು ಈ ಕಾವ್ಯಭಾಗದಲ್ಲಿ ಮಾಡಿದ್ದಾನೆ. ಇದಕ್ಕೊಂದು ನಿದರ್ಶನ ಶಿಶುಪಾಲ ವಧೆಯ ಪ್ರಸಂಗ. ಮೂಲ ಮಹಾಭಾರತ ಕತೆಯಲ್ಲಿ ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರದಿಂದ ಶಿಶುಪಾಲನನ್ನು ವಧಿಸಿದರೆ, ಇಲ್ಲಿ ಅರ್ಘ್ಯ ಕೊಡುವ ತಟ್ಟೆಯಿಂದ ತಲೆಯನ್ನು ಹಾರಿಸಿದ್ದನ್ನು ಕಾಣಬಹುದು. ಅಹಂಕಾರ ಶಿಶುಪಾಲನ ಸರ್ವನಾಶಕ್ಕೆ ಕಾರಣವಾಯಿತು.

ಹೀಗೆ ಅಹಂಕಾರ ಸರ್ವನಾಶಕ್ಕೆ ಕಾರಣವಾದೀತು. ಹಿರಿಯರನ್ನು ಯೋಗ್ಯರನ್ನು ಗೌರವಿಸುವುದು ನಮ್ಮ ಕರ್ತವ್ಯ ಮೊದಲಾದ ಮನೋಭಾವಗಳನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದರೊಂದಿಗೆ ಹಳೆಗನ್ನಡದ ಆರಂಭಕಾಲದ ಕಾವ್ಯ ಶೈಲಿ, ಭಾಷೆ, ಛಂದಸ್ಸುಗಳನ್ನು ಪರಿಚಯಿಸುವುದು ಈ ಪದ್ಯಭಾಗದ ಉದ್ದೇಶ.

ಈ ಘಟಕದ ಇನ್ನೊಂದು ಕಾವ್ಯಭಾಗ ಮುದ್ದಣನ ಅದ್ಭುತ ರಾಮಾಯಣದಿಂದ ಆಯ್ದುಕೊಂಡ 'ಶ್ರೀಮತಿ ಸ್ವಯಂವರ'. ಹಳೆಗನ್ನಡದ ಗದ್ಯ ಭಾಷೆ ಹಾಗೂ ಶೈಲಿಗಳನ್ನುಪಯೋಗಿಸಿ ರಚಿಸಿದ್ದಾಗಿದೆ. ಹೊಸಗನ್ನಡ ಆರಂಭ ಕಾಲಘಟ್ಟದ ಕವಿಯಾದ ನಂದಳಿಕೆ ಲಕ್ಷ್ಮೀನಾರಾಯಣ ಹಳೆಗನ್ನಡದ ಭಾಷೆಯನ್ನು ಹೊಸಗನ್ನಡ ಕಾಲಘಟ್ಟದಲ್ಲಿದ್ದುಕೊಂಡು ಕಾವ್ಯರಚನೆ ಮಾಡುವ ಮೂಲಕ ಸಾಹಿತ್ಯ ಪರಂಪರೆಗೆ ಹೊಸ ಮೆರುಗನ್ನು ನೀಡಿದನು.

ಇಲ್ಲಿ ಕೊಡಲಾದ 'ಶ್ರೀಮತಿ ಸ್ವಯಂವರ' ಹಳೆಗನ್ನಡ ಕಾವ್ಯಭಾಗದಲ್ಲಿ ಅಚ್ಚ ದೇಸೀಯತೆಯ ಸೊಗಡನ್ನು ಕಾಣಬಹುದು. ಮೋಸ, ವಂಚನೆಗಳಿಗೆ ವಿರುದ್ಧವಾದ ನಿಲುವನ್ನು ವಿದ್ಯಾರ್ಥಿಗಳಲ್ಲಿ ಮೂಡಿಸುವುದು ಹಾಗೂ ಹಳೆಗನ್ನಡ ಶೈಲಿಯಲ್ಲಿ ಇಂದಿಗೂ ಕಾವ್ಯರಚನೆ ಸಾಧ್ಯ ಎಂಬ ಮನೋಭಾವವನ್ನು ಮೂಡಿಸುವುದೂ ಇದರ ಉದ್ದೇಶ.

# UNIT FRAME

**ಘಟಕ 1 : ಹಳೆಗನ್ನಡ ನುಡಿಬೆಡಗು** ಸಮಯ : 30 ಪಿರೇಡುಗಳು

**ಕಲಿಕಾ ಸಾಧನೆಗಳು**

- ಹಳೆಗನ್ನಡ ಸಾಹಿತ್ಯದ ಚಂಪೂ ಹಾಗೂ ಗದ್ಯವನ್ನು ಅಧ್ಯಯನಮಾಡಿ ಆಶಯಗಳನ್ನು ಸೂಕ್ತ ಸಂದರ್ಭಗಳಲ್ಲಿ ಬಳಸುವರು.
- ಹಳೆಗನ್ನಡ ಕಾವ್ಯ ಭಾಗಗಳನ್ನು ಸ್ವರಭಾರಯುಕ್ತವಾಗಿ, ಸ್ಪುಟವಾಗಿ ವಾಚನ ಮಾಡುವರು.
- ಹಳೆಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಆಸ್ವಾದನ ಟಿಪ್ಪಣಿ, ವಿಮರ್ಶಾ ಲೇಖನಗಳನ್ನು ಬರೆಯಲು ಸಮರ್ಥರಾಗುವರು.
- ಸಾಹಿತ್ಯ ಕೃತಿಗಳಲ್ಲಿ ವ್ಯಕ್ತವಾಗುವ ಜೀವನ ಮೌಲ್ಯಗಳನ್ನು ಅರ್ಥೈಸಿಕೊಂಡು ಅವುಗಳನ್ನು ಸೃಜನಾತ್ಮಕ ಬರಹಗಳಲ್ಲಿ ವ್ಯಕ್ತಪಡಿಸುವರು.
- ಕಾವ್ಯ ಭಾಗಗಳಲ್ಲಿ ಬಂದಿರುವ ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿಗಳನ್ನು ಗುರುತಿಸಿ ಸೂಕ್ತ ಸಂದರ್ಭಗಳಲ್ಲಿ ಅಳವಡಿಸಿಕೊಳ್ಳುವರು.
- ಗಾದೆ, ಒಗಟು, ನಾಣ್ನುಡಿ, ನುಡಿಗಟ್ಟುಗಳನ್ನು ತಿಳಿದುಕೊಂಡು ಸೂಕ್ತ ಸಂದರ್ಭಗಳಲ್ಲಿ ಪ್ರಯೋಗಿಸುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಹಳೆಗನ್ನಡ ಸಾಹಿತ್ಯದ ಉಗಮ– ವಿಕಾಸ, ಸಾಹಿತ್ಯ ಕ್ಷೇತ್ರದಲ್ಲಿ ಹಳಗನ್ನಡ ಸಾಹಿತ್ಯಕ್ಕಿರುವ ಸ್ಥಾನ (ಚಂಪೂ ಶೈಲಿ– ಗದ್ಯಕೃತಿ) | • ಪೂರ್ವ ಜ್ಞಾನದ ಅವಲೋಕನಕ್ಕಾಗಿ ವಿದ್ಯಾರ್ಥಿಗಳೊಡನೆ ಹಳಗನ್ನಡ ಸಾಹಿತ್ಯ ಪ್ರಕಾರದ ಬಗ್ಗೆ ಪ್ರಶ್ನಿಸುವುದು.<br>• ಅಧ್ಯಾಪಕರು ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯುವುದು.<br>• ಪಂಪನ ಕೃತಿಗಳ ಬಗ್ಗೆ ತಿಳಿಯುವುದು.<br>• ಪಂಪನ ಕೃತಿಗಳನ್ನು ವಾಚಿಸುವುದು.<br>• ಕಾವ್ಯವಾಚನ ವಿಧಾನ (ಚಂಪೂ)ವನ್ನು ಅಧ್ಯಾಪಕರು ತಿಳಿಸುವುದು.<br>• ಧ್ವನಿಸುರುಳಿಯನ್ನು ಕೇಳಿಸುವುದು, ವಿದ್ಯಾರ್ಥಿಗಳು ಆಲಿಸುವುದು.<br>• ವಿದ್ಯಾರ್ಥಿಗಳನ್ನು ಗುಂಪು ಮಾಡುವುದು. ಪ್ರತಿ ಗುಂಪಿಗೂ ಪಠ್ಯಭಾಗವನ್ನು ಸೂಕ್ತ ಭಾಗಗಳನ್ನಾಗಿ ಮಾಡಿಕೊಂಡು, ಆಶಯ, ಪದ ವಿಂಗಡಣೆ, ಅರ್ಥಗಳನ್ನು ಬರೆಯಲು ಹೇಳುವುದು. ಆಶಯ ಟಿಪ್ಪಣಿಯನ್ನು ಬರೆಯುವುದು. ತರಗತಿಯಲ್ಲಿ ಮಂಡಿಸುವುದು. | • ಚಂಪೂ ಪ್ರಕಾರದ ಬಗ್ಗೆ ಅರಿವು<br>• ಚಂಪೂ ಸಾಹಿತ್ಯ ಕೃತಿಗಳ ಪಟ್ಟಿ ಮಾಡುವುದು<br>• ಆಲಿಸುವುದು<br>• ಆಶಯ ಟಿಪ್ಪಣಿಯನ್ನು ಬರೆಯುವುದು |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಕನ್ನಡ ಗದ್ಯ ಸಾಹಿತ್ಯದ ಉಗಮ ವಿಕಾಸದ ಪರಿಚಯ ಮಾಡುವುದು. ಮುದ್ದಣನ 'ಅದ್ಭುತ ರಾಮಾಯಣ' ದ ಪರಿಚಯ ಮಾಡುವುದು. | • ಹಳೆಗನ್ನಡ ಗದ್ಯ ಸಾಹಿತ್ಯದ ಉಗಮ–ವಿಕಾಸ ಇತ್ಯಾದಿಗಳನ್ನು ತಿಳಿದುಕೊಳ್ಳುವುದು<br>• ಹಳೆಗನ್ನಡ ಗದ್ಯವನ್ನು ಹೊಸಗನ್ನಡಕ್ಕೆ ರೂಪಾಂತರವನ್ನು ಮಾಡುವುದು<br>• ಟಿಪ್ಪಣಿ ಬರೆಯುವುದು, ನಾಟಕಕ್ಕೆ ರೂಪಾಂತರಗೊಳಿಸುವುದು<br>• ಭಾಷಾ ಸ್ವರೂಪ, ಭಾಷಾ ವ್ಯತ್ಯಾಸ, ಧ್ವನಿ ವ್ಯತ್ಯಾಸ, ಅರ್ಥ ವ್ಯತ್ಯಾಸ, ಸಂಧಿ–ಸಮಾಸಗಳನ್ನು ತಿಳಿದುಕೊಳ್ಳುವುದು.<br>• ಹಳೆಗನ್ನಡ ವಿಭಕ್ತಿ ಪ್ರತ್ಯಯ, ಬಹುವಚನ ಪ್ರತ್ಯಯಗಳನ್ನು ತಿಳಿದುಕೊಳ್ಳುವುದು. | • ರೂಪಾಂತರಿಸುವುದು<br>• ಟಿಪ್ಪಣಿ ಬರೆಯುವುದು<br>• ಭಾಷೆಯ ಬೆಳವಣಿಗೆಯ ಹಂತಗಳನ್ನು ತಿಳಿದುಕೊಳ್ಳುವುದು<br>• ಶಬ್ದಗಳ ಪಟ್ಟಿ ತಯಾರಿಸುವುದು. |
| | | |

# ಸಲಿಸುವೆಂ ನೂಱುವರಂ

## ಪಾಠ ಪ್ರವೇಶ

ಕನ್ನಡ ಸಾಹಿತ್ಯ ಚರಿತ್ರೆಯನ್ನು ವಿದ್ಯಾರ್ಥಿಗಳು ತಕ್ಕಮಟ್ಟಿಗೆ ಅರಿತುಕೊಂಡಿರುವರು. ಅದರ ಆಧಾರದ ಮೇಲೆ ಪ್ರಶ್ನೆಗಳನ್ನು ಕೇಳುವುದು.

- ಸಾಹಿತ್ಯ ಚರಿತ್ರೆಯನ್ನು ಕಾಲಘಟ್ಟದ ಆಧಾರದಲ್ಲಿ ಹೇಗೆ ವಿಭಾಗ ಮಾಡಲಾಗಿದೆ?
- ಹಳೆಗನ್ನಡ ಸಾಹಿತ್ಯ ಕಾಲದಲ್ಲಿ ಬಂದ ಪ್ರಮುಖ ಕವಿಗಳು ಯಾರು?
- ಅವರಲ್ಲಿ ಪಂಪ ಹಾಗೂ ಆತನ ಕೃತಿಯ ಬಗ್ಗೆ ಹೇಳಿರಿ.
- ಈ ಮುಂತಾದ ಪ್ರಶ್ನೆಗಳ ಮೂಲಕ ಪಂಪ ಭಾರತದ ಕುರಿತಾಗಿ ವಿದ್ಯಾರ್ಥಿಗಳು ಹೇಳುವಂತೆ ಮಾಡುವುದು.

### ಆದಿಕವಿ ಪಂಪ

ಕವಿರಾಜ ಮಾರ್ಗವು ಕನ್ನಡಕ್ಕೆ ಮೊದಲನೆಯ ಉಪಲಬ್ಧ ಲಕ್ಷಣ ಗ್ರಂಥವಾದರೆ ಪಂಪನ ಕೃತಿಗಳು ಮೊದಲನೆಯದಾಗಿ ದೊರೆತ ಕಾವ್ಯಗ್ರಂಥಗಳು. ಸಂಸ್ಕೃತ ಸಾಹಿತ್ಯಕ್ಕೆ ವಾಲ್ಮೀಕಿಯು ಆದಿಕವಿ ಆದಂತೆ ಕನ್ನಡ ಸಾಹಿತ್ಯಕ್ಕೆ ಪಂಪನೇ ಆದಿಕವಿಯಾದನೆಂದೂ ಊಹಿಸಬಹುದಾಗಿದೆ. ಈತನ ತಂದೆ ಭೀಮಪ್ಪಯ್ಯ ತಾಯಿ ಅಬ್ಬಣಬ್ಬೆ. ಕವಿಯ ಪೋಷಕನು ಚಾಳುಕ್ಯ ವಂಶದ ಎರಡನೇ ಅರಿಕೇಸರಿ.

ಪಂಪಕವಿಯು 'ಕವಿತಾ ಗುಣಾರ್ಣವಂ', ಸುಕವಿ ಜನಮನೋಮಾನಸೋತ್ತಂಸ ಹಂಸಂ, ಸಂಸಾರ ಸಾರೋದಯಂ, ಸರಸ್ವತೀ ಮಣಿಹಾರಂ, ಪುರಾಣಕವಿ ಎಂಬೆಲ್ಲ ಬಿರುದುಗಳಿಂದ ಗೌರವಿಸಲ್ಪಟ್ಟಿದ್ದಾನೆ. ಈತನು ಲೌಕಿಕ ಕಾವ್ಯವಾದ ಪಂಪಭಾರತ ಹಾಗೂ ಧಾರ್ಮಿಕ ಕಾವ್ಯವಾದ ಆದಿಪುರಾಣ ಎಂಬ ಎರಡು ಕೃತಿಗಳನ್ನು ರಚಿಸಿರುವನು.

ಪಂಪನ ಕವಿತಾ ಧೋರಣೆಯು ಅಸಾಮಾನ್ಯವಾದುದು. ಈತನ ಕಲ್ಪನೆಗಳ ನಾವೀನ್ಯ, ರಸಕ್ಕೆ ತಕ್ಕಂತೆ ವಸ್ತುವನ್ನು ರಚಿಸುವ ಕೌಶಲ, ಅದಕ್ಕೆ ತಕ್ಕಂತೆ ಛಂದಸ್ಸನ್ನು ಯೋಜಿಸುವ ಕೌಶಲ, ಪಾತ್ರಗಳು ಜೀವ ಕಳೆಯೊಂದಿಗೆ ನಮ್ಮ ಮುಂದೆ ಬಂದು ನಿಲ್ಲುವಂತೆ ಮಾಡುವ ಕೈಚಳಕ, ಅನೇಕ ವಾಕ್ಯಗಳನ್ನು ಹೇಳಬೇಕಾದುದನ್ನು ಕೆಲವೇ ಮಾತುಗಳಲ್ಲಿ ಹೇಳುವ ನೈಪುಣ್ಯ ಸಂದರ್ಭೋಚಿತವಾದ ಶೈಲಿ ಈ ಮುಂತಾದ ಕಾವ್ಯಗುಣಗಳು ಪಂಪನನ್ನು ಕರ್ಣಾಟಕ ಕವಿತಾ ಸಾಮ್ರಾಜ್ಯ ಸಾರ್ವಭೌಮನನ್ನಾಗಿ ಮಾಡಿರುವವು.

ಬಹಳ ವಿಸ್ತಾರವಾದ ಸಂಸ್ಕೃತ ವ್ಯಾಸ ಭಾರತದ ಕತೆಯನ್ನು ಅಷ್ಟು ಅಂದವಾಗಿ ಸಂಗ್ರಹಿಸಿ ಮುಖ್ಯವಾದ ವಿಷಯವೊಂದನ್ನೂ ಬಿಡದೆ ಮೂಲಕಾವ್ಯದ ಆಶಯಕ್ಕೆ ಕುಂದುಂಟಾಗದ ರೀತಿಯಲ್ಲಿ ಕಥಾ ಸರಣಿಯಲ್ಲಿ ಯಾವುದೇ ಮಾರ್ಪಾಡು ಮಾಡದೇ ರಚಿಸಿದ ಪಂಪನ ಕೌಶಲವು ಸ್ತುತ್ಯರ್ಹವೇ ಆಗಿದೆ. ಇಲ್ಲಿ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಕಥಾ ನಾಯಕನನ್ನಾಗಿಸಿ ಅರ್ಜುನನಿಗೆ ಹೋಲಿಸಿ ಕತೆಯನ್ನು ಹೇಳಲಾಗಿದೆ. ವ್ಯಾಸ ಭಾರತದಲ್ಲಿ ಬರುವ ಕೆಲವು ವಿಚಾರಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಂಡಿದ್ದರೂ ಎಲ್ಲಿಯೂ ರಸಭಂಗವಾಗದ ರೀತಿ ನೋಡಿಕೊಂಡಿರುವುದು ಆತನ ಹಿರಿಮೆಯಾಗಿದೆ. ಉದಾಹರಣೆಗೆ ಇಲ್ಲಿ ಕೊಡಲಾದ ಶಿಶುಪಾಲನ ವಧೆಯ ಸಂದರ್ಭದಲ್ಲಿ ಶಿಶುಪಾಲನ ತಲೆಯನ್ನು ಅರ್ಘ್ಯಕ್ಕೆ ಇಟ್ಟ ತಳಿಗೆಯಿಂದ ಹಾರಿಸಿದರೆ ವ್ಯಾಸ ಭಾರತದಲ್ಲಿ ತನ್ನ ಚಕ್ರದಿಂದ ಹಾರಿಸಿದ್ದನ್ನು ಕಾಣಬಹುದು.

ಹೀಗೆ ಕಾವ್ಯವನ್ನು ಕಟ್ಟುವಲ್ಲಿ ಪಂಪನು ಮೆರೆದ ಕೌಶಲವು ಅಮೋಘವಾದುದು. ಅದ್ದರಿಂದಲೇ ಇಂದಿಗೂ ಪಂಪ ಭಾರತವು ಸಾಹಿತ್ಯ ಪ್ರೇಮಿಗಳಿಗೆ ಮೇರು ಕೃತಿಯಾಗಿ ಆಪ್ಯಾಯಮಾನವಾಗಿದೆ.

- ಪಂಪ ಭಾರತದಿಂದ ಆಯ್ದ ಕಾವ್ಯಭಾಗವಾದ ‘ಸಲಿಸುವೆಂ ನೂಱುವರಂ’ ಸಾಲುಗಳನ್ನು ಅಡಕ ಮುದ್ರಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಕೇಳಿಸುವುದು. ಅನಂತರ ವಿದ್ಯಾರ್ಥಿಗಳಿಂದ ಬಾಯ್ದೆರೆಯಾಗಿ ಓದಿಸುವುದು.
- ಪದ್ಯಭಾಗವನ್ನು ಪದವಿಂಗಡಣೆಯೊಂದಿಗೆ ಅರ್ಥಕೆಡದಂತೆ ಓದಲು ಹೇಳುವುದು. ವಿದ್ಯಾರ್ಥಿಗಳಿಗೆ ಪಠ್ಯಭಾಗದಲ್ಲಿ ಕೊಡಲಾದ ಪದವಿಂಗಡಣೆಯನ್ನು ಗಮನಿಸಲು ಹೇಳುವುದು.
- ಕಠಿಣ ಪದಗಳ ಅರ್ಥವನ್ನು ಪದಕೋಶದ ಸಹಾಯದಿಂದ ಮತ್ತು ಪಠ್ಯಭಾಗದ ಕೊನೆಯಲ್ಲಿ ಕೊಡಲಾದ ಅರ್ಥ ವಿವರಣೆಯ ಸಹಾಯದಿಂದ ಕಂಡುಕೊಳ್ಳಲಿ.
- ವಿದ್ಯಾರ್ಥಿಗಳನ್ನು ಗುಂಪುಗಳಾಗಿಸಿ ಸಂಕ್ಷಿಪ್ತವಾಗಿ ಉತ್ತರಿಸಲು ಕೊಟ್ಟಿರುವ ಪ್ರಶ್ನೆಗಳಿಗೆ ಬಾಯ್ದೆರೆಯಾಗಿ ಉತ್ತರ ಹೇಳಿಸುವುದು. ಪ್ರತಿಯೊಂದು ಗುಂಪಿನಲ್ಲೂ ಒಬ್ಬೊಬ್ಬರು ಉತ್ತರವನ್ನು ಬರೆದು ತರಗತಿಯಲ್ಲಿ ಮಂಡಿಸಲಿ. ಬಳಿಕ ಎಲ್ಲರೂ ಸೂಕ್ತ ತಿದ್ದುಪಡಿಗಳೊಂದಿಗೆ ‘ಚಟುವಟಿಕಾ ಪುಸ್ತಕ’ ದಲ್ಲಿ ಬರೆಯಲಿ.

ಉದಾ: ‘ನಸುಕಿನಿಸದೆ ಮಿಗೆಕಿನಿಸಿ’ ಈ ಪ್ರಯೋಗದ ವೈಶಿಷ್ಟ್ಯ. ಶಿಶುಪಾಲನ ನೂರು ತಪ್ಪುಗಳನ್ನು ಸಹಿಸಿ ಕೋಪಗೊಳ್ಳದ ಕೃಷ್ಣ ನೂರ ಒಂದನೇ ತಪ್ಪಿಗೆ ಹೆಚ್ಚಾದ ಕ್ರೋಧದಿಂದ ಪ್ರತಿಕ್ರಿಯಿಸುವುದನ್ನು ಕವಿ ಈ ರೀತಿಯ ವಾಕ್ಯದಿಂದ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಸ್ವಲ್ಪ ಸಿಟ್ಟುಗೊಳ್ಳದೆ ಅತಿಶಯವಾದ ಸಿಟ್ಟಿನಿಂದ ಅಸುರಕುಲ ವೈರಿಯಾದ ಶ್ರೀಕೃಷ್ಣನು ಪ್ರತಿಕ್ರಿಯಿಸಿದನು ಎಂಬುದು ತಾತ್ಪರ್ಯ.

ಇಂಥ ವಿಶೇಷ ಪ್ರಯೋಗಗಳ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯುವುದು.

## ಚಟುವಟಿಕೆಗಳು

- ಆರಂಭದಲ್ಲೇ ಪದ್ಯಭಾಗವನ್ನು ಬಾಯ್ದೆರೆಯಾಗಿ ಓದಲಿ.
- ಶಿಶುಪಾಲ ವಧೆಯ ಭಾಗವನ್ನು ಗುಂಪಿನಲ್ಲಿ ಕಥಾರೂಪದಲ್ಲಿ ಬರೆಯಲಿ. ಒಂದೊಂದೇ ಗುಂಪಿನವರು ಕತೆಯನ್ನು ಓದಲಿ. ಪ್ರತಿ ಗುಂಪಿನವರು ಇತರ ಗುಂಪುಗಳ ಕಥಾವಾಚನದ ಮೌಲ್ಯ ಮಾಪನವನ್ನು ಮಾಡಲಿ. ಎಲ್ಲಾ ಗುಂಪಿನಿಂದಲೂ ಉತ್ತಮವಾದ ಕತೆಯನ್ನು ವಿದ್ಯಾರ್ಥಿಗಳು ಸೂಚಕಗಳ ಮೂಲಕ ಗುರುತಿಸಲಿ.
- ಪಂಪ ಭಾರತದ ಮಾದರಿ ಕತೆಯನ್ನು ಅಧ್ಯಾಪಕರು ಗಣಕಯಂತ್ರದ ಸಹಾಯದಿಂದ ವಿದ್ಯಾರ್ಥಿಗಳಿಗೆ ತೋರಿಸುವುದು. ಅದನ್ನು ನೋಡಿ ವಿದ್ಯಾರ್ಥಿಗಳು ತಾವು ರಚಿಸಿದ ಕತೆಗಳನ್ನು ಉತ್ತಮಪಡಿಸಿಕೊಳ್ಳಲಿ.
- ಅಧ್ಯಾಪಕರಿಗೆ ಸಹಾಯಕವಾಗುವ ಮಾದರಿ ಕತೆಯನ್ನು ಈ ಕೆಳಗೆ ಕೊಡಲಾಗಿದೆ.

**ಮೌಲ್ಯಮಾಪನ ಸೂಚಕಗಳು**

- ಕಥೆಯ ಪೂರ್ಣತೆ
- ಪಾತ್ರಗಳ ಚಿತ್ರಣ
- ನಿರೂಪಣೆ
- ಶೈಲಿ ಮತ್ತು ಭಾಷಾ ಪ್ರಯೋಗ

# ಪಂಪಭಾರತ ಕಥಾಲೋಕ

ತನ್ನ ಶ್ವೇತಚ್ಛತ್ರ, ಚಾಮರ, ಸಿಂಹಾಸನ ಮೊದಲಾದ ರಾಜಚಿಹ್ನೆಗಳ ಹೊರತು ಸರ್ವಸ್ವವನ್ನೂ ಧರ್ಮಜನು ದಕ್ಷಿಣೆಯಾಗಿ ಕೊಟ್ಟನು. ವ್ಯಾಸ, ಗಾಂಗೇಯ, ವಿದುರ, ಬಾಹ್ಲೀಕ, ಸೋಮದತ್ತ, ಭಗದತ್ತ, ಧೃತರಾಷ್ಟ್ರ, ದ್ರೋಣ, ಅಶ್ವತ್ಥಾಮ, ಕೃಪ ಮೊದಲಾದ ಕುಲವೃದ್ಧರನ್ನೂ, ದುರ್ಯೋಧನ, ದುಶ್ಶಾಸನ, ಕರ್ಣ, ಶಲ್ಯ, ಶಕುನಿಗಳನ್ನು ಯಥೋಚಿತ ದಾನ ಸನ್ಮಾನಗಳಿಂದ ಸತ್ಕರಿಸಿ ಸಂತೋಷಪಡಿಸಿದನು. ಈ ಸಭೆಯಲ್ಲಿ ಅಗ್ರಪೂಜೆಯನ್ನು ಯಾರಿಗೆ ಮಾಡಬೇಕು ದಯವಿಟ್ಟು ತಿಳಿಸಿ ಎಂದು ಧರ್ಮರಾಜನು ಭೀಷ್ಮರನ್ನು ಕೇಳಿದನು. ಭೀಷ್ಮರು ನುಡಿದರು.

'ಬಲಿಚಕ್ರವರ್ತಿಯನ್ನು ಕಟ್ಟಿದವನೂ ಈ ಭೂಮಿಯನ್ನು ಪಾತಾಳದಿಂದ ಎತ್ತಿ ತಂದವನೂ, ನರಸಿಂಹಾಕಾರದಿಂದ ಹಿರಣ್ಯಕಶ್ಯಪನನ್ನು ಸೀಳಿದವನೂ, ಕ್ಷೀರ ಸಾಗರದ ಮಥನ ಕಾಲದಲ್ಲಿ ಮುಳುಗುತ್ತಿದ್ದ ಮಂದರಾಚಲವನ್ನು ಎತ್ತಿ ತಂದವನೂ ಆದ ಈ ಕೃಷ್ಣನೇ ಅಗ್ರಪೂಜೆಯ ಗೌರವಕ್ಕೆ ತಕ್ಕವನು. ಇತರರು ತಕ್ಕವರೇ?'

ಭೀಷ್ಮರ ಮಾತು ಧರ್ಮನ ಮನಸ್ಸಿನ ಮೇಲೆ ಅಚ್ಚೊತ್ತಿತು. ಅವನು ಆನಂದದಿಂದ ಪುರುಷೋತ್ತಮನಿಗೆ ಅರ್ಘ್ಯವನ್ನು ನೀಡಿದನು. ಅದನ್ನು ನೋಡಿ ಸಹಿಸಲಾರದೆ ಮಹಾ ಕ್ರೋಧದಿಂದ ಶಿಶುಪಾಲನು ಪ್ರಳಯ ಜಲಧಿಯಂತೆ ಅಬ್ಬರಿಸಿದನು.

ಛೀ! ತೆಗೆ ತೆಗೆ ಅನರ್ಘ್ಯವಾದ ಅರ್ಘ್ಯವನ್ನು ಹರಿಗೆ ನೀಡಿದೆಯಾ? ನರೆ ತುಂಬಿ. ಡೊಳ್ಳು ಬೆಳೆದು, ದೇವವ್ರತನೆನಿಸಿದ ಈ ಭೀಷ್ಮನಂತೆ ಬೇರೆಯಾವನು ತಾನೆ ಇಂಥ ಸಲಹೆ ಕೊಟ್ಟಾನು? ಕುರುವೃದ್ಧ, ಕುಲವೃದ್ಧ, ಸರಿತ್ಸುತ ಸಲಹೆ ಮಾಡಲು ಅರ್ಹನಾದವನು ಎಂದು ಇಡೀ ಸಭೆಯೇ ನಂಬಿರುವಾಗ ಅದನ್ನು ಕೆಡಿಸಿ ನುಡಿದರೆ ಅದು ಪಕ್ಷಪಾತವೆಂದು ತಿಳಿದುಕೊಳ್ಳದೆ ನೀನು ಹೀಗೆ ವರ್ತಿಸಬಹುದೇ? ನಿನಗೆ ಅಷ್ಟು ಒಲವರವಿದ್ದರೆ ಹರಿಗೆ ನಿನ್ನ ಮನೆಯಲ್ಲಿ ಅಗ್ರಪೂಜೆಯನ್ನು ಕೊಡು, ಬೇಡವೆನ್ನುವವರಾರು? ಯಜ್ಞದಲ್ಲಿ ಇಂಥ ರಾಜರು ತುಂಬಿರುವ ಸಭೆಯಲ್ಲಿ ದುರಾತ್ಮನಾದ ಕೃಷ್ಣನನ್ನು ನೆನೆಯಲೂ ಆಗದು., ಇನ್ನು ಕೇಳುವುದೇನು ಬಂತು? ಅತಿಶಯವಾಗಿ ದಡ್ಡತನ ತುಂಬಿದ ಈ ಹಚ್ಚಹಸಿಗೊಲ್ಲನಿಗೆ ಈ ಹಿರಿಮೆಯನ್ನು ಸಲ್ಲಿಸಿ ನೀನು ಇಷ್ಟು ಜನ ಭೂಪರ ಕೊರಳಿಗೆ ಅಪಮಾನವನ್ನು ಕಟ್ಟಿಬಿಟ್ಟೆಯಲ್ಲ! ದೇವತೆಗಳನ್ನೇ ಅಡಿಗೆರಗಿಸಿ ಸಕಳಾವನೀತಳದ ವೀರನನ್ನು ಸದೆಬಡಿದ ಶೌರ್ಯದ ಗರ್ವದಿಂದ ನಾನಿಲ್ಲಿ ಇರುವಾಗ ಒಬ್ಬ ಸಾಮಾನ್ಯ ಗೋವಳಿಗನಿಗೆ ಅಗ್ರಪೂಜೆಯೇ? ಔಚಿತ್ಯ ಅನೌಚಿತ್ಯಗಳನ್ನು ಅರಿಯದೆ ಹರಿಗೆ ನೀನು ಅರ್ಘ್ಯವಿತ್ತುದರಿಂದ ಈ ನಿನ್ನ ಯಜ್ಞ ಹೇಗಾಯಿತು ಗೊತ್ತೆ? ತೃಪ್ತಿಯಾಗಿ ಅಮೃತವುಂಡು ಗಂಜಳದಿಂದ ಬಾಯಿಮುಕ್ಕುಳಿಸಿದಂತಾಯಿತು. ಕೊಡು ಎಂದು ಹೇಳುವವನೋ,ಕೊಡುವವನೋ,ಕೊಟ್ಟುದನ್ನು ಪಡೆಯುವವನೋ, ಅಹಾಹಾ! ಏನು ಪೆಂಪೋ!!. ಆಗಲಿ, ಅವನು ಕೊಡು ಎನ್ನಲಿ, ಇವರು ಕೊಡಲಿ, ಅದು ಯಾವ ಗಂಡು ತೆಗೆದುಕೊಳ್ಳುತ್ತಾನೋ ನೋಡುತ್ತೇನೆ.

ಇಷ್ಟು ಅಂದು ಅಲ್ಲಿಗೂ ಸುಮ್ಮನಾಗದೆ ಹರಿಯನ್ನು ಉದ್ದೇಶಿಸಿ ಶಿಶುಪಾಲನು ಹೇಳಿದನು.

ಎಲವೋ ಗೊಲ್ಲ,ನಿನ್ನ ಮನೆ ನಂದಗೋಪನ ಮನೆ. ನಿನ್ನ ಹೆಂಡತಿ ದನ ಕಾಯುವವಳು. ನೀನೊಬ್ಬ ಪಚ್ಚಪಸಿಯ ಗೋಪ. ನಿನ್ನ ನಿಲುವನ್ನು ಅರಿತುಕೊಳ್ಳದೆ ವರ್ತಿಸುತ್ತಿದ್ದೀಯೇ. ಮುರನು ನಿನ್ನನ್ನು ಕಟ್ಟಿ ಹಾಕಿದುದನ್ನು ಮರೆತೆಯಾ? ಇದೇ ಭೀಷ್ಮನೇ ಆಗ ನಿನ್ನನ್ನು ಬಿಡಿಸಲಿಲ್ಲವೇ? ಈ ವರೆಗೆ ನನ್ನಂಥವನು ಹುಟ್ಟದೆ ಇದ್ದುದರಿಂದ ದನುಜಾಂತಕ ಎಂಬ ಹೆಸರು ನಿನಗೆ ಸಂದಿದ್ದಿತು ಅಷ್ಟೇ, ಅದು ಇನ್ನು ಮುಂದೆಯೂ ಸಲ್ಲುತ್ತದೆಯೇ? ನಾನಿರುವ ಸಭೆಯಲ್ಲಿ ಅರ್ಘ್ಯವನ್ನು ಪಡೆಯಲು ಹೊರಟ

ನಿನ್ನ ಬಿಸಿರಕ್ತವನ್ನು ಹೀರದೆ ಹೋದರೆ ನನಗೆ ಶಿಶುಪಾಲನೆಂಬ ಹೆಸರು ಶೋಭಿಸುತ್ತದೆಯೇ?

ಮೀನು ಆಮೆ, ಹಂದಿ ಎಂದು ತೆರ ತೆರನಾಗಿ ದೊಂಬರಾಟವಾಡಲು ನೀನು ಬಲ್ಲೆ. ಈಗ ನನ್ನನ್ನು ಎದುರಿಸಿ ನಿಲ್ಲು, ನಿನ್ನನ್ನು ದಿಗ್‌ಬಲಿಗೊಡಲು ನಾನು ಬಲ್ಲೆ. 'ತಿಳಿಯದೆ ಅರ್ಘ್ಯ ಸ್ವೀಕರಿಸಲು ಹೊರಟೆ. ನನ್ನ ತಿಳಿಗೇಡಿತನವನ್ನು ಸಹಿಸಿಕೊ' ಎಂದು ಈಗಲೇ ಈ ಸಭೆಯಲ್ಲಿ ಕಾಲಿಗೆ ಬೀಳು! ನಿನ್ನ ಜೀವ ಉಳಿಸುತ್ತೇನೆ".

ನಿನ್ನ ತಾಯಿ ಸಾತ್ವತಿಯು ಮಗುವಾಗಿದ್ದ ನಿನ್ನನ್ನು ತಂದು ನನ್ನ ತೊಡೆಯ ಮೇಲಿಟ್ಟಾಗ ನಿನ್ನ ಹಣೆಯಲ್ಲಿದ್ದ ಕಣ್ಣು ಮಾಯವಾಯಿತು. ನನ್ನಿಂದಲೇ ನಿನ್ನ ಸಾವು ಎಂಬುದನ್ನು ಅದರಿಂದ ತಿಳಿದುಕೊಂಡ ಅವಳು, ಕೃಷ್ಣ, ಈ ಕಿರಿಯನು ತಿಳಿಯದೆ ನಿನ್ನನ್ನು ಹೀಯಾಳಿಸಿದರೂ ನೂರು ಸಲದವರೆಗೆ ನೀನು ಕ್ಷಮಿಸಬೇಕು ಎಂದು ಕೇಳಿಕೊಂಡಳು. ಅದನ್ನು ನಾನು ಮರೆತಿದ್ದೇನೆಯೇ? ಬಯ್ಯಿ, ನೂರಾಗುವವರೆಗೂ ಬಯ್ಯಿ. ನಾನು ಈಗ ಮುನಿಯಬಾರದು. ಇಲ್ಲಿ ಭೀಷ್ಮರಿದ್ದಾರೆ, ದ್ರೋಣರಿದ್ದಾರೆ, ಪಾಂಡವರಿದ್ದಾರೆ,ದುರ್ಯೋಧನನಿದ್ದಾನೆ. ಈ ಬಲ್ಲವರನ್ನು ಕೇಳು, ಹೇಳುತ್ತಾರೆ.

ಬಾಯಿಗೆ ಬಂದಂತೆ ಬಯ್ಯುತ್ತಿದ್ದ ಶಿಶುಪಾಲನನ್ನು ನೂರರವರೆಗೂ ಸಹಿಸಿ, ಅಲ್ಲಿಯವರೆಗೂ ಕ್ರೋಧ ತಾಳದ ಶ್ರೀಕೃಷ್ಣನು ವಿಪರೀತ ಕ್ರುದ್ಧನಾಗಿ ತನಗೆ ಅರ್ಘ್ಯವಿತ್ತಿದ್ದ ತಳಿಗೆಯನ್ನೆತ್ತಿ ಹೊಡೆಯಲು ಗರಗರನೆ ತಿರುಗುತ್ತಾ ಅದು ಶಿಶುಪಾಲನ ತಲೆಯನ್ನು ಕತ್ತರಿಸಿತು. ಹರಿದ ತಲೆ ತಳಿಗೆಯ ಮೇಲೆ ಕಳಕಳಿಸಿ ನಗುತ್ತಲೇ ಇದ್ದಿತು, ಅವನ ಅದಟು ಅದೇನಚ್ಚರಿಯೋ!

– ಆರ್.ಎಸ್. ಅನಂತರಾಮಯ್ಯ

- ಕಾವ್ಯ ವಾಚನ ರೀತಿಯನ್ನು ಹಾಗೂ ಕತೆಯನ್ನು ಅರಿತಂತಹ ವಿದ್ಯಾರ್ಥಿಗಳು ಕಾವ್ಯವಾಚನ ಪ್ರವಚನ ಚಟುವಟಿಕೆಗಳನ್ನು ಮಾಡಲಿ. ಆದಷ್ಟು ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು ಭಾಗವಹಿಸುವಂತೆ ಮಾಡಲು ಪದ್ಯಭಾಗವನ್ನು ವಿದ್ಯಾರ್ಥಿಗಳಿಗೆ ಹಂಚಿಕೊಟ್ಟು ಕಾವ್ಯವಾಚನ ಮಾಡುವಂತೆ ಅಧ್ಯಾಪಕರು ನೋಡಿಕೊಳ್ಳುವುದು. ಇತರ ವಿದ್ಯಾರ್ಥಿಗಳು ಅದರ ಮೌಲ್ಯ ಮಾಪನವನ್ನು ಮಾಡಿ ತಮ್ಮ ಶೈಲಿಯನ್ನು ಉತ್ತಮಪಡಿಸಿಕೊಳ್ಳಲಿ.
  - ವಾಚನಶೈಲಿ
  - ಪ್ರವಚನದ ಶೈಲಿ
  - ಕತೆಯ ನಿರೂಪಣೆ
  - ವಾಚನದಲ್ಲಿನ ರಾಗತಾಳ

- ತಾಳಿದವನು ಬಾಳಿಯಾನು– ಶಿಶುಪಾಲನ ನಡತೆಗೆ ಅನ್ವಯವಾಗುವುದರ ಕುರಿತು ಟಿಪ್ಪಣಿ.

ವಿದ್ಯಾರ್ಥಿಗಳಿಂದ ಶಿಶುಪಾಲನ ನಡೆತೆಯ ಬಗ್ಗೆ ಬಾಯ್ದೆರೆಯಾಗಿ ಹೇಳಿಸುವುದು. ಈ ಕೆಳಗಿನ ಅಂಶಗಳು ಅದರಲ್ಲಿ ಒಳಗೊಂಡಿರಲಿ.

- ಶಿಶುಪಾಲನಿಗೆ ತನ್ನ ಸಾವು ಶ್ರೀಕೃಷ್ಣನಿಂದಲೇ ಸಂಭವಿಸುವುದು ಎಂಬ ಅರಿವಿತ್ತು.
- ಆದರೂ ಅದನ್ನು ಮೀರಿ ಕೃಷ್ಣನನ್ನು ನಿಂದಿಸುವುದು.

- ತಾಳ್ಮೆ ಕಳೆದುಕೊಂಡ ಕಾರಣ ಶಿಶುಪಾಲನು ನಿಂದಿಸುವುದು
- ಶಿಶುಪಾಲ ನೂರು ತಪ್ಪುಗಳ ವರೆಗಿನ ಕೃಷ್ಣನ ತಾಳ್ಮೆ
- ತಾಳ್ಮೆಗೆಟ್ಟುದರಿಂದ ಶಿಶುಪಾಲನ ಅಂತ್ಯ.

ಅನಂತರ ವಿದ್ಯಾರ್ಥಿಗಳೆಲ್ಲರೂ ಟಿಪ್ಪಣಿಯನ್ನು ತಯಾರಿಸಲಿ. ಗುಂಪಿನಲ್ಲಿ ಉತ್ತಮವಾದುದನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಹಾಯದಿಂದ ಉತ್ತಮಪಡಿಸಿ ತರಗತಿಯಲ್ಲಿನ ಭಿತ್ತಿಪತ್ರಿಕೆಯಲ್ಲಿ ಪ್ರದರ್ಶಿಸಲಿ.

## ಮೌಲ್ಯಮಾಪನ ಸೂಚಕಗಳು

- ಆಶಯ ನಿರೂಪಣೆ
- ವಿಶ್ಲೇಷಣೆ
- ಭಾಷೆ
- ಶೈಲಿ

## ಶಿಶುಪಾಲನ ಪಾತ್ರಚಿತ್ರಣ

ವಿದ್ಯಾರ್ಥಿಗಳು ತಮಗೆ ದೊರೆತ ಕಾವ್ಯಭಾಗ ಹಾಗೂ ಕತೆಯನ್ನು ಆಧರಿಸಿ ಶಿಶುಪಾಲನ ಪಾತ್ರ ಚಿತ್ರಣವನ್ನು ಮಾಡುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಲು ಹೇಳುವುದು.

ಶಿಶುಪಾಲ ಎಂಬ ಹೆಸರಿನ ಔಚಿತ್ಯ– ಹಣೆಗಣ್ಣು ಹೋದ ಬಗ್ಗೆ ಕೃಷ್ಣನಿಂದ ತಾಯಿ ಪಡೆದ ವರ – ರಾಜಸೂಯ ಯಾಗದಲ್ಲಿ ಕೃಷ್ಣನಿಗೆ ಪ್ರಥಮ ಪೂಜೆಯನ್ನು ಕೊಡುವುದರ ಬಗ್ಗೆ ಶಿಶುಪಾಲನು ತೋರಿದ ಅಸಮಾಧಾನ, ಕ್ಷತ್ರಿಯತ್ವದ ಬಗೆಗಿನ ದುರಭಿಮಾನ ಕೃಷ್ಣ – ಗೋವಳ ತನದ ಬಗೆಗಿನ ತಿರಸ್ಕಾರ – ದುರಹಂಕಾರದ ವರ್ತನೆ, ತಾಳ್ಮೆಯಿಲ್ಲದೆ ಶ್ರೀಕೃಷ್ಣನನ್ನು ನಿಂದಿಸಿದುದರ ಬಗ್ಗೆ – ತಳಿಗೆಯಿಂದ ಶ್ರೀಕೃಷ್ಣನು ಶಿಶುಪಾಲನ ಶಿರಸ್ಸನ್ನು ತುಂಡರಿಸಿದರೂ ಆತನ ರುಂಡದಲ್ಲಿನ ಕಣ್ಣುಗಳಲ್ಲಿದ್ದ ಅದಟುತನ.

ವಿದ್ಯಾರ್ಥಿಗಳು ಪಾತ್ರ ಚಿತ್ರಣವನ್ನು ಗಣಕಯಂತ್ರದಲ್ಲಿ ಛಾಪಿಸಿ, ಹಿನ್ನೆಲೆಯಲ್ಲಿ ಶಿಶುಪಾಲ ವಧೆಯ ಚಿತ್ರದೊಂದಿಗೆ ತರಗತಿಯಲ್ಲಿ ಪ್ರದರ್ಶಿಸಲಿ. ಉತ್ತಮವಾದುದನ್ನು ವಿದ್ಯಾರ್ಥಿಗಳೇ ನಿರ್ಧರಿಸಲಿ.

**ಮೌಲ್ಯಮಾಪನ ಸೂಚಕಗಳು**

- ವ್ಯಕ್ತಿತ್ವ ನಿರೂಪಣೆ
- ಸಮಗ್ರತೆ
- ಶೈಲಿ
- ಭಾಷೆ

### ಹಳೆಗನ್ನಡದ ಗದ್ಯಭಾಗವನ್ನು ಹೊಸಗನ್ನಡಕ್ಕೆ ರೂಪಾಂತರಿಸುವುದು

ಅರ್ಥ ವಿವರಣೆ ಹಾಗೂ ಪದ ವಿಂಗಡಣೆಯನ್ನು ಆಧಾರವಾಗಿಟ್ಟುಕೊಂಡು ಹೊಸಗನ್ನಡಕ್ಕೆ ರೂಪಾಂತರಿಸುವುದು. ಪ್ರತಿಯೊಂದು ತಂಡವೂ ಗಣಕಯಂತ್ರದ ಸಹಾಯದಿಂದ ಪವರ್ ಪೋಯಿಂಟ್‌ನಲ್ಲಿ ಅಚ್ಚೊತ್ತಿ ತರಗತಿಯಲ್ಲಿ ಮಂಡಿಸಲಿ.

**ಮೌಲ್ಯಮಾಪನದ ಸೂಚಕಗಳು**

- ಅರ್ಥವತ್ತಾದ ವಾಕ್ಯರಚನೆ
- ಸಮಗ್ರತೆ
- ಹೊಸಗನ್ನಡ ಭಾಷೆ

### ಛಂದಸ್ಸು

ಮತ್ತೇಭವಿಕ್ರೀಡಿತ ವೃತ್ತ ಹಾಗೂ ಕಂದ ಪದ್ಯದ ನಾಲ್ಕೂ ಸಾಲುಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು ವಿದ್ಯಾರ್ಥಿಗಳ ಪ್ರತಿಯೊಂದು ಗುಂಪಿನವರು ಒಂದೊಂದು ಸಾಲನ್ನು ಆಯ್ದುಕೊಂಡು ಕರಿಹಲಗೆಯಲ್ಲಿ ಗುರು ಲಘುಗಳನ್ನು ಗುರುತಿಸಲಿ. ಅನಂತರ ಅದೇ ಗುಂಪುಗಳ ಇತರ ಸದಸ್ಯರು ಪಠ್ಯ ಪುಸ್ತಕದಲ್ಲಿ ಕೊಟ್ಟಿರುವ ಮತ್ತೇಭವಿಕ್ರೀಡಿತ ವೃತ್ತ ಮತ್ತು ಕಂದ ಪದ್ಯದ ಛಂದೋ ನಿಯಮವನ್ನು ಅನುಸರಿಸಿ ಗಣ ವಿಭಾಗವನ್ನು ಮಾಡಲಿ. ಪಠ್ಯ ಪುಸ್ತಕವನ್ನು ಗಮನಿಸದೆ, ಛಂದೋ ನಿಯಮವನ್ನು ಕಂಡುಕೊಂಡು ಬಾಯ್ದೆರೆಯಾಗಿ ಹೇಳಲಿ. ಪ್ರತಿಯೊಂದು ಗುಂಪಿನವರು ಬೇರೆ ಬೇರೆ ನಾಲ್ಕು ನಾಲ್ಕು ಮತ್ತೇಭವಿಕ್ರೀಡಿತ ಹಾಗೂ ಕಂದ ಪದ್ಯದ ಸಾಲುಗಳನ್ನು ಆಯ್ದುಕೊಂಡು ಅದನ್ನು ಪ್ರಸ್ತಾರ ಹಾಗೂ ಗಣ ವಿಭಾಗಗಳೊಂದಿಗೆ ಚಾರ್ಟು ಪೇಪರಿನಲ್ಲಿ ಬರೆದು ತರಗತಿಯಲ್ಲಿ ಪ್ರದರ್ಶಿಸಲಿ.

### ಭಾಷಾಭ್ಯಾಸ

ಪಠ್ಯಭಾಗದಲ್ಲಿ ಕೊಟ್ಟಿರುವ ಪದಗಳಿಗೆ ಪರ್ಯಾಯ ಪದಗಳನ್ನು ವಿದ್ಯಾರ್ಥಿಗಳೆಲ್ಲರೂ ಅರ್ಥಕೋಶದ ಸಹಾಯದಿಂದ ಬರೆದಿಟ್ಟುಕೊಳ್ಳಲಿ. ಅತಿ ಹೆಚ್ಚು ಪರ್ಯಾಯ ಪದಗಳನ್ನು ಬರೆದ ವಿದ್ಯಾರ್ಥಿಯಿಂದ ಕರಿಹಲಗೆಯಲ್ಲಿ ಬರೆಯಿಸುವುದು. ಸೂಕ್ತವೆನಿಸಿದ ಕಡೆ ಅಧ್ಯಾಪಕರು ತಿದ್ದಿ ಸರಿಪಡಿಸುವುದು ಅದನ್ನು ಇತರ ವಿದ್ಯಾರ್ಥಿಗಳೂ ಬರೆದಿಟ್ಟುಕೊಳ್ಳುವಂತೆ ಸೂಚಿಸುವುದು.

ದೈತ್ಯ : ಅಸುರ, ದನುಜ, ದಾನವ, ರಾಕ್ಷಸ

ತುರುಕಾರ : ಗೊಲ್ಲ, ಗೋಪಾಲಕ, ಗೋವಳ

ಶರ : ಬಾಣ, ಅಂಬು, ಕಣೆ, ಸಾಯಕ

ಕೃಷ್ಣ (ವಿ) : ನೀಲ, ಅಸಿತ, ಶ್ಯಾಮ, ಕಾಲ, ಶ್ಯಾಮಲ, ಕಪ್ಪು

ಆಕಾಶ : ನಭ, ಅಂಬರ, ವಿಯತ್, ದಿವಾ, ತಾರಾಪಥ, ಗಗನ.

ಕೃಷ್ಣ (ನಾ) : ಮುಕುಂದ, ಮುರಾರಿ, ಶೌರಿ, ದಾನವಾಂತಕ, ಗೋಪಾಲ.

## ತದ್ಧಿತ ಪ್ರತ್ಯಯಗಳು

ಪಾಠದಲ್ಲಿ ಕೊಟ್ಟಿರುವ ತದ್ಧಿತ ಪ್ರತ್ಯಯಗಳಿಂದ ಕೂಡಿದ ಪದಗಳನ್ನು ಗುಂಪುಗಳಲ್ಲಿ ಪಟ್ಟಿ ಮಾಡಲು ಹೇಳುವುದು. ಪಟ್ಟಿ ಮಾಡಿದ ಪದಗಳನ್ನು ಒಂದೊಂದೇ ಗುಂಪಿನವರು ಓದಲಿ. ತಮ್ಮ ಗುಂಪಿನಲ್ಲಿ ಬರೆಯದೆ ಇರುವ ಪದಗಳನ್ನು ಬರೆದಿಟ್ಟುಕೊಳ್ಳಲಿ. ಈ ಪದಗಳನ್ನುಪಯೋಗಿಸಿ ವಾಕ್ಯಗಳನ್ನು ಬರೆದು ತಮ್ಮ ಲೋಗ್ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲಿ.

ವಂತ – ಮಡಿವಂತ, ಹಣವಂತ, ಗುಣವಂತ, ಆರೋಗ್ಯವಂತ

ಗಾರ – ಸಾಲಗಾರ, ಮಾಲೆಗಾರ, ಮಾತುಗಾರ, ಬರಹಗಾರ

ಇಗ – ಕನ್ನಡಿಗ, ಕಬ್ಬಿಗ, ಸಾಲಿಗ, ಊಳಿಗ, ನಾಡಿಗ, ಕೇಡಿಗ

ತನ – ಸಿರಿತನ, ಬಡತನ, ದೀವಾಳಿತನ, ಗಂಡಸುತನ

ವಳ – ಗೋವಳ, ಹಡಪವಳ

ಕಾರ – ಓಲೆಕಾರ , ಹರಿಕಾರ, ಗುರಿಕಾರ

**ವಿ.ಸೂ:** ಪಠ್ಯಭಾಗದ ಆರಂಭದಲ್ಲಿ ಬಂದ 'ವಾಳಿ' ಎಂಬ ಪ್ರತ್ಯಯವನ್ನು 'ವಂತ' ಎಂದು ತಿದ್ದುಪಡಿ ಮಾಡಿಕೊಳ್ಳುವುದು.

## ಸಂಧಿ

ಸವರ್ಣದೀರ್ಘಸಂಧಿಯ ನಿಯಮವನ್ನು ಪಠ್ಯಭಾಗದಲ್ಲಿ ಗಮನಿಸಿದ ವಿದ್ಯಾರ್ಥಿಗಳು ಸವರ್ಣದೀರ್ಘ ಸಂಧಿಯಾಗುವ ಪದಗಳನ್ನು ಪಟ್ಟಿ ಮಾಡಲಿ. ಗುಂಪಿನಲ್ಲಿ ಕೂತು ಸರಿಪಡಿಸಿಕೊಳ್ಳಲಿ. ಗುಂಪಿಗೊಬ್ಬರಂತೆ ಕರಿಹಲಗೆಯಲ್ಲಿ ಸಂಧಿ ವಿಂಗಡಿಸಿ ಪದವನ್ನು ಬರೆಯಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸಲಿ.

ಉದಾ: ಅಮರಾರಿ, ಅಸುರಾರಿ, ದ್ರೋಣಾಶ್ವತ್ಥಾಮ, ಮಂದರಾಚಲ, ಸನ್ಮಾನಾದಿ, ದನುಜಾಂತಕ, ಮನುಜಾಧೀಶ್ವರ, ಸಕಳಾವನಿತಳ, ಗೀರ್ವಾಣಾರಿ, ಶೌರ್ಯಾವಷ್ಟಂಭ.

## ಸಂಸ್ಕೃತ – ತದ್ಭವ

ಸಂಸ್ಕೃತ ಪದಗಳನ್ನು ಪಠ್ಯಭಾಗದಿಂದ ಆಯ್ದು ಬರೆಯಲು ಹೇಳುವುದು. ಅದಕ್ಕೆ ಪದಕೋಶದ ಸಹಾಯದಿಂದ ತದ್ಭವ ಪದಗಳನ್ನು ಬರೆದುಕೊಳ್ಳುವುದು. ಅತೀ ಹೆಚ್ಚು ಪದಗಳನ್ನು ಸಂಗ್ರಹಿಸಿ ಬರೆದ ವಿದ್ಯಾರ್ಥಿಯು ಅಧ್ಯಾಪಕರ ತಿದ್ದುಪಡಿಯ ಬಳಿಕ ತಖ್ತೆಯೊಂದನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಲಿ.

ಇತರ ವಿದ್ಯಾರ್ಥಿಗಳು ಅದರ ಆಧಾರದಲ್ಲಿ ತಾವು ಸಂಗ್ರಹಿಸಿದ ಸಂಸ್ಕೃತ–ತದ್ಭವ ಪದಗಳನ್ನು ಸರಿಪಡಿಸಿಕೊಳ್ಳಲಿ.

| ಸಂಸ್ಕೃತ | ತದ್ಭವ |
|---|---|
| ಸಿಂಹ | ಸಿಂಗ |
| ಯಮ | ಜವ |

| | |
|---|---|
| ಯಶ | ಜಸ |
| ಯಜ್ಞ | ಜನ್ನ |
| ಮೃತ್ಯು | ಮಿಮ್ತಿ |
| ಆಕಾಶ | ಆಗಸ |
| ವಸತಿ | ಬಸದಿ |
| ಕಾರ್ಯ | ಕಜ್ಜ |
| ಮುಖ | ಮೊಗ |
| ಕ್ರಕಚ | ಗರಗಸ |

**ವಚನ :** ಧವಳಚ್ಛತ್ರ – ಬೆಳ್ಗೊಡೆ, ಅಗ್ರಪೂಜೆಗೆ – ಪ್ರಥಮಪೂಜೆಗೆ, ಆರ್ ತಕ್ಕರೆನೆ – ಯಾರು ಯೋಗ್ಯರು ಎನ್ನಲು,

ಬಲಿಯಂ ಕಟ್ಟಿದನಾವನ್ – ಬಲಿಚಕ್ರವರ್ತಿಯನ್ನು ಕಟ್ಟಿದವನು ಯಾವನೋ, ಈ ಧರಣಿಯಂ – ಈ ಭೂಮಿಯನ್ನು, ವಿಕ್ರಾಂತದಿಂದಂ – ಪರಾಕ್ರಮದಿಂದ, ರಸಾತಲದಿಂದೆತ್ತಿದನಾವಂ – ಪಾತಾಳದಿಂದ ಎತ್ತಿದವನು ಯಾವನೋ, ಅಂದು – ಹಿಂದೆ, ಪೂರ್ವ ಕಾಲದಲ್ಲಿ , ನರಸಿಂಹಕಾರದಿಂ – ನರಸಿಂಹನ ರೂಪದಿಂದ, ದೈತ್ಯನಂ – ರಾಕ್ಷಸನಾದ ಹಿರಣ್ಯಕಶಿಪುವನ್ನು, ಚಲದಿಂ – ಹಠದಿಂದ,ಸೀಳ್ದವನಾವನ್ – ಸೀಳಿದವನು ಯಾವನೋ, ಅಬ್ಧಿಮಥನ ಪ್ರಾರಂಭದೊಳ್ ಸಮುದ್ರಮಥನ ಕಾರ್ಯದಲ್ಲಿ, ಮಂದರಾಚಳಮಂ ಮಂದರ ಪರ್ವತವನ್ನು, ತಂದವನಾವಂತಂದವನು ಯಾವನೋ, ಆತನೆ – ಆತನೇ, ವಲಂ – ದಿಟವಾಗಿಯೂ, ತಕ್ಕಂ – ಯೋಗ್ಯನು, ಪೆರರ್‌ತಕ್ಕರೇ –ಇತರರು ಯೋಗ್ಯರೇ? ಅಲ್ಲ.

**ವಚನ :** ಮನದೊಳಚ್ಚೊತ್ತಿದಂತೆ – ಮನಸ್ಸಿನಲ್ಲಿದ್ದನೇ, ಅಚ್ಚೊತ್ತಹಾಗೆ, ಮನದೆ ಗೊಂಡು – ಮನಸ್ಸಿಗೆ ತಂದುಕೊಂಡು, ಒಪ್ಪಿ, ಪುರುಷೋತ್ತಮಂಗೆ – ಶ್ರೀಕೃಷ್ಣನಿಗೆ, ಅರ್ಘ್ಯಮೆತ್ತಿದಾಗಳ್ – ಅಗ್ರತೀರ್ಥವನ್ನೆತ್ತಿದಾಗ.

**ಶಿಶುಪಾಲವಧೆಯ ಪ್ರಸಂಗ :** ಶಿಶುಪಾಲಂ – ಶಿಶುಪಾಲನು, ಮುಳಿದು – ಕೆರಳಿ, ಆ ಸಭೆಯೊಳಗೆ – ಆ ಸಭೆಯಲ್ಲಿ, ಮಹಾಪ್ರಳಯ ಜಲಧಿನಾದದಿಂ – ಮಹಾಪ್ರಳಯ ಕಾಲದ ಸಮುದ್ರಘೋಷದಿಂದ, ಇರದೆ – ಇದ್ದೆಡೆಯಲ್ಲಿ ಇರದೆ, ಉಚ್ಚಳಿಸಿ – ಮೇಲಕ್ಕೆ ನೆಗೆದು, ಧರ್ಮಸುತ – ಧರ್ಮರಾಜನೇ, ಹರಿಗೆತ್ತಿದ – ಕೃಷ್ಣನಿಗೆ ಎತ್ತಿದ, ಅನರ್ಘ್ಯಾರ್ಘ್ಯಮಂ – ಅಮೂಲ್ಯವಾದ ಅಗ್ರೋದಕವನ್ನು, ತೆ–ಚಿ:, ಕಳೆಕಳೆ – ತೆಗೆತೆಗೆ ಎಂದು, ನುಡಿದಂ – ಕರ್ಕಶವಾಗಿ ಮಾತನಾಡಿದನು. ಇಲ್ಲಿ ತೆ ಎಂಬ ನಿಪಾತ, ಜಿಗುಪ್ಸಾಸೂಚಕ, ನಿವಾರಣಾರ್ಥಕ, ತುಂಬಿ ಪೀರ್ವವೋಲೇಂ ಪೀರ್ದಪುದೇ ಕಡಂದುಱುತೆ ನವ್ಯಾಮೋದಮಂ ಪೂಗಳೊಳ್ ಎಂದು ರುದ್ರಭಟ್ಟನ ಪ್ರಯೋಗ.

ಮನದೆ – ಮನಸ್ಸಿನಲ್ಲಿ, ಒಲವರಮುಳ್ಳೊಡೆ – ಪಕ್ಷಪಾತವಿದ್ದರೆ, ಹರಿಗೆ – ಕೃಷ್ಣನಿಗೆ, ಅಗ್ರಪೂಜೆಯಂ – ಮೊದಲ ಪೂಜೆಯನ್ನು, ಮನೆಯೊಳ್ – ಮನೆಯಲ್ಲಿ, ಕುಡು – ಕೊಡು, ಯಜ್ಞದೊಳ್ – ಯಜ್ಞದಲ್ಲಿ, ಈ ಮನುಜಾದೀಶ್ವರ ಸಭೆಯೊಳ್ – ಈ ನೆರೆದ ರಾಜರ ಸಭೆಯಲ್ಲಿ, ದುರಾತ್ಮನಂ – ದುಷ್ಟನನ್ನು (ಕೃಷ್ಣನನ್ನು), ನೆನೆಯಲುಂ – ನೆನೆದುಕೊಳ್ಳುವುದಕ್ಕೆ ಕೂಡ, ಆಗದು – ಆಗುವುದಿಲ್ಲ. ಬೆಸಗೊಳ್ಪಾ – ಅವನನ್ನು ಕೇಳುತ್ತಿಯೋ?

ಎಗ್ಗು–ದಡ್ಡತನ, ಅಳವರಿಯದೆ–ಪ್ರಮಾಣವನ್ನು ತಿಳಿಯದೆ, ಬಳವಳ–ಅತಿಶಯವಾಗಿ,ಬಳೆವಿನೆಗಂ–ಬೆಳೆಯುತ್ತಿರಲು, ಪಚ್ಚಪಸಿಯ ತುಱುಕಾಱಂಗೆ –ಹಸಿಹಸಿ ದನಕಾಯುವವನಿಗೆ, ಅಗ್ಗಳಿಕೆಯನೆ–ಶ್ರೇಷ್ಠತೆಯನ್ನೇ,ಮಾಡಿ –ಉಂಟುಮಾಡಿ, ನೀನುಂ–ನೀನು ಕೂಡ, ಭೂಪರಿನಿಬರ–ಇಷ್ಟು ಜನ ರಾಜರ, ಕೊರಲೊಳ್–ಕೊರಳಿನಲ್ಲಿ , ಪ (ಱಿ) ಯಂ–ನಿಂದೆಯನ್ನು, ಕಟ್ಟಿದೆಯೋ–ಕಟ್ಟಿದ್ದೀಯೇ. ಈ ಪದ್ಯದಲ್ಲಿ ಕುಳ ಱ ಕಾರ ಪ್ರಾಸ ಬಂದು, ಪ್ರಾಸದ ನಿಯಮ ಸಡಿಲವಾಗಿದೆ. ಇದು ಕ್ವಚಿತ್ತಾದ ಪ್ರಯೋಗವೆಂದು ಭಾವಿಸಬೇಕು. ಈ ತೆರನ ಪ್ರಾಸಭಂಗಕ್ಕೆ ಆದಿ ಪುರಾಣವನ್ನು ನೋಡಬಹುದು.

ದೇವರನಡಿಗೆಱಗಿಸಿ – ದೇವತೆಗಳನ್ನು ಪಾದಕ್ಕೆ ನಮಸ್ಕರಿಸುವಂತೆ ಮಾಡಿ, ಸಕಳಾವನಿತಳದದಟರಂ–ಸಮಸ್ತ ಭೂಮಂಡಲದ ಶೂರರನ್ನು, ಪಡಲ್ವಡಿಸಿದ –ಚೆಲ್ಲಾಪಿಲ್ಲಿಆಗಿ ಬೀಳಿಸಿದ, ಶೌರ್ಯಾವಷ್ಟಂಭದೊಳ್–ಪ್ರತಾಪದ ಗರ್ವದಿಂದ, ಅನಿರೆ–ನಾನು ಇರಲು, ಗೋವಳಿಗಂಗೆ–ಗೋಪಾಲನಿಗೆ, ದನಗಾಹಿಗೆ, ಅಗ್ರಪೂಜೆಯಂ–ಪ್ರಥಮ ಪೂಜೆಯನ್ನು, ನೀಂ ಕುಡುವಾ–ನೀನುಕೊಡುತ್ತಿಯೋ?

ಸಮಕಟ್ಟಱಿಯದೆ–ಸರಿಯಾದ ವ್ಯವಸ್ಥೆಯನ್ನು ತಿಳಿಯದೆ, ಹರಿಗೆ–ಕೃಷ್ಣನಿಗೆ, ಅರ್ಘ್ಯಮೆತ್ತಿ–ಅರ್ಘ್ಯ ತೀರ್ಥವನ್ನು ಎತ್ತಿಕೊಂಡು, ನಿಂದಿರ್ದ–ನಿಂತಿದ್ದ, ಯಜ್ಞಮದು–ಆ ಯಜ್ಞ, ಮೊದಲೊಳ್–ಆರಂಭದಲ್ಲಿ, ತಾನಮರ್ದುಂ–ತಾನು ಸರಿಯಾಗಿಯೇ ಸೇರಿಕೊಂಡು ಬಂದರೂ, ಈಗ, ಅಮರ್ದಂ–ಅಮೃತವನ್ನು, ತಣಿಯುಂಡು–ತೃಪ್ತಿಯಾಗಿ ಊಟಮಾಡಿ, ಗೋಮೂತ್ರದಿಂದೆ–ಗಂಜಳದಿಂದ, ಬಾಯ್ವೂಸಿದವೋಲ್–ಬಾಯಿಗೆ ಬಳಿದ ಹಾಗೆ, ಅಗರ್ದಿರದೆ–ಹೊಂದಿಕೊಂಡು ಇರುವುದಿಲ್ಲವಲ್ಲ?

ಕುಡವೇೞ್ವಿನ (ಅಗ್ರಪೂಜೆಯನ್ನು) ಕೊಡಲು ಹೇಳುವವನ, ಕುಡುವನ –ಕೊಡುವವನ, ಕುಡೆ–ಕೊಡಲು, ಪಡೆವನ – ಪಡೆಯುವವನ, ಪೆಂಪು–ಹಿರಿಮೆ, ಏಂ ನೆಗೞ್ತೆವಡೆಗುಮೊ–ಏನು ಕೀರ್ತಿಯನ್ನು ಪಡೆಯುತ್ತದೋ? ಪೇೞ್ವಿಂ– ಹೇಳುವವನು, ಕುಡವೇೞ್ಗೆಮ–ಕೊಡುವಂತೆ ಹೇಳಲಿ, ಕುಡುವ–ಕೊಡುವ, ಅಣ್ಣಂ–ಅಣ್ಣನು, ಕುಡುಗೆಮ–ಕೊಡಲಿ, ಕುಡೆ–ಕೊಡಲು, ಕೊಳ್ವ–ಸ್ವೀಕರಿಸುವ, ಕಲಿಯಂ–ಶೂರನನ್ನು, ಅರಿಯಲ್ಕಕ್ಕುಂ–ತಿಳಿಯುವುದಾಗುತ್ತದೆ. ಯಾವನು ಸ್ವೀಕರಿಸುತ್ತಾನೋ ಆ ಶೂರನನ್ನು ನೋಡಿಕೊಳ್ಳುತ್ತೇನೆ. ಇಲ್ಲಿ ಅಣ್ಣಂ ಎಂಬುದು ತಿರಸ್ಕಾರಾರ್ಥದಲ್ಲಿ ಬಳಸಿದೆ. ಪೌರುಷಯುಕ್ತವಾದ ಅಚ್ಚ ದೇಸೀ ಶೈಲಿ.

**ವಚನ** : ಅನಿತಱೊಳ್ – ಅಷ್ಟರಲ್ಲಿ , ಮಾಣದೆ–ಬಿಡದೆ, ಗೀರ್ವಾಣಾರಿ–ಶಿಶುಪಾಲನು, ಅಸುರಾರಿಯಂ–ಶ್ರೀಕೃಷ್ಣನನ್ನು, ಇಂತೆಂದಂ:

ನಿನಗೆ ಮನೆ ನಂದ ಗೋಪಾಲನ ಮನೆ: ಮನೆವೆಂಡತಿ–ಮನೆಯ ಹೆಂಡತಿ, ತುಱುಗಾರ್ತಿ–ದನಕಾಯುವವಳು, ಪಚ್ಚನೆ ಪಸಿಯ ಗೋವನಯ್–ಹಚ್ಚ ಹಸಿಯ ಗೊಲ್ಲನಾಗಿದ್ದೀಯೆ, ಕರಂ–ವಿಶೇಷವಾಗಿ, ಅನಯದೆ–ದುರ್ನೀತಿಯಿಂದ, ನಿನ್ನಳವಿಗೆ–ನಿನ್ನ ಯೋಗ್ಯ ತೆಗೆ, ಶಕ್ತಿಗೆ, ಅಳವನರಿಯದೆ–ಅಳತೆಯನ್ನು ತಿಳಿಯದೆ, ನೆಗೞ್ದೆ–ಮಾಡಿದ್ದೀಯೆ, ನಡೆದುಕೊಂಡಿದ್ದೀಯೆ.

ಮುರಂ–ಮುರನೆಂಬ ರಾಕ್ಷಸ, ಅಡಸಿ ಪಡಿದು–ಮೇಲೆಬಿದ್ದು ಹಿಡಿದು, ಕಟ್ಟಿದ–ಕಟ್ಟಿಹಾಕಿದ, ಪರಿಭವಮಂ–ಅವಮಾನವನ್ನು, ಮಱೆ (ದ) ಮರೆತೆಯೋ? ನಿನ್ನ ಪೆಡಯ್ದಟ್ಟಂ– ನಿನ್ನ ಹಿಂಗಟ್ಟು ಮುರಿಯನ್ನು, ಸರಿತ್ಸುತಂ–ಭೀಷ್ಮ, ಶರದಿಂ–ಬಾಣದಿಂದ, ಬಿಡಿಸಿದ ನಲ್ಲವೆ–ಬಿಡಿಸಿದಾತನಲ್ಲವೇ? ಇನ್ನವು–ಇಂಥವು, ಬನ್ನ–ಭಂಗ, ಎಂಬುದು–ಎನ್ನುವುದು ಒಳವೇ–ಉಂಟೇ?

ಎಲವೋ–ಎಲೋ, ದನುಜಾಂತಕನೆಂಬ–ರಾಕ್ಷಸರಿಗೆ ಮೃತ್ಯು ಎನ್ನುವ, ನಿನ್ನನಚ್ಚುವೋದ–ನಿನ್ನ ನಂಬಿಕೆಗೆ ಪಾತ್ರವಾದ, ಅಂಕಂ–ಹೆಸರು, ಎನ್ನನ್ನಂ–ನನ್ನಂಥವನು, ಮುನ್ನಂ–ಮೊದಲು, ಪುಟ್ಟಿದೆ–ಹುಟ್ಟಿದೆ, ನಿನಗೆ, ಸಂದುದು–ಪ್ರಾಪ್ತವಾಯಿತು. ಈ ಪೆಸರ್– ಈ ಹೆಸರು, ಎನ್ನ ಮುಂದೆಯುಂ–ನನ್ನೆದುರಿಗೂ, ಸಂದಪುದೇ–ಸಲ್ಲುತ್ತದೆಯೇ?

ಅನಿರ್ದ ಸಭೆಯೊಳ್–ನಾನು ಇದ್ದ ಸಭೆಯಲ್ಲಿ, ಅರ್ಘ್ಯಮನಾನಲ್ಕೆ–ಅಗ್ರಪೂಜೆಯನ್ನು ಸ್ವೀಕರಿಸುವುದಕ್ಕೆ, ಆಟಿಸಿದ–ಬಳಸಿದ , ನಿನ್ನ ಬಿಸುನೆತ್ತರಂ–ಬಿಸಿರಕ್ತವನ್ನು, ಇಂತೀನೆರವಿ–ಹೀಗೆ ಈ ಸಭೆ, ನೋಡೆ–ನೋಡುತ್ತಿರಲು, ಕುಡಿಯದೊಡೆ–ಕುಡಿಯದೆ ಇದ್ದರೆ,ಏನೋ, ಶಿಶುಪಾಲನೆಂಬ–ಶಿಶುಪಾಲ ಎನ್ನುವ, ಪೆಸರ್–ಹೆಸರು, ಎಸೆದಪುದೇ–ಶೋಭಿಸುತ್ತದೆಯೇ? ಇಲ್ಲ.

ಮೀನಾವೆ ಪಂದಿಯೆಂದು –ಮತ್ಸ್ಯಕೂರ್ಮವರಾಹಗಳ ಅವತಾರವೆಂದು, ಎನಿತಾನುಂ ತೆಱನಾಗಿ–ಎಷ್ಟೋ ಬಗೆಯಾಗಿ, ಡೊಂಬವಿದ್ದೆಯನಾಡಲ್–ಡೊಂಬರ ವಿದ್ಯೆಯನ್ನು ತೋರಿಸುವುದಕ್ಕೆ , ನೀಂ–ನೀನು, ಅಱಿವೆ – ತಿಳಿಯುತ್ತೀಯೆ, ಉಱದೆ–ಇರದೆ, ಇದಿರ್ಚಿದೊಡೆ–ಎದುರಿಸಿದರೆ, ನಿನ್ನಂ–ನಿನ್ನನ್ನು,ಇಲ್ಲಿ ದೆಸೆವಲಿಗೈಯಲ್–ದಿಗ್ಬಲಿಯನ್ನ ಕೊಡಲು, ಅನವಱಿವೆಂ–ನಾನು ಬಲ್ಲೆ. ಅಱಿಯದೆ ಇದಂ ಮಾಡಿದೆಂ–ತಿಳಿಯದೆ ಇದನ್ನು ಮಾಡಿದೆ, ಎನ್ನ–ನನ್ನ, ಅಱಿಯಮಿಕೆಗೆ–ತಿಳಿಗೇಡಿತನಕ್ಕೆ , ಸೈರಿಸು–ಸಹಿಸು, ಎಂದು–ಎಂದು ಹೇಳಿ, ನೀನ್–ನೀನು, ಸಭೆಯೊಳ್–ಸಭೆಯಲ್ಲಿ, ಕಾಲ್ಗೆ–ನನ್ನ ಕಾಲುಗಳಿಗೆ, ಎಱಗೆಱಗು–ಬಾಗು, ಬಾಗು, ಕೊಲ್ಲೆನ್–ನಾನುಕೊಲ್ಲುವುದಿಲ್ಲ ಎಂದು, ಎರ್ದೆ–ಎದೆ, ತೆಱಿವಿನೆಗಂ–ಬಿರಿಯುತ್ತಿರಲು, ಹರಿಯ–ಕೃಷ್ಣನ, ನೆಱನಂ–ಮರ್ಮಸ್ಥಾನವನ್ನು, ಅಸುರಂ–ರಾಕ್ಷಸ ಶಿಶುಪಾಲ, ನುಡಿದಂ–ಎತ್ತಿ ಆಡಿದನು. ಅಱಿಯಮಿಕೆ (ಅಱಿ+ಅಮೆ+ಇಕೆ), ಪ್ರತಿಷೇಧಾರ್ಥದ ಭಾವನಾಮ.

**ವಚನ :** ಎವೆ ಮಿಡುಕದೆ–ಕಣ್ಣರೆಪ್ಪೆ ಆಡಿಸದೆ, ಪಂದೆಯಂ ಪಾವಡರ್ದಂತೆ – ಹೇಡಿಯನ್ನು ಹಾವು ಹತ್ತಿದಂತೆ, ಎಂದರೆ ಭಯದಿಂದ, ಉಸಿರಿದರೆ – ಮಾತಾಡದಿರಲು.

**ಶ್ರೀಕೃಷ್ಣನ ಮಾತು :** ನಿನ್ನಯ ತಾಯ್– ನಿನ್ನ ತಾಯಿ, ಸಾತ್ವತಿಯುಂ–ಸಾತ್ವತಿಯೂ, ನಿನ್ನಂ ತಂದು– ನಿನ್ನನ್ನು ತಂದು, ಎನ್ನ ತೊಡೆಯ ಮೇಲೆ – ನನ್ನ ತೊಡೆಗಳ ಮೇಲೆ, ಇಟಿಪುವುದುಂ – ಇಳಿಸುತ್ತಲೂ, ಎಂದರೆ ತೊಡೆಯ ಮೇಲೆ ನಿನ್ನನ್ನು ಇಡಲು, ನಿನ್ನ ಲಲಾಟದ –ನಿನ್ನ ಹಣೆಯ, ಕಣ್ಣದು–ಆ ಕಣ್ಣು, ಮುನ್ನವೇ ಕಿಡೆ–ಮೊದಲೇ ನಷ್ಟವಾಗಲು, ನಿನ್ನ ಮೃತ್ಯು–ನಿನ್ನ ಸಾವು, ಎನ್ನಯ ಕರ್ಯ್ಯೊಳ್–ನನ್ನ ಕೈಯಲ್ಲಿ.

ನೆರೆದುದಂ – ತುಂಬಿರುವುದನ್ನು ಎಂದರೆ ನಿನ್ನ ಸಾವು ನನ್ನ ಕೈವಶವೆಂಬುದನ್ನು: ಅರಿದು–ತಿಳಿದು, ಈ ಕಿಟಿಯವಂ–ಈ ಚಿಕ್ಕವನು, ಅಟಿಯದೆ–ತಿಳಿಯದೆ, ಕೆಡೆನುಡಿದನಪ್ಪೊಡಂ–ತಿರಸ್ಕರಿಸಿ ಮಾತಾಡಿದರು ಕೂಡ. ಎಂದರೆ ಬೀಳ್ನುಡಿಗಳನ್ನಾಡಿದರೂ ನೂರುವರಂ– ನೂರರ ವರೆಗೆ, ಎಂದರೆ ನೂರು ಬಯ್ಗುಳಗಳಾವುವವರೆಗೆ; ನೆರೆ ಸಲಿಸುವುದು–ಪೂರ್ಣವಾಗಿ ಅವಕಾಶ ಕೊಡುವುದು, ಎಂದುದಂ–ಎಂದು ಹೇಳಿದ್ದನು, ಆ ಮಟಿವೆನೆ–ನಾನು ಮರೆಯುತ್ತೇನೆಯ, ಬಯ್–ಬೇಕಾದಷ್ಟು ಬಯ್ಯಿ, ಬಯ್ಯೆ–ಬಯ್ಯಲು, ನೂಱುವರಂ–ನೂರು ಬೈಗುಳಗಳವರೆಗೂ, ಸಲಿಸುವೆಂ–ಸಲ್ಲಿಸುತ್ತೇನೆ.

ಮುನಿಯಲ್ ಎನಗೆ–ಸಿಟ್ಟು ಮಾಡಿಕೊಳ್ಳಬೇಡ, ನನ್ನ ಮೇಲೆ: ಆಗ– ಆ ಸಮಯದಲ್ಲಿ, ಗಾಂಗೇಯನಿರ್ದಂ–ಭೀಷ್ಮನಿದ್ದನು. ಇರ್ದಂ ಘಟೋದ್ಭವಂ–ದ್ರೋಣನಿದ್ದನು. ನೆಗಳ್ದಿ ಪೃಥಾತನುಜುರುಂ– ಪ್ರಸಿದ್ಧರಾದ ಪೃಥೆಯ ಮಕ್ಕಳೂ ಎಂದರೆ ಪಾಂಡವರೂ,

ಇರ್ದರ್–ಇದ್ದರು, ದುರ್ಯೋಧನನಿರ್ದಂ–ದುರ್ಯೋಧನನು ಇದ್ದನು, ಆ ಬಲ್ಲವರುಂ–ಆ ತಿಳಿದವರೂ, ಕೇಳೆ–ಕೇಳಲು, ಪೇೞ್ವಿರ್–ಹೇಳುತ್ತಾರೆ, ಇಲ್ಲಿ ಮುನಿಯಲ್ (ಮುನಿ+ಅಲ್) ಎಂಬಲ್ಲಿನ ಅಲ್‌ಪ್ರತ್ಯಯ ಪ್ರತಿಷೇದಾರ್ಥದಲ್ಲಿ ಬಂದಿದೆ.

ಎನೆಯನೆ–ಎನ್ನಲೆನ್ನಲು, ಎಂದು ಹೇಳುತ್ತಿರಲು, ಬಾಯ್ಗಂ ಬಂದನಿತುಮಂ–ಬಾಯಿಗೆ ಬಂದಷ್ಟನ್ನೂ, ಅಮರಾರಿ–ರಾಕ್ಷಸ,ಶಿಶುಪಾಲ ಬಯ್ಯೆ–ಬಯ್ಯಲು, ನೂಱೆಂಬನಿತುವರಂ–ನೂರು ಎಂಬಷ್ಟರವರೆಗೂ, ಸೈರಿಸಿ–ಸಹಿಸಿ, ಮನ್ನಿಸಿ–ಕ್ಷಮಿಸಿ, (ಆ ಮೇಲೆ) ನಸುಕಿನಿಸದೆ–ಸ್ವಲ್ಪ ಕೋಪಿಸಿಕೊಳ್ಳದೆ, ಮಿಗೆಕಿನಿಸಿ–ಅತಿಶಯವಾಗಿ ಕೆರಳಿ, ದಿತಿಜ ಕುಳದವದಹನಂ–ದೈತ್ಯಕುಲಕ್ಕೆ ಕಾಡುಗಿಚ್ಚಾದ ಶ್ರೀಕೃಷ್ಣ.

ಮುಳಿದು–ಕೋಪಿಸಿ, ತನಗರ್ಘ್ಯಮೆತ್ತಿದ–ತನಗೆ ಅರ್ಘ್ಯಕ್ಕಾಗಿ ಎತ್ತಿದ ತಳಿಗೆಯೊಳಿಡೆ–ತಟ್ಟೆಯನ್ನು ಬೀಸಿ ಹೊಡೆಯಲು, ತಿಱಿದ ತೆರದೆ–ಕತ್ತರಿಸಿದ ರೀತಿಯಿಂದ, ತಲೆ ಪರಿದು–ತಲೆ ತುಂಡಾಗಿ, ಆಗಲ್–ಆಗ, ತಳಿಗೆಯ ಮೇಲೆ –ತಟ್ಟೆಯ ಮೇಲುಗಡೆ,ಕಳಕಳಿಸಿ–ಕಳಕಳ ಎಂದು ಕೂಗುತ್ತಾ,ನಗುತ್ತಂ,ಇರ್ದುದು–ಇತ್ತು, ಅಸುರನ–ರಾಕ್ಷಸನ, ಅದಟು–ಪರಾಕ್ರಮ, ಇದೇನಚ್ಚರಿಯೋ–ಇದೇನಾಶ್ಚರ್ಯವೋ!

# ಶ್ರೀಮತಿ ಸ್ವಯಂವರ

ಮುದ್ದಣ

## ಪ್ರವೇಶ

ಕನ್ನಡ ಸಾಹಿತ್ಯದ ಆರಂಭದ ಕಾಲಘಟ್ಟದಲ್ಲಿ ಚಂಪೂ ಸಾಹಿತ್ಯವೇ ವಿಪುಲವಾಗಿ ಬೆಳೆದು ಬಂದದ್ದನ್ನು ಕಾಣುತ್ತೇವೆ. ಅದರಲ್ಲಿ ಪದ್ಯಗಳದು ಹೆಚ್ಚಿನ ಪಾಲು. ಅಲಂಕಾರ ವರ್ಣನೆಗಳಿಂದ ಕೂಡಿದ ಛಂದೋಬದ್ಧವಾದ ರಚನೆಗಳವು. ಸಂಸ್ಕೃತ ಪದಗಳ ಆಧಿಕ್ಯವಿರುವ ಪ್ರೌಢ ಶೈಲಿಯಲ್ಲಿ ಆ ಕೃತಿಗಳು ರಚನೆಯಾದದ್ದನ್ನು ನೋಡಬಹುದು. ಹಳೆಗನ್ನಡ ನಡುಗನ್ನಡ ಕಾಲಘಟ್ಟದಲ್ಲಿ ಚಂಪೂ, ವಚನ, ಷಟ್ಪದಿ, ಕೀರ್ತನೆ, ಸಾಂಗತ್ಯ ಮೊದಲಾದ ವಿವಿಧ ಸಾಹಿತ್ಯ ಪ್ರಕಾರಗಳು ರಚಿತವಾದುವು. ಹಾಡುವುದಕ್ಕೆ ಅನುಕೂಲಕರವಾದ ರಚನೆಗಳೂ ಇವುಗಳಲ್ಲಿ ಸಾಕಷ್ಟಿವೆ. ಇವೆಲ್ಲವುಗಳಿಗಿಂತ ಭಿನ್ನವಾದ ಗದ್ಯ ರಚನೆಗಳಾಗಿ ವಡ್ಡಾರಾಧನೆ, ಚಾವುಂಡರಾಯ ಪುರಾಣ, ಕೆಂಪುನಾರಾಯಣನ ಮುದ್ರಾಮಂಜೂಷದಂತಹ ಕೃತಿಗಳು ಗಮನ ಸೆಳೆಯುತ್ತವೆ. ಮೈಸೂರಿನ ದೊರೆಗಳು ಗದ್ಯ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಟ್ಟದ್ದನ್ನು ನೆನಪಿಸಬಹುದು. (ಉದಾ: ಚಿಕುಪಾದ್ಯಾಯ, ಚಾಮರಾಜ, ಮುಮ್ಮಡಿ ಕೃಷ್ಣರಾಜ ಮೊದಲಾದವರು) “ಹೊಸಗನ್ನಡದ ಮುಂಗೋಳಿ” ಎಂಬ ಕೀರ್ತಿಗೆ ಪಾತ್ರನಾದ ಮುದ್ದಣನು ಈ ದೃಷ್ಟಿಯಿಂದ ಹೆಸರಿಸಲೇಬೇಕಾದ ಕವಿ. ಈತನು ಪದ್ಯಂ ವಧ್ಯಂ, ಗದ್ಯಂ ಹೃದ್ಯಂ ಎಂದು ಗದ್ಯದ ಮಹತ್ತ್ವವನ್ನು ಘೋಷಿಸಿ ಹಳೆಗನ್ನಡ ಗದ್ಯ ಶೈಲಿಯಲ್ಲಿ ರಸಿಕ ಜನರು ಮೆಚ್ಚುವಂತೆ ಕೃತಿ ರಚನೆ ಮಾಡಿದನು. ಹಳೆಗನ್ನಡ ಗದ್ಯಕೃತಿಯೊಂದರ ಪರಿಚಯ ಮಾಡುವುದೇ ಪ್ರಸ್ತುತ ಪಾಠದ ಉದ್ದೇಶವಾಗಿದೆ.

## ಪೂರ್ವಜ್ಞಾನ

ವಿದ್ಯಾರ್ಥಿಗಳ ಪೂರ್ವಜ್ಞಾನ ಪರೀಕ್ಷೆಗಾಗಿ ಕನ್ನಡ ಸಾಹಿತ್ಯದಲ್ಲಿ ಹೆಸರಾಂತ ಗದ್ಯ ಕವಿಗಳ ಬಗೆಗೆ ಕೆಲವು ಪ್ರಶ್ನೆಗಳನ್ನು ಕೇಳುವುದು. ಹೊಸಗನ್ನಡದ ಪ್ರಸಿದ್ಧ ಗದ್ಯ ಕೃತಿಗಳ/ಕೃತಿಕಾರರ ಬಗೆಗೆ ಪ್ರಶ್ನಿಸಬಹುದು. ಹೊಸಗನ್ನಡ ಕಾಲದ ಗದ್ಯ ಸಾಹಿತ್ಯದ ಶೈಲಿಗೆ ಸಂಬಂಧಿಸಿ ವಿದ್ಯಾರ್ಥಿಗಳು ಈಗಾಗಲೇ ತಿಳಿದಿರುವರು.

## ಕವಿ ಪರಿಚಯ

ಮುದ್ದಣ ಕವಿಯು ಹೊಸಗನ್ನಡ ಆರಂಭಕಾಲದಲ್ಲಿ ಬಾಳಿ ಬದುಕಿದ ಕವಿ. ಹಳೆಗನ್ನಡ ಭಾಷೆಯಲ್ಲಿ ಕೃತಿ ರಚನೆ ಮಾಡಿ ಸಾಹಿತ್ಯದ ಸೊಗಸನ್ನು ರಸಿಕರಿಗೆ ನೀಡಿದವನು. ‘ಕರಿಮಣಿ ಸರದೊಳ್‌ಚೆಂಬವಳಮಂ ಕೋದಂತೆ’ ಎಂದು ಕನ್ನಡದೊಂದಿಗೆ ಸಂಸ್ಕೃತವನ್ನು ಬೆರಸಿ ಹೇಳುವುದರ ಬಗ್ಗೆ ತನ್ನದೇ ಧೋರಣೆಯನ್ನು ತಾಳಿ ಕೃತಿ ರಚನೆ ಮಾಡಿದವನು. ಅವನು ಬರೆದ ಗದ್ಯ ಕೃತಿಗಳು ಎರಡು. ಒಂದು ಅದ್ಭುತ ರಾಮಾಯಣ, ಇನ್ನೊಂದು ರಾಮಾಶ್ವಮೇಧ. ಮುದ್ದಣನು ಗಂಭೀರವಾದ ಶೈಲಿಯಲ್ಲಿ ಸರಸ ಸಂಭಾಷಣೆಯನ್ನೂ, ಹಾಸ್ಯ ಪ್ರಸಂಗಗಳನ್ನೂ ರಚಿಸುವುದರಲ್ಲಿ ಚತುರನು. ತಿಳಿಯಾದ ಗದ್ಯ ಶೈಲಿಯಲ್ಲಿ, ಚಿಕ್ಕ ಚಿಕ್ಕ ವಾಕ್ಯಗಳ ಪ್ರಯೋಗಗಳಿಂದ ಕೂಡಿದ ಅದ್ಭುತ ರಾಮಾಯಣವು ಒಂದು ಉತ್ತಮ ಗದ್ಯ ಕಾವ್ಯವಾಗಿದೆ.

ಅದ್ಭುತ ರಾಮಾಯಣದಲ್ಲಿ ರಾಮನಿಗಿಂತಲೂ ಸೀತೆಗೆ ಹೆಚ್ಚಿನ ಪ್ರಧಾನ್ಯವಿದೆ. ದಶಕಂಠ ರಾವಣನನ್ನು ಜಯಿಸಿದ ರಾಮನಿಗೆ ಸಹಸ್ರಕಂಠ ರಾವಣನೊಡನೆ ಯುದ್ಧವು ಕಠಿಣವಾಗಿ ಪರಿಣಮಿಸಿದಾಗ ಸೀತೆ ಅದ್ಭುತ ರೂಪವನ್ನು ತಾಳಿ ಆ ದೈತ್ಯನನ್ನು ಸಂಹಾರಮಾಡಿದುದನ್ನು ವರ್ಣಿಸಿರುವುದರಿಂದ ಈ ಗ್ರಂಥಕ್ಕೆ 'ಅದ್ಭುತ ರಾಮಾಯಣ' ಎಂಬ ಹೆಸರು ಸಾರ್ಥಕವಾಗಿದೆ.

ಪ್ರಸ್ತುತ ಪಾಠಭಾಗದಲ್ಲಿ ಅದ್ಭುತ ರಾಮಾಯಣದಿಂದ ಆಯ್ದ ಒಂದು ಭಾಗವಿದೆ. ಅಯೋಧ್ಯೆಯ ರಾಜನಾದ ಅಂಬರೀಷನ ಮಗಳಾದ ಶ್ರೀಮತಿಯ ಸೌಂದರ್ಯಕ್ಕೆ ಮಾರುಹೋದ ಋಷಿಗಳಿಬ್ಬರು (ನಾರದ ಮತ್ತು ಪರ್ವತ ಮುನಿಗಳು) ಪರಸ್ಪರರನ್ನು ವಂಚಿಸಿ ಹೋಗಿ ತಾವೇ ವಂಚನೆಗೊಳಗಾದ ಸನ್ನಿವೇಶವು ಇಲ್ಲಿ ಬಹಳ ಸ್ವಾರಸ್ಯಕರವಾಗಿ ಮೂಡಿಬಂದಿದೆ.

ಗದ್ಯಭಾಗವನ್ನು ಅಧ್ಯಾಪಕರು ಸೂಕ್ತ ಸ್ವರಭಾರದೊಂದಿಗೆ ಗಟ್ಟಿಯಾಗಿ ಓದುವುದು/ಬಳಿಕ ಆಯ್ದು ವಿದ್ಯಾರ್ಥಿಗಳು ಸ್ಪಷ್ಟ ಉಚ್ಚಾರದೊಂದಿಗೆ ಗಟ್ಟಿಯಾಗಿ ಓದಲಿ. ಓದುವ ಸರದಿ ಎಲ್ಲರಿಗೂ ದೊರಕಲಿ ಬಳಿಕ ಅರ್ಥದ ಗ್ರಹಿಕೆಗಾಗಿ ಅಗತ್ಯವೆನಿಸಿದಲ್ಲಿ ಪದಗಳನ್ನು ವಿಂಗಡಿಸಿ ಬರೆದು ಕೊಳ್ಳಲಿ. ಕಠಿಣ ಪದಗಳ ಅರ್ಥಗಳನ್ನು ಶಬ್ದಕೋಶದ ಸಹಾಯದಿಂದ ಕಂಡುಕೊಳ್ಳಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸುವುದು.

ಪಾಠಭಾಗದ ಆಶಯವನ್ನು ವಿದ್ಯಾರ್ಥಿಗಳು ಗ್ರಹಿಸಿಕೊಂಡಿರುವುದನ್ನು ದೃಢಪಡಿಸಲು ಕೆಲವು ಪ್ರಶ್ನೆಗಳನ್ನು ಕೇಳುವುದು

- ಅಂಬರೀಷನು ತನ್ನ ಮಗಳ ಮದುವೆಗೆ ಪಟ್ಟಣವನ್ನು ಹೇಗೆ ಅಲಂಕರಿಸಬೇಕೆಂದು ಆಣತಿಯಿತ್ತನು?
- ಸ್ವಯಂವರ ಮಂಟಪಕ್ಕಾಗಮಿಸಿದ ಮಗಳಿಗೆ ಅಂಬರೀಷನು ನೀಡಿದ ಸೂಚನೆಯೇನು?
- ಸ್ವಯಂವರಕ್ಕೆ ಆಗಮಿಸಿದ ಮುನಿಗಳನ್ನು ನೋಡಿ ಶ್ರೀಮತಿಯು ಮೌನವಾಗಿರಲು ಕಾರಣವೇನು?
- ಹೀಗೆ ಇಡೀ ಪಾಠಭಾಗದಿಂದ ಪ್ರಶ್ನೆಗಳನ್ನು ಕೇಳುವುದು.

ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರಿಸಲು

## ಹೊಸಗನ್ನಡಕ್ಕೆ ರೂಪಾಂತರ

ಬಳಿಕ ವಿದ್ಯಾರ್ಥಿಗಳನ್ನು ಕೆಲವು ಗುಂಪುಗಳಾಗಿ ವಿಂಗಡಿಸುವುದು. ಪಾಠದ ಒಂದೊಂದು ಭಾಗವನ್ನು ಒಂದೊಂದು ಗುಂಪಿಗೆ ನೀಡಿ ಅದನ್ನು ಹೊಸಗನ್ನಡ ಗದ್ಯ ರೂಪದಲ್ಲಿ ಬರೆಯುವಂತೆ ತಿಳಿಸುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಬರೆದುಕೊಳ್ಳಲಿ. ಬರೆದ ಭಾಗವನ್ನು ತರಗತಿಯಲ್ಲಿ ಓದಲಿ. ಪ್ರತಿಯೊಂದು ಗುಂಪಿನವರೂ ತಾವು ಬರೆದುದನ್ನು ಮಂಡಿಸಲಿ. ಅಧ್ಯಾಪಕರು ಅಗತ್ಯವಿದ್ದಲ್ಲಿ ಸೂಚನೆಗಳನ್ನು ನೀಡುವುದು. ಬಳಿಕ ಯೋಗ್ಯ ತಿದ್ದುಪಡಿಗಳೊಂದಿಗೆ ಇಡೀ ಪಾಠಭಾಗದ ಹೊಸಗನ್ನಡ ಅನುವಾದವನ್ನು ವಿದ್ಯಾರ್ಥಿಗಳು ತಮ್ಮ ಟಿಪ್ಪಣಿ ಪುಸ್ತಕದಲ್ಲಿ ಬರೆದುಕೊಳ್ಳಲಿ.

## ಸಂಭಾಷಣೆಯ ರೂಪದಲ್ಲಿ ಬರೆಯುವುದು.

ಪಾಠಭಾಗದಲ್ಲಿ ಮುನಿಗಳು ಮತ್ತು ಸಿರಿಯರಸನ ನಡುವೆ ನಡೆದ ಮಾತುಕತೆಯ ಭಾಗವಿದೆ. ಅದನ್ನು ಸಂಭಾಷಣೆಯ ರೂಪದಲ್ಲಿ ಬರೆಯಲಿ.

ನಾರದಂ : "ದೇವ, ಇಂದೆಮಗಿರ್ವರ್ಗುಂ ಒಳ್ನುಡಿಯನೊಪ್ಪಂಬೂಸಿದೈ! ಇಂತೆಮ್ಮನಱಿಸಿ ಬಱಿಲಿಸಲ್ವಹುದೆ? ನಿಶ್ಚಯಂ ನೀನೆ ಆ ಪೆಣ್ಣಂ ಕಳ್ದು ತಂದವಂ. ಚಿ! ವಿಶ್ವಾಸ ಘಾತಕಮನಾರ್ಗುಮೆಸಗಬಾರದು.

ಸಿರಿಯರಸಂ : ಇನ್ನೆಗಂ ನೀಂ .ಯೋಗ್ಯನೆಂದೆಣಿಸಿರ್ದೆಂ ಈಗಳ್ ಸೊರ್ಕಿ ನೀನೆಂತಾನುಂ ಗಱಿಪುವುದಂ ಕಾಣುತೆ ಋಷಿ ಸ್ವಭಾವವೆನಿತುಂ ಲಕ್ಷಿಸೆಂ.

ಹೀಗೆ ಮುಂದುವರಿಸಿ ಬರೆಯಲಿ ಅಗತ್ಯವೆನಿಸಿದಲ್ಲಿ ಅಧ್ಯಾಪಕರು ಸೂಚನೆಗಳನ್ನು ನೀಡುವುದು.

## ಸನ್ನಿವೇಶ ಚಿತ್ರಣ

ಶ್ರೀಮತಿಯ ಸ್ವಯಂವರಕ್ಕಾಗಿ ಪಟ್ಟಣವನ್ನೆಲ್ಲ ಶೃಂಗರಿಸಿದ ವಿಚಾರವಾಗಿ ವಿದ್ಯಾರ್ಥಿಗಳು ಓದಿರುವರು. ಹಾಗೆಯೇ ಊರ ಜಾತ್ರೆ ಮುಂತಾದ ಸಂದರ್ಭಗಳಲ್ಲಿ ತಮ್ಮ ಊರಿನಲ್ಲಿ ಅಲಂಕರಿಸಿರುವುದನ್ನು ವಿದ್ಯಾರ್ಥಿಗಳು ನೋಡುತ್ತಿರುತ್ತಾರೆ. ಅಂತಹ ಯಾವುದಾದರೊಂದು ಸನ್ನಿವೇಶದ ಚಿತ್ರಣವನ್ನು ಬರೆಯುವಂತೆ ವಿದ್ಯಾರ್ಥಿಗಳಿಗೆ ಸೂಚಿಸುವುದು. ಅವರು ತಾವು ಬರೆದ ಚಿತ್ರಣವನ್ನು ತರಗತಿಯಲ್ಲಿ ಮಂಡಿಸಲಿ.

## ಭಾಷಾಭ್ಯಾಸ

### ವಿಗ್ರಹ ವಾಕ್ಯ

**ಮಂಡಪ ತೋರಣ ಧ್ವಜ ಪತಾಕೆಗಳು :** ಈ ಪದವನ್ನು ಮಂಟಪವೂ ತೋರಣವೂ ಧ್ವಜವೂ ಪಾತಕೆಯೂ ಎಂಬಂತೆ ವಿಗ್ರಹವಾಕ್ಯ ಮಾಡುವುದು. ಮಂಟಪಗಳೂ ಧ್ವಜವೂ ಪತಾಕೆಗಳೂ ಎಂದೂ ವಿಗ್ರಹವಾಕ್ಯ ಮಾಡಬಹುದು. ಹೀಗೆ ಹಲವು ಪದಗಳು ಸೇರಿ ಒಂದು ಸಮಾಸವಾದರೆ ಅದನ್ನು ದ್ವಂದ್ವ ಸಮಾಸ ಎನ್ನುವರು.

ಇಂತಹ ಇನ್ನಷ್ಟು ಪದಗಳನ್ನು ವಿದ್ಯಾರ್ಥಿಗಳು ಪತ್ಯ ಭಾಗದಿಂದ ಆಯ್ದುಕೊಂಡು ಬರೆಯಲಿ. ಉದಾ: ರಾಮಲಕ್ಷ್ಮಣರು, ಮರಗಿಡ ಬಳ್ಳಿಗಳು, ತಳಿರು ತೋರಣಗಳು.

ವಿದ್ಯಾರ್ಥಿಗಳು ಪದಗಳ ವಿಗ್ರಹ ವಾಕ್ಯವನ್ನು ತರಗತಿಯಲ್ಲಿ ಬಾಯ್ದೆರೆಯಾಗಿ ಹೇಳಲಿ. ಹೇಳಿದ ಬಳಿಕ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

### ಕಾಲ ಸೂಚಕ ಪ್ರತ್ಯಯ

ದ, ದಪ, ವ – ಇವುಗಳು ಹಳೆಗನ್ನಡದ ಕಾಲಸೂಚಕ ಪ್ರತ್ಯಯಗಳು. ಇಂತಹ ಪ್ರತ್ಯಯಗಳು ಸೇರಿಕೊಂಡಿರುವ ಪದಗಳನು ಆಯ್ದು ಅವುಗಳಲ್ಲಿ ಸೇರಿಕೊಂಡಿರುವ ಪ್ರತ್ಯಯಗಳನ್ನು ವಿದ್ಯಾರ್ಥಿಗಳು ವಿಂಗಡಿಸಿ ಹೇಳಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸುವುದು. ಬಳಿಕ ವಿದ್ಯಾರ್ಥಿಗಳು ತಮ್ಮ ಟಿಪ್ಪಣಿ ಪುಸ್ತಕದಲ್ಲಿ ಬರೆದುಕೊಳ್ಳಲಿ. ಮಾರ್ನುಡಿದಳ್, ಎಂದರಿಪಿದಳ್, ಬಯಸಿದಪಳ್ ಮುಂತಾದ ಪದಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಇಲ್ಲಿರುವ ಕಾಲ ಸೂಚಕ ಪ್ರತ್ಯಯಗಳನ್ನು ಗುರುತಿಸುವಂತೆ ವಿದ್ಯಾರ್ಥಿಗಳಿಗೆ ಹೇಳುವುದು. ಸರಿಯಾಗಿ ಗುರುತಿಸಿ ಹೇಳಿದ ಬಳಿಕ ಅವರು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

## ಬಹುವಚನ ಪ್ರತ್ಯಯ

'ಅರ್' ಎಂಬುದು ಬಹುವಚನ ಪ್ರತ್ಯಯವಾಗಿದೆ. ಸಹಚರಿಯರ್, ಪೂಜ್ಯರ್ ಇಂತಹ ಪದಗಳು ಬಹುವಚನ ಪ್ರತ್ಯಯಗಳು ಸೇರಿದ ಪದಗಳಾಗಿವೆ. ವಿದ್ಯಾರ್ಥಿಗಳು ಪಠ್ಯಪುಸ್ತಕದ ಸಹಾಯದಿಂದ ಇನ್ನಷ್ಟು ಪದಗಳನ್ನು ಆಯ್ದುಕೊಂಡು ಪಟ್ಟಿ ಮಾಡಲಿ. ಅಲ್ಲಿರುವ ಬಹುವಚನ ಪ್ರತ್ಯಯಗಳನ್ನು ಗುರುತಿಸಿ ಬಾಯ್ದೆರೆಯಾಗಿ ಹೇಳಲಿ. ಹೇಳಿದ ಪದಗಳನ್ನು ಇನ್ನೊಂದು ಗುಂಪಿನ ವಿದ್ಯಾರ್ಥಿಗಳು ಕರಿಹಲಗೆಯಲ್ಲಿ ಬರೆಯಲಿ, ಎಲ್ಲಾ ಪದಗಳನ್ನು ಬರೆದಾದ ಬಳಿಕ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

(ಸೂಚನೆ: ಸರಿಮಿಗಿಲೆನಿಪರ್ ಎಂಬಲ್ಲಿರುವ ಅರ್ ಆಖ್ಯಾತವಿಭಕ್ತಿಯಾಗಿದೆ)

## ಹಳೆಗನ್ನಡದ ವಿಭಕ್ತಿ ಪ್ರತ್ಯಯಗಳು

ಹೊಸಗನ್ನಡದಲ್ಲಿ ಬಳಕೆಯಾಗುವ ವಿಭಕ್ತಿ ಪ್ರತ್ಯಯಗಳ ಬಗೆಗೆ ವಿದ್ಯಾರ್ಥಿಗಳು ಈಗಾಗಲೇ ತಿಳಿದುಕೊಂಡಿರುತ್ತಾರೆ. ಹಳೆಗನ್ನಡದಲ್ಲಿ ಬಳಕೆಯಾಗುತ್ತಿದ್ದ ವಿಭಕ್ತಿ ಪ್ರತ್ಯಯಗಳು ಇಲ್ಲಿವೆ.

| | | | | |
|---|---|---|---|---|
| ಅಂಬರೀಷಂ | – | ಮ್ | – | ಪ್ರಥಮಾ ವಿಭಕ್ತಿ |
| ಅರಮನೆಯಂ | – | ಅಮ್ | – | ದ್ವಿತೀಯಾ ವಿಭಕ್ತಿ |
| ಪತಾಕೆಗಳಿಂ | – | ಇಂ | – | ತೃತೀಯಾ ವಿಭಕ್ತಿ |
| ಪಿತಂಗೆ | – | ಕೆ/ಗೆ | – | ಚತುರ್ಥೀ ವಿಭಕ್ತಿ |
| ಅಂತಿರ್ಪನ | – | ಅ | – | ಷಷ್ಠೀ ವಿಭಕ್ತಿ |
| ಮಂಡಪದೊಳ್ | – | ಒಳ್ | – | ಸಪ್ತಮಾ ವಿಭಕ್ತಿ |

ಇಲ್ಲಿ ಕೆಲವು ಪದಗಳನ್ನು ಕೊಡಲಾಗಿದೆ.

ಗಂಧೋದಕದಿಂ, ಕಪಟಮಂ, ತನ್ನ, ಎಲ್ಲೆಡೆಗಳಿಂ, ಗಡುವಿಂಗೆ, ಮಂಟಪಕ್ಕೆ, ಇಂತಹ ಪದಗಳನ್ನು ವಿದ್ಯಾರ್ಥಿಗಳು ಆಯ್ದು ಪಟ್ಟಿ ಮಾಡಿಕೊಳ್ಳಲಿ.

ಅವುಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆದುಕೊಳ್ಳಲಿ. ಬರೆದ ಪ್ರತ್ಯಯಗಳನ್ನು ತರಗತಿಯಲ್ಲಿ ಓದಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸಹಕರಿಸುವುದು. ಬಳಿಕ ಮಕ್ಕಳು ತಮ್ಮ ಲಾಂಗ್ ಪುಸ್ತಕದಲ್ಲಿ ಬರೆದು ಕೊಳ್ಳಲಿ.

## ಸಂಸ್ಕೃತ–ತದ್ಭವ ಪದಗಳು

ಕೆಲವು ಸಂಸ್ಕೃತ ಪದಗಳ ತದ್ಭವ ರೂಪವನ್ನು ಪಠ್ಯ ಪುಸ್ತಕದಲ್ಲಿ ಕೊಡಲಾಗಿದೆ. ಇನ್ನೂ ಕೆಲವು ಪದಗಳ ತದ್ಭವ ರೂಪಗಳನ್ನು ವಿದ್ಯಾರ್ಥಿಗಳಿಂದ ಹೇಳಿಸುವುದು. ಪದಗಳು–ಶೃಂಗಾರ, ಶ್ರೀ, ಆಶ್ಚರ್ಯ, ಕನ್ಯಾ, ಮುಖ ಇಂತಹ ಸಂಸ್ಕೃತ ಪದಗಳನ್ನು ಪಠ್ಯ ಪುಸ್ತಕದಿಂದ ಆಯ್ದು ಪಟ್ಟಿಮಾಡಿಕೊಳ್ಳಲಿ. ಅವುಗಳ ತದ್ಭವ ರೂಪವನ್ನು ಬರೆಯಲಿ. ಬರೆದ ಪದಗಳನ್ನು ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಹೇಳಲಿ. ಬಳಿಕ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

## ಹೊಸಕನ್ನಡ ಅನುವಾದ

ಆಲಿಸೈ ಮುನಿಶ್ರೇಷ್ಠನೆ, ಅತ್ತ ಅಂಬರೀಷನು ತನ್ನ ಮಗಳ ಸ್ವಯಂವರಕ್ಕಾಗಿ ಪಟ್ಟಣದ ಎಲ್ಲಾ ಭಾಗಗಳನ್ನು ಮಂಟಪ, ತಳಿರು,ತೋರಣ, ಧ್ವಜ ಪತಾಕೆಗಳಿಂದ ಶೃಂಗರಿಸುವಂತೆಯೂ, ಬೀದಿಗಳನ್ನು ಪರಿಮಳದ್ರವ್ಯವನ್ನೂ ಸಿಂಪಡಿಸಿ , ರಂಗವಲ್ಲಿಗಳನ್ನಿಟ್ಟು, ಹೂ ಗೊಂಚಲಗಳನ್ನು ಕಟ್ಟಿ ಸೊಗಸಾಗಿ ಕಾಣುವಂತೆಯೂ, ಅರಮನೆಯನ್ನು ನವರತ್ನಗಳಿಂದ ಅಲಂಕರಿಸುವಂತೆಯೂ ಆಜ್ಞೆಮಾಡಿ ಉಳಿದ ಸಿದ್ಧತೆಗಳಲ್ಲಿ ತೊಡಗಿಕೊಂಡರು.

ಹಾಗೆ ಶೋಭಿಸುವ ನಾಡಿನ ಸೌಂದರ್ಯವನ್ನು ಕಾಣುತ್ತ ಇಬ್ಬರು ರಿಸಿಗಳು ಸಂತೋಷದಿಂದ ಹೇಳಿದ ಸಮಯಕ್ಕೆ ಸರಿಯಾಗಿ ಬರುತ್ತಿರಲು, ರಾಜನು ಅವರನ್ನು ಸ್ವಾಗತಿಸಿ,ಗೌರವಿಸಿ ಸ್ವಯಂವರ ಮಂಟಪಕ್ಕೆ ಕರೆತಂದನು. ಮಗಳಲ್ಲಿ ಎಲೆ ಬಾಲೆ, ಇವರಿಬ್ಬರಿಗೂ ನಿನ್ನನ್ನು ಬಯಸಿದ್ದಾರೆ. ಆದರೆ ಹೆಣ್ಣೊಬ್ಬಳು ಒಬ್ಬನಿಗಲ್ಲದೆ ಇಬ್ಬರಿಗೆ ಸಲ್ಲಳು. ಆದುದರಿಂದ ನೀನು ಯಾರನ್ನು ಇಷ್ಟಪಡುವೆಯೋ ಅವರಿಗೇ ನಿನ್ನನ್ನು ಕೊಡುವೆನು. ಇವರಿಬ್ಬರಲ್ಲಿ ಯಾರಾಗಬಹುದೋ ಅವರ ಕೊರಳಿಗೆ ಈ ಹೂಮಾಲೆಯನ್ನು ಹಾಕು ಎಂದು ಹೇಳಿದನು.

ತಂದೆಯ ಅಪ್ಪಣೆಯನ್ನು ಶಿರಸಾವಹಿಸಿದ ಮಗಳು ಸ್ವಲ್ಪ ನಾಚಿಕೆಯಿಂದ ಕೈಯಲ್ಲಿ ಹೂಮಾಲೆಯನ್ನು ಹಿಡಿದುಕೊಂಡು ಹೆಣ್ಣಾನೆಯಂತೆ ಸಹಚರಿಯರೊಂದಿಗೆ ಮೆಲ್ಲನೆ ಅವರಿಬ್ಬರ ಸಮೀಪಕ್ಕೆ ಬಂದು ತನ್ನ ಕಣ್ಣಕಾಂತಿಯನ್ನು ಅವರ ಮೇಲೆ ಹರಿಸಿ ಸ್ವಲ್ಪ ಯೋಚಿಸಿ ಮತ್ತೆ ನೆಲವನ್ನೇ ನೋಡುತ್ತ ಮಾತನಾಡದಿದ್ದಳು. ಬಾಲೆಯು ಹೀಗೆ ಸುಮ್ಮನೆ ನಿಲ್ಲಲು ಕಂಡ ರಾಜನು

"ಮಗಳೆ ಏನು? ಬೇರೇನೂ ಯೋಚಿಸದಿರು, ಇಬ್ಬರೂ ಬ್ರಹ್ಮನಿಗೆ ಸರಿ ಮಿಗಿಲಾದವರು. ಮಹಾದೇವನ ಹಾಗೆ ಮಹಿಮೆಯುಳ್ಳವರು. ಶ್ರೀಮನ್ನಾರಾಯಣನಂತೆ ಸೊಗಸುಳ್ಳವರು. ಸಾಮಾನ್ಯ ಋಷಿಗಳಲ್ಲ ಸ್ವಲ್ಪವೂ ಸಂಶಯವಿಲ್ಲದೆ ಇವರಲ್ಲಿ ಮನಸ್ಸಿಗೆ ಮೆಚ್ಚಿಕೆಯಾದವನನ್ನು ಒಲಿಸಿಕೋ" ಎಂದು ಹೇಳಿದಾಗ ಆ ಬಾಲೆಯು ಹೆದರಿ ತಂದೆಗೆಂದಳು "ಅಪ್ಪಾ! ನೀನು ಹೇಳಿದ ಹಾಗೆ ಋಷಿಗಳಾರೂ ಕಾಣಿಸುತ್ತಿಲ್ಲ. ಮಂಗ,ಕೋಡಗಗಳ ಮುಖವುಳ್ಳವರು ಯಾರೋನನ್ನೆದುರಿಗೆ ನಿಂದಂತೆ ಕಾಣುತ್ತಿದೆ. ಆದರೆ ಇವರ ಮಧ್ಯೆ ಸರ್ವಾಭರಣಗಳಿಂದ ಕೂಡಿದವನೂ, ವಿಶಾಲವಾದ ಕಣ್ಣುಗಳುಳ್ಳವನೂ ನೀಳವಾದ ಬಾಹುಗಳುಳ್ಳವನೂ, ಎತ್ತರವಾದ ಎದೆಯುಳ್ಳವನೂ ಆಗಿರುವ ಹದಿನಾರು ವರ್ಷದ ವರನೊಬ್ಬನನ್ನು ಕಾಣುತ್ತಿರುವೆನು. ಅವನ ಪೀತಾಂಬರವೂ, ಶ್ಯಾಮಲ ಬಣ್ಣದ ಅಂಗಗಳೂ, ಶುಭಗಾತ್ರವೂ ಮನಸ್ಸನ್ನಾಕರ್ಷಿಸುತ್ತವೆ. ತಾವರೆಗಣ್ಣುಗಳಿಂದ ನನ್ನನ್ನೆ ನೋಡುತ್ತಿದ್ದಾನೆ. ಅಲ್ಲದೆ ನಗುತ್ತಿದ್ದಾನೆ. ದುಂಡುಮಲ್ಲಿಗೆಯಂತಿರುವ ಹಲ್ಲುಗಳು ಸ್ಪಷ್ಟವಾಗಿ ಕಾಣುತ್ತಿವೆ. ಮತ್ತೆ ಆ ಪುರುಷನು ನನ್ನ ಕೈಯ್ಯನ್ನು ಹಿಡಿಯಲೋ ಎಂಬಂತೆ ಬಲಗೈಯನ್ನು ಮುಂದೆ ಚಾಚಿರುವನು' ಎಂದು ಉತ್ತರಿಸಿದಳು.

ಬಳಿಕ ಆ ಬಾಲೆಯ ಮಾತನ್ನಾಲಿಸಿದ ನಾರದನು ಅತ್ಯಾಶ್ಚರ್ಯದಿಂದ "ಎಲೆ, ಕನ್ಯಾಮಣಿಯೆ, ಹಾಗೆ ನೀನು ನೋಡುವವನಿಗೆ ತೋಳುಗಳೆಷ್ಟಿವೆ? ಕಂಡಂತೆ ಹೇಳು" ಎಂದಾಗ 'ಎರಡು' ಎಂದಳು ಮತ್ತೆ 'ಆತನ ವಕ್ಷಸ್ಥಲದಲ್ಲಿ ಏನನ್ನೂ ಕಾಣುತ್ತಿರುವೆ? ಕೈಯಲ್ಲಿ ಏನನ್ನು ಹಿಡಿದಿರುವನು" ಎಂದು ಕೇಳಿದಾಗ "ವಿಶಾಲವಾದ ವಕ್ಷಸ್ಥಲದಲ್ಲಿ ದಿವ್ಯ ಮಾಲಿಕೆ , ಶುಭಕರಗಳಲ್ಲಿ ಬಿಲ್ಲು ಬಾಣಗಳು ಶೋಭಿಸುತ್ತಿವೆ" ಎಂದು ತಿಳಿಸಿದಳು.

ಶ್ರೀಮತಿಯ ಮಾತನ್ನು ಕೇಳಿ ಇಬ್ಬರೂ ಆಶ್ಚರ್ಯಪಟ್ಟು ಆತ್ಮಗತ ಚಿಂತೆಯಿಂದ ಬಹುದೂರ ಯೋಚಿಸಿ, ಇದು ಮಾಯೆ, ಮಾಧವನಿಂದಲ್ಲದೆ ಬೇರೆಯವರಿಂದ ಸಾಧ್ಯವಿಲ್ಲ ಎಂದು ತಿಳಿದು ನಾರದನು–ಆತನ ಮುಖ ಸರಿ, ತನ್ನ ಮುಖ ಹೀಗಾಗಲು ಕಾರಣವೇನೆಂದೂ, ಪರ್ವತನು–ನಾರದನ ಮುಖವು ಹಾಗಾಗುವುದು ಸರಿ, ಆದರೆ ತನ್ನ ಮುಖ ಈ ರೀತಿಯಾಗಲು ಕಾರಣವೇನು. ಎಂದು ಇಬ್ಬರೂ ಹೇಳುತ್ತಿದ್ದರು.

ಹೀಗಿರಲು ಅಂಬರೀಷನು ಅವರಿಗೆ ನಮಸ್ಕರಿಸಿ “ಪೂಜ್ಯರೇ, ಆಕೆಯ ಮನಸ್ಸು ಹೀಗೆ ಮೋಸಹೋಗುವಂತೆ ಏನು ಮಾಡಿದಿರಿ? ನನ್ನ ಮಗಳಲ್ಲಿ ಮನಸ್ಸಿಟ್ಟು ಬಂದಿರುವಿರಾದರೆ ಸ್ವಲ್ಪ ಸೈರಿಸಿಕೊಳ್ಳಿರಿ. ವಿಷಯವನ್ನರಿತು ಹೇಳುತ್ತೇನೆ ಎಂದಾಗ ಸ್ವಲ್ಪ ಸಿಟ್ಟಿನಿಂದಲೇ–ಮಗಳು ಮರುಳು ಮಾಡಿದವರು ನಾನಲ್ಲ. ನೀನೇ ಈ ಹೆಣ್ಣು ನಮ್ಮನ್ನು ಒಲಿಯದಂತೆ ಏನೋ ಮೋಸ ಮಾಡಿದೆ, ಅಥವಾ ಹೇಳಿದೆ’ ಎಂದು ಮಾರ್ನುಡಿದನು.

ಈ ಬಿರುಸಾದ ಮಾತನ್ನು ಕೇಳಿದ ಆ ಬಾಲೆಯು ‘ಇವರು ತಂದೆಯಾದರೂ ಶಾಪವನ್ನೇ ಕೊಡುವರೆಂದು ಕಳವಳಗೊಂಡು ಮೊದಲು ಕಾಣಿಸಿಕೊಂಡ ದಿವ್ಯ. ಪುರುಷನನ್ನೇ ಧ್ಯಾನಿಸಿ, ತಪಸ್ವಿಗಳಲ್ಲಿ ಒಬ್ಬನಿಗೆ ಮಾಲೆ ಹಾಕುವೆನೆಂದು ಮುಂದಡಿಯಿಟ್ಟಳು. ದೈವಸಂಕಲ್ಪವನ್ನು ಮೀರುವವರಾರು? ಹಾಗೆ ಅವರಲ್ಲೊಬ್ಬನಿಗೆ ಮಾಲೆ ಹಾಕುವೆನೆಂದು ಹೆಜ್ಜೆಯಿಟ್ಟ ಹೆಣ್ಣಿಗೆ ಮತ್ತೆಯೂ ಆ ಸುಂದರ ಮುಖವೇ ಮೋಹಿಸಲು ಅವನಿಗೆಯೇ ಮಾಲೆ ಹಾಕಿದಳು. ಅಷ್ಟರಲ್ಲಿ ಆಶ್ಚರ್ಯವೆಂಬಂತೆ ಆ ಕನ್ಯೆಯೂ ದಿವ್ಯ ಪುರುಷನೂ ಕಾಣಿಸದಾದರು.

ಕೇಳು  ಮುನಿಪನೇ, ಆ ಬಾಲೆಯನ್ನು ಒಯ್ಯುವರು ಯಾರೆಂದು ಬಲ್ಲೆಯಾ, ಆತನು ನಿಜವಾದ ಭಗವಂತನೇ, ಅವನು ಅವಳನ್ನು ಸುಮ್ಮಗೇ ಪಡೆದವನಲ್ಲ ಆ ಹೆಣ್ಣಿಗಾಗಿ ಹಗಲಿರುಳೂ ತಪಸ್ಸಾಚರಿಸಿ ಪೂರ್ವ ಸಂಕಲ್ಪದಂತೆ ಪಡೆದುಕೊಂಡನು.

ಇತ್ತಲಿಬ್ಬರೂ ದುಃಖದಿಂದ ಕೂಡಿದವರು ವೈಕುಂಠಾಧಿಪತಿಯಲ್ಲಿಯೇಇದನ್ನು ನಿರ್ಧರಿಸಬೇಕೆಂದು ವೈಕುಂಠಕ್ಕೆ ಬರಲು ಇತ್ತ ಶ್ರೀಹರಿಯು ಶ್ರೀಮತಿಯನ್ನು ಕುರಿತು– ಎಲೆ ಮೋಹನಾಂಗಿ! ನಿನ್ನಿಂದ ವಂಚಿತರಾದ ಆ ತಪಸ್ವಿಗಳು ಈಗಲೇ ಇದೋ ಇತ್ತ ಬರುತ್ತಿದ್ದಾರೆ. ಆದುದರಿಂದ ನೀನು ನನ್ನ ಅಂತರಂಗದಲ್ಲಿ ಗುಪ್ತಳಾಗು ಎನ್ನಲು ನಸುನಗುತ ಅಂತೆಯೇ ಒಳ ಪ್ರವೇಶಿಸಿದಳು.

ಆ ನಂತರದಲ್ಲಿ ನಾರದನೂ, ಪರ್ವತನೂ ಪುರಾಣ ಪುರುಷನನ್ನು ಕಂಡು ನಮಸ್ಕರಿಸುತ್ತಾ, ಅವರಲ್ಲಿ ಮೊದಲನೆಯವನಾದ ನಾರದನು ದೇವಾ, ಇಂದು ನಮಗಿಬ್ಬರಿಗೂ ಒಳ್ನುಡಿಯಿಂದಲೇ ವಂಚಿಸಿದೆಯಲ್ಲವೇ? ಹೀಗೆ ನಮ್ಮನ್ನು ಅಳಲಿಸಿ ಕಾಡಬಹುದೇ. ಖಂಡಿತವಾಗಿಯೂ ನೀನೇ ಆ ಸ್ತ್ರೀಯನ್ನು ಕದ್ದು ತಂದವನು. ಛೆ: ವಿಶ್ವಾಸಘಾತಕವನ್ನು ಯಾರಿಗೂ ಮಾಡಬಾರದು. ಸಾಕು. ಒಡೆಯನೇ ನೀನೇ ಹಿರಿಯವನು. ಎನ್ನಲವನು ಕಿವಿ ಮುಚ್ಚಿ ಹುಸಿ ಮುನಿಸಿನಿಂದ “ಇದುವರೆಗೂ ನೀನೇ ಯೋಗ್ಯನೆಂದು ಭಾವಿಸಿದ್ದೆ. ಈಗ ಸೊಕ್ಕಿನಿಂದ ನೀನೇನಾದರೂ ಗಳಪುವುದನ್ನು ಕಾಣುತ್ತ ಋಷಿ ಸ್ವಭಾವವನ್ನೂ ಕಾಣದಾಯಿತು. ಎಲೈ ಮುನಿಶ್ರೇಷ್ಠನೇ, ನೀನು ಹೇಳುವುದು ಸರಿಯಲ್ಲ. ಹಾಗಾಗಲು ಕಾರಣವೂ ಇಲ್ಲ. ಎಂದು  ಲಕ್ಷ್ಮೀ ಪತಿ ಹೇಳಿದನು. ಅದಕ್ಕೆ ನಾರದನು ಹಾಗಾದರೆ ನನ್ನ ಮುಖವು ಮಂಗನ ಮುಸುಡಿನಂತೆ ವಿಕಾರವಾಗಲು ಕಾರಣವೇನು? ಎಂದು ಕೇಳಿದಾಗ ನಾರಾಯಣನು ಆಹಾ! ಹಲವು ಕಾಲ ನನ್ನನ್ನು ಭಜಿಸುತ್ತಾ ಇದ್ದರೂ ನೀನೆನ್ನ ಮಹಿಮೆಯ ನೆಲೆಯನ್ನು ಕಂಡವನಲ್ಲ. ನಾನು ಭಕ್ತರ ಅಧೀನನು. ಸರ್ವರೂ ನನಗೆ ಸಮಾನರು. ನೀನು ಹೇಗೆ ಈ ಹೆಣ್ಣಿನ ಕಾರಣದಿಂದ ಬೇಡಿದೆಯೋ ಹಾಗೆಯೇ ಪರ್ವತನೂ ಕೇಳಿದನು. ಆದುದರಿಂದ ಇಬ್ಬರಿಗೂ ಹೀಗಾಯಿತು. ದೂರಿಗೆ ಯಾರೂ ಕಾರಣರಲ್ಲ. ಯಾರು ಏನನ್ನು ಬೇಡುವರೋ ಅವರಿಗೆ ಅದನ್ನು ಕೊಡುವುದು ನನ್ನ ಬಿರುದು. ನಾನು ಸತ್ಯ ಸಂಧನು. ಸತ್ಯ ಬಲದಿಂದಲೇ ಈ ಚಕ್ರವು ನನ್ನ ಕೈ ಸೇರಿದೆ”  ಎಂದನು.

ನಾರಾಯಣನ ಆಜ್ಞೆಯನ್ನು ನಾರದನು ಕೇಳಿಸಿಕೊಂಡು – ನಿನ್ನ ಅಪ್ಪಣೆಯು ಅಷ್ಟು ನಿಜವಾದರೆ ಸ್ವಯಂವರ ಮಂಟಪದಲ್ಲಿ ನಮ್ಮಲ್ಲಿ ಒಬ್ಬರನ್ನು ಆರಿಸಿಕೊಳ್ಳಲು ಬಂದ ಆ ಬಾಲೆಗೆ ನಮ್ಮೆಡೆಯಲ್ಲೊಬ್ಬ ಎರಡೂ ಕೈಗಳಲ್ಲಿ ಧರ್ನುಬಾಣಗಳನ್ನು ಹಿಡಿದಿದ್ದವನು ಬಾಲ ಸುಂದರನಂತೆ, ಯಾರೆಂದು ತಿಳಿದುದಿಲ್ಲ. ಹಾಗೆ ಅವನೇ ಕದ್ದುಕೊಂಡು ಹೋದುದು ಸತ್ಯ ಎಂದು ಹೇಳಿದನು.

ಇದಕ್ಕೆ ಜನಾರ್ದನನು ಸರಿ, ಲೋಕದಲ್ಲಿ ಮಹಾತ್ಮರೆನಿಸಿಕೊಳ್ಳುವರನೇಕರು ಮಾಯಾವಿಗಳಿದ್ದಾರೆ. ಹಾಗಿರುವವರಲ್ಲಿ ಯಾರೋ ಕನ್ಯೆಯನ್ನು ಕದ್ದುಕೊಂಡು ಹೋಗಿರಲೇಬೇಕಲ್ಲದೆ ನನ್ನಿಂದಾದ ಕಾರ್ಯವಲ್ಲ. ಏಕೆಂದರೆ ನಾನು ಯಾವಾಗಲೂ ಚತುರ್ಭುಜನೂ, ಚಕ್ರಪಾಣಿಯೂ, ಆಗಿರುವೆನಲ್ಲವೇ, ಸುಳ್ಳು ಹೇಳಲು ಕಾರಣವಿಲ್ಲ ಎನ್ನಲು ಋಷಿಗಳಿಬ್ಬರೂ ಒಪ್ಪಿಕೊಳ್ಳುತ್ತಾ ನಿನ್ನಲ್ಲಿ ಯಾವುದೇ ಸಂಶಯವಿಲ್ಲ. ಅವಿವೇಕಿಗಳು ನಾವು. ನಮ್ಮ ಈ ಅಪರಾಧವನ್ನು ಕ್ಷಮಿಸಿ ಪ್ರೀತಿಯಿಂದ ರಕ್ಷಿಸುವುದು ಎಂದು ಎರಗಿದರು, ಅಂಬರೀಷನೇ ತಮ್ಮನ್ನು ವಂಚಿಸಿರುವನೆಂದು ಸಿಟ್ಟಿನಿಂದ ಮರಳಿ ಅಯೋಧ್ಯೆಗೆ ತೆರಳಿದರು.

## ಪರಾಮರ್ಶನ ಗ್ರಂಥಗಳು


- ಪಂಪಭಾರತ ದೀಪಿಕೆ – ಡಾ. ಡಿ.ಎಸ್. ನರಸಿಂಗಾಚಾರ್
- ಪಂಪಭಾರತ ಎಂಬ ವಿಕ್ರಮಾರ್ಜುನ ವಿಜಯ – ಡಾ. ಕೆ.ವಿ. ಪುಟ್ಟಪ್ಪ

# 2. ನಡುಗನ್ನಡ ಕಾವ್ಯ ಸೌರಭ

| | | |
|---|---|---|
| ಘಟಕ 2 | : | ನಡುಗನ್ನಡ ಕಾವ್ಯ ಸೌರಭ |
| ಸಮಯ | : | 45 ಪಿರೇಡುಗಳು |

**ಕಲಿಕಾ ಸಾಮಗ್ರಿಗಳು** :

- ಪಠ್ಯಪುಸ್ತಕ
- ಅಡಕ ಮುದ್ರಿಕೆ
- ಗಣಕಯಂತ್ರ
- ಪರಾಮರ್ಶನ ಗ್ರಂಥಗಳು

**ಮೌಲ್ಯಗಳು ಮತ್ತು ಮನೋಭಾವಗಳು** :

- ನಡುಗನ್ನಡ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿ ಆಸ್ವಾದಿಸುವ ಮನೋಭಾವ.
- ನಡುಗನ್ನಡ ಕೃತಿಗಳನ್ನು ಕಾವ್ಯವಾಚನ – ಪ್ರವಚನದಲ್ಲಿ ಉಪಯೋಗಿಸಿಕೊಳ್ಳುವ ಮನೋಭಾವ.
- ನಡುಗನ್ನಡ ಕಾವ್ಯ ಕೃತಿಗಳನ್ನು ಅಧ್ಯಯನ ಮಾಡಿ ಅಲ್ಲಿರುವ ಶೈಲಿ ಛಂದಸ್ಸು ವ್ಯಾಕರಣಗಳನ್ನು ಗುರುತಿಸಿ ಪ್ರಯೋಗಿಸುವ ಮನೋಭಾವ.
- ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಹಾಗೂ ಗೌರವಿಸುವ ಮನೋಭಾವ.
- ಕಾವ್ಯಭಾಗದಲ್ಲಿ ಬರುವ ಸಾಂಸ್ಕೃತಿಕ ಮೌಲ್ಯಗಳನ್ನು ಅರಿತುಕೊಳ್ಳುವುದು.
- ಸಾಹಿತ್ಯದಲ್ಲಿ ನಡುಗನ್ನಡ ಕಾವ್ಯಗಳ ಸ್ಥಾನಮಾನವನ್ನು ಅರಿತುಕೊಳ್ಳುವುದು.

# ಪ್ರಸ್ತಾವನೆ

ನಡುಗನ್ನಡವು ಕನ್ನಡ ಸಾಹಿತ್ಯವು ಮಾರ್ಗದಿಂದ ದೇಸಿಗೆ ಸಂಕ್ರಮಣ ಹೊಂದಿದ ಕಾಲವಾಗಿದೆ. ಸ್ವತಂತ್ರ ಮನೋವೃತ್ತಿಯ ವಸ್ತು, ಛಂದಸ್ಸು, ಭಾಷೆಗಳಲ್ಲಿ ಈ ಕಾಲದ ಸಾಹಿತ್ಯವು ರಚನೆಯಾಯಿತು.

ವಚನ ಸಾಹಿತ್ಯವು ಸರಳ, ಸುಲಲಿತ, ಸುಮಧುರತೆಯ ಕಂಪನ್ನು ಸೂಸಿದ ವೈಶಿಷ್ಟ್ಯಪೂರ್ಣ ಸಾಹಿತ್ಯವಾದರೆ, ರಗಳೆಯು ಭಕ್ತಿಯ ಪಾರಮ್ಯವನ್ನು ಸುಲಲಿತವಾಗಿ, ನಿರರ್ಗಳವಾಗಿ, ನಾದಮಯವಾಗಿ ಪಠನಗೈಯಲು ಅತ್ಯುತ್ತಮ ಸಾಧನವಾಯಿತು. ಸಾಂಗತ್ಯವು ಹಾಡುಗಬ್ಬವಾಗಿ ಬಹುಬೇಗ ಜನಪ್ರಿಯವಾಯಿತು. ರಾಘವಾಂಕ, ಕುಮಾರವ್ಯಾಸ, ಚಾಮರಸ, ಲಕ್ಷ್ಮೀಶ ಮೊದಲಾದ ಕವಿಗಳು ಷಟ್ಪದಿಯಲ್ಲಿ ತಮ್ಮ ಶ್ರೇಷ್ಠ ಕಾವ್ಯಗಳನ್ನು ರಚಿಸಿ ಈ ಪ್ರಕಾರಕ್ಕೆ ಭದ್ರ ಸ್ಥಾನವನ್ನು ಒದಗಿಸಿಕೊಟ್ಟರು. ಹೀಗೆ ಹಳೆಗನ್ನಡದ ಕ್ಲಿಷ್ಟತೆ, ಸಂಕೀರ್ಣತೆಗಳಿಂದ ಹೊರಬಂದು ನಡುಗನ್ನಡ ಭಾಷೆಯಲ್ಲಿ ಬರೆದ ಸಾಹಿತ್ಯವು ಸುದೀರ್ಘ ಕಾಲದ ವರೆಗೆ ಸಾಗಿಬಂದಿತು. ದೇಸೀ ಪ್ರಕಾರಗಳ ಸತ್ವವನ್ನು ಈ ಕಾಲಘಟ್ಟವು ಸೂರೆಗೊಂಡಿತೆಂದರೆ ತಪ್ಪಲ್ಲ.

ನಡುಗನ್ನಡ ಕಾಲದಲ್ಲಿ ರಚನೆಯಾದ ರಗಳೆ, ಸಾಂಗತ್ಯ, ಷಟ್ಪದಿ ಪ್ರಕಾರದ ಪ್ರಾತಿನಿಧಿಕ ಕಾವ್ಯಗಳನ್ನು ಈ ಘಟಕದಲ್ಲಿ ಪರಿಚಯಿಸಲಾಗಿದೆ.

# UNIT FRAME

**ಘಟಕ 2 : ನಡುಗನ್ನಡ ಕಾವ್ಯ ಸೌರಭ** ಸಮಯ : 40 ಪಿರೇಡುಗಳು

**ಕಲಿಕಾ ಸಾಧನೆಗಳು**

- ನಡುಗನ್ನಡ ಕಾಲದ ಕಾವ್ಯ ಪ್ರಕಾರಗಳಾದ ರಗಳೆ, ಸಾಂಗತ್ಯ, ಷಟ್ಪದಿ ಕೃತಿಗಳನ್ನು ಅಧ್ಯಯನ ಮಾಡಿ, ಆಶಯಗಳನ್ನು ತಿಳಿದು, ಸೂಕ್ತ ಸಂದರ್ಭಗಳಲ್ಲಿ ಬಳಸಲು ಸಮರ್ಥರಾಗುವರು.
- ನಡುಗನ್ನಡ ಕವಿಗಳ ದೃಷ್ಟಿಕೋನಗಳನ್ನು ವಿಶ್ಲೇಷಿಸಿ ಅಲ್ಲಿನ ಆಶಯವನ್ನು ಗುರುತಿಸಿ ಬರಹಗಳಲ್ಲಿ ಸೂಕ್ತವಾಗಿ ನಿರೂಪಿಸುವರು.
- ನಡುಗನ್ನಡ ಕಾವ್ಯಗಳನ್ನು ಹಾಡುವ/ವಾಚಿಸುವ ವಿಧಾನವನ್ನು ತಿಳಿದುಕೊಂಡು ಸ್ವರಭಾರದೊಂದಿಗೆ ಹಾಡುವರು/ವಾಚಿಸುವರು.
- ನಡುಗನ್ನಡ ಸಾಹಿತ್ಯ ಕೃತಿಗಳನ್ನು ಅಭ್ಯಾಸಮಾಡಿ ಅವುಗಳಲ್ಲಿ ಮೂಡಿ ಬಂದಿರುವ ಸಾಮಾಜಿಕ ಜೀವನ ಹಾಗೂ ಮೌಲ್ಯಗಳನ್ನು ತಿಳಿದುಕೊಳ್ಳುವರು.
- ನಡುಗನ್ನಡ ಕಾಲದ ಸಾಮಾಜಿಕ ಬದುಕಿನ ವೈಶಿಷ್ಟ್ಯವನ್ನು ಗುರುತಿಸಿಕೊಂಡು ಸಮಕಾಲಿನ ಪರಿಸ್ಥಿತಿಯೊಂದಿಗೆ ಅನ್ವಯಿಸಿ ಲೇಖನವನ್ನು ತಯಾರಿಸುವರು.
- ಕಾವ್ಯಗಳಲ್ಲಿ ಬಳಕೆಯಾದ ಛಂದೋಪ್ರಕಾರಗಳನ್ನು ಗುರುತಿಸಿ, ಅದರ ವೈಶಿಷ್ಟ್ಯಗಳನ್ನು ತಿಳಿದುಕೊಂಡು ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ಬಳಸಲು ಸಮರ್ಥರಾಗುವರು.
- ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಹಳೆಗನ್ನಡ, ನಡುಗನ್ನಡ ಕೃತಿಗಳ ಹಿನ್ನಲೆಯಲ್ಲಿ ಗುರುತಿಸಿಕೊಂಡು ಆ ಬಗೆಗೆ ತಮ್ಮ ನಿಲುವುಗಳನ್ನು ಪ್ರಕಟಿಸುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ನಡುಗನ್ನಡ ಸಾಹಿತ್ಯದಲ್ಲಿ ರಗಳೆಯ ಮಹತ್ವ / ವಾಚಿಸಿ / ಹಾಡಿ / ಸ್ಪರ್ಧಿಸುವುದು. | • ನಡುಗನ್ನಡ ಕಾಲಘಟ್ಟದ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾದ ಛಂದೋಪ್ರಕಾರಗಳನ್ನು ಹೆಸರಿಸುವಂತೆ ವಿದ್ಯಾರ್ಥಿಗಳಲ್ಲಿ ಹೇಳುವುದು. ರಗಳೆ ಪ್ರಕಾರದ ವಿಶೇಷತೆಯನ್ನು ಗುರುತಿಸುವುದು. ರಗಳೆ ಕವಿಗಳ ಕುರಿತು ಮಾಹಿತಿ ಸಂಗ್ರಹಿಸುವುದು. ರಗಳೆ ಛಂದೋರೂಪವನ್ನು ತಿಳಿದುಕೊಳ್ಳುವುದು. ಶಿವಭಕ್ತಿಯ ಸ್ವರೂಪದ ಕುರಿತು ಲೇಖನ ಬರೆಯಿಸುವುದು. ಹೊಸಗನ್ನಡದಲ್ಲಿ ಸಂಭಾಷಣೆ ಬರೆಯುವುದು. ಅತಿಥಿಗಳನ್ನು ಸತ್ಕರಿಸುವ ವಿಧಾನದ ಬಗ್ಗೆ ಲೇಖನ ಬರೆಯಿಸುವುದು.<br>ಗದ್ಯರೂಪದಲ್ಲಿ ಕಥೆ ಬರೆಯುವುದು. ಪರ್ಯಾಯ ಪದ ಬರೆಯುವುದು. ಧ್ವನಿ ವ್ಯತ್ಯಾಸವನ್ನು ಗುರುತಿಸಿ ಪಟ್ಟಿ ಮಾಡುವುದು. ಸಮಾಸ ಪದಗಳನ್ನು ಗುರುತಿಸಿ ಹೆಸರಿಸುವುದು. ಪ್ರಸ್ತಾರ ಹಾಕಿ .. ವಿಭಾಗ ಮಾಡಿ ರಗಳೆ ಛಂದಸ್ಸನ್ನು ಪರಿಚಯಿಸುವುದು. | ಮಾಹಿತಿ ಸಂಗ್ರಹ<br>ಲೇಖನ<br>ಸಂಭಾಷಣಾ ರೂಪ<br>ಕಥೆ<br>ಛಂದಸ್ಸಿನ ತಖ್ತೆ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ನಡುಗನ್ನಡ ಸಾಹಿತ್ಯದಲ್ಲಿ ಷಟ್ಪದೀ ಸಾಹಿತ್ಯಕ್ಕಿರುವ ಪ್ರತ್ಯೇಕತೆ ವಾರ್ಧಕ ಷಟ್ಪದಿ ಪರಿಚಯ ಗಮಕ ಪರಿಚಯ. | • ಮಹಾಭಾರತದ ಉಪಕತೆಗಳನ್ನು ಹೇಳಿಸುವುದು. ಸಂಸ್ಕೃತ ಸಾಹಿತ್ಯ ಹಿನ್ನಲೆಯಾಗುಳ್ಳ ಕನ್ನಡ ಸಾಹಿತ್ಯ ಕೃತಿಗಳನ್ನು ಗುರುತಿಸುವುದು. ಅಡಕ ಮುದ್ರಿಕೆಯನ್ನು ಪದ ವಿಂಗಡಣೆ, ಬಳಸುವುದು, ಮಾಡುವುದು. ವಿಗ್ರಹ ವಾಕ್ಯ ಮಾಡಿ ಸಮಾಸ ಹೆಸರಿಸುವುದು. ಅಲಂಕಾರ ಗುರುತಿಸುವುದು. ವರ್ಣನೆ ಬರೆಯುವುದು. ದ್ವಂದ್ವಾರ್ಥಗಳನ್ನು ಗುರುತಿಸುವುದು. ಅಭಿಪ್ರಾಯ ಬರೆಯುವುದು. ಪಾತ್ರಗಳ ಸ್ವಭಾವವನ್ನು ಗುರುತಿಸಿ ಲೇಖನ ಬರೆಯುವುದು. ಚರ್ಚಾಗೋಷ್ಠಿ ನಡೆಸುವುದು. ಕಾವ್ಯ ವಾಚನ ಪ್ರವಚನ ಕಾರ್ಯಕ್ರಮ ನಡೆಸುವುದು. ಚಂದ್ರಹಾಸದ ಕಥೆ ಸಂಗ್ರಹಿಸಿ ಬರೆಯುವುದು ಪ್ರಾಸಗುರುತಿಸುವುದು. ಸ್ವಾರಸ್ಯ ಬರೆಯುವುದು. | ಅಭಿಪ್ರಾಯ ಬರೆಯುವುದು<br>ಲೇಖನ ಬರೆಯುವುದು<br>ಚರ್ಚಾಗೋಷ್ಠಿ<br>ಕಾವ್ಯ ವಾಚನ ಪ್ರವಚನ<br>ಕಥೆ<br>ಛಂದಸ್ಸಿನ ತಖ್ತೆ |
| • ಸಾಂಗತ್ಯದ ಸ್ವರೂಪ ಹಾಗೂ ಪ್ರತ್ಯೇಕತೆಯನ್ನು ತಿಳಿದುಕೊಳ್ಳುವುದು ಛಂದಸ್ಸಿನ ಪರಿಚಯ ಭರತೇಶ ವೈಭವ ಪರಿಚಯ | • ಸಾಂಗತ್ಯವನ್ನು ಹಾಡುವುದು, ಅಡಕ ಮುದ್ರಿಕೆಯನ್ನು ಬಳಸುವುದು. ಪದವಿಂಗಡಿಸುವುದು, ನವೀನ ಪದಗಳ ಅರ್ಥ ತಿಳಿದುಕೊಳ್ಳುವುದು. ಆಶಯ ಬರೆಯುವುದು. ಔಚಿತ್ಯ ಬರೆಯುವುದು, ಲೇಖನ ಬರೆಯುವುದು, ಸಂಧಿ ಹಾಗೂ ಸಮಾಸ ಪದಗಳನ್ನು ಹೆಸರಿಸುವುದು. ಅಲಂಕಾರವನ್ನು ಗುರುತಿಸುವುದು. ಸಾಂಗತ್ಯ ಛಂದಸ್ಸನ್ನು ಪರಿಚಯಿಸುವುದು.<br><br>**ನೈಪುಣ್ಯಗಳು**<br>* ನಡುಗನ್ನಡ ಸಾಹಿತ್ಯವನ್ನು ಆಸ್ವಾದಿಸುವ ಹಾಗೂ ಟಿಪ್ಪಣಿ ಬರೆಯುವ ಸಾಮರ್ಥ್ಯ<br>* ಮಾಹಿತಿ ತಂತ್ರಜ್ಞಾನದ ಬಳಕೆಯ ಸಾಮರ್ಥ್ಯ<br>* ಷಟ್ಪದಿ ವಾಚನ ಪ್ರವಚನ ಹಾಗೂ ಸಾಂಗತ್ಯವನ್ನು ಹಾಡುವ ಸಾಮರ್ಥ್ಯ<br>* ಅಲಂಕಾರಗಳನ್ನು ಗುರುತಿಸುವ ಸಾಮರ್ಥ್ಯ<br>* ರಗಳೆ, ವಾರ್ಧಕಷಟ್ಪದಿ, ಸಾಂಗತ್ಯ ಛಂದಸ್ಸುಗಳನ್ನು ಗುರುತಿಸುವ ಸಾಮರ್ಥ್ಯ | ಆಶಯ ಲೇಖನ<br>ಔಚಿತ್ಯ ಬರಹ<br>ಪಾತ್ರಚಿತ್ರಣ<br>ತುಲನಾತ್ಮಕ ಟಿಪ್ಪಣಿ<br>ಛಂದಸ್ಸಿನ ತಖ್ತೆ |

# ಇಳೆಯಾಂಡ ಗುಡಿಮಾರ

ನಡುಗನ್ನಡ ಕಾಲಘಟ್ಟದ ಸಾಹಿತ್ಯ ಹಾಗೂ ಕವಿಗಳ ಕುರಿತು ಈಗಾಗಲೇ ವಿದ್ಯಾರ್ಥಿಗಳು ತಿಳಿದುಕೊಂಡಿದ್ದಾರೆ. ಅವರಲ್ಲಿ ಕೆಲವರನ್ನು ಹೆಸರಿಸಲು ವಿದ್ಯಾರ್ಥಿಗಳಲ್ಲಿ ಹೇಳುವುದು. ವಚನ ಸಾಹಿತ್ಯ, ರಗಳೆ, ಷಟ್ಪದಿ, ಸಾಂಗತ್ಯ, ಪ್ರಕಾರಗಳನ್ನು ಬಸವಣ್ಣ, ಜೇಡರ ದಾಸಿಮಯ್ಯ,ಅಕ್ಕಮಹಾದೇವಿ, ಹರಿಹರ, ರಾಘವಾಂಕ ಮುಂತಾದವರ ಹೆಸರುಗಳನ್ನು ವಿದ್ಯಾರ್ಥಿಗಳು ಹೇಳಬಹುದು. ಆಗ ಪ್ರಸ್ತುತ ಪದ್ಯಭಾಗವನ್ನೊಳಗೊಂಡ ಕೃತಿಯ ಕರ್ತೃ ಹರಿಹರ ಎಂಬುದನ್ನು ಅವರ ಗಮನಕ್ಕೆ ತರುವುದು. ಹರಿಹರ ಕವಿಯ ಕುರಿತಾಗಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿಯನ್ನು ನೀಡುವುದು.

## ಹರಿಹರ

೧೨ನೇ ಶತಮಾನದಲ್ಲಿ ಬಂದ ವಚನ ಕ್ರಾಂತಿಯೊಂದಿಗೆ ಹರಿಹರ, ರಾಘವಾಂಕ, ಪದ್ಮರಸ ಮುಂತಾದ ಕವಿಗಳು ಶಿವಭಕ್ತಿಯನ್ನೊಳಗೊಂಡ ಕಾವ್ಯವನ್ನು ರಚಿಸಿದರು. ಇವರಲ್ಲಿ ಹರಿಹರನು ಹಿರಿಯನು. ಈತ ಶಿವಭಕ್ತ ಕವಿ. ಈತನ ಗ್ರಂಥಗಳೆಂದರೆ 'ಪಂಪಾಶತಕ', 'ರಕ್ಷಾಕತಕ', 'ಮುಡಿಗೆಯ ಅಷ್ಟಕ', "ಗಿರಿಜಾಕಲ್ಯಾಣ" ಮತ್ತು 'ಶಿವಗಣದ ರಗಳೆಗಳು'.

ಹರಿಹರನು ಸುಮಾರು ೧೨೦ಕ್ಕೂ ಹೆಚ್ಚು ರಗಳೆಗಳನ್ನು ರಚಿಸಿದ್ದಾನೆ. ರಗಳೆ ಎಂಬುದು ಒಂದು ಛಂದಸ್ಸು. ಈ ಛಂದಸ್ಸಿನಲ್ಲಿ ಬಂದ ರಚನೆಗಳನ್ನು ರಗಳೆ ಸಾಹಿತ್ಯ ಎಂದು ಗುರುತಿಸುತ್ತಾರೆ. ಪ್ರತಿಯೊಂದು ರಗಳೆಯೂ ಶಿವಭಕ್ತರ ಕುರಿತಾಗಿದೆ. ಪಂಪಾದಿ ಕವಿಗಳ ಕೃತಿಗಳಲ್ಲಿ ವಿರಳವಾಗಿ ರಗಳೆ ಛಂದಸ್ಸಿನ ಪ್ರಯೋಗವಾಗಿದೆ. ಆದರೆ ಹರಿಹರನು ಸಮಗ್ರವಾಗಿ ರಗಳೆ ಛಂದಸ್ಸಿನಲ್ಲಿಯೇ ಕೃತಿಗಳನ್ನು ರಚಿಸಿರುವನು.

ಆದಿ ಅಂತ್ಯಪ್ರಾಸಗಳ ಬಳಕೆ, ಪಾದ ಸಂಖ್ಯೆಯ ಮಿತಿ ಇಲ್ಲದಿರುವಿಕೆಗಳು ಈತನ ಕಥನ ಶೈಲಿಗೆ ಪೂರಕವಾಗಿ ಬಂದಿವೆ.

ಪ್ರಸ್ತುತ ಪಠ್ಯಭಾಗದಲ್ಲಿ ಬರುವ ಇಳೆಯಾಂಡಗುಡಿಮಾರನು ತನ್ನ ದಾನಶೀಲ ಗುಣದ ಮೂಲಕ ಶಿವನನ್ನು ಮೆಚ್ಚಿಸುವ ರೀತಿ ಈ ಕಾವ್ಯಭಾಗದಲ್ಲಿ ಉತ್ತಮವಾಗಿ ಮೂಡಿ ಬಂದಿದೆ.

- ವಿದ್ಯಾರ್ಥಿಗಳಿಗೆ 'ಇಳೆಯಾಂಡ ಗುಡಿಮಾರ' ಪಠ್ಯವನ್ನು ಅಡಕ ಮುದ್ರಿಕೆಯ ಸಹಾಯದಿಂದ ಕೇಳಿಸುವುದು. ಅನಂತರ ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಓದಲಿ.
- ಪ್ರತಿ ಗುಂಪಿನವರೂ ಕಠಿಣ ಪದಗಳನ್ನು ಪಟ್ಟಿಮಾಡಿ ಪಠ್ಯದಲ್ಲಿನ ಪದಕೋಶ ಹಾಗೂ ಶಬ್ದಕೋಶಗಳ ಸಹಾಯದಿಂದ ಅರ್ಥವನ್ನು ಕಂಡುಕೊಳ್ಳಲಿ.
- ಪದವಿಂಗಡನೆ ಮಾಡಿ ಪದಗಳ ಅರ್ಥವನ್ನು ಕಂಡುಕೊಂಡ ಮೇಲೆ ಪ್ರತಿ ಗುಂಪಿಗೊಬ್ಬರಂತೆ ಒಂದೊಂದೇ ಸಾಲನ್ನು ಬಾಯ್ದೆರೆಯಾಗಿ ಓದಲಿ.

- ಅನಂತರ ಪದ್ಯದ ಸಾರಾಂಶವನ್ನು ಕಥಾ ರೂಪದಲ್ಲಿ ಪ್ರತಿ ಗುಂಪಿನವರು ಬರೆಯಲಿ. ಬರೆದುದನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಮಾದರಿ ಸಾರಾಂಶ ಬರಹವನ್ನು ವಿದ್ಯಾರ್ಥಿಗಳ ಮುಂದಿಡುವುದು. ವಿದ್ಯಾರ್ಥಿಗಳು ಇದರ ಸಹಾಯದಿಂದ ತಾವು ತಯಾರಿಸಿದ ಸಾರಾಂಶವನ್ನು ಪರಿಷ್ಕರಿಸಿ 'ಕಲಿಕಾ ಚಟುವಟಿಕೆ' ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲಿ.

**ಸಾರಾಂಶ**

ಶಿವನ ನೆಲೆಮನೆಯಾಗಿರುವ ಚೋಳದೇಶದಲ್ಲಿ ಶೋಭಿಸುತ್ತಿರುವ ಊರಾದ ಇಳೆಯಾಂಡ ಗುಡಿ ಎಂಬಲ್ಲಿ ಇಳೆಯಾಂಡ ಗುಡಿಮಾರನೆಂಬ ಶಿವಭಕ್ತನಿದ್ದನು. ಇವನು ಶಿವನ ಒಕ್ಕಲ ಮಗನಂತೆ ಶಿವನನ್ನೇ ಧ್ಯಾನಿಸುತ್ತಾ ಇದ್ದನು.

ಕೃಷಿ ಮತ್ತು ಶಿವಧ್ಯಾನವನ್ನು ತನ್ನ ಜೀವಿತವಾಗಿಸಿದ್ದ ಇಳೆಯಾಂಡ ಗುಡಿಮಾರನ ಭಕ್ತಿ ಅನನ್ಯವಾಗಿತ್ತು. ಚಿತ್ತವೆಂಬ ಭೂಮಿಯನ್ನು ಹಸನು ಮಾಡಿ, ಶಿವಧ್ಯಾನವನ್ನು ನೇಗಿಲಾಗಿಸಿ, ಅರಿಷಡ್ವರ್ಗಗಳನ್ನು ಹಗ್ಗವಾಗಿಸಿ, ಅಹಂಕಾರವನ್ನು ನೇಗಿಲಿನ ಕೀಲಾಗಿಸಿ, ಶಿವನ ಬಗೆಗಿನ ನಿಷ್ಠೆಯನ್ನು ಬೀಜವನ್ನಾಗಿಸಿ, ಶಿವಜ್ಞಾನವೆಂಬ ರಸಮಳೆ ಬೀಳುತ್ತ ಇರಲು ಶಿವನ ಬಗೆಗಿನ ಸದ್ಭಕ್ತಿ ಎಂಬ ಬೀಜವನ್ನು ಬಿತ್ತಿ ಹಸಿವು ಬಾಯಾರಿಕೆ ಎಂಬ ಕಳೆಗಳನ್ನು ಕಿತ್ತು ತೆಗೆದು ಭಕ್ತಿ ಎಂಬ ಬೇಸಾಯವನ್ನು ಮಾಡುತ್ತಿದ್ದನು.

ಇಳೆಯಾಂಡಗುಡಿಮಾರನು ಲೌಕಿಕದಲ್ಲಿ ನಿಜವಾದ ಬೇಸಾಯವನ್ನು ಮಾಡುತ್ತಿದಾನೆ. ಅದರಲ್ಲಿ ಬಂದ ಬೆಳೆಯನ್ನು ಶಿವಭಕ್ತರಿಗೆ ದಾನ ಮಾಡುತ್ತಾ, ಅದರಲ್ಲೇ ಸಂತೋಷವನ್ನು ತಾಳುತ್ತಾ, ಶಿವಭಕ್ತರಲ್ಲಿ ಕಿಂಕರ ಭಾವವನ್ನು ತೋರುತ್ತಾ ಇದ್ದಾನೆ.

ತನ್ನಲ್ಲಿರುವಷ್ಟು ಭೂಮಿಯಲ್ಲಿ ಬೆಳೆದ ಬೆಳೆಯನ್ನು ಸಡಗರದಿಂದ ಶರಣರ ಸಮೂಹಕ್ಕೆ ಕೊಡುತ್ತಾ ಆನಂದ ಪಡುತ್ತಿದಾನೆ. ತಮ್ಮಲ್ಲಿ ಇದ್ದುದನ್ನು, ಹೊಸತಾಗಿ ಉಂಟಾದುದನ್ನು– ಎಲ್ಲವನ್ನೂ ಶಿವಭಕ್ತರಿಗೆ ದಾನ ಮಾಡುತ್ತಾನೆ. ತನ್ನಲ್ಲಿರುವ ಹೊನ್ನು, ಉಂಬಳಿಯಾಗಿ ಬಂದ ಜಮೀನನ್ನೂ ದಾನ ಮಾಡುತ್ತಾನೆ.

ಹೀಗೆ ಶಿವಭಕ್ತರಿಗೆ ಅತಿಹೆಚ್ಚು ದಾನ ಮಾಡುತ್ತಿರಲು ಇವನಿಂದ ದಾನ ಪಡೆದ ಶಿವಭಕ್ತರು ಇವನ್ನು ಹೊಗಳುತ್ತಿದ್ದರು. ಶಿವಭಕ್ತರು ಮೇರೆ ತಪ್ಪಿದ ಸಮುದ್ರದೋಪಾದಿಯಲ್ಲಿ ಇಳೆಯಾಂಡ ಗುಡಿಮಾರರಿಂದ ದಾನವನ್ನು ಪಡೆಯುತ್ತಿರಲು ಅವರ ಕೈಯಲ್ಲಿದ್ದ ಧನವೆಲ್ಲವೂ ಮುಗಿದು ಹೋಯಿತು. ಬೇಡಿ ಬರುವ ಶಿವಭಕ್ತರಿಗೆ ತನ್ನಲ್ಲಿರುವಷ್ಟು ಭೂಮಿಯನ್ನು ಮಾರಿ ಶಿವಶರಣರ ಆಸೆಗಳನ್ನು ಪೂರೈಸುತ್ತಿದ್ದನು. ಹೀಗಿರಲು ತನ್ನಲ್ಲಿರುವ ಸಕಲ ಭೂಮಿಯನ್ನು ದಾನ ಮಾಡಿ ಸಂತೋಷಪಡುತ್ತಿರಲು ಶಿವಭಕ್ತರಿಗೆ ದಾನ ಮಾಡಲು ಬೇರೇನೂ ಇಲ್ಲದೆ ತನ್ನ ತೋಟ ಹಾಗೂ ಮನೆಯ ಅರ್ಧಭಾಗವನ್ನು ಮಾರಿದನು. ಹೀಗೆ ಶಿವಶರಣರ ಸಂತೋಷದಲ್ಲೇ ಅತಿಯಾದ ಆನಂದವನ್ನು ಕಾಣುತ್ತಿದ್ದನು.

ಹೀಗೆ ಇರುವಾಗ, ತನ್ನಲ್ಲಿ ಉಳಿದ ಒಂದು ಕೋಲು ನೆಲದಲ್ಲಿ ಶಿವಭಕ್ತಿಯೆಂಬ ಬೀಜವನ್ನು ಬಿತ್ತುವನೆಂಬಂತೆ ಒಂದೇ ಮನಸ್ಸಿನಿಂದ ಬೀಜವನ್ನು ಬಿತ್ತಿ ಅದರಿಂದ ಸಿಕ್ಕಿದ್ದನ್ನು ಭಕ್ತರಿಗೆ ಹಂಚಿಕೊಟ್ಟು ಅದರಲ್ಲಿ ಸಂತೋಷಪಡುತ್ತಿದ್ದನು. ಮತ್ತೆಯೂ ಶಿವಭಕ್ತರು ಬಂದಾಗ ತಾನು ಹೊದೆದುಕೊಂಡ ಬಟ್ಟೆಯನ್ನು ಕೊಡುತ್ತಾನೆ. ತಮಗೆ ಹಾಗೂ ಮಗನಿಗೆ ಕೌಪೀನ ಹಾಗೂ ಪತ್ನಿಗೆ ಹೊದ್ದುಕೊಳ್ಳಲು ಒಂದು ಬಟ್ಟೆ ಇಷ್ಟನ್ನು ಬಿಟ್ಟು ಮಿಕ್ಕಿದೆಲ್ಲವನ್ನೂ ದಾನ ಮಾಡಿದ. ಹೀಗೆ ಸರ್ವಸ್ವವನ್ನೂ ದಾನ ಮಾಡಿದ ಬಳಿಕ ಅವನಲ್ಲಿ ಉತ್ತಮವಾದ ಮನಸ್ಸು ಮಾತ್ರ ಬಾಕಿಯಾಗಿತ್ತು.

ದಾನ ಮಾಡಲು ವಸ್ತುರೂಪದಲ್ಲಿ ಏನೂ ಇರದಿದ್ದಾಗ ಇಳೆಯಾಂಡ ಗುಡಿಮಾರನು ಈ ರೀತಿ ಚಿಂತಿಸಿದ. ಹೂವಿಲ್ಲದಿದ್ದರೇನು, ಧಾನ್ಯವಿಲ್ಲದಿದ್ದರೇನು, ಮನೆಯಿಲ್ಲದಿದ್ದರೇನು? ಏನೂ ಇಲ್ಲದಿದ್ದರೂ ದೇಹವಿರುವುದಷ್ಟೇ! ಇದರಲ್ಲಿ

ಅರ್ಧಭಾಗವನ್ನು ಕೊಡುವೆನು. ಪ್ರಾಣದಲ್ಲಿ ಅರ್ಧವನ್ನು ಶಿವಶರಣರಿಗೆ ಕೊಟ್ಟುಬಿಟ್ಟೇನು ಎಂದು ಚಿಂತಿಸುತ್ತಾನೆ.

ಹೀಗೆ ಇಳೆಯಾಂಡ ಗುಡಿಮಾರನಿಗೆ ಭಕ್ತಿಯ ತೊಂಬತ್ತೈದು ವರ್ಷಗಳು ಸಲ್ಲಲು ಶಿವನು ತನ್ನ ಭಕ್ತನನ್ನು ಚೆನ್ನಾಗಿ ಪರೀಕ್ಷಿಸಬೇಕೆಂದು ಬಯಸುತ್ತಾನೆ. ಇಳೆಯಾಂಡ ಗುಡಿಮಾರನ ಭಕ್ತಿಯನ್ನು ಒರೆಗೆ ಹಚ್ಚಿ ನೋಡಿ, ಆ ವೈಭವವನ್ನು ಕಣ್ಣಾರೆ ಕಂಡು ಆತನನ್ನು ಕೈಲಾಸಕ್ಕೆ ಕೊಂಡುಹೋಗಬೇಕೆಂದು ನಿಶ್ಚಯಿಸುತ್ತಾನೆ. ಅದಕ್ಕಾಗಿ ಶಿವನು ಭೂಮಿಗೇ ಹೊಸತೆನಿಸುವ ಹಣ್ಣು ಹಣ್ಣು ಮುದುಕನ ವೇಷವನ್ನು ತಾಳಿದನು. ಕೂದಲೆಲ್ಲಾ ಹಣ್ಣಾದ, ಸುಕ್ಕುಗಟ್ಟಿದ ಮೈಯ, ಕೈಯಲ್ಲಿ ಕೋಲನ್ನು ಹಿಡಿದ, ಶರೀರವೆಲ್ಲ ಮುದುಡಿಹೋದ, ಬಾಗಿದ ಬೆನ್ನು, ಜೋತುಬಿದ್ದ ಹುಬ್ಬಿನಿಂದ ಶೋಭಿಸುತ್ತಿರುವ ಮುದುಕನ ವೇಷವನ್ನು ತಾಳಿ ಇಳೆಯಾಂಡ ಗುಡಿಮಾರನ ಮನೆಗೆ ನಡುರಾತ್ರಿ ಬಂದನು. ಆ ರಾತ್ರಿ ಆಕಾಶವೆಲ್ಲ ದಟ್ಟವಾದ ಮೋಡ ವ್ಯಾಪಿಸಿ ಇಡೀ ಆಕಾಶವೇ ನೀರಿನಿಂದ ತುಂಬಿಕೊಂಡಿತೋ ಎಂಬ ರೀತಿಯಲ್ಲಿ ಜಡಿಮಳೆಯು ಸುರಿಯುತ್ತಿತ್ತು. ಕಡಿದಾದ ಕಗ್ಗತ್ತಲೆ ಹೆಚ್ಚಾಗಿ ದಿಕ್ಕಿನ ಮುಖವನ್ನೇ ಕೆಡಿಸಿ ಜಗತ್ತನ್ನೇ ವ್ಯಾಪಿಸಿತೋ ಎಂಬಂತೆ ಇದ್ದಿತು.

ಹೀಗೆ ತುಂಬಿರುವ ಕತ್ತಲಲ್ಲಿ ವೇಷಧಾರಿಯಾದ ಶಿವನು ಊರನ್ನು ಪ್ರವೇಶಿಸಿ ಮಳೆ ಹನಿಗೆ ನಡುಗುತ್ತಾ ಇಳೆಯಾಂಡ ಗುಡಿಮಾರನ ಮನೆಗೆ ಬಂದನು. ಚಳಿಯಿಂದ ಹಲ್ಲು ಕಡಿಯುತ್ತಾ ಬಾಗಿಲಲ್ಲಿ ಶಿವನು ಬಂದು ನಿಂತಾಗ ಮನೆಯೊಳಗೆ ಇಳೆಯಾಂಡ ಗುಡಿಮಾರನು ಮೂರು ದಿನದ ಉಪವಾಸದಿಂದ ದೇಹ ಮತ್ತು ಚಳಿಯಿಂದ ಮನಸ್ಸು ಕೆಡದಂತೆ ಜಾಗರೂಕನಾಗಿ ಇದ್ದನು. ಆತನಿಗೆ ಶಿವಧ್ಯಾನವೇ ಮೈಯನ್ನು ಮುಚ್ಚಿಕೊಳ್ಳುವ, ಚಳಿಯನ್ನು ತಡೆದುಕೊಳ್ಳುವ ಸಾಧನವಾಗಿತ್ತು. ಈ ರೀತಿ ಇಳೆಯಾಂಡ ಗುಡಿಮಾರನು ಇರಲು ಬಾಗಿಲ ಬಳಿ ಬಂದು ನಿಂತ ವೃದ್ಧ ವೇಷಧಾರಿ ಶಿವನು 'ಹರ ಹರ ನಮಃ ಶಿವಾಯ' ಎಂಬ ಹರ ನಾಮವನ್ನು ಜಪಿಸುತ್ತಾ ನಿಂತಾಗ 'ತನ್ನ ಒಡೆಯನ ಧ್ವನಿಯಂತಿಹುದಲ್ಲಾ! ಯಾರು ಬಂದರು, ಈ ಹೊತ್ತಿನಲ್ಲಿ ? ಈ ನಟ್ಟಿರುಳು ಈ ರೀತಿ ಬರುವರೇ? ಎಂದೆಲ್ಲಾ ಯೋಚಿಸುತ್ತಾ ಕದವನ್ನು ತೆರೆದನು.

ಹೊರಗೆ ನಿಂತಿರುವ ವೃದ್ಧನ ಚರಣಕ್ಕೆರಗಿ ಭಯದಿಂದ ಇಳೆಯಾಂಡ ಗುಡಿಮಾರನಿರುವುದನ್ನು ಕಂಡ ಆ ವೃದ್ಧನು ಚಳಿ ಮಗನೆ ಚಳಿ, ಚಳಿ ಜೀವವಿಡೀ ವ್ಯಾಪಿಸಿತು. ಶೀತವಾಗುತ್ತಿದೆ. ಮಗನೇ! ನಿಲ್ಲಲು ಆಗುತ್ತಿಲ್ಲ. ಕೈಕಾಲುಗಳು ಸುರುಟಿ ಹೋಗುತ್ತಿವೆ. ಹಲವು ಮಾತೇನು! ಶರೀರದ ಅವಯವಗಳೆಲ್ಲವೂ ಮರಗಟ್ಟಿ ಹೋಗಿವೆ. ಮನಸ್ಸು ಚಳಿಗೆ ಒಡೆದು ಹೋಗಿದೆ. ಶರೀರ ಮಳೆಗೆ ಸೀಳಿ ಹೋಗಿದೆ" ಎಂದು ನಡುನಡುಗಿ ಹೇಳಲು ಇಳೆಯಾಂಡ ಗುಡಿಮಾರನು ಆ ವೃದ್ಧನನ್ನು ಒಳಗಡೆ ಕರೆದುಕೊಂಡು ಹೋಗುತ್ತಾನೆ. ಇಬ್ಬರಿಗೆ ಮಾತ್ರ ವಾಸವಾಗಲು ಸಾಧ್ಯವಿರುವ ಮಾಳಿಗೆಯಲ್ಲಿ ವೃದ್ಧನನ್ನು ಕುಳ್ಳಿರಿಸಿ ಆತನ ಚಳಿಯನ್ನು ಹೋಗಲಾಡಿಸಲು ಆ ಮಳಿಗೆಗೆ ಹಾಸಲಾದ ಅಡ್ಡವನ್ನು ತೆಗೆದು ಅದರಿಂದ ಇಳೆಯಾಂಡಗುಡಿಮಾರನು ಬೆಂಕಿಯನ್ನು ಮಾಡಿದನು. ಚಳಿಯನ್ನು ನಟಿಸುತ್ತಿರುವ ಶಿವನ ಶರೀರವನ್ನು ಒತ್ತಿ ಬೆಚ್ಚಾಗಾಗಿಸಲು ಇಳೆಯಾಂಡ ಗುಡಿಮಾರನು ಪ್ರಯತ್ನಿಸುವುದನ್ನು ನೋಡಿ ಆತನಲ್ಲಿರುವ ಭಕ್ತಿಯ ಸ್ವರೂಪಕ್ಕೆ ಶಿವನು ಆಶ್ಚರ್ಯಪಟ್ಟನು.

ಚಳಿ ನಿಧಾನವಾಗಿ ಮಾಯವಾಗಲು ವೃದ್ಧನು ಶಿವ ಹಸಿವು ಹಸಿವು ಎಂದು ಕೂಗಾಡುತ್ತ ಹಿಂದು ಮುಂದು ನೋಡುತ್ತಿರಲು ಇಳೆಯಾಂಡಮಾರನಿಗೆ ದುಃಖವೇ ಉಮ್ಮಳಿಸಿ ಬಂತು. ಮೂರು ದಿನದಿಂದ ಉಪವಾಸವಿರುವ ಇಳೆಯಾಂಡ ಗುಡಿಮಾರನು ತನ್ನ ಮನೆಯಾಕೆಯ ಮುಖವನ್ನು ನೋಡಲು ಆಕೆ ಒಂದು ಕ್ಷಣ ಚಿಂತಿಸಿ ಮೊನ್ನೆ ತಾನೆ ಬಿತ್ತಿದ ಮೊಳೆ ಬಿತ್ತನ್ನು ತರಲು ಹೇಳುತ್ತಾಳೆ. ಇದರ ಮೂಲಕ ಶಿವನ ಹಸಿವನ್ನು ಹೋಗಲಾಡಿಸುತ್ತೇನೆ ಎಂದು ನಿರ್ಧರಿಸಿದ ಇಳೆಯಾಂಡ ಗುಡಿಮಾರನು ಆ ಕತ್ತಲೆಯಲ್ಲೇ ತನ್ನ ಗದ್ದೆಯ ಕಡೆಗೆ ಹೋದನು. ಆ ಕ್ಷಣ ಮಳೆ ಹೆಚ್ಚಾಗಿ ಚಳಿ ಜೋರಾಗಿ ಕತ್ತಲೆ ಇಡೀ ವ್ಯಾಪಿಸಿತು. ಊರಿನ

ಹೊರಗಿರುವ ಗದ್ದೆಯ ಕಡೆಗೆ ಹೊರಟ ಇಳೆಯಾಂಡಗುಡಿಮಾರ ಹಳ್ಳಗಳನ್ನು ತೊರೆಗಳನ್ನು ಕೆರೆಗಳನ್ನು ಈಜಿ ದಾಟಿ ಹೋಗಿ ಗದ್ದೆಯಲ್ಲಿದ್ದ ಮೊಳೆತ ಬಿತ್ತನ್ನು ಪ್ರೀತಿಯಿಂದ ತಂದು ದೊಡ್ಡ ಬುಟ್ಟಿಯಲ್ಲಿ ಹಾಕಿದನು. ಹರನು ಹಸಿದಿರುವನು ಎಂದು ಅತಿ ಬೇಗನೆ ಬಂದು ಆ ಮೊಳೆತ ಭತ್ತವನ್ನು ತನ್ನ ಪತ್ನಿಯ ಕೈಗೆ ಕೊಟ್ಟನು. ಆಕೆ ಸಂತೋಷದಿಂದ ಅದನ್ನು ಹುರಿದು ಅಮೃತಾನ್ನಕ್ಕೆ ಸಮನಾದ ಅನ್ನವಾಗಿಸಿ ಕೀರೆ ಸೊಪ್ಪಿನ ಮೇಲೋಗರವನ್ನು ಮಾಡಿ ಊಟಕ್ಕೆ ಅಣಿಮಾಡಿದಳು. ಈ ಸಂದರ್ಭದಲ್ಲಿ ಊಟ ಬಡಿಸಲು ಬಾಳೆ ಎಲೆಯನ್ನು ತರುವುದಕ್ಕಾಗಿ ಮಗನನ್ನು ಕಳುಹಿಸಿದನು. ಬಾಳೆ ಎಲೆಯನ್ನು ಕೊಯ್ಯುತ್ತಿದ್ದ ಮಗನನ್ನು ಶಿವನ ಆಣತಿಯಂತೆ ಹಾವೊಂದು ಕಚ್ಚಿ ಮಗನು ಸತ್ತು ಹೋಗುತ್ತಾನೆ.

ವೃದ್ಧ ವೇಷಧಾರಿ ಶಿವನು ಜೋರು ಹಸಿವಾಗುತ್ತಿದೆ ಎಂದು ಬೊಬ್ಬಿರಿಯಲು ಮಗನನ್ನು ಹುಡುಕುತ್ತಾ ಇಳೆಯಾಂಡ ಗುಡಿಮಾರನು ಬಾಳೆ ತೋಟಕ್ಕೆ ಬಂದಾಗ ಮಗ ಸತ್ತು ಬಿದ್ದುದನ್ನು ನೋಡುತ್ತಾನೆ. ಇದನ್ನು ಅರಿತು ವೃದ್ಧನು ಉಣದಿದ್ದರೆ ಎಂದು ಭಾವಿಸಿದ ಇಳೆಯಾಂಡ ಗುಡಿಮಾರನು ವೃದ್ಧನು ಸಂತಸದಿಂದ ಊಟ ಮಾಡಲಿ ಎಂದು ಬಾಳೆಲೆಯನ್ನು ವೃದ್ಧ ಶಿವಭಕ್ತನ ಮುಂದೆ ಇಟ್ಟನು.

ಎಲೆಗೆ ನೀರನ್ನು ತಳಿದು ಒರೆಸಿ ಪರಿಶುದ್ಧವಾದ ಅನ್ನವನ್ನು ಹಾಕಿ, ಕೀರೆಯ ಸೊಪ್ಪಿನ ಮೇಲೋಗರನವನ್ನು ಹಾಕಿ ಊಟ ಮಾಡಿ ಎಂದು ಸಂತಸದಿಂದ ಹೇಳಿದನು. 'ಆಗ ಶಿವನು ಒಬ್ಬನೇ ಊಟಮಾಡುವುದಿಲ್ಲ. ಶಿವನ ಭಕ್ತರು ಜೊತೆಯಲ್ಲಿ ಸಾಲಾಗಿ ಕುಳಿತು ಊಟ ಮಾಡುವುದು. ತಂದೆ ಮಕ್ಕಳು ತನ್ನ ಹತ್ತಿರ ನಿಂತಿದ್ದರೆ ಮಾತ್ರ ತಾನು ಊಟ ಮಾಡುತ್ತೇನೆ' ಎಂದು ಹೇಳಿದನು. ಇಳೆಯಾಂಡ ಗುಡಿಮಾರನು ದಿಕ್ಕೇ ತೋಚದಂತವನಾಗುತ್ತಾನೆ. ಶಿವನು ಮಗನಿಲ್ಲದಿದ್ದರೆ ಊಟ ಮಾಡಲಾರ. ನಿಜ ವಿಚಾರವನ್ನು ಹೇಳಿದರೂ ಊಟ ಮಾಡಲಾರ. ಆದುದರಿಂದ ಶಿವನೇ! ಕೊನೆಯದಾಗಿ ಸತ್ತು ಬಿದ್ದಿರುವ ಮಗನನ್ನು ಕರೆದು ನೋಡುತ್ತೇನೆ. ಏಳದಿದ್ದರೆ ಆ ಶಿವನಿಗೆ ನನ್ನ ಶಿರಸ್ಸನ್ನೇ ಕಡಿದು ಒಪ್ಪಿಸುತ್ತೇನೆ ಎಂದು ತೀರ್ಮಾನಿಸಿದ.

ಮಗನ ಹತ್ತಿರ ನಡೆದು ಬಂದು ಆತನನ್ನು ಕರೆಯಲು ಆತ ನಿದ್ರೆಯಿಂದ ಎದ್ದಂತೆ ಏಳಲು ಆತನನ್ನು ಕರೆದುಕೊಂಡು ಮನೆಗೆ ಬಂದನು. ಆಗ ಅಲ್ಲಿ ವೃದ್ಧನ ಬದಲಾಗಿ ಸೂರ್ಯಕೋಟಿಯನ್ನೇ ಮೀರಿಸುವ ಪ್ರಭೆಯಿರುವ ಶಿವನನ್ನು ನೋಡಿದನು. ತಕ್ಷಣವೇ ಇಳೆಯಾಂಡ ಗುಡಿಮಾರನು ಆತನ ಚರಣಕ್ಕೆ ಬಿದ್ದು ಸಂತೋಷದಿಂದ 'ಈ ಇರುಳು ಮುಪ್ಪಿನಿಂದ ಕೂಡಿದ ವೇಷವನ್ನು ಧರಿಸಿ ಈ ಚಳಿ ಮಳೆಗೆ ತನ್ನ ಮೇಲೆ ಮನಂಗೊಂಡು ಬರಬಹುದೇ? ಇಂದಿಗೆ ನನ್ನ ಕೆಲಸವು ಸಾರ್ಥಕವಾಯಿತು. ಕೇಳು ಗಿರಿಜೆಯರಸ, ಚಳಿಯಾಗುತ್ತಿದೆಯೇ? ಎಂದು ಮುಗ್ಧತೆಯಿಂದ ಕೇಳುವ ಇಳೆಯಾಂಡ ಗುಡಿಮಾರನನ್ನು ಶಿವನು ಸ್ನೇಹದಿಂದ ನೋಡುತ್ತಿದ್ದನು. ಇಳೆಯಾಂಡ ಗುಡಿಮಾರನ ನಿಜಭಕ್ತಿಯನ್ನು ಕಂಡು ಶಿವ ತನ್ನ ಪಕ್ಕದಲ್ಲಿ ನಿಂತಿದ್ದ ನಂದಿಯಲ್ಲಿ 'ಇಂತಹ ಸ್ನೇಹವನ್ನು ನಾನು ನೋಡಿದುದುದಿಲ್ಲ. ಇಂತಹ ಮಳೆಯಲ್ಲಿ ಚಳಿಯಲ್ಲಿ ಮೊಳೆತ ಬಿತ್ತನ್ನು ತರುವವರಿರುವರೇ? ಮಗನ ಸಾವನ್ನು ಬದಿಗಿಟ್ಟು ಶಿವಭಕ್ತರಿಗೆ ಊಟ ಬಡಿಸಿದವರಿರುವರೇ? ಈ ಲೋಕದಲ್ಲಿ ಇಂತಹ ಕಪಟವಿಲ್ಲದವರುಂಟೆ' ಎಂದು ಕೊಂಡಾಡಿದನು.

ಆಗ ದೇವತೆಗಳು ಪುಷ್ಪವೃಷ್ಟಿಯನ್ನು ಮಾಡಿದರು. ಚಿನ್ನದ ವಿಮಾನದಲ್ಲಿ ಇಳೆಯಾಂಡ ಗುಡಿಮಾರನು ಕರೆದೊಯ್ಯಲು ಶಿವನು ತನ್ನ ಸತ್ಕಾರವನ್ನು ಸ್ವೀರಿಸದೆ ಹೋಗುವುದೇ? ಎಂದು ಕೇಳಲು ಭಕ್ತನಿಚ್ಛೆಯಂತೆ ಶಿವನು ಅದನ್ನು ಸ್ವೀಕರಿಸಿದನು. ಆ ನಂತರ ಶಿವನು ಗಿರಿಜೆ ಹಾಗೂ ಶಿವಗಣ ಸಮೇತನಾಗಿ ಕೈಲಾಸಕ್ಕೆ ಇಳೆಯಾಂಡ ಗುಡಿಮಾರನನ್ನು ಕೊಂಡೊಯ್ದನು.

## ಒಂದು ವಾಕ್ಯದಲ್ಲಿ ಉತ್ತರಿಸುವುದು

ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಈ ಪ್ರಶ್ನೆಗಳನ್ನು ಉತ್ತರಿಸಲಿ. ಇಡೀ ತರಗತಿಗೆ ಈ ಪ್ರಶ್ನೆಗಳನ್ನು ಕೇಳುವುದರೊಂದಿಗೆ ವಿದ್ಯಾರ್ಥಿಗಳು ಸ್ವಯಂ ಪ್ರೇರಿತವಾಗಿ ಉತ್ತರಗಳನ್ನು ಒಬ್ಬೊಬ್ಬರೇ ಹೇಳುವಂತೆ ಮಾಡುವುದು. ಅಧ್ಯಾಪಕರು ಸೂಕ್ತ ತಿದ್ದುಪಡಿಗಳನ್ನು ಸೂಚಿಸುವುದು. ಆ ನಂತರ ವಿದ್ಯಾರ್ಥಿಗಳು ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಲಿಕಾ ಚಟುವಟಿಕೆ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲಿ.

## ಸಂಕ್ಷಿಪ್ತವಾಗಿ ಉತ್ತರಿಸುವುದು

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿಸಿ ಗುಂಪೊಂದಕ್ಕೆ ತಲಾ ಒಂದರಂತೆ ಪ್ರಶ್ನೆಯನ್ನು ಕೊಡುವುದು. ಗುಂಪುಗಳು ಉತ್ತರವನ್ನು ಬರೆದು ಮಂಡಿಸಲಿ. ಉತ್ತರವನ್ನು ಚರ್ಚೆಯ ಮೂಲಕ ಪರಿಷ್ಕರಿಸಿ ಎಲ್ಲಾ ಪ್ರಶ್ನೆಗಳ ಉತ್ತರವನ್ನು ಚಟುವಟಿಕೆ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲಿ.

## ಚಟುವಟಿಕೆ

ವಿದ್ಯಾರ್ಥಿಗಳು ಇಳೆಯಾಂಡ ಗುಡಿಮಾರನ ಶಿವಭಕ್ತಿಯ ಕುರಿತು ಆರಂಭದಲ್ಲಿ ಮುಖ್ಯವಾದ ವಿಚಾರಗಳನ್ನು ಬಾಯ್ದೆರೆಯಾಗಿ ಹೇಳಲಿ. ಅದನ್ನು ಅಧ್ಯಾಪಕರು ಕರಿ ಹಲಗೆಯಲ್ಲಿ ಬರೆಯುವುದು. ಅದನ್ನು ಅನುಕ್ರಮವಾಗಿಸಿ ವಿದ್ಯಾರ್ಥಿಗಳು ಬರೆದಿಟ್ಟುಕೊಂಡು ಇಳೆಯಾಂಡ ಗುಡಿಮಾರನ ಶಿವಭಕ್ತಿಯ ಸ್ವರೂಪದ ಕುರಿತಾಗಿ ಲೇಖನವನ್ನು ಸಿದ್ಧ ಪಡಿಸಲಿ. ಗುಂಪಿನಲ್ಲಿ ಓದಿ ಪರಿಷ್ಕರಿಸಿ ಗುಂಪಿಗೊಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಹಾಯದಿಂದ ಪರಿಷ್ಕೃತಗೊಂಡ ಲೇಖನವನ್ನು ವಿದ್ಯಾರ್ಥಿಗಳೆಲ್ಲರೂ ಬರೆದಿಟ್ಟುಕೊಳ್ಳಲಿ.

ಈ ಲೇಖನದಲ್ಲಿ ಒಳಗೊಳ್ಳಬಹುದಾದ ಅಂಶಗಳು.

- ಇಳೆಯಾಂಡ ಗುಡಿಮಾರನ ಭಕ್ತಿ ಎಂಬ ಬೇಸಾಯ
- ಆತನ ದಾನಶೀಲ ಗುಣ
- ಪ್ರತಿಯೊಬ್ಬ ಶಿವಭಕ್ತನಲ್ಲೂ ಶಿವನನ್ನು ಕಾಣುವ ಅವನ ಸ್ವಭಾವ.
- ತನಗೇನೂ ಇಟ್ಟುಕೊಳ್ಳದೆ ತನ್ನ ಜೀವವನ್ನೇ ಶಿವಭಕ್ತರಿಗೆ ಕೊಡುವ ಮನಸ್ಸಿನ ಇಳೆಯಾಂಡ ಗುಡಿಮಾರ ಹಾಗೂ ಅವನ ಮನೆಯವರು.
- ತನ್ನ ಮಗನು ಮಡಿದು ಬಿದ್ದರೂ ಶಿವಭಕ್ತನ ಹಸಿವನ್ನು ಹೋಗಲಾಡಿಸುವ ಇಳೆಯಾಂಡ ಗುಡಿಮಾರನ ದೃಢವಾದ ಭಕ್ತಿ.
- ದೃಢವಾದ ಭಕ್ತಿಗೆ ಶಿವನೂ ಮಾರು ಹೋಗುವುದು.

**ಸಂಭಾಷಣೆ ಬರೆಯುವುದು**

ಹರಿಹರನ ಕಾವ್ಯದಲ್ಲಿ ಇಳೆಯಾಂಡ ಗುಡಿಮಾರನು ಹಾಗೂ ವೃದ್ಧ ವೇಷಧಾರಿಯಾದ ಶಿವ ಇವರ ನಡುವೆ ಅತ್ಯಂತ ರಸವತ್ತಾದ ಸಂಭಾಷಣೆ ಇದೆ. ಆ ಸಂಭಾಷಣೆಯನ್ನು ವಿದ್ಯಾರ್ಥಿಗಳು ಹೊಸಗನ್ನಡದಲ್ಲಿ ಬರೆಯಲಿ. ಮೊದಲಿಗೆ ಗುಂಪಿನಲ್ಲಿ ಚರ್ಚಿಸಿ ಗುಂಪಿಗೊಂದರಂತೆ ಸಂಭಾಷಣೆಯನ್ನು ತಯಾರಿಸಲಿ. ಪ್ರತಿ ಗುಂಪಿನವರು ತಮ್ಮಲ್ಲಿ ಪಾತ್ರವನ್ನು ಹಂಚಿಕೊಂಡು ಸ್ವರಭಾರ ಸಹಿತವಾಗಿ ತರಗತಿಯಲ್ಲಿ ಓದಲಿ. ಪರಸ್ಪರ ಹೋಲಿಸಿ ಮತ್ತು ಅಧ್ಯಾಪಕರ ಸೂಚನೆಯಂತೆ ಪರಿಷ್ಕರಿಸಿ ಕೊಳ್ಳಲಿ. ಅದನ್ನು ಬ್ಲಾಗ್‌ನಲ್ಲಿ ಪ್ರಕಟಿಸಲಿ. ಹೊಸಗನ್ನಡದಲ್ಲಿ ಬರೆದ ಸಂಭಾಷಣೆಯನ್ನು ಉಪಯೋಗಿಸಿಕೊಂಡು ಏಕಪಾತ್ರಾಭಿನಯವನ್ನೂ ಮಾಡಲಿ.

**ಅತಿಥಿ ಸತ್ಕಾರ – ಲೇಖನ**

ವಿದ್ಯಾರ್ಥಿಗಳು ಅತಿಥಿಸತ್ಕಾರದ ಬಗ್ಗೆ ತಮ್ಮ ತಮ್ಮ ಮನೆಗಳಲ್ಲಿ ನಡೆದುಕೊಂಡು ಬಂದಿರುವ ರೀತಿಯನ್ನು ಕುರಿತು ತರಗತಿಯಲ್ಲಿ ಚರ್ಚಿಸಲಿ. ಚರ್ಚೆಯಲ್ಲಿ ಮೂಡಿಬಂದ ಆಶಯವನ್ನು ಕ್ರೋಡೀಕರಿಸಿ ವಿದ್ಯಾರ್ಥಿಗಳು ಅತಿಥಿ ಸತ್ಕಾರದ ಕುರಿತು ಲೇಖನ ಸಿದ್ಧ ಪಡಿಸಲಿ. ಗುಂಪಿನಲ್ಲಿ ಲೇಖನವನ್ನು ಮಂಡಿಸಲಿ. ಉತ್ತಮವಾದ ಲೇಖನವನ್ನು ಅಧ್ಯಾಪಕರ ತಿದ್ದುಪಡಿಯೊಂದಿಗೆ ಗುಂಪಿಗೊಂದರಂತೆ ತರಗತಿಯ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲಿ.

**ಕಥೆಯನ್ನು ಬರೆಯುವುದು**

ಹರಿಹರನ ರಗಳೆಗಳ ಸಂಕಲನವೊಂದನ್ನು ಉಪಯೋಗಿಸಿಕೊಂಡು ಹರಿಹರನ ಯಾವುದಾದರೂ ಎರಡು ರಗಳೆಗಳನ್ನು ವಿದ್ಯಾರ್ಥಿಗಳು ಓದಲಿ. ಅಲ್ಲಿ ಬಂದಿರುವ ಕತೆಗಳನ್ನು ಸಂಗ್ರಹವಾಗಿ ಬರೆದಿಟ್ಟುಕೊಳ್ಳಲಿ. ಅಧ್ಯಾಪಕರ ಸಹಾಯದಿಂದ ಅವುಗಳನ್ನು ಪರಿಷ್ಕರಿಸಿ ಭಿತ್ತಿ ಪತ್ರಿಕೆಯನ್ನು ಪ್ರಕಟಿಸಲಿ.

**ಓದಿನ ಟಿಪ್ಪಣಿ**

ಸಂತ ಕಬೀರದಾಸನ ಕುರಿತಾದ ಪುಸ್ತಕಗಳನ್ನು ಸಂಗ್ರಹಿಸಿ ಪ್ರತಿಯೊಬ್ಬರೂ ಓದುವಂತೆ ಮಾಡುವುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ಓದಿನ ಟಿಪ್ಪಣಿಯನ್ನು ಬರೆಯಲಿ. ಗುಂಪಿನಲ್ಲಿ ಮಂಡಿಸಿ ಅಧ್ಯಾಪಕರ ಸಹಾಯದಿಂದ ಪರಿಷ್ಕರಿಸಿ ಓದಿನ ಟಿಪ್ಪಣಿ ಪುಸ್ತಕದಲ್ಲಿ ಬರೆದುಕೊಳ್ಳಲಿ.

**ಭಾಷಾಭ್ಯಾಸ**

**ಪರ್ಯಾಯ ಪದಗಳು**

ಪದ್ಯಭಾಗದಲ್ಲಿ ಕೊಟ್ಟಿರುವ ಪದಗಳಿಗೆ ಶಬ್ದಕೋಶದ ಸಹಾಯದಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಪರ್ಯಾಯ ಪದಗಳನ್ನು ಪಟ್ಟಿಮಾಡಲಿ. ಗುಂಪಿನಲ್ಲಿ ಅದನ್ನು ಮಂಡಿಸಲಿ. ಗುಂಪಿನಿಂದ ಒಬ್ಬರಂತೆ ತರಗತಿಯಲ್ಲಿ ಮಂಡಿಸಲಿ. ಇತರ ವಿದ್ಯಾರ್ಥಿಗಳು ತಮಗೆ ದೊರಕದ ಪರ್ಯಾಯ ಪದಗಳನ್ನು 'ಚಟುವಟಿಕೆ ಪುಸ್ತಕ' ದಲ್ಲಿ ಬರೆದಿಟ್ಟುಕೊಳ್ಳಲಿ.

ಶಿವ – ಶಂಭು, ಪಶುಪತಿ, ಮಹೇಶ್ವರ, ಶಂಕರ, ಚಂದ್ರಶೇಖರ, ಇಂದುಧರ, ಭೂತೇಶ .

ನೀರು – ವಾರಿ, ಸಲಿಲ, ಜಲ, ಉದಕ, ಅಂಬು

ಹೇಮ – ಚಿನ್ನ, ಸ್ವರ್ಣ, ಸುವರ್ಣ, ಕನಕ, ಹಿರಣ್ಯ, ಕಾಂಚನ

ವೃದ್ಧ – ಮುದುಕ, ಮುದಿಯ

**ಸಂಸ್ಕೃತ ರೂಪಗಳು**

ವಿದ್ಯಾರ್ಥಿಗಳು ಪಠ್ಯಭಾಗದಲ್ಲಿ ಕೊಟ್ಟ ತದ್ಭವ ಪದಗಳಿಗೆ ಶಬ್ದಕೋಶದ ಸಹಾಯದಿಂದ ಸಂಸ್ಕೃತ ರೂಪಗಳನ್ನು ಕಂಡುಕೊಳ್ಳಲಿ. ಅವುಗಳನ್ನು ಗುಂಪಿನಲ್ಲಿ ಮಂಡಿಸಿ ಪರಿಷ್ಕರಿಸಿ ಗಣಕಯಂತ್ರದ ಸಹಾಯದಿಂದ ಛಾಪಿಸಿ ತರಗತಿಯಲ್ಲಿ ಪ್ರದರ್ಶಿಸಲಿ. ಅದನ್ನು ಇತರ ವಿದ್ಯಾರ್ಥಿಗಳು ಚಟುವಟಿಕೆ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಲಿ.

ಬಕುತ–ಭಕ್ತ, ಸಂತಸ–ಸಂತೋಷ, ಚಾಗಿ–ತ್ಯಾಗಿ, ಹರುಷ–ಹರ್ಷ, ಹರಣ–ಪ್ರಾಣ, ಬರಿಸ–ವರ್ಷ, ಮೊಗ–ಮುಖ, ನಿದ್ದೆ–ನಿದ್ರಾ, ನೇಹ–ಸ್ನೇಹ.

- **ಪ ಕಾರಯುಕ್ತ ಪದಗಳು ಹ ಕಾರಯುಕ್ತವಾಗುವುದು**

ವಿದ್ಯಾರ್ಥಿಗಳು ಪದ್ಯಭಾಗವನ್ನು ಓದಿ ಪಕಾರಯುಕ್ತ ಪದಗಳನ್ನು ಪಟ್ಟಿ ಮಾಡಿಕೊಳ್ಳಲಿ. ಅದು ಹೇಗೆ ಹೊಸಗನ್ನಡ ರೂಪದಲ್ಲಿ ಹಕಾರಯುಕ್ತ ಪದಗಳಾಗಿ ಬದಲಾಗಿವೆ ಎಂದು ಚರ್ಚಿಸಿ ಬರೆಯಲಿ. ಗುಂಪಿಗೊಂದರಂತೆ ಪಟ್ಟಿಯೊಂದನ್ನು ತಯಾರಿಸಿ ತರಗತಿಯಲ್ಲಿ ಪ್ರದರ್ಶಿಸಲಿ. ಇತರ ವಿದ್ಯಾರ್ಥಿಗಳು ಚಟುವಟಿಕೆ ಪುಸ್ತಕದಲ್ಲಿಅವನ್ನು ಬರೆದುಕೊಳ್ಳಲಿ.

ಪೊಱ –ಹೊರ, ಪೆರ್ಚ–ಹೆಚ್ಚ, ಪಿರಿದು–ಹಿರಿದು, ಪೊಗಳು–ಹೊಗಳು, ಪೊದೆದ–ಹೊದೆದ, ಪೊಸತು–ಹೊಸತು, ಪೊಕ್ಕು–ಹೊಕ್ಕು, ಪಲವು–ಹಲವು, ಪೋಗು–ಹೋಗು, ಪಸಿವು–ಹಸಿವು,ಕಳುಪಲ್ಪಡು–ಕಳುಹಲ್ಪಡು, ಪಿಡಿಯಲು–ಹಿಡಿಯಲು, ಪಾಸು–ಹಾಸು.

**ಸಮಾಸ**

ಪಠ್ಯಭಾಗದಲ್ಲಿ ಕೊಟ್ಟಿರುವ ಸಮಸ್ತ ಪದಗಳಿಗೆ ವಿದ್ಯಾರ್ಥಿಗಳು ವಿಗ್ರಹ ವಾಕ್ಯಗಳನ್ನು ಕರಿಹಲಗೆಯಲ್ಲಿ ಬರೆಯಲಿ. ತಪ್ಪಿದ್ದಲ್ಲಿ ಅಧ್ಯಾಪಕರ ಸೂಚನೆಯಂತೆ ಪರಿಷ್ಕರಿಸಲಿ. ಸಮಾಸಗಳನ್ನು ವಿದ್ಯಾರ್ಥಿಗಳು ಹೆಸರಿಸಲಿ.

ಇಂದುವನ್ನು ಧರಿಸಿದವನು – ಇಂದುಧರ – ಬಹುವ್ರೀಹಿ ಸಮಾಸ

ನಡು ಇರುಳ/ಇರುಳ ನಡು – ನಟ್ಟಿರುಳು – ಅಂಶೀ ಸಮಾಸ

ಮೊಳೆತ ಬಿತ್ತು – ಮೊಳೆವಿತ್ತು – ಕರ್ಮಧಾರಯ ಸಮಾಸ

## ಲಲಿತ ರಗಳೆ

ಅಧ್ಯಾಪಕರು ಲಲಿತರಗಳೆಯ ನಾಲ್ಕು ಸಾಲುಗಳನ್ನು ಕರಿಹಲಗೆಯಲ್ಲಿ ಬರೆಯುವುದು. ವಿದ್ಯಾರ್ಥಿಗಳಲ್ಲಿ ಒಬ್ಬೊಬ್ಬರಂತೆ ಒಂದೊಂದು ಸಾಲಿಗೆ ಪ್ರಸ್ತಾರ ಹಾಕಲಿ. ಒಂದೊಂದು ಸಾಲಿಗೆ ಒಬ್ಬೊಬ್ಬರಂತೆ ಐದೈದು ಮಾತ್ರೆಗಳ ಗಣಗಳನ್ನು ವಿಭಾಗ ಮಾಡಲಿ. ಈ ಗಣ ವಿಭಾಗದ ಹಿನ್ನೆಲೆಯಲ್ಲಿ ಲಲಿತರಗಳೆಯ ನಿಯಮವನ್ನು ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಹೇಳುವಂತೆ ಮಾಡುವುದು. ಇದನ್ನು ಆಧಾರವಾಗಿಟ್ಟುಕೊಂಡು ವಿದ್ಯಾರ್ಥಿಗಳು ಇತರ ನಾಲ್ಕು ಸಾಲುಗಳಿಗೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ನಿಯಮಗಳನ್ನು ಬರೆದುಕೊಳ್ಳಲಿ.

# ಧರೆ ಮೆಚ್ಚದಣ್ಣ ಸೋದರರ ಕಾಳಗಕೆ

## ಪ್ರವೇಶ

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯುವುದಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳುವುದು.

- ಭ್ರಾತೃಪ್ರೇಮದ ಕುರಿತು ತಿಳಿದಿದ್ದೀರಾ?
- ನಿಮಗೆ ತಿಳಿದಿರುವ ಆದರ್ಶ ಸಹೋದರರು ಯಾರು?
- ಸೋದರರು ಜಗಳವಾಡುವುದು ಸರಿಯೇ?

ವಿದ್ಯಾರ್ಥಿಗಳು ಪ್ರತಿಕ್ರಿಯೆ ನೀಡುವರು. ಬಳಿಕ ಜೈನ ಪುರಾಣದಲ್ಲಿ ಬರುವ ಭರತ ಬಾಹುಬಲಿ ಎಂಬ ಕಾವ್ಯಭಾಗವು ಭ್ರಾತೃಪ್ರೇಮದ ಕಥೆಗೆ ಸೇರ್ಪಡೆ ಎಂದು ಪಾಠದ ಉದ್ದೇಶವನ್ನು ತಿಳಿಸುವುದು.

ರತ್ನಾಕರವರ್ಣಿ 16ನೇ ಶತಮಾನದ ಜೈನಕವಿ, ಸಾಂಗತ್ಯ ಕವಿಗಳಲ್ಲಿ ಅಗ್ರಗಣ್ಯನಾದವನು. ಅವನು ತನ್ನ 'ಭರತೇಶ ವೈಭವ' ದಲ್ಲಿ ಜೈನ ಮಹಾಪುರುಷರಲ್ಲಿ (ತ್ರಿಷಷ್ಠಿ ಶಲಾಕಾಪುರುಷರಲ್ಲಿ) ಒಬ್ಬನಾದ ಭರತ ಚಕ್ರವರ್ತಿಯ ಕಥೆಯನ್ನು ಸಾಂಗತ್ಯ ಪ್ರಕಾರದಲ್ಲಿ ಹೇಳಿದ್ದಾನೆ. ಪ್ರಸ್ತುತ ಪಠ್ಯಭಾಗದಲ್ಲಿ ಭರತ–ಬಾಹುಬಲಿಯ ಸೋದರ ಸಂಬಂಧದ ಕತೆಯನ್ನು ಹೇಳಲಾಗಿದೆ.

ಅಧ್ಯಾಪಕರು ವಿದ್ಯಾರ್ಥಿಗಳಿಗೆ ಕಥಾ ಸಂದರ್ಭವನ್ನು ಸಂಕ್ಷಿಪ್ತವಾಗಿ ತಿಳಿಸುವುದು.

ವಿದ್ಯಾರ್ಥಿಗಳಿಂದ "ಧರೆ ಮೆಚ್ಚದಣ್ಣ ಸೋದರರ ಕಾಳಗಕೆ" ಎಂಬ ಪದ್ಯಭಾಗವನ್ನು ಓದಿಸುವುದು/ಹಾಡಿಸುವುದು. ಅಡಕ ಮುದ್ರಿಕೆಯನ್ನು ಕೇಳಿಸುವುದು. ಅಧ್ಯಾಪಕರು ಓದುವುದು.

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡಿ ಓದಿದ ಪದ್ಯಭಾಗದ ಪದಗಳನ್ನು ವಿಂಗಡಿಸಲು ಹೇಳುವುದು. ಅಧ್ಯಾಪಕರ ನೆರವಿನೊಂದಿಗೆ ವಿಂಗಡಿಸಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

ಬಳಿಕ ನವೀನ ಪದಗಳನ್ನು ಗುರುತಿಸಿ, ಅರ್ಥಕೋಶದ ಸಹಾಯದಿಂದ ಅರ್ಥಗಳನ್ನು ಬರೆದುಕೊಳ್ಳಲಿ.

## ಆಶಯಗ್ರಹಣ

ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ಮಾಡುವುದು. ಪ್ರತಿ ಗುಂಪಿನವರು ಪದ್ಯಭಾಗವನ್ನು ಓದಿ ಸಾಧ್ಯವಿದ್ದಷ್ಟು ಪ್ರಶ್ನೆಗಳನ್ನು ರಚಿಸಲಿ. (ಪ್ರಶ್ನೆಗಳು ಆಶಯ, ಭಾಷೆಗೆ ಸಂಬಂಧಿಸಿವುಗಳಾಗಿರಲಿ)

ಪ್ರಶ್ನೋತ್ತರ ನಡೆಸುವುದು.

ಕಥೆಯನ್ನು ಸಂಗ್ರಹ ರೂಪದಲ್ಲಿ ಬರೆಯುವುದು.

ಗುಂಪುಗಳಿಗೆ ಪದ್ಯಭಾಗವನ್ನು ಸೂಕ್ತವಾಗಿ ಹಂಚುವುದು, ಅಯಾ ಗುಂಪಿನವರು ತಮಗೆ ದೊರೆತ ಕಾವ್ಯಭಾಗದ ಕುರಿತು ಚರ್ಚಿಸಿ ಸಾರಾಂಶವನ್ನು ಹೇಳಲಿ. ಅಧ್ಯಾಪಕರು ಕ್ರೋಡೀಕರಿಸಿದ ಬಳಿಕ ವಿದ್ಯಾರ್ಥಿಗಳು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

### ಟಿಪ್ಪಣಿ ತಯಾರಿ

### ಯುದ್ಧವನ್ನು ತೊಲಗಿಸಿದುದರ ಔಚಿತ್ಯ

ತಮ್ಮನೊಂದಿಗೆ ನಡೆಯಬೇಕಾಗಿದ್ದ ಯುದ್ಧವನ್ನು ಭರತೇಶನು ತೊಲಗಿಸಿದುದರ ಔಚಿತ್ಯವೇನು? ಎಂಬ ಪ್ರಶ್ನೆಯನ್ನು ವಿದ್ಯಾರ್ಥಿಗಳ ಮುಂದಿಡುವುದು. ಈಕುರಿತು ವಿದ್ಯಾರ್ಥಿಗಳು ತರಗತಿಯಲ್ಲಿ ಚರ್ಚಿಸಲಿ. ವಿದ್ಯಾರ್ಥಿಳೊಂದಿಗೆ ಟಿಪ್ಪಣಿಯ ಮಾನದಂಡಗಳನ್ನು ಚರ್ಚಿಸುವುದು.

- ವಿಷಯದ ಸಮಗ್ರತೆ
- ಭಾಷೆ– ಶೈಲಿ
- ಆಶಯ ಸ್ಪಷ್ಟತೆ
- ವಿಷಯದ ಕ್ರಮೀಕರಣ

ಈ ಅಂಶಗಳು ಮಾನದಂಡವಾಗಿರಲಿ. ಈ ಆಧಾರದಲ್ಲಿ ರಚಿಸಿದ ಟಿಪ್ಪಣಿಯನ್ನು ಪರಸ್ಪರ ಮೌಲ್ಯನಿರ್ಣಯ ಮಾಡುವುದು. ಅಧ್ಯಾಪಕರು ಕ್ರೋಡೀಕರಿಸಿದ ಬಳಿಕ ಚಟುವಟಿಕೆಯ ಪುಸ್ತಕದಲ್ಲಿ ಬರೆಯಲಿ.

### ಮಾದರಿ ಟಿಪ್ಪಣಿ

'ಬೇರೊಬ್ಬರು ಇದಿರಾದರೆ ನಿರ್ದಾಕ್ಷಿಣ್ಯವಾಗಿ ಅವರನ್ನು ಅಟ್ಟಿ ಮೆಟ್ಟುವೆನು; ಆದರೆ, ನಾವು ಸೋದರರು ಕಾಳಗಕ್ಕೆ ನಿಂತರೆ ಧರೆ ಮೆಚ್ಚದು' ಎಂದು ಭರತೇಶನು ಸೋದರರು ಪರಸ್ಪರ ಕಾದಾಡುವುದನ್ನು ವಿರೋಧಿಸುತ್ತಾನೆ. ಅದಕ್ಕೆ ಕಾರಣ ಜಿನಪುತ್ರರಾಗಿ ಕೆಟ್ಟ ಸಂಪ್ರದಾಯವನ್ನು ಹುಟ್ಟು ಹಾಕಬಾರದೆಂಬುದು ಭರತನ ವಿವೇಕವೇ ಆಗಿದೆ. ಆದ್ದರಿಂದ ಮಾತಿನ ಮೂಲಕ ಬಾಹಬಲಿಯನ್ನು ಸಂತೈಸಿ ಭರತೇಶನು ಯುದ್ಧವನ್ನು ತೊಲಗಿಸುತ್ತಾನೆ. ನಾನು ನಿಷ್ಕಾರಣವಾಗಿ ಯುದ್ಧವನ್ನು ಮಾಡಿದರೆ ಪ್ರಜೆಗಳಿಗೆ ಕೆಟ್ಟ ಮಾರ್ಗದರ್ಶನವನ್ನು ಮಾಡಿದಂತಾಗದೇ?

ನಿನಗಾನು ಪಗೆಯೆ ನೀನೆನಗೆ ಪಗೆಯೇ ಹೇಳು?<br>
ಜಿನಪುತ್ರರಿದನು ನಾವಿಂದು<br>
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹ ಶಾ<br>
ಸನವ ಬರೆದು ಕೊಟ್ಟೆವಲ್ತೆ

ಅದರಲ್ಲೂ ಜಿನಪುತ್ರರಾಗಿ ನಾವು ಕಾಳಗಕ್ಕೆ ಮುಂದಾಗುವುದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಪನ್ನಗ, ನರಸುರ ಲೋಕದ ಉತ್ತಮರು ಛಿ ಯೆನ್ನರೇ? ಯೋಚಿಸಿ ನೋಡು ಎಂಬುದು ಭರತೇಶನ ನಿಲುವು.

### ಲೇಖನ ತಯಾರಿ

ಶೀರ್ಷಿಕೆ ಎಂದರೇನು? ಎಂದು ವಿದ್ಯಾರ್ಥಿಗಳಲ್ಲಿ ಪ್ರಶ್ನಿಸುವುದು. ವಿದ್ಯಾರ್ಥಿಗಳು ತಮಗೆ ತಿಳಿದಂತೆ ಉತ್ತರಿಸುವರು.

'ಒಂದು ಲೇಖನದ ಕೇಂದ್ರ ಆಶಯವನ್ನು ಪ್ರತಿಬಿಂಬಿಸುವ ಸಂಕ್ಷಿಪ್ತ ತಲೆಬರಹವನ್ನು ಶೀರ್ಷಿಕೆ ಎನ್ನುವರು' ಎಂದು

ಅಧ್ಯಾಪಕರು ಸೂಚಿಸುವುದು. ಬಳಿಕ ಪ್ರಕೃತ ಭಾಗದ ಶೀರ್ಷಿಕೆ ಹೇಗಿರಬೇಕು ಎಂದು ವಿದ್ಯಾರ್ಥಿಗಳು ಚರ್ಚಿಸಲಿ. ವಿದ್ಯಾರ್ಥಿಗಳು ಶೀರ್ಷಿಕೆಯ ಕುರಿತಾದ ಮಾನದಂಡವನ್ನು ರೂಪಿಸಲಿ. ಮಾನದಂಡ ಹೀಗಿರಬಹುದು –

- ಸರಳವೂ ಸಂಕ್ಷಿಪ್ತವೂ ಆಗಿರಬೇಕು.
- ಲೇಖನದ ಆಶಯವನ್ನು ಬಿಂಬಿಸುವಂತಿರಬೇಕು.
- ಔಚಿತ್ಯ ಪೂರ್ಣವೂ ಆಕರ್ಷಣೀಯವೂ ಆಗಿರಬೇಕು.

ಬಳಿಕ 'ಧರೆ ಮೆಚ್ಚದಣ್ಣ ಸೋದರರ ಕಾಳಗಕೆ' – ಈ ಶೀರ್ಷಿಕೆಯ ಬಗ್ಗೆ ಚರ್ಚೆ ನಡೆಯಲಿ. ಅಧ್ಯಾಪಕರು ಕ್ರೋಡೀಕರಿಸಿದ ಬಳಿಕ ವಿದ್ಯಾರ್ಥಿಗಳು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

## ಪಾತ್ರಚಿತ್ರಣ

ಭರತನ ಪಾತ್ರಚಿತ್ರಣವನ್ನು ವಿದ್ಯಾರ್ಥಿಗಳು ಪಾಠಭಾಗದ ಆಧಾರದಲ್ಲಿ ನಡೆಸಬೇಕಾಗಿದೆ. ಅದಕ್ಕಾಗಿ ಭರತನ ಕುರಿತು ವಿದ್ಯಾರ್ಥಿಗಳು ಪರಸ್ಪರ ಅಥವಾ ಅಧ್ಯಾಪಕರೊಂದಿಗೆ ಚರ್ಚೆ ನಡೆಸಲಿ.

1, 4, 5, 6, 10, 12, 21, 33 – ಪದ್ಯಭಾಗದಲ್ಲಿ ಭರತನ ಪಾತ್ರವನ್ನು ಬಿಂಬಿಸುವ ಸಾಲುಗಳನ್ನು ಗುರುತಿಸಿ ಹೇಳಲಿ.

ವಿದ್ಯಾರ್ಥಿಗಳು ಪಠ್ಯಭಾಗದ ಆಯ್ದ ಸಾಲುಗಳಿಂದ ಭಾರತನ ಗುಣಸ್ವಭಾವವನ್ನು ತಿಳಿದುಕೊಂಡು ಚರ್ಚಿಸಿ ಪಾತ್ರಚಿತ್ರಣ ಲೇಖನವನ್ನು ಬರೆಯಲಿ.

## ಆಶಯ ಬರಹ

ಕೊಟ್ಟಿರುವ ಪದ್ಯಭಾಗದ ಆಶಯವನ್ನು ಸ್ಪಷ್ಟಪಡಿಸುವುದಕ್ಕಾಗಿ ಅಧ್ಯಾಪಕರು ಪೂರಕ ಪ್ರಶ್ನೆಗಳನ್ನು ಕೇಳುವುದು. ಆಶಯ ಸ್ಪಷ್ಟಪಡಿಸಿದ ಬಳಿಕ ಆಶಯ ಬರಹದ ಮಾನದಂಡಗಳ ಬಗ್ಗೆ ತಿಳಿಸುವುದು.

ಆಶಯ ಬರಹದ ಮಾನದಂಡಗಳು

- ಆಶಯ ಸ್ಪಷ್ಟತೆ
- ಕ್ರಮೀಕರಣ
- ಭಾಷೆ–ಶೈಲಿ
- ಆಶಯ ಸಮಗ್ರತೆ

ಬಳಿಕ ಪದ್ಯಭಾಗದ ಆಶಯವನ್ನು ತಿಳಿದು ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

### ಆಶಯ ಬರವಣಿಗೆ

ಬಂಗಾರದ ಬೆಟ್ಟ ಹಾಗೂ ಪಚ್ಚೆಯ ಬೆಟ್ಟಗಳು ಸೆಟೆದು ಪರಸ್ಪರ ಯುದ್ಧ ಕಳದಲ್ಲಿ ಮಸೆದು ನಿಂದುವೋ ಎಂಬಂತೆ, ಸುಂದರವೂ ದೀರ್ಘವೂ ಆದ ದೇಹಗಳನ್ನು (ಸೌಂದರಾಯುತ ದೀರ್ಘ ದೇಹಿಗಳು) ಹೊಂದಿದ ಅಣ್ಣ–ತಮ್ಮಂದಿರು ಎಂದರೆ ಭರತ–ಬಾಹುಬಲಿ ಶೋಭಿಸಿ ನಿಂತಿದ್ದರು. ಅಣ್ಣ ತಮ್ಮಂದಿರ ದೇಹದಾರ್ಢ್ಯ–ಗಾಂಭೀರ್ಯಗಳನ್ನು ಕುಂದಣದ ಪರ್ವತ ಹಾಗೂ ಪಚ್ಚೆ ಪರ್ವತಕ್ಕೆ ಕವಿ ಹೋಲಿಸಿರುವುದು ಇಲ್ಲಿಯ ವಿಶೇಷ. ಭರತನನ್ನು ಕುಂದಣದ ಅದ್ರಿಗೂ ಬಾಹುಬಲಿಯನ್ನು ಪಚ್ಚೆಯ ಗಿರಿಗೂ ಹೋಲಿಸಿದುದರಲ್ಲಿ ಅವರ ದೇಹದ ಬಣ್ಣವು ಸೂಚಿತವಾಗಿದೆ. ಭರತನು ಬಂಗಾರದ ಬಣ್ಣದವನಾಗಿಯೂ ಬಾಹುಬಲಿಯು ನಸುಕಪ್ಪು ಬಣ್ಣದವನಾಗಿಯೂ ಕಾಣಿಸುತ್ತಿದ್ದನು ಎಂಬುದು ತಾತ್ಪರ್ಯ.

### ಪಂಪನ ಆದಿಪುರಾಣದಲ್ಲಿನ ಭರತ ಬಾಹುಬಲಿ ಪ್ರಸಂಗ

ಪಂಪನ ಆದಿಪುರಾಣದಲ್ಲಿ ಬರುವ 'ಭರತ ದಿಗ್ವಿಜಯ' ಪ್ರಸಂಗದಲ್ಲಿ ಭರತನು ದೇಶಗಳನ್ನು ಗೆಲ್ಲುತ್ತಾ ವಿಜಯೋನ್ಮತ್ತನಾಗಿ ಬರುತ್ತಿರುವಾಗ, ಚಕ್ರವು ಅಯೋಧ್ಯಾಪುರದ ದ್ವಾರದಲ್ಲಿ ನಿಂತು ಬಿಡುತ್ತದೆ. ದಿಗ್ವಿಜಯ ಯಾತ್ರೆಯಲ್ಲಿ ಚಕ್ರವು ನಿಂತರೆ ಅಲ್ಲಿ ಇನ್ನೂ ಶತ್ರುಗಳಿದ್ದಾರೆ ಎಂದರ್ಥ. ಆಗ ಭರತನು ಈ ಕುರಿತು ವಿಚಾರಿಸಿದಾಗ ತಮ್ಮಂದಿರಿನ್ನೂ ಶರಣಾಗಿಲ್ಲ ಎನ್ನುವುದು ತಿಳಿಯುತ್ತದೆ. ಅವರು ಶರಣಾಗುವಂತೆ ಸಂದೇಶವನ್ನು ಭರತನು ದೂತನ ಕೈಯಲ್ಲಿ ಕೊಟ್ಟು ಕಳುಹಿಸುತ್ತಾನೆ. ಆಗ ಬಾಹುಬಲಿಯನ್ನು ಹೊರತುಪಡಿಸಿ ಉಳಿದವರೆಲ್ಲರೂ ರಾಜ್ಯವನ್ನು ಭರತನಿಗೆ ಒಪ್ಪಿಸಿ ತಪಸ್ಸಿಗೆ ತೆರಳುತ್ತಾರೆ.

ಬಾಹುಬಲಿ ಮಾತ್ರ ಭರತನನ್ನು ವಿರೋಧಿಸುತ್ತಾನೆ. ಹಿರಿಯಣ್ಣನಿಗೆ ತಲೆಬಾಗುವುದು ಅವಮಾನವೇನಲ್ಲ. ಆದರೆ ಅವನು ನೆತ್ತಿಯ ಮೇಲೆ ಕತ್ತಿಯಿಂದ ಗೀರಿ ಅಕಾರಣವಾಗಿ ಛಲದಿಂದ ತಲೆಬಾಗಿಸಹೊರಟಿರುವನು. ಅಂತಹವನಿಗೆ ಎರಗುವುದು ಅಂಜು ಬುರುಕುತನವಲ್ಲವೇ? ಎಂದು ಯುದ್ಧಕ್ಕೆ ಸಿದ್ಧನಾಗುತ್ತಾನೆ. ಮಂತ್ರಿಗಳ ಮತ್ತು ಹಿರಿಯರ ಪ್ರಯತ್ನದ ಫಲವಾಗಿ ಪರಸ್ಪರ ದ್ವಂದ್ವ ಯುದ್ದವಷ್ಟೇ ಏರ್ಪಡುತ್ತದೆ. ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳಲ್ಲಿ ಬಾಹುಬಲಿಯೇ ಗೆಲ್ಲುತ್ತಾನೆ.

ಆಗ ಭರತನು ಬಾಹುಬಲಿಯ ಮೇಲೆರಗಲು ಚಕ್ರಕ್ಕೆ ಅಪ್ಪಣೆ ಮಾಡುತ್ತಾನೆ. ಆದರೆ ಚಕ್ರವು ಬಾಹುಬಲಿಯ ಪಕ್ಕದಲ್ಲಿ ಬಂದು ನಿಲ್ಲುತ್ತದೆ. ತನ್ನ ಅಂತಸ್ತಿಗೆ ತಕ್ಕುದಲ್ಲದ ವರ್ತನೆಗೆ, ಹಿರಿಯರ ಮಾತುಗಳಿಗೆ ನಾಚಿಕೊಂಡು ಭರತನು ತಲೆಬಾಗಿ ನಿಲ್ಲುತ್ತಾನೆ. ಆ ಸನ್ನಿವೇಶದಲ್ಲಿ ಬಾಹುಬಲಿಯ ಮನಃ ಪರಿವರ್ತನೆಯಾಗುತ್ತದೆ. ಅವನು ವೈರಾಗ್ಯವನ್ನು ತಾಳುತ್ತಾನೆ. ಐಹಿಕ ಸುಖವು ತಾತ್ಕಾಲಿಕವಾದುದು. ಅತೀಂದ್ರಿಯ ಸುಖವೇ ಸುಖ ಎಂದು ಮನಗಾಣುತ್ತಾನೆ. 'ಚಕ್ರೇಶ್ವರ, ಲಜ್ಜೆಯನ್ನು ಬಿಡು' , ಸಿಟ್ಟನ್ನು ಎಂದಿಗೂ ಮಾಡದಿರು. ತಮ್ಮಂದಿರ ವಿಷಯದಲ್ಲಿ ಹೀಗೆ ನಿಗ್ರಹ ಬುದ್ಧಿಯನ್ನು ಇರಿಸುವುದು ಹಿರಿಮೆಯೇ? ಹೇಗೆ ವಜ್ರಗಿರಿಯನ್ನು ವಜ್ರವು ನಾಶಪಡಿಸಲು ಸಾಧ್ಯವಿಲ್ಲವೋ, ಹಾಗೆ ಚಕ್ರವು ನನ್ನನ್ನು ಗೆಲ್ಲಲಾರದು. ರಾಜ್ಯಲಕ್ಷ್ಮಿಯು ನಿನ್ನ ಎದೆಯ ಮೇಲೆ ನಿಶ್ಚಲವಾಗಿ ನೆಲಸಿರಲಿ. ಅಯ್ಯನಿತ್ತ ರಾಜ್ಯವನ್ನೂ ನಿನಗೆ ಸಮರ್ಪಿಸಿರುವೆನು. ನೀನು ಬಯಸಿದ ಹೆಣ್ಣನ್ನೂ ಭೂಮಿಯನ್ನೂ ನಾನು ಬಯಸಿದರೆ ನನ್ನ ಕೀರ್ತಿ ಮಾಸದೇ? ಎಂದು ಬಾಹುಬಲಿಯು ಅಣ್ಣನ ವಿಷಯದಲ್ಲಿ ತಾನು ತೋರಿಸಿದ ಅವಿನಯ ಪ್ರಯುಕ್ತವಾದ ದೋಷವನ್ನು ಹೋಗಲಾಡಿಸಲು ನಿರ್ಧರಿಸುತ್ತಾರೆ. ಭರತೇಶ್ವರನಿಗೆ ತನ್ನ ರಾಜ್ಯವನ್ನು ಒಪ್ಪಿಸಿಕೊಟ್ಟು ತಪಸ್ಸಿಗೆ ತೆರಳುತ್ತಾನೆ.

## ತುಲನಾತ್ಮಕ ಟಿಪ್ಪಣಿ

ಭರತ ಬಾಹುಬಲಿಯರ ನಡುವೆ ನಡೆಯುವ ಯುದ್ಧ ಸನ್ನಿವೇಶವನ್ನು ರತ್ನಾಕರ ವರ್ಣಿ ಹಾಗೂ ಪಂಪ ವಿಭಿನ್ನವಾಗಿ ಚಿತ್ರಿಸಿದ್ದಾರೆ. ಪಂಪನು ತನ್ನ ಆದಿ ಪುರಾಣದಲ್ಲಿ ಮೂಲ ಆಕರವಾದ ಪೂರ್ವ ಪುರಾಣದಲ್ಲಿರುವಂತೆ ಭರತ–ಬಾಹುಬಲಿಯ ಯುದ್ಧ ಸನ್ನಿವೇಶವನ್ನು ಚಿತ್ರಿಸುತ್ತಾನೆ.

ಭರತ ಮತ್ತು ಬಾಹುಬಲಿಯರ ನಡುವೆ ದ್ವಂದ್ವಯುದ್ಧವು ನಡೆಯುತ್ತದೆ. ದೃಷ್ಟಿಯುದ್ಧ, ಜಲಯುದ್ಧ ಹಾಗೂ ಮಲ್ಲಯುದ್ಧ ಎಂಬ ಮೂರು ಬಗೆಯ ಯುದ್ಧಗಳಲ್ಲೂ ಭರತನು ಸೋಲನ್ನಪ್ಪುತ್ತಾನೆ. ಭರತನ ಚಕ್ರವು ಬಾಹುಬಲಿಯನ್ನು ಘಾತಿಸದೆ ವಿಧೇಯವಾಗಿ ನಿಲ್ಲುತ್ತದೆ. ಈ ಸನ್ನಿವೇಶದಲ್ಲಿ ಭರತನು ತನ್ನ ವರ್ತನೆಗೆ ನಾಚಿ ತಲೆಬಾಗಿ ನಿಲ್ಲುತ್ತಾನೆ. ಆಗ ಬಾಹುಬಲಿಗೆ ವೈರಾಗ್ಯ ಬರುತ್ತದೆ.

ಐಹಿಕ ಸುಖವು ತಾತ್ಕಾಲಿಕವಾದುದು, ಅತೀಂದ್ರಿಯ ಸುಖವೇ ನಿಜವಾದ ಸುಖವೆಂದು ಮನಗಂಡು ಅಣ್ಣನೊಡನೆ ತೋರಿಸಿದ ದುರ್ನಡತೆಗೆ ನೊಂದು, ದೋಷ ಪರಿಹಾರಾರ್ಥವಾಗಿ ರಾಜ್ಯವೆಲ್ಲವನ್ನೂ ಭರತನಿಗೆ ಒಪ್ಪಿಸಿ ತಪಸ್ಸಿಗೆ ತೆರಳುತ್ತಾನೆ.

ಅವಧರಿಸದೆ ನಿನ್ನೊಳ್‌ಪಿ
ದವಿನಯಮಂ ನೆಗೞ್ದಿ ದೋಷಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು
ಡುವುದೊರ್ಮೆಗೆ ಮಱೆವುದೆನ್ನ ದುರ್ವಿಳಸನಮಂ

ಎಂದು ಬಾಹುಬಲಿ ತಪಶ್ಚರಣ ನಿಶ್ಚಯ ಮನನಾದಂ – ಎಂಬುದು ಪಂಪನ ಮಾತು.

ಆದರೆ ಭರತೇಶ ವೈಭವದಲ್ಲಿ

ನಿನಗಾನು ಪಗೆಯೆ ನೀನೆನಗೆಪಗೆಯೆ ಹೇಳು
ಜಿನಪುತ್ರರಿದನು ನಾವಿಂದು
ನೆನೆದಾಗ ಮುಂದೆ ಸಮಸ್ತರ್ಗೆ ದ್ರೋಹಶಾ
ಸನವ ಬರೆದು ಕೊಟ್ಟೆವಲ್ತೆ –

ಎಂದು ಭರತೇಶನು ಸೋದರರಲ್ಲಿ ಕಾಳಗ ಸಲ್ಲದು ಎಂದು ಬಾಹುಬಲಿಗೆ ತಿಳಿಹೇಳಿ ಯುದ್ಧದಿಂದ ಅವನನ್ನು ವಿಮುಖನಾಗಿಸುತ್ತಾನೆ. ಆಗ, 'ಗರುಡ ಮಂತ್ರಕೆ ವಿಷವಿಳಿವಂತೆ' ಭರತನ ವಾಕ್ಯಗಳನ್ನು ಕೇಳಿ ಬಾಹುಬಲಿಯ ಕೋಪವಿಳಿದು ಮನಃ ಪರಿವರ್ತನೆಯಾಗುವುದು. ಅಣ್ಣನೊಡನೆ ಯುದ್ಧಕ್ಕೆ ಸಿದ್ಧನಾಗುವುದಕ್ಕೆ ಅಳುಕಿ ನಾಚಿ ಬಾಹುಬಲಿ ತಲೆ ತಗ್ಗಿಸುತ್ತಾನೆ. ಬಳಿಕ ಸೋದರನೊಡನೆ ಸೆಣಸಲು ಬಂದುದು ತನ್ನ ತಪ್ಪೆಂದು ಮನದಲ್ಲಿ ನೊಂದು ತನ್ನನ್ನು ಕ್ಷಮಿಸೆಂದು ಭಾವಶುದ್ಧಿಯಲ್ಲಿ ಅಣ್ಣನಿಗೆ ಕೈಮುಗಿದು ನಿಲ್ಲುತ್ತಾನೆ. ತನ್ನ ಕಥಾನಾಯಕನನ್ನು ಮೆರೆಸುವ ಉದ್ದೇಶ ರತ್ನಾಕರ ವರ್ಣಿಗೆ ಇದ್ದುದರಿಂದ ಈ ಬದಲಾವಣೆ ಅವನಿಗೆ ಅನಿವಾರ್ಯವಾಯಿತು ಎನಿಸುತ್ತದೆ.

ಪಂಪನ ಆದಿ ಪುರಾಣವು ಚಂಪೂ ಶೈಲಿಯಲ್ಲಿ ರಚಿತವಾಗಿದೆ. ಭರತೇಶ ವೈಭವವು ಸಾಂಗತ್ಯ ಪ್ರಕಾರದಲ್ಲಿ ರಚಿತವಾಗಿದೆ. ಮೊದಲಿನದು ವಸ್ತುಕ, ಎರಡನೆಯದು ವರ್ಣಕ.

**ಸಂಧಿ**

| | | | | |
|---|---|---|---|---|
| ತಲೆ | + | ಕುಸಿಯು | = | ತಲೆಗುಸಿಯು (ಆದೇಶ ಸಂಧಿ) |
| ಭೂವರ | + | ಅಗ್ರಣಿ | = | ಭೂವರಾಗ್ರಣಿ (ಸವರ್ಣದೀರ್ಘ ಸಂಧಿ) |
| ಅಂತು | + | ಆಡದೆ | = | ಅಂತಾಡದೆ (ಲೋಪಸಂಧಿ) |
| ಪೂ | + | ಕಣೆಯ | = | ಪೂಗಣೆಯ (ಆದೇಶ ಸಂಧಿ) |
| ಕಾಂತಿ | + | ಪಡೆಯು | = | ಕಾಂತಿವಡೆಯು (ಆದೇಶ ಸಂಧಿ) |
| ಚಕ್ರ | + | ಈಶ | = | ಚಕ್ರೇಶ (ಗುಣಸಂಧಿ) |

ಇದರಂತೆ ಪತ್ಯಭಾಗದಲ್ಲಿ ಬಂದಿರುವ ಸಂಧಿಪದಗಳನ್ನು ಗುರುತಿಸಿ ಸಂಧಿಯನ್ನು ಹೆಸರಿಸುವ ಪ್ರಯತ್ನವನ್ನು ಮಾಡಲಿ.

**ಸಮಾಸ**

| | | |
|---|---|---|
| ಹೊನ್ನಿನ ತಾವರೆ | – | ಹೊಂದಾವರೆ (ಕರ್ಮಧಾರಯ ಸಮಾಸ) |
| ಮೊಗದಕಾಂತಿ | – | ಮೊಗಕಾಂತಿ (ತತ್ಪುರುಷ ಸಮಾಸ) |
| ಕಂಜವು ಅಸ್ತ್ರವಾಗಿ ಇರುವವನು | – | ಕಂಜಾಸ್ತ್ರ (ಬಹುವ್ರೀಹಿ ಸಮಾಸ) |
| ಕೈಯನ್ನು/ಕೈಗಳನ್ನು ಮುಗಿ | – | ಕೈಮುಗಿ (ಕ್ರಿಯಾ ಸಮಾಸ) |
| ನನೆಗಳ ಬಿಲ್ಲನ್ನು ಹೊಂದಿದವನು | – | ನನೆವಿಲ್ಲ (ಬಹುವ್ರೀಹಿ) |

ಅಥವಾ ನನೆಗಳೇ ಬಿಲ್ಲು ಆಗಿರುವವನು

ಪತ್ಯಭಾಗದಲ್ಲಿ ಬಂದಿರುವ ಇತರ ಸಮಾಸ ಪದಗಳನ್ನು ಗುರುತಿಸಿ ಹೆಸರಿಸಲಿ

**ಪ್ರಸ್ತಾರ ಹಾಕುವುದು**

ಸಾಂಗತ್ಯ ಛಂದೋ ರೂಪವನ್ನು ಪತ್ಯದಲ್ಲಿ ವಿದ್ಯಾರ್ಥಿಗಳು ಓದಿ ತಿಳಿದಿರುವರಲ್ಲವೇ? ಅದರಂತೆ ಪತ್ಯದ ಆಯ್ದ ಕೆಲವು ಪದ್ಯಗಳಿಗೆ ಅವರು ಪ್ರಸಾರ ಹಾಕಿ, ಗಣ ವಿಭಾಗ ಮಾಡಿ, ಲಕ್ಷ್ಯ ಲಕ್ಷಣಗಳನ್ನು ಸಮನ್ವಯ ಮಾಡಲಿ. ಅಧ್ಯಾಪಕರು ಅಗತ್ಯವಿದ್ದಲ್ಲಿ ಸಹಾಯ ಮಾಡುವುದು.

**ಹಾಡುವಿಕೆ**

ಸಾಂಗತ್ಯದ ಧ್ವನಿ ಸುರುಳಿಯನ್ನು ತರಗತಿಯಲ್ಲಿ ಕೇಳಿಸುವುದು, ಅದರಂತೆ ಮಕ್ಕಳು ಹಾಡಲು ಪ್ರಯತ್ನಿಸಲಿ. ಅನುಕೂಲವಿದ್ದಲ್ಲಿ ವಿಶೇಷ ಹಾಡುಗಾರರನ್ನು ಕರೆಸಿ, ಹಾಡುವ ಮಟ್ಟುಗಳನ್ನು ಹಾಡಿಸಿ ತಿಳಿಸುವುದು.

# ಉಲ್ಲಂಘಿಸುವರುಂಟೆ ವಿಧಿಕೃತವನು

## ಪ್ರವೇಶ

ಮಹಾಭಾರತದಲ್ಲಿ ಅನೇಕ ಉಪಕಥೆಗಳು ಬರುತ್ತದೆಯಲ್ಲವೇ? ಅವುಗಳಲ್ಲಿ ಕೆಲವು ಕತೆಗಳನ್ನು ವಿದ್ಯಾರ್ಥಿಗಳು ತಿಳಿದಿರಬಹುದು. ಅವರನ್ನು ಕೆಲವೊಂದನ್ನು ಹೇಳುವಂತೆ ಪ್ರೇರೇಪಿಸುವುದು. ಅದೇ ರೀತಿ ಸಂಸ್ಕೃತ ಮೂಲದ ಕಾವ್ಯಗಳು ಕನ್ನಡದಲ್ಲಿ ಹಲವಾರು ಇವೆ. ಕಾವ್ಯಗಳು ಹಾಗೂ ಕವಿಗಳ ಪ್ರಸ್ತಾಪವನ್ನು ತರಗತಿಯಲ್ಲಿ ಮಾಡಬಹುದು. ಇದರೊಂದಿಗೆ ಕವಿ ಲಕ್ಷ್ಮೀಶನ ಪರಿಚಯ ಹಾಗೂ ಆತನು ಬರೆದಿರುವ ಭಾರತ ಕತೆಯ ಪರಿಚಯ ಮಾಡಬಹುದು.

## ಕವಿ ಕೃತಿ ವಿಚಾರ

ಕನ್ನಡದ ಅಗ್ರಮಾನ್ಯ ಕವಿಗಳಲ್ಲಿ ಲಕ್ಷ್ಮೀಶನೂ ಒಬ್ಬನಾಗಿರುವನು. ಈತನ ಕಾಲ ಕ್ರಿ. ಶ. 16ನೆಯ ಶತಮಾನ. ಲಕ್ಷ್ಮೀಶನು ತನ್ನ ಕೃತಿಯಾದ ಜೈಮಿನಿಭಾರತದ ಪ್ರತಿಸಂಧಿಯ ಕೊನೆಯಲ್ಲಿ ದೇವಪುರದ ಲಕ್ಷ್ಮೀರಮಣನ ಉಲ್ಲೇಖವನ್ನು ಮಾಡಿರುವುದರಿಂದ ಈತನ ಊರು ಚಿಕ್ಕಮಗಳೂರು ಜಿಲ್ಲೆಯ ದೇವನೂರು ಅಥವಾ ಗುಲಬರ್ಗ ಜಿಲ್ಲೆಯ ಸುರಪುರದ ಸಮೀಪದ ದೇವಪುರ ಇರಬೇಕೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ವಾರ್ಧಕ ಷಟ್ಪದಿಯಲ್ಲಿ ರಚಿತವಾದ ಈ ಕಾವ್ಯವು ಅಪೂರ್ವವಾದ ನಾದಶಕ್ತಿಯನ್ನು ಹೊಂದಿದೆ. ಜೈಮಿನಿ ಮುನಿಯು ಜನಮೇಜಯನಿಗೆ ಹೇಳಿದ 'ಅಶ್ವಮೇಧಿಕವೃತ್ತಾಂತ'ವನ್ನು ಕನ್ನಡದಲ್ಲಿ ಲಕ್ಷ್ಮೀಶನು ಸೊಗಸಾಗಿ ಹೇಳಿದ್ದಾನೆ.

ಜೈಮಿನಿ ಭಾರತದ ವಸ್ತು ಪಾಂಡವರು ಮಾಡಿದ 'ಅಶ್ವಮೇಧದ ಕಥೆ'ಯಾಗಿದೆ. ಗೋತ್ರವಧೆಯಿಂದ ವ್ಯಥಿತರಾದ ರಾಜರು ಅದನ್ನು ನೀಗಿಕೊಳ್ಳುವುದಕ್ಕೋಸ್ಕರ ಅಶ್ವಮೇಧಯಾಗ ಮಾಡುತ್ತಿದ್ದ ಸಂಪ್ರದಾಯವಿದ್ದಂತೆ ತೋರುತ್ತದೆ. ಪಾಂಡವರು ತಮ್ಮ ದಾಯಾದಿ ಕೌರವರನ್ನು ಕೊಂದ ಪಾಪವನ್ನು ತೊಳೆದುಕೊಳ್ಳಲು ಈ ಯಾಗ ಕೈಗೊಂಡ ವಿಚಾರವನ್ನು ಜೈಮಿನಿ ಭಾರತ ಹೇಳುತ್ತದೆ. ವ್ಯಾಸಭಾರತದಲ್ಲಿ ಇದು 14ನೇ ಪರ್ವದಲ್ಲಿ ಬಂದಿದೆ.

ಪ್ರಸ್ತುತ ಪಠ್ಯಭಾಗದಲ್ಲಿ ಚಂದ್ರಹಾಸನ ಕಥೆಯ ಭಾಗವನ್ನು ಕೊಡಲಾಗಿದೆ. ಅರ್ಜುನನ ಬೆಂಗಾವಲಿನಲ್ಲಿರುವ ಅಶ್ವಮೇಧಯಾಗದ ಕುದುರೆಯು ಕುಂತಳನಗರಕ್ಕೆ ಬಂದಾಗ ಅಲ್ಲಿಯ ಅರಸ ಚಂದ್ರಹಾಸನು ಕುದುರೆಯನ್ನು ಕಟ್ಟಿಸಿದನು. ಆಗ ಅರ್ಜುನನು ಚಂದ್ರಹಾಸನ ಪೂರ್ವ ವೃತ್ತಾಂತ ವಿವರಿಸಬೇಕೆಂದು ನಾರದನನ್ನು ಕೇಳಿಕೊಳ್ಳಲು ಈತನು ಅರ್ಜುನನಿಗೆ ಚಂದ್ರಹಾಸನ ಕಥೆಯನ್ನು ಹೇಳುತ್ತಾನೆ.

## ಕಥಾ ಸಂದರ್ಭ

ಕುಂತಳ ದೇಶದ ಮಂತ್ರಿಯಾದ ದುಷ್ಟಬುದ್ಧಿಯು ಒಮ್ಮೆ ಮನೆಯಲ್ಲಿ ಬ್ರಾಹ್ಮಣರಿಗೆ ಒಂದು ಭೋಜನವನ್ನೇರ್ಪಡಿಸಿದನು. ಅಲ್ಲಿಗೆ ಬಂದಿದ್ದ ಭೂಸುರರು ಉತ್ತಮ ರಾಜಲಕ್ಷಣವುಳ್ಳ ಅನಾಥಮಗು ಚಂದ್ರಹಾಸನನ್ನು ನೋಡಿ ಈತನು ರಾಜನಾಗುವನೆಂದು ಭವಿಷ್ಯ ನುಡಿದರು. ಇದರಿಂದ ದುಷ್ಟಬುದ್ಧಿಯು ವ್ಯಾಕುಲಗೊಂಡು ಈತನು ರಾಜನಾದರೆ ಮಕ್ಕಳಿಲ್ಲದ ಕುಂತಳೇಂದ್ರನ ನಂತರ ತನಗೆ ಹಾಗೂ ತನ್ನ ಮಕ್ಕಳಿಗೆ ಸಿಗುವ ಅಧಿಕಾರವು ಕೈತಪ್ಪುವುದೆಂದು ಭಾವಿಸಿದನು. ಇದಕ್ಕೆ ಪರಿಹಾರವೆಂಬಂತೆ ಆತನು

ಚಂಡಾಲರನ್ನು ಕರೆಸಿ ಬಾಲಕನನ್ನು ಕೊಂದು ಅದರ ಕುರುಹನ್ನು ತರಬೇಕೆಂದು ನೇಮಿಸಿದನು. ಅಂತೆಯೇ ಚಂಡಾಲರರು ಬಾಲಕನನ್ನು ಕಾನನಾಂತರಕ್ಕೆ ಕೊಂಡುಹೋದರು. ಆದರೆ ಕರುಣೆಯಿಂದ ಮನಕರುಗಿದ ಕಟುಕರು ಅರಣ್ಯದಲ್ಲಿ ಆತನ ಕಾಲಿನಲ್ಲಿದ್ದ ಆರನೆಯ ಬೆರಳನ್ನು ಕತ್ತರಿಸಿ ಅವನನ್ನು ಅಲ್ಲಿಯೇ ಬಿಟ್ಟು ಬಂದರು. ತುಂಡರಿಸಿದ ಕಾಲ್ಬೆರಳನ್ನು ತಂದು ದುಷ್ಟಬುದ್ಧಿಗೆ ತೋರಿಸಿದರು.

ಚಂದನಾವತಿಯ ರಾಜನಾದ ಕುಳಿಂದಕನು ಬೇಟೆಗೆ ತೆರಳಿದ್ದಾಗ ಕಾಡಿನಲ್ಲಿ ಹರಿನಾಮ ಜಪಿಸುತ್ತಿದ್ದ ಅನಾಥಮಗುವನ್ನು ನೋಡಿ ಸಂತೋಷಗೊಂಡನು. ಮಕ್ಕಳಿಲ್ಲದಿದ್ದ ಆತನಿಗೆ ದೊರೆತ ಮಗುವನ್ನು ತನ್ನ ಮಗನೆಂದೇ ಬಗೆದು ಮನೆಗೆ ಕರೆ ತಂದನು. ಕುಳಿಂದಕನ ಸತಿ ಮೇಧಾವಿನಿಯು ತನ್ನ ಬಜೆಂತನ ಹೋಯಿತೆಂದು ಹಿಗ್ಗಿದಳು. ಆ ಬಾಲಕನಿಗೆ ಚಂದ್ರಹಾಸನೆಂದು ಹೆಸರಿಟ್ಟರು. ಕುಳಿಂದಕನ ಅರಮನೆಯಲ್ಲಿ ರಾಜಕುಮಾರನಾಗಿ ಬೆಳೆಯುತ್ತಿದ್ದ ಚಂದ್ರಹಾಸನು ಕ್ಷತ್ರಿಯೋಚಿತ ವಿದ್ಯೆಗಳನ್ನೆಲ್ಲ ಕಲಿತುಕೊಂಡನು. ಹದಿನಾರು ವರುಷದವನಾದಾಗ ಶತ್ರುಗಳೆಲ್ಲರನ್ನೂ ಘಾತಿಸಿದನು. ದುಷ್ಟಬುದ್ಧಿಗೆ ಸಿದ್ಧಾಯ (ತೆರಿಗೆ, ಕಂದಾಯ) ವನ್ನು ಒಪ್ಪಿಸಬೇಕೆಂದು ಕುಳಿಂದಕನು ಚಂದ್ರಹಾಸನಿಗೆ ಹೇಳಲು ಆತನು ಕೊಡಬೇಕಾದ ವಸ್ತುಗಳೆಲ್ಲವನ್ನೂ ಚಾರರ ಮೂಲಕ ಕಳುಹಿಸಿಕೊಟ್ಟನು. ಚಾರರಿಂದ ಕುಳಿಂದಕನಿಗೆ ಮಗನಿರುವನೆಂಬುದನ್ನರಿತ ದುಷ್ಟಬುದ್ಧಿಯು ಆತನೇ ಬ್ರಾಹ್ಮಣರು ಹಿಂದೆ ಭವಿಷ್ಯ ನುಡಿದ ಬಾಲಕನಾಗಿರಬೇಕೆಂದು ಭಾವಿಸಿದನು. ಚಂಡಾಲರು ತನಗೆ ಮೋಸಮಾಡಿದರೆಂದುಕೊಂಡನು. ರಾಜಕಾರ್ಯವನ್ನು ಮಗ ಮದನನಿಗೆ ವಹಿಸಿ ಚಂದನಾವತಿಗೆ ಬಂದ ಆತನು ಅಲ್ಲಿಯ ಸಿರಿಸಂಪತ್ತುಗಳನ್ನು ಕಂಡು ಕರುಬಿ ಹಗೆಯನ್ನು ಇಲ್ಲವಾಗಿಸುವ ಯೋಚನೆಯನ್ನು ಹಾಕಿದನು.

### ಆಶಯಗ್ರಹಣ

ವಾರ್ಧಕ ಷಟ್ಪದಿಯ ವಾಚನದ ಅಡಕಮುದ್ರಿಕೆಯನ್ನು ಅಧ್ಯಾಪಕರು ವಿದ್ಯಾರ್ಥಿಗಳಿಗೆ ಕೇಳಿಸುವುದು. ಕಾವ್ಯಭಾಗವನ್ನು ವಿದ್ಯಾರ್ಥಿಗಳೂ ಓದಲಿ. ಅಧ್ಯಾಪಕರು ಮಾರ್ಗದರ್ಶನ ಮಾಡುವುದು. ಮುಂದಿನ ಹಂತದಲ್ಲಿ ಕಾವ್ಯಭಾಗವನ್ನು ಅರ್ಥೈಸುವ ದೃಷ್ಟಿಯಿಂದ ಸಂಧಿ ಪದಗಳನ್ನು ಗುರುತಿಸಿ ವಿಂಗಡಿಸುವ, ಸಮಾಸಪದಗಳನ್ನು ವಿಗ್ರಹವಾಕ್ಯ ಮಾಡಿ ಹಾಗೂ ನವೀನ ಪದದ ಅರ್ಥವನ್ನು ಹುಡುಕುವ ಚಟುವಟಿಕೆ ಮಾಡಬಹುದು. ಅಗತ್ಯವಿರುವ ಕಡೆಗಳಲ್ಲಿ ಅನ್ವಯಾನುಸಾರವಾಗಿ ಅಧ್ಯಾಪಕರು ಓದಬಹುದಲ್ಲವೇ? ಪದ್ಯಗಳ ಸ್ವಾರಸ್ಯವಿರುವ ಸಾಲುಗಳನ್ನು ಸಂದರ್ಭಾನುಸಾರವಾಗಿ ಗುರುತಿಸಲು ಹೇಳಬಹುದು.

### ಭಾವಾನುವಾದ

1. ಎಲೈ ಪಾರ್ಥನೇ, ಕಪಟಿಗಳ ಮನಸ್ಸಿನಲ್ಲಿ ಅಡಗಿರುವ ಮೋಸವನ್ನು ಸಜ್ಜನರು ಹೇಗೆ ತಾನೇ ತಿಳಿಯಬಲ್ಲರು? ದುಷ್ಟಬುದ್ಧಿಯು ಕುಳಿಂದಕನಿಗೆ ವೀಳ್ಯವನ್ನು ಕೊಟ್ಟು ಮನ್ನಿಸಿ ಚಂದ್ರಹಾಸನನ್ನು ತನ್ನ ಬಳಿಗೆ ಕರೆದು ಕುಳ್ಳಿರಿಸಿದನು. ಹಿಂದೆ ಬ್ರಾಹ್ಮಣರು ಸಕಲ ರಾಜಲಕ್ಷಣಗಳಿಂದ ಕೂಡಿದ ಈ ಬಾಲಕನು ಮುಂದೆ ರಾಜನಾಗಲಿರುವನು ಎಂದು ತನ್ನಲ್ಲಿ ಹೇಳಿದ ವಿಚಾರವನ್ನು ಸ್ಮರಿಸಿ ಮುಂದೆ ಕುಂತಳದ ಆಳ್ವಿಕೆಯು ತನ್ನ ಮಕ್ಕಳಿಗೆ ಸಿಗಲು ಈತ ಅಡ್ಡಿಯಾಗುವನು.ಈತ ತನ್ನ ವೈರಿ ಎಂದು ಚಿಂತಿಸಿದನು.

2. ಬ್ರಾಹ್ಮಣರು ಅಂದು ತನ್ನಲ್ಲಿ ಹೇಳಿದ ಮಾತು ಸುಳ್ಳಾಗಲು ಸಾಧ್ಯವಿಲ್ಲ. ರಾಜಲಕ್ಷಣಗಳಿಂದ ಶೋಭಿಸುವ ಈತನನ್ನು ನಾಶಮಾಡದಿದ್ದರೆ ಈ ಭೂಮಿಗೆ ಈತ ಅರಸನಾಗುವನು. ಬಳಿಕ ತನ್ನ ಮಕ್ಕಳಿಗೆ ಅರಸುತನ ಸಿಗಲಾರದು. ಈತ ದರ್ಪಕ್ಕೆ ಹೆದರುವವನಲ್ಲ; ಪರಾಕ್ರಮಿಯೂ ಹೌದು. ಇವನಿಗೆ ವಿಷವನ್ನುಣಿಸಿ ಕೊಲ್ಲುವ ಉಪಾಯವನ್ನು ಮಾಡುವೆನೆಂದು ದುಷ್ಟಬುದ್ಧಿಯು ಆಲೋಚಿಸಿದನು.

3. ಹುಣ್ಣಿಮೆಯ ಚಂದಿರನ ಅಭಿವೃದ್ಧಿಯನ್ನು ಕೆಡಿಸಿ ತನ್ನ ಸಾಮರ್ಥ್ಯವನ್ನು ತೋರಿಸುವೆನೆಂಬ ಕತ್ತಲೆಯ ಹಾಗೆ ಆ ವಿಷ್ಣುಭಕ್ತನನ್ನು ಕೊಲ್ಲಿಸಿ ತಾನು ಬದುಕುವೆನೆಂಬ ಉದ್ದೇಶದಿಂದ ದುಷ್ಟ ಸ್ವಭಾವದ ಆ ಮಂತ್ರಿಯು ಬಳಿಕ ಏಕಾಂತದಲ್ಲಿ ಪತ್ರವೊಂದನ್ನು ಬರೆದನು. ಅದಕ್ಕೆ ಜಾಗರೂಕತೆಯಿಂದ ಮುದ್ರೆಯನ್ನು ಅಳವಡಿಸಿ ಚಂದ್ರಹಾಸನನ್ನು ನೋಡಿ ನಸುನಗುತ್ತಾ ಹೀಗೆಂದನು.

4. ಚಂದ್ರಹಾಸನೇ! ಶ್ರೇಷ್ಠನಾದ ಗೂಢಕಾರ್ಯವಿದು. ನೀನೊಬ್ಬನೇ ಕುದುರೆಯೇರಿ ನಾಲ್ಕು ಮಂದಿ ಸೇವಕರೊಂದಿಗೆ ರಾಜಧಾನಿಗೆ ಹೋಗು. ಅಲ್ಲಿ ನನ್ನ ಮಗ ಮದನನಿಗೆ ಮುದ್ರೆ ಸಹಿತವಾದ ಈ ಪತ್ರವನ್ನು ಯಾರೂ ಅರಿಯದಂತೆ ನೀಡಬೇಕು. ನಮ್ಮಿಂದಾಗುವ ಮಹಾಕಾರ್ಯವು ಈ ಭೂಮಿಯಲ್ಲಿ ನಮಗಿಬ್ಬರಿಗೆ ಮಾತ್ರವೇ ತಿಳಿದಿರಲಿ ಎಂದು ಆ ಲೇಖನವನ್ನು ಚಂದ್ರಹಾಸನಿಗೆ ನೀಡಿದನು.

5. ತನ್ನ ಅಂತರಂಗದ ವಿಚಾರವನ್ನು ಪ್ರೀತಿಯಿಂದ ಮಂತ್ರಿಯು ಹೇಳಿರುವನು ಎಂದು ಚಂದ್ರಹಾಸನು ಭಾವಿಸಿದನು. ಅದು ನಿಜವೆಂದು ನಂಬಿ ಸಂತೋಷದಿಂದ ಮಂತ್ರಿಗೆ ನಮಸ್ಕರಿಸಿ ಬೀಳ್ಕೊಂಡನು. ಕುಳಿಂದಕನ ಪಾದಗಳಿಗೆ ವಂದಿಸಿ ಆಶೀರ್ವಾದವನ್ನು ಪಡೆದನು. ಅನಂತರ ತಾಯಿ ಮೇಧಾವಿನಿಯನ್ನು ಭೇಟಿಯಾಗಿ ಆಕೆಯ ಪಾದಕಮಲಗಳಿಗೆ ನಮಸ್ಕರಿಸಿ ಹೋಗುತ್ತಿರುವ ವಿಚಾರವನ್ನು ತಿಳಿಸಿದನು.

6. ಮೇಧಾವಿನಿಯು ಆ ಸುಕುಮಾರನನ್ನು ಆಶೀರ್ವದಿಸಿ ಮೇಲೆತ್ತಿದಳು. ಹೊಳೆಯುವ ಶುದ್ಧವಾದ ಅರಳು, ಮೊಸರು, ದರ್ಭೆ, ಅಕ್ಷತೆಗಳೊಂದಿಗೆ ತಾಂಬೂಲವನ್ನು ನೀಡಿ ತಿಲಕವನ್ನಿಟ್ಟಳು. 'ಯುದ್ಧದಲ್ಲಿ ನಿನ್ನ ಅಂಗಾಂಗಗಳನ್ನು ವಾಸುದೇವನೇ ಕಾಯಲಿ. ನಿನಗೆ ಅನುಕೂಲೆಯಾಗಿರುವ ವಧುವಿನೊಂದಿಗೆ ರಾಜ್ಯವನ್ನು ಪಡೆ' ಎಂದು ಆಶೀರ್ವದಿಸಿ ಬೀಳ್ಕೊಟ್ಟಳು.

7. ಚಂದ್ರಹಾಸನು ನಾಲ್ಕು ಮಂದಿ ಸೇವಕರೊಂದಿಗೆ ಕುದುರೆಸವಾರಿ ಮಾಡುತ್ತಾ ಶುಭೋದಯದ ಶಕುನಗಳನ್ನು ಆಲಿಸುತ್ತಾ ಕುಂತಳನಗರದ ಹೊರಗಿನ ಉದ್ಯಾವನಕ್ಕೆ ಬಂದನು. ಅಲ್ಲಿ ಆತನ ಕಣ್ಣುಗಳಿಗೆ ಕೋಗಿಲೆಯ ಇಂಪಾದ ಹಾಡಿನೊಂದಿಗೆ ಅತಿಯಾದ ಫಲಗಳ ಕೈಗಾಣಿಕೆಯನ್ನು ಹಿಡಿದು ಉಪಚರಿಸುವಂತೆ ನಿಂತಿರುವ ಗಿಡಗಳು ಶೋಭಿಸಿದವು.

8. ಅತ್ಯಧಿಕ ಚಿಗುರುಗಳಿಂದ ಕೂಡಿರುವ ಮಾವಿನ ನೆರಳು, ಶುಭ್ರವಾದ ಮರಳಿನ ದಿನ್ನೆಗಳು, ಹಬ್ಬಿರುವ ಬಳ್ಳಿಗಳ ಮಂಟಪಗಳು ವಿವಿಧ ಮಣಿಗಳಿಂದ ಕೂಡಿರುವ ಕೃತಕ ಬೆಟ್ಟ ಕಣಿವೆಗಳು, ತಾವರೆ ನೈದಿಲೆಗಳ ಸಮೂಹದಿಂದ ಹೊಳೆಯುವ, ರತ್ನದ ಹಾಸು ಬಂಡೆಗಳ ಆಕರ್ಷಕವಾದ ಮೆಟ್ಟಿಲುಗಳಿಂದ ಶೋಭಿಸುವ ಸರೋವರ ಮುಂತಾದವುಗಳಿಂದ ಕೂಡಿರುವ ಉದ್ಯಾವನ ಆತನಿಗೆ ಕಂಡುಬಂತು.

9. ಪರಿಮಳದಿಂದ ಕೂಡಿರುವ ಗಾಳಿ ಹಿತವಾಗಿಯೂ ಮಂದವಾಗಿಯೂ ಬೀಸಿದಾಗ ಮಾರ್ಗಾಯಾಸವು ಪರಿಹಾರವಾಗಿ ಸಂತೋಷಪಟ್ಟನು. ಕೃಷ್ಣನನ್ನು ಪೂಜಿಸಬೇಕೆಂದು ಆಲೋಚಿಸಿ, ಕುದುರೆಗೆ ನೀರು ಕುಡಿಸಿ, ತಂಪಾದ ನೆರಳಿನಿಂದ ಕೂಡಿರುವ ಗಿಡಕ್ಕೆ ಅದನ್ನು ಕಟ್ಟಿ ಹಾಕಿದನು. ಎಳತಾದ ಹುಲ್ಲುಗಳನ್ನು ಆಯ್ದು ತರಿಸಿ ಅದರ ಮುಂದಿಟ್ಟನು.

10. ಕುದುರೆಯನ್ನು ಕಟ್ಟಿದಲ್ಲಿ ಸೇವಕರನ್ನಿರಿಸಿ ಉದ್ಯಾನದೊಳಹೊಕ್ಕ ಚಂದ್ರಹಾಸನು ಅಲ್ಲಿನ ಶುಭ್ರವಾದ ಸರೋವರದಲ್ಲಿ ಮಿಂದು ಶುಚಿಯಾದನು. ತಾವರೆಯೇ ಮೊದಲಾದ ಹೂವುಗಳನ್ನು ಕಿತ್ತುತಂದು ಶುಭ್ರವಾದ ಜಾಗದಲ್ಲಿ ಹರಿಪೂಜೆಯನ್ನು ಮಾಡಿದನು. ಅನಂತರ ತಾನು ತಂದ ಬುತ್ತಿಯ ಭೋಜನವನ್ನು ಮಾಡಿ ವಿಶ್ರಾಂತಿಗಾಗಿ ಮಾವಿನ ಮರದ ನೆರಳಿಗೆ ಸಾಗಿದನು.

11. ಎಳತಾದ ಚಿಗುರನ್ನು ಹಾಸಿ ಚಂದ್ರಹಾಸನು ಕುಳಿತನು ತಂಪಾದ ಗಾಳಿ ಬೀಸಿದಾಗ ಮಧ್ಯಾಹ್ನದ ಬಿಸಿಲು ಹಾಗೂ ಮಾರ್ಗಾಯಾಸದಿಂದ ಬಳಲಿದ ಆತನಿಗೆ ಹಿತವೆನಿಸಿ ಕಣ್ಣಿನ ಎವೆಗಳು ಮುಚ್ಚಿಕೊಂಡವು. ತನ್ನನ್ನು ತಾನು ಮರೆತು ಹೂವಿನ ಹಾಸಿಗೆಯಲ್ಲಿ ದೇವಪುರದ ಲಕ್ಷ್ಮೀವರನು ಮಲಗುವಂತೆ ಮಲಗಿ ನಿದ್ರಾಸಕ್ತನಾದನು.

12. ಕುಂತೀಕುಮಾರನೇಕೇಳು. ಚಂದ್ರಹಾಸನು ಈ ರೀತಿ ಸುಖನಿದ್ದೆಯಲ್ಲಿದ್ದನು ಆ ಸಮಯದಲ್ಲಿ ವಸಂತ ಕಾಲ ಪ್ರಾಪ್ತವಾಗಿದ್ದುದರಿಂದ ಜಲಕ್ರೀಡೆಗಾಗಿ ಕುಂತಳೇಂದ್ರನ ಮಗಳಾದ ಚಂಪಕ ಮಾಲಿನಿ ಹಾಗೂ ಆಕೆಯ ಗೆಳತಿಯಾಗಿದ್ದ ಮಂತ್ರಿಸುತೆ ವಿಷಯೆ ಇಬ್ಬರೂ ಜೊತೆಯಾಗಿ ಗೆಳತಿಯರ ಸಮೂಹದೊಂದಿಗೆ ಅಲ್ಲಿಗೆ ಬಂದರು.

13. ಆ ಸುಂದರಿಯರು ಸಂತೋಷದಿಂದ ವಿವಿಧ ರೀತಿಯ ನೀರಾಟಗಳನ್ನಾಡಿದರು. ಅನಂತರ ತಮ್ಮ ಮುಖವೆಂಬ ಚಂದ್ರಮಂಡಲದ ಬೆಳಕಿನಿಂದ ಸರೋವರ ತೀರದಲ್ಲಿ ಕಟ್ಟಿದ ಚಂದ್ರಕಾಂತ ಸೋಪಾನದಿಂದ ನೀರು ಒಸರಿತು ಎಂಬಂತೆ ಮೈಗೆ ತಂಪೆನಿಸಿದಾಗ ಕೊಳದಿಂದ ಹೊರ ಬಂದನು. (ಚಂದಿರನ ಬೆಳಕಿನಿಂದ ಚಂದ್ರಕಾಂತ ಸೋಪಾನವು ಒಸರುತ್ತದೆ ಎಂಬುದು ಕವಿಸಮಯ)

14. ಅನಂತರ ಒಬ್ಬರನ್ನೊಬ್ಬರು ನೋಡುತ್ತಾ, ಹಾಡುತ್ತಾ, ಕುಣಿಯುತ್ತಾ, ಮಾತನಾಡುತ್ತಾ ಸಂತೋಷವನ್ನನುಭವಿಸಿದರು. ಹೂವನ್ನು ಕಿತ್ತು ಮುಡಿದರು. ಆನಂದವನ್ನನುಭವಿಸುತ್ತಿದ್ದರು.

15. ಚಂಪಕಮಾಲಿನಿಯು ತನ್ನ ಗೆಳತಿಯರೊಂದಿಗೆ ಸರಸವಾದ ಆಟಗಳಲ್ಲಿ ತಲ್ಲೀನರಾಗಿದ್ದಳು. ಈ ಸಂದರ್ಭದಲ್ಲಿ ವಿಷಯೆ ಹೂಕೊಯ್ಯುವ ವಿಚಾರದಲ್ಲಿ ಬೇರ್ಪಟ್ಟು ಬಂದು ಆ ಮಾವಿನ ಮರದ ನೆರಳಲ್ಲಿ ಚಿಗುರಿನ ಹಾಸಿಗೆಯ ಮೇಲೆ ತೋಳನ್ನು ತಲೆದಿಂಬಾಗಿಸಿ ತಂಗಾಳಿಗೆ ಮೈಯೊಡ್ಡಿ ಮೈಮರೆತು ಮಲಗಿ ನಿದ್ರಿಸಿದ ಚಂದ್ರಹಾಸನನ್ನು ಕಂಡು ಆಶ್ಚರ್ಯಪಟ್ಟಳು.

16. ಸುತ್ತಲೂ ನೋಡಿ ಕಾಲ್ಗೆಜ್ಜೆ ಶಬ್ದವಾಗದಂತೆ ಹತ್ತಿರಬಂದಳು. ಹತ್ತಿರ ಹೋಗುವುದು ಸರಿಯೇ ಎಂದು ಹಿಂದೆ ಸರಿದಳು. ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತಾ ಸಮೀಪಿಸಲು ಅನುವಾಗುವಳು. ಸಾಧ್ಯವಾಗದೆ ನಿಲ್ಲುವಳು. ಮತ್ತೊಮ್ಮೆ ದೃಢ ನಿಶ್ಚಯದಿಂದ ಹತ್ತಿರ ಹೋಗುವಳಾದರೂ ಕೂಡಲೇ ಇದು ಅನುಚಿತವೆಂದು ಬೆದರಿ ಹಿಂದೆ ಸರಿದಳು. ಹೀಗೆ ಆತನಿಂದ ಆಕರ್ಷಿತಳಾಗಿ ವಿಷಯೆ ಆತನ ಬಳಿಯಲ್ಲಿ ನಿಂತಿದ್ದಳು.

17. ಅರ್ಜುನನೇ ಕೇಳು, ಈ ರೀತಿ ನಿಂತು ವಿಷಯೆ ವೀಕ್ಷಿಸುತ್ತಿದ್ದ ಸಂದರ್ಭದಲ್ಲಿ ಆತನ ಎದೆಗವಚದ ಸೆರಗಿನ ತುದಿಯಲ್ಲಿ ಕಟ್ಟಿಕೊಂಡಿದ್ದ ಪತ್ರವನ್ನು ಕಂಡಳು. ಆತುರದಿಂದ ಬಿಚ್ಚಿ ಮುದ್ರೆಯನ್ನು ಸರಿಸಿ ತೆಗೆದು ನೋಡಿದಾಗ ತನ್ನ ತಂದೆಯ ಪತ್ರವೆಂದರಿತು ಸಂತೋಷದಿಂದ ಹಿಗ್ಗಿ ಓದತೊಡಗಿದಳು.

18. ಇದು ಮಂತ್ರಿ ದುಷ್ಟಬುದ್ಧಿಯು ಅತ್ಯಂತ ಪ್ರೀತಿಯಿಂದ ಆಶೀರ್ವಾದ ಪೂರ್ವಕವಾಗಿ ವಹಿಸಿಕೊಟ್ಟ ಕೆಲಸವಾಗಿದೆ. ಈ ಚಂದ್ರಹಾಸನು ನಮಗೆ ಅತ್ಯಂತ ಮಹಾಹಿತನಾಗಿರುವನು. ಅಲ್ಲದೆ ಅಸಾಮಾನ್ಯನಾದ ಈತ ನಮ್ಮ ಸೀಮೆಗೇ

ಅರಸನಾಗಲಿರುವನು. ಇದಕ್ಕೆ ಸಂಶಯವೇ ಇಲ್ಲ. ಮುಂದೆ ನಮಗೆ ಖಂಡಿತವಾಗಿಯೂ ಸರ್ವಥಾಮಿತ್ರ ನು ಎಂದು ಈತನನ್ನು ನಿನ್ನ ಬಳಿಗೆ ಕಳುಹಿಸುತ್ತಿದ್ದೇನೆ. (ಇಲ್ಲಿರುವ ಮಹಾಹಿತ, ಸರ್ವಥಾಮಿತ್ರ ಎಂಬ ಪದಗಳಿಗೆ ಮಂತ್ರಿ ಕೊಟ್ಟ ಅರ್ಥ ಶತ್ರು ಮತ್ತು ವಿರೋಧಿ ಎಂದಾಗಿತ್ತು)

19. ತಡೆಮಾಡದೆ ಈತನ ಕುಲ, ಶೀಲ, ವಿದ್ಯೆ, ಸಂಪತ್ತು, ವಯಸ್ಸು, ಪರಾಕ್ರಮಗಳನ್ನೆಲ್ಲ ನೋಡದೆ ಈತನಿಗೆ ಪ್ರೀತಿಯಿಂದ ವಿಷವನ್ನು ಕೊಡು. ಇದರಿಂದ ನಮಗೆ ಮುಂದೆ ಒಳಿತಾಗುವುದು. ಈ ರೀತಿಯಲ್ಲಿ ಬರೆದ ಪತ್ರವನ್ನು ಓದಿದ ವಿಷಯೆ ಅದಕ್ಕೆ ಭಿನ್ನವಾದ ಮತ್ತೊಂದು ಅರ್ಥವನ್ನು ಕಲ್ಪಿಸಿಕೊಂಡಳು. ವಿಧಿ ಬರಹವನ್ನು ಬದಲಾಯಿಸಲು ಯಾರಿಂದ ತಾನೇ ಸಾಧ್ಯ?

20. ಈತನು ನಮಗೆ ಅತ್ಯಂತ ಆಪ್ತನಾಗಿರುವನು(ಮಹಾ ಹಿತ). ನಮ್ಮ ಭೂಮಿಗೆ ಒಡೆಯನಾಗಲಿರುವನು. ಕುಲ ಶೀಲ ವಿದ್ಯೆಗಳನ್ನೆಲ್ಲಾ ಈತನಲ್ಲಿ ಹುಡುಕಬೇಡ. ಮುಂದೆ ಖಂಡಿತವಾಗಿಯೂ ಮಿತ್ರನಾಗಲಿರುವನು (ಸರ್ವಥಾ ಮಿತ್ರ) ಈತನಿಗೆ ಪ್ರೀತಿಯಿಂದ ವಿಷಯೆವನ್ನು ಕೊಡು. ಹೀಗೆ ತಾತ ಅಣ್ಣನಿಗೆ ಬರೆದು ಕಳುಹಿಸಿದ ಪತ್ರವಿದು. ಇದರಲ್ಲಿ ಅಕ್ಷರತಪ್ಪು ಸಂಭವಿಸಿದೆ ಎಂದು ಭಾವಿಸಿದಳು. (ವಿಷವ–ವಿಷಯೆ)

21. ತಂದೆಯು ನನಗೆ ಅತ್ಯಂತ ಚೆಲುವನಾದ ವರನನ್ನೇ ಹುಡುಕಿರುವನು. ತಡಮಾಡದೆ ಈತನಿಗೆ ವಿಷಯೆಯನ್ನು ಪ್ರೀತಿಯಿಂದ ಮದುವೆಮಾಡಿಕೊಡುವಂತೆ ತಂದೆ ಅಲ್ಲಿಂದ ತನ್ನ ಮಗನೆಡೆಗೆ ಈತನನ್ನೇ ಕಳುಹಿಸಿರುವನು. ತನ್ನ ಮನಸ್ಸಿನ ಆಲೋಚನೆ ನೆರವೇರದಿರಲಾರದು. ಪತ್ರದಲ್ಲಿ ಅಕ್ಷರ ತಪ್ಪು ಸಂಭವಿಸಿದರೆ ಒಳ್ಳೆಯ ಕಾರ್ಯ ಕೆಟ್ಟು ಹೋಗಬಹುದೆಂದು ಆಕೆ ಅದನ್ನು ತಿದ್ದಲು ನಿರ್ಧರಿಸಿದಳು.

22. ಹತ್ತಿರದಲ್ಲಿರುವ ಮಾವಿನ ಮರದ ಎಲೆಯ ರಸವನ್ನು ತಂದಳು. ತಪ್ಪೆಂದು ಭಾವಿಸಿದ ವಕಾರವನ್ನು ಅಳಿಸಿ ಅಲ್ಲಿಗೆ ಯಕಾರವನನ್ನು ತನ್ನ ಕಿರು ಬೆರಳಿನ ಉಗುರುಗೊನೆಯಿಂದ ತಿದ್ದಿ ಸೇರಿಸಿದಳು. ಅನಂತರ ಮೊದಲಿನಂತೆ ಮುದ್ರೆಯನ್ನು ಸೇರಿಸಿ ಆತನ ಎದೆಗವಚದ ಸೆರಗಿನಲ್ಲಿ ಕಟ್ಟಿ, ಮೊದಲಿನಂತೆ ಇರಿಸಿ, ಸದ್ದಾಗದಂತೆ ಅಲ್ಲಿಂದ ತೊಲಗಿದಳು.

## ಮಹಾಹಿತ ಹಾಗೂ ಸರ್ವಥಾ ಮಿತ್ರ ಪದಗಳಲ್ಲಿರುವ ದ್ವಂದ್ವಾರ್ಥ

'ಮಹಾಹಿತ' ಪದವನ್ನು ಮಹಾ ಅಹಿತ ಎಂದೂ ಮಹಾಹಿತ ಎಂದೂ ವಿಂಗಡಿಸಬಹುದು. ಮಹಾ ಅಹಿತ ಎಂದರೆ ಹಿತವನ್ನು ಬಯಸದವನು, ವೈರಿ ಎಂದೂ ಅರ್ಥವಾಗುತ್ತದೆ. ಸರ್ವಥಾಮಿತ್ರ ಎಂಬ ಪದವನ್ನು ಸರ್ವಥಾ ಅಮಿತ್ರ ಎಂದೂ ಸರ್ವಥಾ ಮಿತ್ರ ಎಂದೂ ವಿಂಗಡಿಸಬಹುದು. ಸರ್ವಥಾ ಅಮಿತ್ರ ಎಂದರೆ ಖಂಡಿತವಾಗಿಯೂ ವೈರಿ, ಪರಮ ಶತ್ರು ಎಂದು ಅರ್ಥವಾಗುತ್ತದೆ. ಸರ್ವಥಾ ಮಿತ್ರ ಎಂದರೆ ಖಂಡಿತವಾಗಿಯೂ ಮಿತ್ರ, ಪರಮ ಮಿತ್ರ ಎಂದು ಅರ್ಥ. ಹೀಗೆ ಒಂದೇ ಪದವು ಸಂಧಿ ವಿಂಗಡಿಸುವ, ಅರ್ಥೈಸುವ ವಿಧಾನಬೇರೆಯಾದಾಗ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ.

'ಉಲ್ಲಂಘಿಸುವರುಂಟೆ ವಿಧಿಕೃತವನು' ಶೀರ್ಷಿಕೆ ಈ ಕಾವ್ಯಭಾಗಕ್ಕೆ ಸೂಕ್ತವೇ?–ಚರ್ಚೆ

ಶೀರ್ಷಿಕೆ ಹೇಗಿರಬೇಕೆಂಬುದರ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸಬಹುದು. ಕೊಟ್ಟಿರುವ ಶೀರ್ಷಿಕೆ ಸೂಕ್ತವೇ ಎಂಬ ಬಗ್ಗೆ ಚರ್ಚಿಸಲಿ. ಬೇರೆ ಶೀರ್ಷಿಕೆಯ ಬಗ್ಗೆಯೂ ಚರ್ಚಿಸಬಹುದು.

### ಚರ್ಚಾಗೋಷ್ಠಿ ನಡೆಸುವುದು

ತನ್ನ ಮಗನಿಗೆ ಅಧಿಕಾರ ಸಿಗಬೇಕು ಎಂಬ ದುಷ್ಟಬುದ್ಧಿಯ ಚಿಂತನೆ ಮತ್ತು ತಮ್ಮ ಮಕ್ಕಳಿಗೆ ಅಧಿಕಾರ ಬೇಕು ಎಂಬ ಇಂದಿನ ಜನರ ಚಿಂತನೆಯ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸುವುದು. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

### ಸ್ವಾರಸ್ಯ ಬರೆಯುವುದು

ರಾಕಾಶಶಾಂಕ ನಭ್ಯುದಯಮಂ ಕೆಡಿಸಿತ

ನ್ನಾಕಾರಮಂ ತೋರಿಸುವೆನೆಂಬ ಕತ್ತಲೆಯವೊ

ಲಾ ಕಮಲಲೋಚನನ ಭೃತ್ಯನಂ ಕೊಲಿಸಿ ತಾಂ ಬಾಳ್ವೆನೆಂಬುಜ್ಜುಗದೊಳು

ಆಕುಮತಿಯಹ ಮಂತ್ರಿ ಬಳಿಕೊಂದು ಲೇಖನವ

ನೇಕಾಂತದೊಳ್ ಬರೆಯಿಸಿ....

ಇಲ್ಲಿ ಕವಿ ಚಂದ್ರಹಾಸನನ್ನು ಹುಣ್ಣಿಮೆಯ ಚಂದಿರನಿಗೆ ಹಾಗೂ ದುಷ್ಟಬುದ್ಧಿಯನ್ನು ಕತ್ತಲೆಗೆ ಹೋಲಿಸಿರುವನು.

ಹುಣ್ಣಿಮೆಯ ಚಂದಿರನ ಶೋಭೆಯನ್ನು ಕೆಡಿಸಿ ತನ್ನ ಸಾಮರ್ಥ್ಯವನ್ನು ಮೆರೆಯುತ್ತೇನೆಂಬ ಕತ್ತಲೆ ಹಾಗೂ ವಿಷ್ಣು ಭಕ್ತನಾದ ಚಂದ್ರಹಾಸನನ್ನು ಕೊಲ್ಲಿಸಿ ತಾನು ಮೆರೆಯ ಹೊರಟ ದುಷ್ಟ ಬುದ್ಧಿಯ ಕೃತ್ಯಗಳ ಬಗ್ಗೆ ಉತ್ತಮ ಹೋಲಿಕೆಯನ್ನು ಕವಿ ನೀಡಿರುವನು. ಕತ್ತಲೆಯ ಪ್ರಯತ್ನ ವ್ಯರ್ಥವಾಗುತ್ತದೆ. ಅಂತೆಯೇ ದುಷ್ಟಬುದ್ಧಿಯ ಪ್ರಯತ್ನವೂ ವಿಫಲವಾಗುತ್ತದೆ ಎಂಬ ಸೂಚನೆಯನ್ನು ಕವಿ ಈ ರೀತಿಯಲ್ಲಿ ಹೇಳಿದ್ದು ಸ್ವಾರಸ್ಯಪೂರ್ಣವಾಗಿದೆ.

ಇದೇ ರೀತಿಯಲ್ಲಿ ಕಾವ್ಯಭಾಗದಿಂದ ಸ್ವಾರಸ್ಯಪೂರ್ಣವಾದ ಸಾಲುಗಳನ್ನು ಹುಡುಕಿ ಸ್ವಾರಸ್ಯ ಬರೆಯಲಿ.

### ವಿಗ್ರಹ ವಾಕ್ಯ–ಸಮಾಸ

| | | |
|---|---|---|
| ಬಟ್ಟೆವಿಡಿ | – | ಬಟ್ಟೆಯನ್ನು ಪಿಡಿ (ಕ್ರಿಯಾ ಸಮಾಸ) |
| ತಣ್ಣೆಲರ್ | – | ತಣ್ಣಿತು ಎಲರ್ (ಕರ್ಮಧಾರಯ ಸಮಾಸ) |
| ತರಳಾಕ್ಷಿ | – | ತರಳವಾದ ಅಕ್ಷಿ ಉಳ್ಳವಳು (ಬಹುವ್ರೀಹಿ ಸಮಾಸ) |
| ಮಾಮರ | – | ಮಾವೆಂಬ ಮರ (ಕರ್ಮಧಾರಯ ಸಮಾಸ) |
| ಕುಲಶೀಲ ವಿತ್ತ ವಿದ್ಯೆಗಳು | – | ಕುಲವೂ ಶೀಲವೂ ವಿತ್ತವೂ ವಿದ್ಯೆಯೂ (ದ್ವಂದ್ವಸಮಾಸ) |
| ನೀರ್ಗುಡಿಸು | – | ನೀರನ್ನು ಕುಡಿಸು (ಕ್ರಿಯಾ ಸಮಾಸ) |
| ಕಮಲ ಲೋಚನ | – | ಕಮಲದಂತೆ ಲೋಚನ ಉಳ್ಳವನು (ಬಹುವ್ರೀಹಿ ಸಮಾಸ) |

## ಸಂಧಿ ವಿಂಗಡನೆ

| | | |
|---|---|---|
| ಪದಾಂಬುಜ | – | ಪದ + ಅಂಬುಜ (ಸವರ್ಣ ದೀರ್ಘ ಸಂಧಿ) |
| ದೂರ್ವಾಕ್ಷತೆ | – | ದೂರ್ವ + ಅಕ್ಷತೆ (ಸವರ್ಣ ದೀರ್ಘ ಸಂಧಿ) |
| ಶುಭೋದಯ | – | ಶುಭ + ಉದಯ (ಗುಣ ಸಂಧಿ) |
| ತಳಿಗೆ ದಂಬುಲ | – | ತಳಿಗೆ + ತಂಬುಲ (ಆದೇಶ ಸಂಧಿ) |
| ಬಾಹ್ಯೋಪವನ | – | ಬಾಹ್ಯ + ಉಪವನ (ಗುಣ ಸಂಧಿ) |
| ತದ್ರಾಜ | – | ತತ್ + ರಾಜ (ಜಶ್ತ್ವ ಸಂಧಿ) |
| ಸಖಿಯಾಗಿ | – | ಸಖಿ + ಆಗಿ (ಯಕಾರಾಗಮ ಸಂಧಿ) |
| ಸರಸೋಕ್ತಿ | – | ಸರಸ + ಉಕ್ತಿ (ಗುಣ ಸಂಧಿ) |
| ಕಿರುವೆರಳು | – | ಕಿರು + ಬೆರಳು (ಆದೇಶ ಸಂಧಿ) |
| ತಳಿರ್ದುರುಗಿದ | – | ತಳಿರ್ + ತುರುಗಿದ (ಆದೇಶ್ ಸಂಧಿ) (ನಿಬಿಡವಾಗಿರುವ ) |

## ಕವಿ ಸಮಯ

ಲೋಕದಲ್ಲಿ ವಸ್ತುತಃ ಇಲ್ಲದೆಯೂ ಶಾಸ್ತ್ರದಲ್ಲಿ ಪ್ರಸಿದ್ಧವಲ್ಲದೆಯೂ ಇರುವ ಅನೇಕ ಸಂಗತಿಗಳನ್ನು ಕವಿಗಳು ಒಬ್ಬರಾದ ಮೇಲೆ ಮತ್ತೊಬ್ಬರು ಒಂದೇ ರೀತಿಯಲ್ಲಿ ಹೇಳುತ್ತ ಬಂದು ರೂಢಿಗೆ ತಂದಿರುತ್ತಾರೆ. ಈ ರೂಢಿಗೆ 'ಕವಿಸಮಯ' ವೆಂದು ಹೆಸರು ಯಾವನೋ ಒಬ್ಬ ಕವಿಯು ಹೇಳಿರುವ ಉಕ್ತಿ ವೈಚಿತ್ರ್ಯಗಳೂ, ನೀರಸವಾದ ವಿಷಯವನ್ನು ಕಾವ್ಯವಾಗಿ ಮಾಡಬಲ್ಲ ರೀತಿ ರಚನಾ ವಿಶೇಷಗಳೂ ಕವಿ ಸಮಯವೆನ್ನಿಸಿಕೊಳ್ಳುವುದಿಲ್ಲ. ಹೇಗೆಂದರೆ, 'ಮಕ್ಕಳಾದ ಮೇಲೆ ಗಂಡ ಹೆಂಡಿರಿಗೆ ಪ್ರೀತಿ ಹೆಚ್ಚಾಗುತ್ತದೆ' ಎಂಬ ಸಂಗತಿಯನ್ನು ಭವಭೂತಿಯು "ಸಂತಾನವು ಪತಿ ಪತ್ನಿಯರನ್ನು ಬಂಧಿಸುವ ಒಂದು ಆನಂದದ ಗಂಟು" ಎಂದು ಹೇಳಿದ್ದಾನೆ. ಆನಂದದ ಗಂಟನ್ನು ಲೋಕದಲ್ಲಿ ಯಾರೂ ನೋಡಿಲ್ಲ. ಇದರ ವಿಚಾರವು ಶಾಸ್ತ್ರದಲ್ಲಿಯೂ ಪ್ರಸಿದ್ಧವಾಗಿಲ್ಲ; ಅಲ್ಲದೆ 'ಮಕ್ಕಳಾದ ಮೇಲೆ ಗಂಡ ಹೆಂಡಿರಿಗೆ ಪ್ರೀತಿಯು ಹೆಚ್ಚಾಗುತ್ತದೆ' ಎಂಬ ವಾಕ್ಯಕ್ಕೂ 'ಸಂತಾನವು ಪತಿ ಪತ್ನಿಯರನ್ನು ಬಂಧಿಸುವ ಆನಂದದ ಗಂಟು' ಎಂಬ ವಾಕ್ಯಕ್ಕೂ ರೀತಿ ರಚನೆಯಲ್ಲಿ ಎಷ್ಟೋ ವ್ಯತ್ಯಾಸವಿದೆ. ಇಷ್ಟು ಮಾತ್ರಕ್ಕೆ 'ಆನಂದದ ಗಂಟು' ಕವಿ ಸಮಯವಾಗುವುದಿಲ್ಲ. ಏಕೆಂದರೆ ಭವಭೂತಿಯಂತೆಯೇ ಮಿಕ್ಕ ಕವಿಗಳೂ, ಸಂತಾನದ ಪ್ರಸ್ತಾಪ ಬಂದಾಗಲೆಲ್ಲಾ ಅದನ್ನು ರೂಢಿಯಾಗಿ ಆನಂದದ ಗಂಟಿಗೆ ಹೋಲಿಸಿರುವುದಿಲ್ಲ. ಆದರೆ ಕೀರ್ತಿಯನ್ನು ಬೆಳ್ಳಗಿರುವಂತೆ ವರ್ಣಿಸುವುದು ಕವಿಗಳಲ್ಲಿ ರೂಢಿಗೆ ಬಂದಿದೆ. ಕವಿಗಳೆಲ್ಲಾ ಕೀರ್ತಿಯನ್ನು ಬೆಳ್ಳಗಿರುವಂತೆ ವರ್ಣಿಸುತ್ತಾರೆ. ಆದ್ದರಿಂದ ಕೀರ್ತಿಯನ್ನು ಬೆಳ್ಳಗಿರುವಂತೆ ವರ್ಣಿಸುವುದು ಒಂದು ಕವಿ ಸಮಯವೆಂದು ಹೇಳಬಹುದು.

ಆಧಾರ : ಕನ್ನಡಕೈಪಿಡಿ (ಪುಂಸಂ 255)

ಕವಿಸಮಯದ ಬಗ್ಗೆ ಅಧ್ಯಾಪಕರು ವಿದ್ಯಾರ್ಥಿಗಳಿಗೆ ತಿಳಿಸಬಹುದಲ್ಲವೇ? ಇತರ ಕಾವ್ಯಭಾಗಗಳಲ್ಲಿ ಬಂದಿರುವ ಕವಿ ಸಮಯವನ್ನೂ ಉದಾಹರಣೆಯಾಗಿ ಹೇಳಬಹುದು. ಪ್ರಸ್ತುತ ಕಾವ್ಯಭಾಗದಲ್ಲಿ–'ತಮ್ಮಾನನ ಸುಧಾಂಶು ಮಂಡಲದ ಬೆಳದಿಂಗಳಿಂದ ಸದಮಲ ಸರೋವರದ ತೀರದೊಳ್ ಬಳಸಿಕಟ್ಟಿದ ಚಂದ್ರಕಾಂತ ಸೋಪಾನದೊಳೊಸರ್ವ ನೀರೊದವಿತೆನೆ'– ಈ ಭಾಗದಲ್ಲಿ ಬಂದಿರುವ ಕವಿ ಸಮಯದ ಕಡೆಗೆ ವಿದ್ಯಾರ್ಥಿಗಳ ಗಮನ ಸೆಳೆಯುವುದು.

(ಹೆಚ್ಚಿನ ವಿವರಗಳಿಗೆ ಕನ್ನಡ ಕೈಪಿಡಿ,ಸಂಪುಟ, ಕವಿಸಮಯ ಭಾಗವನ್ನು ಗಮನಿಸುವುದು)

## ಪರಾಮರ್ಶನ ಗ್ರಂಥಗಳು


- ಹರಿಹರನ ರಗಳೆಗಳು – ಏಳು ಭಾಗಗಳು – ಡಾ. ಬಿ. ಪಿ.ಜಿ. ಹಳೆಕಟ್ಟೆ
- ಹರಿಹರದೇವ – ಕರ್ಣಾಟಕ ಸಂಘ, ಕೊಲ್ಲಾಪುರ
- ಹಂಪೆಯ ಹರಿಹರ – ಡಾ. ಡಿ.ಎಲ್. ನರಸಿಂಹಾಚಾರ್ಯ
- ಆದಿಪುರಾಣಂ – ಗದ್ಯಾನುವಾದ – ನರಸಿಂಹಶಾಸ್ತ್ರಿ
- ಪಂಪ – ಪ್ರಚಾರ ಪುಸ್ತಕ ಮಾಲೆ – ತೀ.ನಂ. ಶ್ರೀಕಂಠಯ್ಯ
- ನಡುಗನ್ನಡ ಕಾವ್ಯ ಸಂಕಲನ – ಮಂಗಳೂರು ವಿ.ವಿ.
- ಕನ್ನಡ ಛಂದೋವಿಕಾಸ – ಡಾ. ಡಿ.ಎಸ್. ಕರ್ಕಿ

# 3. ಹೊಸಗನ್ನಡ ಗದ್ಯವಿಹಾರ

| | | |
|---|---|---|
| ಘಟಕ 3 | : | ಹೊಸಗನ್ನಡ ಗದ್ಯವಿಹಾರ |
| ಸಮಯ | : | 45 ಪಿರೇಡುಗಳು |

**ಕಲಿಕಾ ಸಾಮಗ್ರಿಗಳು** :

- ಪಠ್ಯಪುಸ್ತಕ
- ಅಡಕ ಮುದ್ರಿಕೆ
- ಗಣಕಯಂತ್ರ
- ಪರಾಮರ್ಶನ ಗ್ರಂಥಗಳು

**ಮೌಲ್ಯಗಳು ಮತ್ತು ಮನೋಭಾವಗಳು** :

- ಹೊಸಗನ್ನಡ ಸಾಹಿತ್ಯ ಕೃತಿಗಳನ್ನು ಅಧ್ಯಯನ ಮಾಡಿ ಆಸ್ವಾದಿಸುವ ಮನೋಭಾವ.
- ಹೊಸಗನ್ನಡ ಕೃತಿಗಳನ್ನು ಅಧ್ಯಯನ ಮಾಡಿ ಶೈಲಿ ಗುರುತಿಸಿ ಪ್ರಯೋಗಿಸುವ ಮನೋಭಾವ.
- ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಹಾಗೂ ಗೌರವಿಸುವ ಮನೋಭಾವ.
- ಕೃತಿಗಳಲ್ಲಿ ಬರುವ ಸಾಂಸ್ಕೃತಿಕ ಮೌಲ್ಯಗಳನ್ನು ಅರಿತುಕೊಳ್ಳುವುದು.
- ಸಾಹಿತ್ಯದಲ್ಲಿ ಹೊಸಗನ್ನಡ ಕೃತಿಗಳ ಸ್ಥಾನಮಾನವನ್ನು ಅರಿತುಕೊಳ್ಳುವುದು.

# ಪ್ರಸ್ತಾವನೆ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗದ್ಯಕೃತಿಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಆಯಾ ಕಾಲಘಟ್ಟಕ್ಕೆ ಅನುಸರಿಸಿಕೊಂಡು ಗದ್ಯ ಬರಹಗಳಲ್ಲಿ ಅನೇಕ ಬದಲಾವಣೆಗಳು ಉಂಟಾದುವು. ಸಾಮಾಜಿಕ ಸ್ಥಿತಿಗತಿಗಳನ್ನು ಸಮರ್ಥವಾಗಿ ಬಿಂಬಿಸಲು ಹೊಸಗನ್ನಡದಲ್ಲಿ ಪದ್ಯಕ್ಕಿಂತ ಗದ್ಯವೇ ಮುಂದಾಯಿತು ಎನ್ನಬಹುದು. ಬಹಳಷ್ಟು ಬರಹಗಾರರು ಈ ಕ್ಷೇತ್ರದಲ್ಲಿ ಮುಂದೆ ಬಂದರು. ಇದರಿಂದಾಗಿ ಗದ್ಯ ಸಾಹಿತ್ಯ ಪರಂಪರೆಯು ಪ್ರಕಾಶಿಸುವಂತಾಯಿತು.

ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಗದ್ಯ ಬರಹಗಳು ರಚಿತವಾದುವು. ಹಳೆಗನ್ನಡ ಕಾಲಕ್ಕಿಂತ ಭಿನ್ನವಾಗಿ ಹಾಗೂ ವಿಫಲವಾಗಿ ಅನಂತರದ ಕಾಲಗಳಲ್ಲಿ ಪ್ರಬುದ್ಧ ಸಾಹಿತ್ಯ ಕೃತಿಗಳು ಮೂಡಿಬಂದುವು.

ಹೈಯರ್ ಸೆಕೆಂಡರಿ ತರಗತಿಯಲ್ಲಿ ಕನ್ನಡ ಭಾಷೆಯನ್ನು ಐಚ್ಛಿಕವಾಗಿ ಆಯ್ಕೆ ಮಾಡಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಗದ್ಯ ಸಾಹಿತ್ಯದ ವಿವಿಧ ರಚನೆಗಳ ಸ್ಥೂಲ ಪರಿಚಯ ಮಾಡಿಸುವುದು ಈ ಘಟಕದ ಉದ್ದೇಶವಾಗಿದೆ.

ಕನ್ನಡ ಗದ್ಯವು ವಿವಿಧ ಸಾಧ್ಯತೆಗಳನ್ನು ಹೆಚ್ಚು ಬಳಸಿಕೊಂಡ ಪ್ರಕಾರಗಳಲ್ಲಿ ಒಂದಾದ ಪ್ರವಾಸ ಸಾಹಿತ್ಯದ ಒಂದು ಭಾಗವನ್ನು ಇಲ್ಲಿ ನೀಡಲಾಗಿದೆ. ಇದು ಪ್ರಕೃತಿ ಪ್ರೇಮವನ್ನು ಬೆಳೆಸಲು ಸಹಕಾರಿಯಾಗಬಹುದು. ವ್ಯಕ್ತಿ ತನ್ನ ಬದುಕನ್ನು ಪ್ರಾಮಾಣಿಕವಾಗಿ ದಾಖಲಿಸುವ ಆತ್ಮಕಥೆಯು ಉತ್ತಮ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆಯಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶಕವಾಗಬಹುದು. ಅಂತಹ ಆತ್ಮಕಥೆಯ ಭಾಗವನ್ನು ಇಲ್ಲಿ ಕೊಡಲಾಗಿದೆ. ಜೊತೆಗೆ ಭಾಷೆಗೆ ಸಂಬಂಧಿಸಿದ ಪಾಠಗಳನ್ನು ಈ ಘಟಕದಲ್ಲಿ ನೀಡಲಾಗಿದೆ.

# UNIT FRAME

**ಘಟಕ 3 : ಹೊಸಗನ್ನಡ ಗದ್ಯವಿಹಾರ** ಸಮಯ : 40 ಪಿರೇಡುಗಳು

**ಕಲಿಕಾ ಸಾಧನೆಗಳು**

- ಹೊಸಗನ್ನಡ ಗದ್ಯಮಾದರಿಗಳನ್ನು ಪರಿಚಯ ಮಾಡಿಕೊಳ್ಳುವರು. ಅಂತಹ ಬರವಣಿಗೆಯನ್ನು ಅಭ್ಯಾಸ ಮಾಡುವರು. ಅವುಗಳಲ್ಲಿನ ಆಶಯವನ್ನು ತಿಳಿದು ವಿಮರ್ಶಾ ಲೇಖನಗಳನ್ನು ತಯಾರಿಸುವರು.
- ಸಾಹಿತ್ಯ ಕೃತಿಗಳನ್ನು ಭಾಷಾ ದೃಷ್ಟಿಯಿಂದಲೂ ವಸ್ತುವಿನ ದೃಷ್ಟಿಯಿಂದಲೂ ಕಂಡುಕೊಂಡು ಸ್ವಂತ ರಚನೆಯಲ್ಲಿ ತೊಡಗುವರು.
- ಪ್ರಾಚೀನ ತುಳು ಸಾಹಿತ್ಯವನ್ನು ಪರಿಚಯ ಮಾಡಿಕೊಂಡು ಭಾಷಾಪರವೂ ಆಶಯಪರವೂ ಆದ ಅಂಶಗಳನ್ನು ಅವಲೋಕಿಸಿ ಟಿಪ್ಪಣಿ ಬರೆಯುವರು.
- ಭಾಷೆಯ ಹುಟ್ಟು, ಬೆಳವಣಿಗೆಗಳ ಸ್ವರೂಪಗಳನ್ನು ತಿಳಿದುಕೊಂಡು ಆನ್ವಯಿಕವಾಗಿ ವಿಶ್ಲೇಷಿಸುವರು.
- ಭಾಷೆ ಹಾಗೂ ಸಾಹಿತ್ಯಗಳಲ್ಲಿನ ಸೌಂದರ್ಯವನ್ನು ಕಂಡುಕೊಂಡು ಲೇಖನ, ವಿಮರ್ಶೆಗಳ ಮೂಲಕ ಅದನ್ನು ಅಭಿವ್ಯಕ್ತಿಗೊಳಿಸುವರು.
- ಶಬ್ದಗಳ ವ್ಯುತ್ಪತ್ತಿ, ಸ್ಥಳನಾಮಗಳ ಹುಟ್ಟು – ಇವುಗಳ ಕುರಿತು ಅರಿವನ್ನು ಪಡೆಯುವರು.
- ಆತ್ಮಕಥೆಯನ್ನು ಓದಿ ಜೀವನವನ್ನು ಧೈರ್ಯದಿಂದ ಎದುರಿಸುವ, ಸಾಧನೆ ಮಾಡುವ ಮನೋಭಾವವನ್ನು ಬೆಳಸುವರು. ಅದನ್ನು ಬರವಣಿಗೆಯ ಮೂಲಕವೂ ವ್ಯಕ್ತಪಡಿಸುವರು.
- ಜೀವನಾನುಭವಗಳನ್ನು ಸೃಜನಶೀಲವಾಗಿ ಅಭಿವ್ಯಕ್ತಿಗೊಳಿಸುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಭಾವೈಕ್ಯಕ್ಕೆ ಪ್ರವಾಸವೂ ಒಂದು ಕಾರಣವಾಗುತ್ತದೆ. | • ಪೂರ್ವಜ್ಞಾನದ ಅವಲೋಕನ ಎಂಬ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಪ್ರವಾಸದ ಅನುಭವಗಳನ್ನು ಹೇಳಲು ಸೂಚಿಸುವುದು.<br>• ಕೆಲವು ವಿದ್ಯಾರ್ಥಿಗಳು ತಮ್ಮ ಪ್ರವಾಸದ ಅನುಭವಗಳನ್ನು ಹಂಚಿಕೊಳ್ಳುವರುವರು.<br>• ಬೇರೆ ಪ್ರದೇಶಗಳ ಜೀವನ ರೀತಿ, ಭಾಷೆ, ಸಂಸ್ಕೃತಿ ಇತ್ಯಾದಿಗಳ ವೈವಿಧ್ಯಗಳನ್ನು ತಿಳಿದಾಗ, ಅಂತಹ ಸ್ಥಳಗಳ ಸಂದರ್ಶನದ ಅಗತ್ಯವೇನು ಎಂಬುದರ ಕುರಿತು ಚಿಂತಿಸಿ, ಪ್ರವಾಸ ಹೋಗಲು ಆಸಕ್ತಿಯನ್ನು ತಾಳುವರು. ಪ್ರವಾಸದ ಕುರಿತು ತಮ್ಮ ಅಭಿಪ್ರಾಯಗಳನ್ನು ಮೌಖಿಕವಾಗಿ ಹೇಳುವರು, ಅನಂತರ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯುವರು. | ಪ್ರವಾಸ ಲೇಖನ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ವಿದ್ಯಾರ್ಥಿಗಳನ್ನು ಗುಂಪಾಗಿಸಿ, ಪ್ರವಾಸದ ಮಹತ್ವ, ಪ್ರವಾಸೀ ತಾಣಗಳ ಕುರಿತು ಮಾಹಿತಿ, ಕೈಪಿಡಿ, ಸ್ಥಳನಾಮಗಳ ವಿಶೇಷತೆ, ಸಂಪಾದಕೀಯ...ಮುಂತಾದ ವಿಷಯಗಳ ಆಧಾರದಲ್ಲಿ ಲೇಖನಗಳನ್ನು ಸಿದ್ಧಪಡಿಸಲು ಸೂಚಿಸುವುದು.<br>• ಪ್ರತಿಯೊಂದು ಗುಂಪಿನವರೂ ಒಂದೊಂದು ಚಟುವಟಿಕೆಯನ್ನು ಆಯ್ದುಕೊಳ್ಳುವುದು. | ಮಾಹಿತಿ ಕೈಪಿಡಿ,<br>ಸ್ಥಳನಾಮಗಳ ಕುರಿತಾದ ಲೇಖನ |
| | • ವಿದ್ಯಾರ್ಥಿಗಳು ಈಗಾಗಲೇ ಓದಿಕೊಂಡಿರುವ ಪ್ರವಾಸ ಲೇಖನಗಳಲ್ಲಿನ ಭಾಷಾ ಪ್ರಯೋಗ, ಪ್ರದೇಶಗಳ ಮಹತ್ವ, ಸಂಸ್ಕೃತಿಯ ವೈವಿಧ್ಯ... ಇತ್ಯಾದಿಗಳನ್ನು ಗುರುತಿಸಿಕೊಂಡು ಪ್ರವಾಸ ಲೇಖನವನ್ನು ಬರೆಯುವರು. | ಪ್ರವಾಸ ಲೇಖನ |
| | • ಪರಿಸರ ಮಲಿನೀಕರಣದ ಅತಿರೇಕವನ್ನು ತಡೆಗಟ್ಟುವ ಕಡೆಗೆ ಜನ ಸಾಮಾನ್ಯರ ಗಮನ ಸೆಳೆಯಲು ಪತ್ರಿಕೆಯ ಸಂಪಾದಕೀಯವನ್ನು ಬರೆಯಲು ಸೂಚಿಸುವುದು. | ಸಂಪಾದಕೀಯ |
| | • ವಿವಿಧ ಪತ್ರಿಕೆಗಳ ಸಂಪಾದಕೀಯ ಬರಹಗಳನ್ನು ಓದಲು ನೀಡುವುದು. ಪತ್ರಿಕೆಯ ಭಾಷೆಯ ಕುರಿತು ಗಮನಿಸಲು ಹೇಳುವುದು.<br>• ವಿದ್ಯಾರ್ಥಿಗಳು ಸಂಪಾಕೀಯವನ್ನು ಬರೆದು ತರಗತಿಯಲ್ಲಿ ಮಂಡಿಸಲಿ, ಪ್ರತಿ ಗುಂಪಿನವರು ಇದನ್ನು ಮೌಲ್ಯಮಾಪನ ಮಾಡಲಿ. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಿಪಡಿಸಲಿ. ಅಗತ್ಯ ತಿದ್ದುಪಡಿಗಳನ್ನು ಮಾಡಲು ಅಧ್ಯಾಪಕರು ನೆರವು ನೀಡುವುದು.<br>• ಪರಿಸರದ ಪ್ರವಾಸೀ ತಾಣಗಳ ಕುರಿತು ಮಾಹಿತಿ ಕೈಪಿಡಿ ತಯಾರಿಸಲು ಸೂಚಿಸುವುದು. (ತಯಾರಿಸುವಾಗ ಗಮನಿಸಬೇಕಾದ ಅಂಶಗಳು– ಸ್ಥಳದ ಹೆಸರು, ಯಾವ ದಾರಿಯಿಂದ ಬರಬೇಕು, ಎಲ್ಲಿಂದ ಎಲ್ಲಿಗೆ ಹೋಗುವ ಬಸ್ಸು, ರೈಲು, ........ ಇತ್ಯಾದಿ ಸಂಚಾರ ವ್ಯವಸ್ಥೆ, ಸ್ಥಳದ ವೈಶಿಷ್ಟ್ಯ ಇತ್ಯಾದಿ) | ಪತ್ರಿಕಾ ಭಾಷೆಯ ಕುರಿತು ಅರಿವು |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ವಿದ್ಯಾರ್ಥಿಗಳು ಪ್ರವಾಸೀ ತಾಣಗಳ ಕುರಿತಾದ ಮಾಹಿತಿ ಕೈಪಿಡಿಯನ್ನು ಅಧ್ಯಾಪಕರ ಸಲಹೆಯಂತೆ ಸಿದ್ಧಪಡಿಸಲಿ, ಈಗಾಗಲೇ ಲಭ್ಯವಿರುವ ಮಾಹಿತಿ ಕೈಪಿಡಿಯೊಂದಿಗೆ ತುಲನೆ ಮಾಡಿ ನೋಡಲಿ, ಗುಂಪಿನಲ್ಲಿ ಮಂಡಿಸಿ ಇತರ ವಿದ್ಯಾರ್ಥಿಗಳ ಅಭಿಪ್ರಾಯ.ಗಳನ್ನು ಕ್ರೋಢೀಕರಿಸಲಿ, ಅಧ್ಯಾಪಕರ ನೆರವಿನೊಂದಿಗೆ ತಿದ್ದುಪಡಿಗಳನ್ನು ಮಾಡಿಸುವುದು.<br>• ಪ್ರವಾಸವು ಭಾವೈಕ್ಯಕ್ಕೆ ಕಾರಣವಾಗುತ್ತದೆಯೇ? ಈ ವಿಷಯದ ಕುರಿತು ಚರ್ಚಾಗೋಷ್ಠಿಯನ್ನು ನಡೆಸಲು ಸೂಚಿಸುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಲಿ, ತಮ್ಮ ಅಭಿಪ್ರಾಯಗಳನ್ನು ಮಂಡಿಸಲಿ. ಸಂಸ್ಕೃತಿ, ಜನಜೀವನ, ಭಾಷೆ...ಇವೆಲ್ಲ ಭಾವೈಕ್ಯಕ್ಕೆ ಹೇಗೆ ಸಹಕಾರ ನೀಡುತ್ತವೆ ಎಂಬುದನ್ನು ವಿಶದೀಕರಿಸುವಂತೆ ಸೂಚಿಸುವುದು. ದೇಶದೇಶಗಳೊಳಗಿನ ಸ್ನೇಹ ಬಾಂಧವ್ಯವು ನೆಲೆ ನಿಲ್ಲುವುದು ಸಂಸ್ಕೃತಿಯ ಕೊಡುಕೊಳ್ಳುವಿಕೆಯಿಂದಲೇ ಎಂಬುದನ್ನು ಮನದಟ್ಟು ಮಾಡಿಕೊಡಲು ಪ್ರವಾಸ ಲೇಖನವು ಸಹಾಯಕವಾಗುತ್ತದೆ ಎಂದು ತಿಳಿಯುವರು.<br>• ಸಂಧಿ, ಸಮಾಸ, ನಿಷೇಧಾರ್ಥ ಪದಗಳನ್ನು ಪಟ್ಟಿ ಮಾಡುವಂತೆ ಹೇಳುವುದು. ವಿದ್ಯಾರ್ಥಿಗಳು ಪಠ್ಯಭಾಗದಿಂದ ಪದಗಳನ್ನು ಆಯ್ದುಕೊಂಡು ಪಠ್ಯಪುಸ್ತಕದಲ್ಲಿ ನೀಡಿರುವ ಮಾದರಿಯಂತೆ ಪಟ್ಟಿ ಮಾಡಿಸವುದು. ಅನಂತರ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ. | ಪ್ರವಾಸ ಲೇಖನ |
| • ಆತ್ಮಕಥೆಯು ವ್ಯಕ್ತಿಜೀವನದ ಚಿತ್ರಣ ನೀಡುತ್ತದೆ. | • ವಿದ್ಯಾರ್ಥಿಗಳು ಈಗಾಗಲೇ ಓದಿಕೊಂಡಿರುವ ಆತ್ಮಕಥೆ ಮತ್ತು ಜೀವನ ಚರಿತ್ರೆಗಳ ಕುರಿತು ತಿಳಿಯಲು ಕೆಲವು ಪ್ರಶ್ನೆಗಳನ್ನು ಕೇಳುವುದು.<br>• ಸಮಾಜಶಾಸ್ತ್ರ ಪಾಠಭಾಗಗಳಲ್ಲಿ ಹಿಂದಿನ ತರಗತಿಗಳಲ್ಲಿ ಓದಿರುವ ರಾಜ ಮನೆತನ, ಅರಸರ ಜೀವನದ ಕುರಿತು ತಮ್ಮ ನೆನಪನ್ನು ಹಂಚಿಕೊಳ್ಳುವರು. ಮಹಾತ್ಮಾಗಾಂಧಿಯವರ ಆತ್ಮಕಥೆ ಮತ್ತು ಜೀವನ ಚರಿತ್ರೆ ಹಾಗೂ ಆರ್.ಕೆ ಲಕ್ಷ್ಮಣ್ ಅವರ ಆತ್ಮಕಥೆ... ಇತ್ಯಾದಿಗಳನ್ನು ಓದಲು ನೀಡುವುದು. | |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ವಿದ್ಯಾರ್ಥಿಗಳು ತಮಗೆ ಲಭಿಸಿದ ಶ್ರೇಷ್ಠ ವ್ಯಕ್ತಿಗಳ ಆತ್ಮಕಥೆ ಮತ್ತು ಜೀವನ ಚರಿತ್ರೆಗಳನ್ನು ಓದಲಿ. ಅವುಗಳೊಳಗಿನ ವ್ಯತ್ಯಾಸವನ್ನು ಗುರುತಿಸುವುದು ತಮ್ಮ ಅಭಿಪ್ರಾಯಗಳನ್ನು ಮಂಡಿಸುವುದು. | ತುಲನಾತ್ಮಕ ಟಿಪ್ಪಣಿ |
| | • ಆತ್ಮಕಥೆಯ ಭಾಗವೊಂದನ್ನು ನೀಡಿ ಜೀವನ ಚರಿತ್ರೆಯಾಗಿ ರೂಪಾಂತರಿಸಲು ಹೇಳುವುದು. ವಿದ್ಯಾರ್ಥಿಗಳು ಓದಿದ ಆತ್ಮಕಥೆಯನ್ನು ಜೀವನ ಚರಿತ್ರೆಯಾಗಿ ಬರೆಯುವರು. | ರೂಪಾಂತರ |
| | • 'ಮಾಧವಿ' ಕಾದಂಬರಿಯನ್ನು ವಿದ್ಯಾರ್ಥಿಗಳು ಗ್ರಂಥಾಲಯದಿಂದ ಆಯ್ದು ಓದಲಿ. ತಮ್ಮ ಅಭಿಪ್ರಾಯಗಳನ್ನು ವಿಮರ್ಶಾತ್ಮಕವಾಗಿ ಬರೆಯುವುದು. | ವಿಮರ್ಶಾ ಲೇಖನ |
| | • 'ಮಾಧವಿ' ಕಥೆಯ ಕುರಿತು ಈಗಾಗಲೇ ಬಂದಿರುವ ವಿಮರ್ಶೆಯನ್ನು ಓದಿ ತಮ್ಮ ಅಭಿಪ್ರಾಯಗಳೊಂದಿಗೆ ವಿಮರ್ಶೆಯನ್ನು ಬರೆಯಲಿ. ಅನಂತರ ತರಗತಿಯಲ್ಲಿ ಮಂಡಿಸುವುದು. ಗುಂಪಿನ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಸೂಕ್ತ ತಿದ್ದುಪಡಿಯೊಂದಿಗೆ ಉತ್ತಮ ಪಡಿಸುವುದು. | ಪ್ರಶ್ನಾವಳಿ ವರದಿ |
| | • "ಸಮಾಜದಲ್ಲಿ ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆ" ಎಂಬ ವಿಷಯದ ಕುರಿತು ಕ್ಷೇತ್ರಕಾರ್ಯ, ಸಂದರ್ಶನದ ಮೂಲಕ ವಾಸ್ತವವನ್ನು ಕಂಡುಕೊಂಡು, ಸಂದರ್ಶನ ಲೇಖನ, ಪ್ರಶ್ನಾವಳಿ, ವರದಿ....ಇತ್ಯಾದಿಗಳನ್ನು ಬರೆದು ತರಗತಿಯಲ್ಲಿ ಮಂಡಿಸುವುದು. | ಸಂದರ್ಶನ ಲೇಖನ |
| | • ವಿದ್ಯಾರ್ಥಿಗಳು ತಮ್ಮ ಬದುಕಿನಲ್ಲಿ ಅನುಭವಿಸಿದ ಸಿಹಿ ಕಹಿ ನೆನಪುಗಳನ್ನು ಲೇಖನ ರೂಪದಲ್ಲಿ ಬರೆಯುವುದು. | ಲೇಖನ ಸಂಚಿಕೆ |
| | • ಸಂಚಿಕೆ ತಯಾರಿಯ ಸಂದರ್ಭದಲ್ಲಿ ಈ ಕೆಳಗಿನ ಕೆಲವು ಅಂಶಗಳನ್ನು ಗಮನಿಸುವಂತೆ ಸೂಚಿಸಬಹುದು. (ಸೂಕ್ಷ್ಮ ಮುಖಪುಟ ಶೀರ್ಷಿಕೆ, ಸಂಪಾದಕೀಯ, ಅನುಕ್ರಮಣಿಕೆ, ಮುನ್ನುಡಿ, ಅನುಬಂಧ, ಇತ್ಯಾದಿ) | |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಭಾಷಾ ಶಾಸ್ತ್ರದಲ್ಲಿ ಪದವ್ಯುತ್ಪತ್ತಿ. | • ವಿದ್ಯಾರ್ಥಿಗಳಲ್ಲಿ ಕೆಲವು ತಿಂಡಿ ತಿನಸುಗಳ ಹೆಸರನ್ನು ಕೇಳುವುದು.<br>• ವಿವಿಧ ತಿಂಡಿಗಳ ಹೆಸರನ್ನು ಹೇಳುವುದು. ಈ ತಿಂಡಿಗಳ ಹೆಸರಿನ ಹುಟ್ಟಿನ ಬಗ್ಗೆ ಕೇಳುವುದು. ತಿಂಡಿಗಳ ಹೆಸರಿನಲ್ಲಿರುವ ಸ್ವಾರಸ್ಯವನ್ನು ತಿಳಿಯುವುದು.<br>• ಪಾಠಭಾಗವನ್ನು ಓದಿಸುವುದು.‘ಇಡ್ಲಿ’ ಶಬ್ದದ ಉಗಮದ ಕುರಿತು ತಿಳಿಯುವುದು. ಇನ್ನೂ ಕೆಲವು ತಿಂಡಿಗಳ ಹೆಸರಿನ ಈ ವ್ಯುತ್ಪತ್ತಿಯ ಬಗ್ಗೆ ತಿಳಿಯುವುದು.<br>• ವಿವಿಧ ಸ್ಥಳನಾಮಗಳ ವಿಶೇಷತೆಯ ಕುರಿತು ಮಾಹಿತಿಗಳನ್ನು ಸಂಗ್ರಹಿಸಿ ಲೇಖನ ರೂಪದಲ್ಲಿ ಬರೆಯುವುದು.<br>• ವಿವಿಧ ಭಾಷೆಗಳಲ್ಲಿ ಬಳಕೆಯಲ್ಲಿರುವ ತಿಂಡಿ ತಿನಸುಗಳ ತೌಲನಿಕ ಪಟ್ಟಿಯನ್ನು ತಯಾರಿಸುವುದು.<br>• ಪಾಠಭಾಗದಲ್ಲಿ ನೀಡಲಾದ ಶಬ್ದಗಳನ್ನು ಅದರ ಅರ್ಥ, ವ್ಯಾಕರಣ, ನಾಮಪದ, ಕ್ರಿಯಾಪದ... ಇತ್ಯಾದಿಗಳನ್ನು ಒಳಗೊಂಡು ನಿಘಂಟು ತಯಾರಿಸುವುದು. | ಲೇಖನ ಬರೆಯುವುದು<br><br>ತೌಲನಿಕ ಪಟ್ಟಿ<br><br>ನಿಘಂಟು ತಯಾರಿ |
| • ತುಳುಭಾಷೆಯ ಹುಟ್ಟು ಮತ್ತು ಬೆಳವಣಿಗೆಹಾಗೂ ಇತಿಹಾಸ ಅರಿವು | • ಪ್ರಪಂಚದ ಸಾವಿರಾರು ಭಾಷೆಗಳು ಈಗಾಗಲೇ ಪ್ರಬುದ್ಧಾವಸ್ಥೆಗೆ ತಲುಪಿವೆ, ಜನಮನ್ನಣೆಯನ್ನೂ ಪಡೆದಿದೆ. ಆದರೆ ಪ್ರಾಚೀನ ಇತಿಹಾಸವಿರುವ ಅದೆಷ್ಟೋ ಭಾಷೆಗಳು ಇನ್ನೂ ಬೆಳಕುಕಾಣದೆ ಸುಪ್ತಾವಸ್ಥೆಯಲ್ಲಿವೆ. ಅವುಗಳಲ್ಲಿ ಒಂದು ತುಳುಭಾಷೆ.<br>• ಭಾರತದ ಶಾಸ್ತ್ರೀಯ ಸ್ಥಾನಮಾನಗಳನ್ನು ಪಡೆದಿರುವ ಭಾಷೆಗಳ ಪಟ್ಟಿಗೆ ಸೇರಬೇಕಾಗಿದ್ದಷ್ಟು ಪ್ರಾಚೀನತೆ ತುಳುಭಾಷೆಗೆ ಇದೆ ಎಂದರೂ ತಪ್ಪಾಗಲಾರದು. ಆದರೆ ಸಂಶೋಧನಾ ಕಾರ್ಯದಲ್ಲಿ ಹಿಂದೆ ಬಿದ್ದುದರಿಂದಲೋ ಏನೋ ಅರ್ಹ ಸ್ಥಾನ ಪಡೆಯಲು ಈ ಭಾಷೆಗೆ ಸಾಧ್ಯವಾಗಿಲ್ಲ. ತುಳುಭಾಷೆಯ ಇತಿಹಾಸದ ಕುರಿತಾದ ಕಿರು ಪರಿಚಯವನ್ನು ನೀಡುವುದು ಈ ಘಟಕದ ಉದ್ದೇಶಗಳಲ್ಲೊಂದಾಗಿದೆ. | |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ತುಳು ಮನೆ ಭಾಷೆಯಾಗಿರುವ ವಿದ್ಯಾರ್ಥಿಗಳು ತರಗತಿಯಲ್ಲಿ ಎಷ್ಟು ಮಂದಿ ಇರುವರು ಎಂದು ಪ್ರಶ್ನಿಸುವುದು. ಕೆಲವು ವಿದ್ಯಾರ್ಥಿಗಳು ತರಗತಿಯಲ್ಲಿ ಎಷ್ಟು ಮಂದಿ ಇರುವರು ಎಂದು ಪ್ರಶ್ನಿಸುವುದು. ಕೆಲವು ವಿದ್ಯಾರ್ಥಿಗಳು ಎದ್ದು ನಿಲ್ಲುವರು. ತುಳುಭಾಷೆಯ ಬಗೆಗಿನ ವಿದ್ಯಾರ್ಥಿಗಳ ಅರಿವನ್ನು ಕೆಲವು ಪ್ರಶ್ನೆಗಳ ಮೂಲಕ ತಿಳಿಯುವುದು.<br>• ತುಳುಭಾಷೆಯಲ್ಲಿ ರಚಿತವಾಗಿರುವ ಕೃತಿಗಳ ಕುರಿತು ತಿಳಿಯುವುದು. ಕೆಲವು ಕೃತಿಗಳ ಹೆಸರುಗಳನ್ನು ಹೇಳುವುದು.<br>• ತುಳುನಾಡನ್ನು ಆಳಿದ ರಾಜಮನೆತನಗಳು ಯಾವುವು? ವೀರ ಪುರುಷರು ಯಾರೆಲ್ಲಾ? ಎಂಬಿತ್ಯಾದಿ ಪ್ರಶ್ನೆಗಳ ಮೂಲಕ ತುಳುನಾಡಿನ ಇತಿಹಾಸದ ಕುರಿತು ಅರಿವನ್ನು ಮೂಡಿಸುವುದು.<br>• ತುಳು ಪಾಡ್ದನಗಳಲ್ಲಿ ಬಂದಿರುವ ಕೋಟಿ–ಚೆನ್ನಯರ ಕತೆಯನ್ನು ಸಂಗ್ರಹಿಸಲು ಸೂಚಿಸುವುದು. ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸಲು ಹೇಳುವುದು. ವಿದ್ಯಾರ್ಥಿಗಳು ಗ್ರಂಥಾಲಯದ ಸಹಾಯ ಪಡೆದು ಕೋಟಿ ಚೆನ್ನಯರ ಕುರಿತಿರುವ ಕತೆಯನ್ನು ಸಂಗ್ರಹಿಸುವುದು. ಇಲ್ಲವೇ ಹಿರಿಯರಿಂದ ಕೇಳಿ ಬರೆಯುವುದು. ಸಂಗ್ರಹಿಸಿ ತಂದ ಕತೆಯನ್ನು ತರಗತಿಯಲ್ಲಿ ಮಂಡಿಸುವುದು. ಅಧ್ಯಾಪಕರ ನೆರವಿನಿಂದ ಉತ್ತಮಪಡಿಸಿ ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸುವುದು.<br>• ಕನ್ನಡ ಮತ್ತು ಮಲಯಾಳಂ ಭಾಷೆಗಳಲ್ಲಿ ತುಳು ಗಾದೆಗಳ ಸಮಾನ ಆಶಯಗಳನ್ನು ತಿಳಿಯಪಡಿಸುವ ಗಾದೆಗಳನ್ನು ಸಂಗ್ರಹಿಸಲು ಹೇಳುವುದು. ತುಲನಾತ್ಮಕ ಟಿಪ್ಪಣಿ ಬರೆಸುವುದು.<br>• ತುಳುನಾಡಿನ ಆಚರಣೆಗಳ ಕುರಿತು ಸಂಕ್ಷಿಪ್ತ ವಿವರಣೆಗಳನ್ನೊಳಗೊಂಡ ಕಿರುಲೇಖನವನ್ನು ಬರೆಸುವುದು.<br>• ತುಳುನಾಡಿನ ಆಹಾರ, ಉಡುಗೆ, ಹಬ್ಬ ಹರಿದಿನಗಳ ಆಚಾರ ಪದ್ಧತಿ ನಂಬಿಕೆ, ಸಂಪ್ರದಾಯ.....ಇತ್ಯಾದಿಗಳು ಒಳಗೊಳ್ಳುವಂತೆ ಸಲಹೆ ನೀಡುವುದು. | ಭಿತ್ತಿಪತ್ರಿಕೆ<br><br>ತುಲನಾತ್ಮಕ ಟಿಪ್ಪಣಿ<br><br>ಕಿರುಲೇಖನ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ವಿದ್ಯಾರ್ಥಿಗಳು ಗೆಳೆಯರ, ಹಿರಿಯರ, ಲಭ್ಯ ಮಾಹಿತಿ ಮೂಲಗಳಿಂದ ವಿವರಗಳನ್ನು ಸಂಗ್ರಹಿಸಿ, ಕಿರುಲೇಖನ ಬರೆದು ತರಗತಿಯಲ್ಲಿ ಮಂಡಿಸುವುದು. ಅಧ್ಯಾಪಕರ ನೆರವಿನಿಂದ ಸೂಕ್ತ ತಿದ್ದುಪಡಿಗಳನ್ನು ಮಾಡುವುದು. | ಪರಿಚಯ ಲೇಖನ |
| | • ಲಭ್ಯ ಪ್ರಾಚೀನ ತುಳುಕೃತಿಗಳ ಕುರಿತು ಪರಿಚಯ ಲೇಖನ ಬರೆಸುವುದು. ಅಧಿಕೃತವಾಗಿ ಲಭ್ಯವಿರುವ ಕೃತಿಗಳನ್ನು ಓದುವುದು. ಆ ಕೃತಿಗಳ ಕುರಿತು ಪರಿಚಯ ಲೇಖನವನ್ನು ಬರೆದು ಗುಂಪಿನಲ್ಲಿ ಮಂಡಿಸುವುದು. ಬರೆದ ಲೇಖನವನ್ನು ಬ್ಲಾಗ್‌ನಲ್ಲಿ ಪ್ರಕಟಿಸುವುದು. | |
| | • ಸರಳವಾಕ್ಯ/ಮಿಶ್ರವಾಕ್ಯಗಳನ್ನು ಬರೆಸುವುದು. ಒಂದಕ್ಕಿಂತ ಹೆಚ್ಚಿನ ಸಮ್ಮಿಶ್ರವಾಕ್ಯಗಳನ್ನು ಸರಳವಾಕ್ಯಗಳಾಗಿ ಹೇಗೆ ಪರಿವರ್ತಿಸುವುದು ಎಂದು ತಿಳಿಸುವುದು. ಅಂತೆಯೇ ಒಂದು ವಾಕ್ಯವನ್ನು ಸರಳವಾಕ್ಯಗಳಾಗಿ ಹೇಗೆ ಪರಿವರ್ತಿಸುವುದು ಎಂದು ಉದಾಹರಣೆಯ ಮೂಲಕ ತಿಳಿಸುವುದು. | |
| | • ವಿದ್ಯಾರ್ಥಿಗಳು ಮಿಶ್ರವಾಕ್ಯವನ್ನು ಸರಳವಾಕ್ಯಗಳಾಗಿಯೂ ಸರಳ ವಾಕ್ಯಗಳನ್ನು ಮಿಶ್ರವಾಕ್ಯವಾಗಿಯೂ ಪರಿವರ್ತಿಸಿ ಬರೆಯುವುದು. | |
| | • ಕಾಸರಗೋಡು ಪ್ರದೇಶದ ಪ್ರಾದೇಶಿಕ ಬಳಕೆಯ ಪದಗಳು ಕನ್ನಡ, ಮಲಯಾಳ, ತುಳು, ... ಭಾಷೆಗಳಲ್ಲಿ ಸಮರ್ಥವಾಗಿ ಉಪಯೋಗಿಸಲಾಗುತ್ತದೆ. ಅಂತಹ ಕೆಲವು ಪದಗಳನ್ನು ಹೇಳಿಸುವುದು, ಅವುಗಳ ಅರ್ಥವನ್ನು ತಿಳಿಸುವುದು, ಅನಂತರ ಪಟ್ಟಿ ಮಾಡಿಸುವುದು. | ಪದಗಳ ಪಟ್ಟಿ |
| | • ವಿದ್ಯಾರ್ಥಿಗಳು ತಮಗೆ ಲಭ್ಯವಿರುವ ಪದಗಳನ್ನು ಗುಂಪುಗಳಲ್ಲಿ ಚರ್ಚಿಸಿ ಮಂಡಿಸುವುದು, ಬಳಿಕ ಪಟ್ಟಿಯಲ್ಲಿ ಬರೆದು ತಿಳಿಸುವುದು. | ಗುಂಪು ಚರ್ಚೆ |
| | • ಕೆಲವೊಮ್ಮೆ ಒಂದೇ ಪದಗಳು ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಇದಕ್ಕಿರುವ ಕಾರಣಗಳೇನು? ಒಂದು ಕಾಲದಲ್ಲಿ ಒಂದು ಪದಕ್ಕಿದ್ದ ಅರ್ಥವು ಕಾಲ ಬದಲಾದಂತೆ ಬೇರೊಂದು ಅರ್ಥವನ್ನು ನೀಡುತ್ತದೆ. ಭಾಷೆಯ ಬೆಳವಣಿಗೆಯಲ್ಲಿ ಇದು ಅನಿವಾರ್ಯವೇ? | ಅರ್ಥ ವ್ಯತ್ಯಾಸವನ್ನು ಗುರುತಿಸುವುದು. |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ವ್ಯವಹಾರದಲ್ಲಿ ಭಾಷಾ ಬಳಕೆಯ ಪ್ರಾಧಾನ್ಯ | • ಪ್ರಪಂಚದ ಮಾನವ ಕೋಟಿಗೆ ಭಾಷೆಯು ವ್ಯವಹಾರ ಮಾಧ್ಯಮವಾಗಿದೆ. ಸಂವಹನ ಪ್ರಕ್ರಿಯೆಗೆ ಭಾಷೆಯ ಪ್ರಾಧಾನ್ಯವೇನು ಎಂಬುದರ ಕುರಿತು ಪ್ರತಿಯೊಬ್ಬನೂ ತಿಳಿದಿರಬೇಕು. ಭಾಷೆಯ ಹುಟ್ಟು ಮಾನವನಿಂದಲೇ ಸಾಧ್ಯವಾಯಿತು. ಆದರೆ ಅದರ ಅಭಿವೃದ್ಧಿ ಮುಂದಿನ ತಲೆಮಾರಿನಿಂದಲೇ ನಡೆಯಬೇಕಾಗಿದೆ. ಭಾಷೆಯ ಜೀವನಕ್ಕೆ ಬೆಳಕನ್ನು ನೀಡುತ್ತದೆ. ಅದು ಜ್ಞಾನದ ಸಂಕೇತ. ಭಾಷೆಯಿಂದಲೇ ಮಾನವನು ಇತರ ಪ್ರಾಣಿಗಳಿಂದ ಭಿನ್ನವಾಗಿದ್ದಾನೆ.<br>• ಭಾಷೆಯ ಹುಟ್ಟು ಮತ್ತು ಬೆಳವಣಿಗೆಗಳ ಕುರಿತು ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ಅಳೆಯಲು ಕೆಲವು ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ತಮಗೆ ತಿಳಿದಿರುವ ವಿಷಯಗಳನ್ನು ಮಂಡಿಸುವುದು. | |

# TEACHER PLANNER

| | | |
|---|---|---|
| ಪಾಠದ ಹೆಸರು | : | ಕಾಡಿಗೆ ಹೊದ್ದಿಸಿದ ಮಂಜಿನ ಪರದೆ |
| ದಿನಾಂಕ | : | |
| ಸಮಯ | : | 10 ಪಿರೇಡುಗಳು |
| ವಿಷಯ | : | ಪ್ರವಾಸ ಕಥನ |
| ಕಲಿಕಾ ಸಾಧನೆ | : | ಪ್ರವಾಸ ಲೇಖನವನ್ನು ಬರೆಯುವರು. |
| ಆಶಯಗಳು | : | ವಿವಿಧ ಸಂಸ್ಕೃತಿಯ ಪರಿಚಯ, ಕೃಷಿ, ಸೇವಾ ಮನೋಭಾವ, ಸಹಕಾರ, ಭಾವೈಕ್ಯದ ಮಹತ್ವ ಇತ್ಯಾದಿಗಳನ್ನು ಪ್ರವಾಸದ ಮೂಲಕ ಪಡೆಯಲು ಸಾಧ್ಯ ಎಂಬುದನ್ನು ತಿಳಿಯಪಡಿಸಬಹುದು. |
| ನೈಪುಣ್ಯಗಳು | : | ಪ್ರವಾಸ ಲೇಖನವನ್ನು ಬರೆಯುವ ಸಾಮರ್ಥ್ಯವನ್ನು ಪಡೆಯುವುದು. |
| ಭಾಷಾ ಅಂಶಗಳು | : | ಸಂಧಿ, ಸಮಾಸ, ವಾಕ್ಯ ಪ್ರಯೋಗ, ನಿಷೇಧಾರ್ಥಗಳನ್ನು ಅರಿತುಕೊಳ್ಳುವುದು. |
| ವ್ಯವಹಾರ ರೂಪಗಳು | : | ಭಿತ್ತಿಪತ್ರಿಕೆ, ಕಿರುಲೇಖನ, ಪರಿಚಯ ಲೇಖನ, ಸಂಪಾದಕೀಯ, ಮಾಹಿತಿ ಕೈಪಿಡಿ, ಪ್ರಬಂಧ, ...... ಇತ್ಯಾದಿಗಳು. |
| ಮೌಲ್ಯ ಹಾಗೂ ಮನೋಭಾವ | : | ಸಹಬಾಳ್ವೆ ಎಂಬ ಸಾಮಾಜಿಕ ಮೌಲ್ಯವನ್ನು ತಿಳಿದುಕೊಳ್ಳುವುದು. ಪ್ರವಾಸದಿಂದ ಮನೋಲ್ಲಾಸವನ್ನಲ್ಲದೆ ತಿಳುವಳಿಕೆಯ ಕ್ಷೇತ್ರವನ್ನು ವಿಸ್ತಾರಗೊಳಿಸಬಹುದು ಎಂಬುದನ್ನು ತಿಳಿಯುವುದು. ಪ್ರವಾಸವು ವಿವಿಧ ಸಂಸ್ಕೃತಿಗಳ ಬೆಸುಗೆ ಹಾಗೂ ಭಾವೈಕ್ಯಕ್ಕೆ ದಾರಿಯಾಗುತ್ತದೆ ಎನ್ನುವುದರ ಅರಿವಿನಿಂದ ಪ್ರವಾಸ ಹೋಗಲು ಆಸಕ್ತಿ ತಳೆಯುವುದು. |
| ಕಲಿಕಾ ಸಾಮಗ್ರಿ | : | ಕಾಡುಕಣಿವೆಯ ಹಾಡು<br>ಕುಮಾರ ಪರ್ವತದ ಸುತ್ತುಮುತ್ತ<br>ಅಡಕ ಮುದ್ರಿಕೆ ಹಾಗೂ ಪ್ರವಾಸಕ್ಕೆ ಸಂಬಂಧಿಸಿದ ಲೇಖನಗಳು |

# ಕಾಡಿಗೆ ಹೊದ್ದಿಸಿದ ಮಂಜಿನ ಪರದೆ

## ಪ್ರವೇಶ

ಪ್ರವಾಸವನ್ನು ಮೆಚ್ಚದವರು, ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸದವರು ವಿರಳವಾಗಿರಬಹುದು. ಅನುಭವಗಳನ್ನು ಹಂಚಿಕೊಳ್ಳುವುದರಿಂದ ಮನೋಲ್ಲಾಸ ಮಾತ್ರವಲ್ಲದೆ ಅರಿವಿನ ಕ್ಷೇತ್ರವೂ ವಿಸ್ತಾರಗೊಳ್ಳುತ್ತದೆ. ಬದುಕಿನ ಜಂಜಾಟಗಳಿಂದ ದೂರವಿದ್ದು ಒಂದಷ್ಟು ವಿಶ್ರಾಂತಿ ಪಡೆಯಬಯಸದವರು ಇರಲಾರರು. ವಿವಿಧ ಪ್ರದೇಶಗಳು, ಭಾಷೆ, ಸಂಸ್ಕೃತಿ, ಜನಾಂಗಗಳ ಪರಿಚಯದೊಂದಿಗೆ ಅವುಗಳ ನಡುವೆ ಸಾಮರಸ್ಯವನ್ನು ಬೆಸೆಯುವುದಕ್ಕೂ, ಭಾವೈಕ್ಯವನ್ನು ಹೊಂದುವುದಕ್ಕೂ ಪ್ರವಾಸವು ಒಂದು ಕಾರಣವಾಗುತ್ತದೆ. ಓದಿನ ಮೂಲಕ ಪಡೆಯುವ ಅನುಭವ ಹಾಗೂ ಪ್ರತ್ಯಕ್ಷ ಅನುಭವಗಳಿಗೆ ಬಹಳ ಅಂತರವಿದೆ. ಕಣ್ಣಿಗೆ ಕಟ್ಟುವಂತಹ ಚಿತ್ರಣವನ್ನು ಬರವಣಿಗೆಗೆ ನೀಡಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕಾಡಿಗೆ ಹೊದ್ದಿಸಿದ ಮಂಜಿನ ಪರದೆ ಎಂಬ ಲೇಖನವು ಪ್ರವಾಸದ ಕಿರು ಅನುಭವವನ್ನು ನೀಡುತ್ತದೆ.

ಪ್ರವಾಸದ ಬಗೆಗಿನ ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯುವುದಕ್ಕಾಗಿ ಅವರ ಪ್ರವಾಸದ ಅನುಭವಗಳನ್ನು ತರಗತಿಯಲ್ಲಿ ಹಂಚಿಕೊಳ್ಳಲು ಹೇಳುವುದು, ವಿದ್ಯಾರ್ಥಿಗಳು ತಮ್ಮ ಪ್ರವಾಸದ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳಲಿ. ಬಳಿಕ ಲೇಖಕರ ಪರಿಚಯವನ್ನು ನೀಡುವುದು.

ಜಿ.ಪಿ. ಬಸವರಾಜು ಇವರು ಸಾಹಿತ್ಯದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಬರವಣಿಗೆಯನ್ನು ಗಂಭೀರವಾಗಿ ಪರಿಗಣಿಸಿದ ಈ ಲೇಖಕರು ಪ್ರವಾಸ ಕಥನವನ್ನು ಮನಮುಟ್ಟುವಂತೆ ಬರೆಯುವಲ್ಲಿ ನಿಸ್ಸೀಮರು. ತಮ್ಮ ಕಾರ್ಯಕ್ಷೇತ್ರದ ಹಿರಿಮೆಯನ್ನು ಓದುಗರಿಗೆ ತಲುಪಿಸುವಲ್ಲಿ ಇವರು ಸಮರ್ಥರಾಗಿದ್ದಾರೆ. ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಪಾಠಭಾಗವನ್ನು ಓದಲಿ, ಮುಖ್ಯಾಂಶಗಳು ಉತ್ತರವಾಗಿ ಲಭಿಸುವಂತೆ ಕೆಲವು ಪ್ರಶ್ನೆಗಳನ್ನು ಕೇಳುವುದು. ಅನಂತರ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ವಿಭಾಗಿಸಿ ಪ್ರತಿಯೊಂದು ಗುಂಪಿಗೂ ಒಂದೊಂದು ಚಟುವಟಿಕೆಯನ್ನು ಹಂಚುವುದು.

**ಸಂಪಾದಕೀಯ**

ಒಂದನೇ ಗುಂಪಿನವರು – ಪತ್ರಿಕಾ ಸಂಪಾದಕರಾಗಿದ್ದು ಪರಿಸರ ಮಲಿನೀಕರಣದ ಕಾರಣ ಮತ್ತು ಅದರ ಅತಿರೇಕದಿಂದ ಪರಿಸರವನ್ನು ಹೇಗೆ ಸಂರಕ್ಷಿಸಬಹುದು ಎಂಬುದನ್ನು ಸಂಪಾದಕೀಯದ ರೂಪದಲ್ಲಿ ಬರೆದು ಮಂಡಿಸುವರು.

ಪರಿಸರವು ಜೀವಜಾಲಗಳ ಸುಗಮವಾಸಕ್ಕೆ ಹೇಗೆ ಪೂರಕ ಹಾಗೂ ಆರೋಗ್ಯಕರವಾಗಿರಬೇಕು. ಮಲಿನೀಕರಣಕ್ಕೆ ಮುಖ್ಯ ಕಾರಣಗಳೇನು? ನಾವು ಇತರರಿಗೆ ಹೇಗೆ ಮಾದರಿಯಾಗಬೇಕು? ಪ್ರಕೃತಿ ಪ್ರೇಮವನ್ನು ಬೆಳೆಸುವುದು ಹೇಗೆ? ಹಾಗೂ ಪರಿಸರದ ಮಹತ್ವವನ್ನು ಸಾರುವ ವಿವರಗಳು ಯಾವುವು ..... ಇತ್ಯಾದಿ ಅಂಶಗಳು ಸಂಪಾದಕೀಯದಲ್ಲಿ ಅಡಕವಾಗಿರುವಂತೆ ಸೂಚನೆ ನೀಡುವುದು.

ಈಗಾಗಲೇ ಲಭ್ಯವಿರುವ ಕೆಲವು ಪತ್ರಿಕೆಗಳ ಸಂಪಾದಕೀಯವನ್ನು ವಿದ್ಯಾರ್ಥಿಗಳಿಗೆ ಓದಲು ನೀಡುವುದು. ಅಲ್ಲಿನ ಬರವಣಿಗೆಯನ್ನು ಗಮನಿಸುವಂತೆ ಸಲಹೆಯಿತ್ತು ಸಂಪಾದಕೀಯ ಬರಹಗಳ ಬರೆಯಲು ಹೇಳುವುದು. ಬರೆದ ಸಂಪಾದಕೀಯವನ್ನು ಅಗತ್ಯ ತಿದ್ದುಪಡಿಗಳಿಂದ ಸರಿಪಡಿಸುವುದು.

## ಪ್ರಬಂಧ ಲೇಖನ

'ಪ್ರವಾಸದ ಮೂಲಕ ಭಾವೈಕ್ಯ' ಎಂಬ ವಿಷಯದ ಕುರಿತು ಪ್ರಬಂಧ ಬರೆಯುವಾಗ ಈ ಕೆಳಗಿನ ಅಂಶಗಳು ಒಳಗೊಳ್ಳುವಂತೆ ಸೂಚನೆ ನೀಡುವುದು.

ಭಾವೈಕ್ಯದ ಮಹತ್ವ, ಸಾಮರಸ್ಯ, ಸಹೋದರತೆ, ಸೌಹಾರ್ದ, ಸಹಕಾರ, ....... ಇತ್ಯಾದಿ ಜನಜೀವನಕ್ಕೆ ಹೇಗೆ ಬೆಂಬಲ ನೀಡುತ್ತವೆ ಎಂಬುದನ್ನು ಗುರುತಿಸುವುದು. ಪ್ರವಾಸದಿಂದ ಕೇವಲ ಮನರಂಜನೆಯಲ್ಲದೆ ದೊರಕುವ ಇತರ ಅಂಶಗಳು: ಅನ್ಯಭಾಷೆ, ಸಂಸ್ಕೃತಿ, ಜನಜೀವನ ಮುಂತಾದವುಗಳನ್ನು ತಿಳಿಯಲು ಸಾಧ್ಯ ಎಂಬುದನ್ನು ಸೂಚಿಸುವುದು. ಪ್ರಬಂಧ ರಚಿತವಾದ ನಂತರ ಅದರಲ್ಲಿ ಸೂಕ್ತವಾದ ತಿದ್ದುಪಡಿಗಳನ್ನು ಮಾಡುವುದು. ವಿದ್ಯಾರ್ಥಿಗಳು ತಂತಮ್ಮ ಪ್ರಬಂಧವನ್ನು ಉತ್ತಮ ಪಡಿಸಿ ಬರೆದಿಟ್ಟುಕೊಳ್ಳಲಿ.

## ಜಡಿಮಳೆ ಸುರಿದಾಗಿನ ಕಾಡಿನ / ಹಳ್ಳಿಯ ಕಾಲ್ಪನಿಕ ಚಿತ್ರಣ

ಹಳ್ಳಿಯಲ್ಲಿ ಬದುಕುವ ಜನರು ಹೇಗೆ ಮಳೆಯನ್ನು ಕಡೆಗಣಿಸಿ ತಮ್ಮ ವೃತ್ತಿಯಲ್ಲಿ ತೊಡಗಿರುವರು. ಮಳೆ, ಗಾಳಿ, ಬಿಸಿಲು ಎಲ್ಲವನ್ನೂ ಸಮಾನವಾಗಿ ಸ್ವೀಕರಿಸಿ ದುಡಿಮೆಯ ಕ್ಷೇತ್ರದಲ್ಲಿ ಕಾಣಿಸುವರು ಎಂಬ ಚಿತ್ರಣ ನೀಡುವುದು.

ತಲೆತಗ್ಗಿಸಿ ನಡೆದಾಡುವ ದನಕರು, ಇತರ ಪ್ರಾಣಿಗಳು, ಎಲೆಮರೆಯಲ್ಲಿ ಕುಳಿತಿರುವ ಹಕ್ಕಿಗಳು; ಕೊಟ್ಟಂಬಾಳೆ, ಬಾಳೆ ಎಲೆ, ಮುಂಡ್ಯದ ಎಲೆ ಇತ್ಯಾದಿಗಳನ್ನು ತಲೆ ಮೇಲೆ ಹಿಡಿದಿರುವ ಜನರ ಸ್ಥಿತಿ, ಗೊರಬೆಯಡಿಯಲ್ಲಿ ನೇಜಿ ನೆಡುವ ಕೃಷಿಕರು. ಕೃಷಿ ಭೂಮಿಯಲ್ಲಿ ಕೆಲಸ ಮಾಡುವ ಇತರ ಮಂದಿ .......... ಇತ್ಯಾದಿ.

ಮಬ್ಬು ಕವಿದಿರುವ ಕಾಡು, ನಿಬಿಡವಾದ ಕಾಡಿನಲ್ಲಿ ಮಳೆ ಸುರಿದಾಗ ಎಲೆಯಿಂದ ತೊಟ್ಟಿಕ್ಕುವ ನೀರಹನಿ, ನೀರಹನಿಗಳು ಗಾಳಿಗೆ ಹಾರುವುದು, ಚಲನೆಯಿಲ್ಲದಿರುವ ಮರದ ಕೊಂಬೆ ರೆಂಬೆಗಳು, ............ ಇತ್ಯಾದಿಗಳ ಚಿತ್ರಣಗಳು.

ಅಗತ್ಯ ಸಂದರ್ಭಗಳಲ್ಲಿ ಅಡಕಮುದ್ರಿಕೆಗಳನ್ನು ಬಳಸುವುದು.

## ಮಾಹಿತಿ ಕೈಪಿಡಿ

ವಿದ್ಯಾರ್ಥಿಗಳು ಬೇಕಲಕೋಟೆಗೆ ಸಂಬಂಧಿಸಿದ ಮಾಹಿತಿ ಕೈಪಿಡಿಯನ್ನು ತಯಾರಿಸಲಿ. ಅಧ್ಯಾಪಕರು ಸೂಕ್ತವಾದ ಮಾರ್ಗದರ್ಶನ ನೀಡುವುದು.

## ಮಾಹಿತಿ ಕೈಪಿಡಿಯಲ್ಲಿ ಒಳಗೊಳ್ಳಬೇಕಾದ ಅಂಶಗಳು.

ನಿರ್ಮಿಸಿದವರು–ಕೋಟೆಯ ವಿಶೇಷತೆ–ಕೋಟೆಯ ನಿರ್ಮಾಣದ ಉದ್ದೇಶ– ಆಳಿದ ರಾಜಮನೆತನ–ಭೌಗೋಳಿಕ ಮಾಹಿತಿ–ವಸತಿ ಸೌಕರ್ಯ–ವಾಹನ ನಿಲುಗಡೆ ಸೌಕರ್ಯ–ಹೋಗಬೇಕಾದ ರೈಲು ಮಾರ್ಗ–ರಸ್ತೆ ಇವುಗಳ ಕುರಿತು ಮಾಹಿತಿ.. ಇತ್ಯಾದಿ.

### ಲೇಖನ ಸಿದ್ಧಪಡಿಸುವುದು

ವಿದ್ಯಾರ್ಥಿಗಳು ಯೋಗ್ಯವಾದ ಸ್ಥಳವನ್ನು ಗುರುತಿಸಲಿ. ಆ ತಾಣದ ವಿಶೇಷತೆಯನ್ನೊಳಗೊಂಡ ಲೇಖನವನ್ನು ಸಿದ್ಧಪಡಿಸಿ ತರಗತಿಯಲ್ಲಿ ಮಂಡಿಸಲಿ. ಪರಸ್ಪರ ಚರ್ಚಿಸಿ, ಕ್ರೋಡೀಕರಿಸಿದ ಉತ್ತಮ ಲೇಖನವನ್ನು ಶಾಲಾ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲಿ.

### ಪೊಸಡಿಗುಂಪೆ

ಇದು ನಮ್ಮ ಸಮೀಪ ಪ್ರದೇಶದ ಚಾರಣಕ್ಕೆ ಯೋಗ್ಯವಾದ ಪ್ರದೇಶವಾಗಿದೆ. ಬೆಟ್ಟದ ಹುಲ್ಲು ಛಾವಣಿ– ಕಾಂತೀಯ ಗುಣ (ವಿಮಾನಗಳು ಈ ಬೆಟ್ಟದ ಮೇಲ್ಭಾಗದಲ್ಲಿ ಹಾರುವುದಿಲ್ಲ ಎಂಬ ಪ್ರತೀತಿ ಇದೆ).

ಕವಿ ಕಯ್ಯಾರ ಕಿಞ್ಞಣ್ಣ ರೈಯವರು ಕವನ ರಚಿಸಿದ್ದಾರೆ – ಸಿನೆಮಾ ಚಿತ್ರೀಕರಣ ತಾಣವೂ ಆಗಿದೆ – ಪಾಂಡವರ ಬಾವಿ ಇದೆ. ಗುಹೆಯ ವಿಶೇಷತೆ ..... ಇತ್ಯಾದಿಗಳು

- ಕುಂಬಳೆಯಿಂದ ಹೋಗುವುದಾದರೆ– ಕುಂಬಳೆ–ಸೀತಾಂಗೋಳಿ–ಪುತ್ತಿಗೆ–ಧರ್ಮತ್ತಡ್ಕ (ಸುಮಾರು 15 ಕಿ.ಮೀ.)
- ಬಂದಿಯೋಡು ದಾರಿಯಾದರೆ– ಬಂದಿಯೋಡು–ಧರ್ಮತ್ತಡ್ಕ (ಸುಮಾರು 15 ಕಿ.ಮೀ.)
- ಬಾಯಾರು ದಾರಿಯಾದರೆ–ಉಪ್ಪಳ–ಕೈಕಂಬ–ಪೈವಳಿಕೆ–ಬಾಯಾರು–ಸಜಂಕಿಲ–ಗುಂಪೆಗುಡ್ಡೆ (ಸುಮಾರು 15 ಕಿ.ಮೀ.)

### ಕಿರು ಲೇಖನ

ವಿದ್ಯಾರ್ಥಿಗಳು ಪಾಠಭಾಗದ ಆಶಯವನ್ನು ತಿಳಿದುಕೊಂಡು ಕೃಷಿಕರ ಸ್ವಭಾವ ವೈಶಿಷ್ಟ್ಯಗಳ ಕುರಿತು ಕಿರು ಲೇಖನವನ್ನು ಬರೆಯಲಿ.

ಈ ಲೇಖನದಲ್ಲಿ ಕೆಳಗಿನ ಅಂಶಗಳು ಒಳಗೊಳ್ಳಲಿ.

- ರೈತರ ಅಪಾರವಾದ ಪರಿಶ್ರಮ
- ಕೃಷಿ ಕೆಲಸಗಳಲ್ಲಿ ತಲ್ಲೀನರಾಗುವುದು
- ರೈತರ ಉದಾರ ಮನೋಭಾವ ಹಾಗೂ ನಿಸ್ವಾರ್ಥ ಸೇವೆ.

### ಭಾಷಾಭ್ಯಾಸ

### ಸಂಧಿ ವಿಂಗಡಣೆ

ಪದವನ್ನು ವಿಂಗಡಿಸುವ ರೀತಿಯನ್ನು ತಿಳಿಸಿಕೊಡುವುದು.

| | | |
|---|---|---|
| ಬೃಹತ್ + ಆಕಾರ | – | ಬೃಹದಾಕಾರ (ಜಶ್ತ್ವ ಸಂಧಿ) |
| ತಂಗು + ತಾಣ | – | ತಂಗುದಾಣ (ಆದೇಶ ಸಂಧಿ) |
| ಪ್ರತಿಫಲ + ಅಪೇಕ್ಷೆ | – | ಪ್ರತಿಫಲಾಪೇಕ್ಷೆ (ಸವರ್ಣದೀರ್ಘ ಸಂಧಿ) |
| ತಲೆ + ತೋರು | – | ತಲೆದೋರು (ಆದೇಶ ಸಂಧಿ) |

ಮನುಷ್ಯ + ಆಕೃತಿ – ಮನುಷ್ಯಾಕೃತಿ (ಸವರ್ಣದೀರ್ಘ ಸಂಧಿ)

ಅತಿ + ಉತ್ತಮ – ಅತ್ಯುತ್ತಮ (ಯಣ್ ಸಂಧಿ)

**ಸಮಾಸ**

ಸಮಾಸಗಳ ವಿಗ್ರಹವಾಕ್ಯ ಬರೆಯುವ ವಿಧಾನವನ್ನು ತಿಳಿಸುವುದು.

ಕಣ್ಣನ್ನು ಮುಚ್ಚು – ಕಣ್ಣುಮುಚ್ಚು (ಕ್ರಿಯಾ ಸಮಾಸ)

ಗಿಡವೂ ಮರವೂ – ಗಿಡಮರಗಳು (ದ್ವಂದ್ವ ಸಮಾಸ)

## ಸಂಸ್ಕೃತ–ತದ್ಬವ ರೂಪ

ಘಂಟಾ–ಗಂಟೆ : ಭೂಮಿ–ಬುವಿ: ಐಶ್ವರ್ಯ–ಐಸಿರಿ: ಪ್ರಯಾಣ–ಪಯಣ : ಆಶ್ರಯ–ಆಸರೆ:ಪ್ರಮಾಣ–ಹವಣು: ಆಕಾಶ–ಆಗಸ: ವರ್ಣ–ಬಣ್ಣ .

**ನಿಷೇಧಾರ್ಥ ರೂಪ**

ತಿನ್ನು – ತಿನ್ನಲಾರನು / ತಿನ್ನಲಾರಳು/ ತಿನ್ನಲಾರದು

ತುಂಬಿ – ತುಂಬಲಾರನು / ತುಂಬಲಾರಳು / ತುಂಬಲಾರದು

ಒಪ್ಪು – ಒಪ್ಪಲಾರನು / ಒಪ್ಪಲಾರಳು / ಒಪ್ಪಲಾರದು / ಒಪ್ಪದು

ಕೊಳ್ಳು – ಕೊಳ್ಳಲಾರನು / ಕೊಳ್ಳಲಾರಳು / ಕೊಳ್ಳಲಾರದು

ಕೊಡು – ಕೊಡಲಾರನು / ಕೊಡಲಾರಳು / ಕೊಡಲಾರದು

ತೋರು – ತೋರಲಾರನು / ತೋರಲಾರಳು / ತೋರಲಾರದು / ತೋರದು

ಬರು – ಬರಲಾರನು / ಬರಲಾರಳು / ಬರಲಾರದು

ಕುಡಿ – ಕುಡಿಯಲಾರನು / ಕುಡಿಯಲಾರಳು / ಕುಡಿಯಲಾರದು / ಕುಡಿಯದು

ಕಾಣಿಸು – ಕಾಣಿಸಲಾರನು / ಕಾಣಿಸಲಾರಳು / ಕಾಣಿಸದು

ತರು – ತರಲಾರನು / ತರಲಾರಳು / ತರಲಾರದು

**ದ್ವಿರುಕ್ತಿ ಪದಗಳು**

ಪಟಪಟ, ಚಟಚಟ, ಡಬಡಬ, ಗಡಗಡ, ........ ಇತ್ಯಾದಿ.

# ಹರಳುಗಟ್ಟಿದ ಬಗೆ

## ಪ್ರವೇಶ

ಮನುಷ್ಯನ ಬದುಕಿನ ಅನುಭವಗಳು ಸಾಹಿತ್ಯ ರೂಪದಲ್ಲಿ ಅಭಿವ್ಯಕ್ತಿಗೊಳ್ಳುವುದು ಸರ್ವೇ ಸಾಮಾನ್ಯ. ಆತನ ಬದುಕಿನ ಕುರಿತಾದ ವಿವರಗಳು ಜೀವನ ಚರಿತ್ರೆಯ ರೂಪದಲ್ಲಿ ಪ್ರಕಟಗೊಳ್ಳಬಹುದು. ಕೆಲವೊಮ್ಮೆ ಆತನ ಜೀವನಾನುಭವಗಳು ಆತ್ಮಕಥೆಯ ರೂಪದಲ್ಲೂ ವ್ಯಕ್ತಗೊಳ್ಳಬಹುದು. ಹಾಗೆ ಪ್ರಕಟಗೊಂಡುದು 'ಆತ್ಮಕಥೆ' ಎಂಬ ಸಾಹಿತ್ಯ ಪ್ರಕಾರವಾಗುತ್ತದೆ. ಪ್ರಸ್ತುತ ಪಾಠಭಾಗದಲ್ಲಿ ಡಾ. ಅನುಪಮಾ ನಿರಂಜನರ ಜೀವನಾನುಭವಗಳು 'ಆತ್ಮಕಥೆ'ಯಾಗಿ ಮೂಡಿದ ಬಗೆಯನ್ನು ಗುರುತಿಸಬಹುದು. 'ಬರಹಗಾರ್ತಿಯ ಬದುಕು' ಕೃತಿಯ ರೂಪದಲ್ಲಿ ಅವರ ಸಮಗ್ರ ಆತ್ಮಕಥೆಯು ಹೊರಹೊಮ್ಮಿದೆ.

ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ 'ಆತ್ಮಕಥೆ' ಹಾಗೂ 'ಜೀವನಚರಿತ್ರೆ'ಯ ನಡುವಿನ ವ್ಯತ್ಯಾಸಗಳೇನು ಎಂದು ಕೇಳುವುದು. ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಉತ್ತರ ರೂಪದಲ್ಲಿ ವ್ಯಕ್ತಿಪಡಿಸಲಿ. 'ಆತ್ಮಕಥೆ' ಹಾಗೂ 'ಜೀವನ ಚರಿತ್ರೆ'ಯ ನಡುವಿನ ವ್ಯತ್ಯಾಸಗಳನ್ನು ಸ್ಪಷ್ಟಪಡಿಸುವ ಸಲುವಾಗಿ ಅಧ್ಯಾಪಕರು ಕೆಲವು ಸಾಹಿತಿಗಳ 'ಆತ್ಮಕಥೆ' ಯ ಕೃತಿಗಳನ್ನು ಹೆಸರಿಸುವರು. ಉದಾಹರಣೆಗಾಗಿ – ಕುವೆಂಪುರವರ 'ನೆನಪಿನ ದೋಣಿಯಲ್ಲಿ', ಮಾಸ್ತಿ ವೆಂಕಟೇಶ ಅಯ್ಯಂಗಾರ 'ಭಾವ' .... ಇತ್ಯಾದಿ. ಸ್ವಾಮಿ ವಿವೇಕಾನಂದ, ಶ್ರೀರಾಮಕೃಷ್ಣ ಪರಮಹಂಸ ಮೊದಲಾದವರ ಜೀವನ ಚರಿತ್ರೆಗಳನ್ನು ಕುವೆಂಪುರವರು ಬರೆದಿದ್ದಾರೆ ಎಂದು ವಿದ್ಯಾರ್ಥಿಗಳಿಗೆ ತಿಳಿಸುವುದು. ಅನಂತರ ಲೇಖಕರ ಪರಿಚಯವನ್ನು ನೀಡುವುದು.

### ಕವಿ ಪರಿಚಯ

ಡಾ. ಅನುಪಮಾ ನಿರಂಜನರು ಕ್ರಿ.ಶ. 1934 ರಲ್ಲಿ ತೀರ್ಥಹಳ್ಳಿಯಲ್ಲಿ ಜನಿಸಿದರು. ಬೆಂಗಳೂರು ಜಿಲ್ಲೆಯಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿದ ಇವರು ದೊಡ್ಡಬಳ್ಳಾಪುರದಲ್ಲಿ ವೈದ್ಯಕೀಯ ವೃತ್ತಿಯನ್ನು ಪ್ರಾರಂಭಿಸಿದರು. ವೃತ್ತಿಯಲ್ಲಿ ವೈದ್ಯರಾದರೂ ಪ್ರವೃತ್ತಿಯಲ್ಲಿ ಸಾಹಿತಿಯಾಗಿ ಹೊರಹೊಮ್ಮಿದ ಅನುಪಮಾ ನಿರಂಜನರು ಸಾಹಿತಿ ನಿರಂಜನರನ್ನು ವಿವಾಹವಾದರು. ಕಾದಂಬರಿ, ಸಣ್ಣಕತೆ, ವೈದ್ಯಕೀಯ ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಕೃತಿ ರಚನೆ ಮಾಡಿದ ಇವರ ಸಾಧನೆಗೆ ಅನೇಕ ಪ್ರಶಸ್ತಿಗಳು ಸಂದಿವೆ.

ಗದ್ಯಭಾಗಗಳನ್ನು ವಿದ್ಯಾರ್ಥಿಗಳಿಂದ ಓದಿಸುವುದು. ಪ್ರತಿಯೊಬ್ಬರೂ ಒಂದೊಂದು ಭಾಗವನ್ನು ಓದಲಿ. ಓದುವಾಗ ಅವರ ಸ್ವರಭಾರವನ್ನು, ಉಚ್ಚಾರವನ್ನು ಗಮನಿಸಿ ಅಗತ್ಯವೆನಿಸಿದಲ್ಲಿ ಸರಿಪಡಿಸುವುದು. ವಿದ್ಯಾರ್ಥಿಗಳು ಪಾಠಭಾಗದ ಆಶಯವನ್ನು ತಿಳಿದು ಆಶಯಗ್ರಹಣ ಪ್ರಶ್ನೆಗಳಿಗೆ ಉತ್ತರಿಸುವರು.

ಅನುಪಮಾ ಕಥೆಗಾರ್ತಿಯಾಗಿ, ಅದಕ್ಕಿಂತ ಹೆಚ್ಚಾಗಿ ಕಾದಂಬರಿ ಕಾರ್ತಿಯಾಗಿ ಕನ್ನಡಿಗರಿಗೆ ಪರಿಚಿತರು. ಅವರು ಬರೆದ 'ದಿನಕ್ಕೊಂದು ಕಥೆ'ಮಕ್ಕಳ ಸಾಹಿತ್ಯಕ್ಕೆ ಗಮನಾರ್ಹವಾದ ಕೊಡುಗೆಯಾಗಿದೆ. ದಾಂಪತ್ಯ ವಿಜ್ಞಾನಕ್ಕೆ ಸಂಬಂಧಿಸಿದ ವಧುವಿಗೆ ಕಿವಿಮಾತು, ದಾಂಪತ್ಯ ದೀಪಿಕೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಪ್ರಗತಿಶೀಲ ಚಳುವಳಿ ಶಕ್ತಿಯುತವಾದಾಗ ಸಣ್ಣಕತೆಗಳ ಬರಹದ ಮೂಲಕ ಅನುಪಮಾ ನಿರಂಜನ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿದರು. ಬಡತನ ನೋವು, ಮೇಲಿನ ವರ್ಗಗಳು ನಡೆಯುವ ಶೋಷಣೆ ಇವು ಇವರ ಕತೆಗಳ ವಸ್ತು. ಇವರ ಹಲವು ಕತೆಗಳಲ್ಲಿ ಹೆಂಗಸರು ಸಮಾಜದಲ್ಲಿ ಅನುಭವಿಸುವ ಬವಣೆಗಳ ಚಿತ್ರವಿದೆ.

ಕನ್ನಡ ಲೇಖಕಿಯರ ಸಾಹಿತ್ಯ ರಚನೆಯಲ್ಲಿ ಸಂಭವಿಸಿದ ಮಾರ್ಪಾಡುಗಳಿಗೆ ಅನುಪಮಾರ ಕಾದಂಬರಿಗಳು ಕಾರಣ ಎನ್ನಬಹುದು. ಹೀಗೆ ಸಣ್ಣಕತೆ, ಕಾದಂಬರಿ, ಮಕ್ಕಳ ಸಾಹಿತ್ಯ, ವೈದ್ಯಕೀಯ ಸಾಹಿತ್ಯ ಕ್ಷೇತ್ರಗಳಲ್ಲಿ ಮಾಡಿದ ಸೇವೆಗಾಗಿ ಅವರಿಗೆ ಅನೇಕ ಪ್ರಶಸ್ತಿಗಳು ಸಂದಿವೆ.

## ಚಟುವಟಿಕೆಗಳು

### ವಿಮರ್ಶಾ ಲೇಖನ ಬರೆಯುವುದು

ತರಗತಿಯ ವಿದ್ಯಾರ್ಥಿಗಳನ್ನು ಗುಂಪುಗಳನ್ನಾಗಿ ವಿಂಗಡಿಸುವುದು ಸಾಧ್ಯವಾದರೆ ಗ್ರಂಥಾಲಯದಿಂದ 'ಮಾಧವಿ' ಕಾದಂಬರಿಯನ್ನು ಪಡೆದು ಓದಲಿ. ಪ್ರತಿಯೊಂದು ಗುಂಪು ಕಾದಂಬರಿಯ ಆಶಯವನ್ನು ತಿಳಿದು, ವಿಮರ್ಶಾ ಲೇಖನವನ್ನು ಬರೆದು ತರಗತಿಯಲ್ಲಿ ಮಂಡಿಸಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು. ಕೊನೆಗೆ ಕ್ರೋಡೀಕರಿಸಿ ಉತ್ತಮವಾದ ವಿಮರ್ಶಾ ಲೇಖನವನ್ನು ಸಿದ್ಧಪಡಿಸಲಿ.

### ಬದುಕಿನ ಸಿಹಿ–ಕಹಿ ಬರಹಗಳ ಸಂಚಿಕೆ

ವಿದ್ಯಾರ್ಥಿಗಳು ತಮ್ಮ ಬದುಕಿನ ಸಿಹಿ–ಕಹಿಗಳ ಕನಿಷ್ಠ ಒಂದೊಂದು ನೆನಪುಗಳನ್ನು ಬರಹ ರೂಪದಲ್ಲಿ ಬರೆಯಲಿ. ಅಧ್ಯಾಪಕರು ಸಂಚಿಕೆಯ ತಯಾರಿಗಾಗಿ ಸೂಕ್ತವಾದ ಮಾರ್ಗದರ್ಶನ ನೀಡುವುದು. ಸಂಪಾದಕೀಯ ಮಂಡಳಿ ರೂಪಿಸುವುದು, ಶೀರ್ಷಿಕೆ, ಸಂಪಾದಕೀಯ, ಅನುಕ್ರಮಣಿಕೆ, ಮುನ್ನುಡಿ, ಅನುಬಂಧ... ಇತ್ಯಾದಿ ಹಂತಗಳನ್ನು ತಿಳಿಸುವುದು. ಎಲ್ಲಾ ಬರಹಗಳನ್ನು ಒಟ್ಟು ಸೇರಿಸಿ ಸಂಚಿಕೆಯನ್ನು ತಯಾರಿಸುವುದು.

### ಆತ್ಮಕಥೆಯನ್ನು ಜೀವನ ಚರಿತ್ರೆಯನ್ನಾಗಿ ಪರಿವರ್ತಿಸುವುದು

| ಆತ್ಮಕಥೆ | ಜೀವನ ಚರಿತ್ರೆ |
|---|---|
| ನಿರಂಜನ ಇದಕ್ಕಿದ್ದ ಹಾಗೆ ಪಾರ್ಶ್ವ ವಾಯುವಿಗೆ ಈಡಾದರು (೧೯೭೧) ನಮ್ಮ ಕುಟುಂಬ ಈ ಆಘಾತದಿಂದ ತತ್ತರಿಸಿತು. ನಾನು ಮನಃಸ್ಥೈರ್ಯ ಕಳೆದುಕೊಂಡೆ. ಆದರೆ ಯಾವ ಪರಿಸ್ಥಿತಿಯಲ್ಲೂ ಸೋಲೊಪ್ಪಿಕೊಳ್ಳುವ ಜಾಯಮಾನ ನಮ್ಮದಲ್ಲ. ಬದುಕಿನ ರೀತಿಯನ್ನು ಈಗ ಬದಲಾಯಿಸಿಕೊಳ್ಳಬೇಕಾಯಿತು. ಈಗಾಗಲೇ ಇದ್ದ ಜವಾಬ್ದಾರಿಗಳ ಜೊತೆಗೆ, ನಿರಂಜನರು ಅದುವರೆಗೆ ಮಾಡುತ್ತಿದ್ದ ಕೆಲಸಗಳನ್ನು ನಾನೇ ನಿರ್ವಹಿಸಬೇಕಾಯಿತು. ಇವುಗಳ ಒತ್ತಡದಲ್ಲಿ ಸ್ವಲ್ಪಕಾಲ ಬರವಣಿಗೆ ಹಿಮ್ಮೆಟ್ಟಿತು. ಆದರೆ ಒದಗಿದ ಈ ತೀವ್ರ ನೋವು ಜೀವ ಮಾಗಲು ಕಾರಣವಾಯಿತು. | ನಿರಂಜನರು ಇದಕ್ಕಿದ್ದ ಹಾಗೆ ಪಾರ್ಶ್ವವಾಯುವಿಗೆ ಈಡಾದರು (೧೯೭೧) ಅವರ ಕುಟುಂಬ ಆ ಆಘಾತದಿಂದ ತತ್ತರಿಸಿತು. ಅನುಪಮಾ ನಿರಂಜನರು ಮನಃಸ್ಥೈರ್ಯ ಕಳೆದುಕೊಂಡರು. ಆದರೆ ಯಾವ ಪರಿಸ್ಥಿತಿಯಲ್ಲೂ ಸೋಲೊಪ್ಪಿಕೊಳ್ಳುವ ಜಾಯಮಾನ ಅವರದ್ದಲ್ಲ. ಆಗ ಬದುಕಿನ ರೀತಿಯನ್ನು ಬದಲಾಯಿಸಿಕೊಳ್ಳಬೇಕಾಯಿತು. ಅದಾಗಲೇ ಇದ್ದ ಜವಬ್ದಾರಿಗಳ ಜೊತೆಗೆ ನಿರಂಜನರು ಅದುವರೆಗೆ ಮಾಡುತ್ತಿದ್ದ ಕೆಲಸಗಳನ್ನು ಅನುಪಮಾ ನಿರಂಜನರೇ ನಿರ್ವಹಿಸಬೇಕಾಯಿತು. ಅವುಗಳ ಒತ್ತಡದಲ್ಲಿ ಸ್ವಲ್ಪಕಾಲ ಬರವಣಿಗೆ ಹಿಮ್ಮೆಟ್ಟಿತು. ಆದರೆ ಒದಗಿದ ಆ ತೀವ್ರ ನೋವು ಜೀವ ಮಾಗಲು ಕಾರಣವಾಯಿತು. |

- **'ಇಂದಿನ ಮಹಿಳೆಯರು ಉದ್ಯೋಗ ಕ್ಷೇತ್ರದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳು'– ಕ್ಷೇತ್ರಕಾರ್ಯವನ್ನು ಮಾಡುವುದು.**
- ವಿದ್ಯಾರ್ಥಿಗಳು ತಮ್ಮ ಪರಿಸರದಲ್ಲಿರುವ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಅವರ ಬಿಡುವಿನ ವೇಳೆಯಲ್ಲಿ ಸಂದರ್ಶಿಸಲಿ.
- ಸಂದರ್ಶನಕ್ಕಾಗಿ ಪ್ರಶ್ನಾವಳಿ ತಯಾರಿಸಲಿ.
- ದೊರೆತ ಮಾಹಿತಿಗಳನ್ನು ಕ್ರೋಢೀಕರಿಸಲಿ
- ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡಲಿ
- ಪುರುಷರ ಸಮಸ್ಯೆಗಳಿಗಿಂತ ಮಹಿಳೆಯರ ಸಮಸ್ಯೆಗಳು ಹೇಗೆ ಭಿನ್ನ ಮತ್ತು ವಿಶಿಷ್ಟ ಎಂದು ತಿಳಿಸಲಿ.
- ಕ್ಷೇತ್ರಕಾರ್ಯದ ಆಧಾರದಲ್ಲಿ "ಇಂದಿನ ಮಹಿಳೆಯರು ಅನುಭವಿಸುತ್ತಿರುವ ಸಮಸ್ಯೆ"ಗಳ ಕುರಿತು ವರದಿಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಲಿ.
- ಪ್ರತಿಯೊಂದು ಹಂತದಲ್ಲೂ ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

## ಭಾಷಾಭ್ಯಾಸ

### ಸ್ವಂತ ವಾಕ್ಯ ರಚನೆ

ಅಧ್ಯಾಪಕರು ಇಲ್ಲಿ ಕೊಟ್ಟಿರುವ ಪದಗಳ ವಿಶೇಷಾರ್ಥಗಳ ಕಡೆಗೆ ಮಕ್ಕಳ ಗಮನ ಸೆಳೆಯುವುದು. ಉದಾ:ಗಗನ ಕುಸುಮ. ಮಾದರಿಯಾಗಿ ಕೆಲವು ವಾಕ್ಯಗಳನ್ನು ಕೊಡುವುದು. ವಿದ್ಯಾರ್ಥಿಗಳು ಅವುಗಳನ್ನು ಗಮನಿಸಿ ಸ್ವಂತ ವಾಕ್ಯವನ್ನು ರಚಿಸಲಿ.

- ಹಿಮ್ಮೆಟ್ಟು : ಜಿಂಕೆಯೊಂದನ್ನು ಬೇಟೆಯಾಡ ಹೊರಟ ಚಿರತೆಯು ತನಗೆ ಬೇಟೆ ದಕ್ಕದಿದ್ದಾಗ ಆ ಕಾರ್ಯದಿಂದ ಹಿಮ್ಮೆಟ್ಟಿತು.
- ಗಗನಕುಸುಮ : ಸಾಮಾನ್ಯ ವ್ಯಕ್ತಿಗಳಿಗೆ ಚಂದ್ರಲೋಕಯಾನವು ಗಗನ ಕುಸುಮವೇ ಸರಿ.
- ಮನದಟ್ಟಾಗು : ತಾಯಿಯು ಮಕ್ಕಳಿಗೆ ಮನದಟ್ಟಾಗುವಂತೆ ಬುದ್ಧಿಯ ಮಾತುಗಳನ್ನು ಹೇಳಿದಳು.
- ಪ್ರತಿಬಿಂಬಿಸು : ಸಾಹಿತ್ಯಕೃತಿಗಳಲ್ಲಿ ಜನಜೀವನದ ಚಿತ್ರಣ ಪ್ರತಿಬಿಂಬಿಸುವುದು.
- ಕೀಳರಿಮೆ : ಮನುಷ್ಯನು ಯಾವುದೇ ಕೆಲಸದಲ್ಲಿ ಕೀಳರಿಮೆಯನ್ನು ತಳೆದುಕೊಳ್ಳಬಾರದು.

## ಅನ್ಯದೇಶೀಯ ಪದಗಳು

ಪಾಠಭಾಗದಲ್ಲಿ ಬಳಕೆಯಾಗಿರುವ ಇಂಗ್ಲೀಷ್‌ಭಾಷೆಯ ಪದಗಳನ್ನು/ ಸಾಲುಗಳನ್ನು ಕನ್ನಡಕ್ಕೆ ಲಿಪ್ಯಂತರಗೊಳಿಸಲಿ.

- Liquid Sapphire – ಲಿಕ್ವಿಡ್ ಸಫೈರ್
- Miss Niranjanas best work of the very highest standard –ಮಿಸ್ ನಿರಂಜನಾಸ್ ಬೆಸ್ಟ್ ವರ್ಕ್ ಓಫ್ ದ ವೆರಿ ಹಯೆಸ್ಟ್ ಸ್ಟಾಂಡರ್ಡ್
- India from primitive communism to slavery –ಇಂಡಿಯ ಫ್ರಂ ಪ್ರಿಮಿಟಿವ್ ಕಮ್ಯೂನಿಸಂ ಸ್ಲೇವರಿ
- National geographica –ನೇಶನಲ್ ಜಿಯೋಗ್ರಾಫಿಕ

**ಸರ್ವನಾಮಗಳು :**

ಪಾಠಭಾಗದಲ್ಲಿ ಕೊಟ್ಟಿರುವ ವಾಕ್ಯದಲ್ಲಿ ಪ್ರಯೋಗವಾದ ಸರ್ವನಾಮಗಳನ್ನು ಗುರುತಿಸಿ ಪಟ್ಟಿ ಮಾಡಲಿ.

| ಪ್ರಥಮ ಪುರುಷ | | ಮಧ್ಯಮ ಪುರುಷ | | ಉತ್ತಮ ಪುರುಷ | |
|---|---|---|---|---|---|
| **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** | **ಏಕವಚನ** | **ಬಹುವಚನ** |
| ಅದು | ಅವು | | | | |
| ಅವನು | ಅವರು | ನೀನು | ನೀವು | ನಾನು | ನಾವು |
| ಅವರು | ಇವರು | | | | |
| ಅದು | ಅವು | | | | |

# ಇಡ್ಲಿಯ ಇತಿಹಾಸ

## ಪ್ರವೇಶ

ಮನುಷ್ಯ ಸಮಾಜಜೀವಿ. ಅವನ ಬದುಕಿನ ಅವಿಭಾಜ್ಯ ಘಟಕಗಳಾಗಿರುವ ಆಹಾರ, ವೇಷಭೂಷಣ, ಜೀವನ ಕ್ರಮಗಳು ವೈವಿಧ್ಯದಿಂದ ಕೂಡಿರುತ್ತವೆ. ಆತನು ಸೇವಿಸುವ ಆಹಾರವು ವ್ಯಕ್ತಿಯಿಂದ ವ್ಯಕ್ತಿಗೆ, ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ತಾನು ತಿನ್ನುವ ಆಹಾರವು ಶುಚಿಯಾಗಿಯೂ ರುಚಿಕರವಾಗಿಯೂ ಇರಬೇಕೆಂಬ ಮನೋಭಾವ ಪ್ರತಿಯೊಬ್ಬನಿಗೂ ಇರುವುದು ಸಹಜ. ವಿವಿಧ ಗಾತ್ರದ, ಬಣ್ಣ ಬಣ್ಣದ ತಿಂಡಿ–ತಿನಿಸುಗಳು ಮನಸ್ಸನ್ನು ಆಕರ್ಷಿಸುತ್ತವೆ. ತೆಳ್ಳಗಾಗಿರುವ ದೋಸೆ, ಉರುಟಾಗಿರುವ ಇಡ್ಲಿ, ನೀಳವಾಗಿರುವ ಸೇಮಿಗೆ, ಬಣ್ಣಗಳಿಂದ ಕೂಡಿರುವ ಚಿತ್ರಾನ್ನ..... ಹೀಗೆ ಹಲವು ಬಗೆಯ ತಿಂಡಿಗಳಿವೆ. ಈ ತಿಂಡಿಗಳ ಹೆಸರುಗಳು ಹೇಗೆ ಬಂದುವು ಎಂಬುದರ ಬಗ್ಗೆ ವಿದ್ವಾಂಸರು ಚರ್ಚಿಸಿದ್ದಾರೆ. ಕೆಲವು ಹೆಸರುಗಳು ಮೇಲುನೋಟಕ್ಕೇ ಅರ್ಥವಾಗುತ್ತವೆ. ಮತ್ತೆ ಕೆಲವನ್ನು ಅರ್ಥಮಾಡುವುದು ಕಷ್ಟ. ಪ್ರಸ್ತುತ ಪಾಠಭಾಗದಲ್ಲಿ ಇಡ್ಲಿ ಪದದ ವ್ಯುತ್ಪತ್ತಿಯ ಬಗ್ಗೆ ಸ್ವಾರಸ್ಯಕರವಾದ ನಿರೂಪಣೆ ಮೂಡಿ ಬಂದಿದೆ.

ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯಲು ಅಧ್ಯಾಪಕರು ಪ್ರಶ್ನೆಗಳನ್ನು ಕೇಳುವುದು. ನೀವು ದಿನನಿತ್ಯ ಸೇವಿಸುವ ತಿಂಡಿಗಳಲ್ಲಿ ನಿಮಗೆ ಅತಿ ಮೆಚ್ಚಿಗೆಯಾದ ತಿಂಡಿ ಯಾವುದು? ವಿದ್ಯಾರ್ಥಿಗಳು ತಮಗೆ ಮೆಚ್ಚುಗೆಯಾದ ತಿಂಡಿಗಳ ಹೆಸರನ್ನು ಹೇಳುವರು. ಆ ತಿಂಡಿಗಳ ಹೆಸರು ಹೇಗೆ ಬಂತು ಯೋಚಿಸಿರುವಿರಾ ಎಂದು ಕೇಳುವುದು. ಚರ್ಚೆಯ ಬಳಿಕ ಮಕ್ಕಳು ಪ್ರಸ್ತುತ ಭಾಗವನ್ನು ಬಾಯ್ದೆರೆಯಾಗಿ ಓದಿ ಆಶಯವನ್ನು ತಿಳಿಯಲಿ. ಪಾಠಭಾಗದಲ್ಲಿ ನೀಡಿದ ಆಶಯಗ್ರಹಣ ಪ್ರಶ್ನೆಗಳನ್ನು ಹೇಳುವುದು. ವಿದ್ಯಾರ್ಥಿಗಳು ಉತ್ತರಿಸುವರು. ಗದ್ಯಭಾಗದಲ್ಲಿ ನೀಡಿದ ಪ್ರಶ್ನೆಗಳಿಗೂ ಉತ್ತರಿಸುವುದು.

### ಲೇಖಕರ ಪರಿಚಯ

ಸೇಡಿಯಾಪು ಕೃಷ್ಣ ಭಟ್ಟರು ತಮ್ಮದೇ ಕಾವ್ಯಮಾರ್ಗವೊಂದನ್ನು ನಿರ್ಮಿಸಿಕೊಂಡು ನಡೆದ ಹೊಸಗನ್ನಡ ಕಾಲದ ವಿಶಿಷ್ಟ ಕವಿಯಾಗಿದ್ದಾರೆ. ಅವರ ಕವಿತೆಗಳು ಕ್ಷಣಿಕವಾದ ಮಾನಸಿಕ ಭಾವಗಳ ಅಭಿವ್ಯಕ್ತಿ ರೂಪವಾಗಿರದೆ ಗಾಢ ಚಿಂತನೆಯ ಮೂಲಕ ಸತ್ಯದರ್ಶನ ಮತ್ತು ಸೌಂದರ್ಯಾನುಭವ ಪಡೆಯುವ ಪ್ರಬುದ್ಧ ಮನಸ್ಸಿನಿಂದ ಹೊರಹೊಮ್ಮಿದ ರಚನೆಗಳಾಗಿವೆ. ಅವರ ಕವಿತೆಗಳಲ್ಲಿರುವ ವಸ್ತು ಗಾಂಭೀರ್ಯ, ವೈಚಾರಿಕ ಚಿಂತನೆಗಳು, ವಸ್ತು ಸ್ವರೂಪಕ್ಕೆ ತಕ್ಕಂತೆ ಆಯ್ದುಕೊಂಡ ಛಂದೋರೂಪಗಳು ಮತ್ತು ವಸ್ತು ನಿರೂಪಣೆಗೆ ಯೋಗ್ಯವಾದ ಭಾಷಾ ಸ್ವರೂಪ ಇವು ವಿಶಿಷ್ಟವಾದುವು. ಇವರ ಪದ್ಯ ಮತ್ತು ಗದ್ಯ ಬರವಣಿಗೆಗಳು ಸಂಖ್ಯೆಯಲ್ಲಿ ಕಡಿಮೆಯಾದರೂ ತಿದ್ದಿ ತೀಡಿ ಬರೆದುದರಿಂದ ಉತ್ಕೃಷ್ಟ ಬರವಣಿಗೆಗಳಾಗಿ ಹೊರ ಹೊಮ್ಮಿವೆ. ಇವರು ಕನ್ನಡ ಭಾಷೆ, ವ್ಯಾಕರಣ, ಛಂದಸ್ಸು, ಅರ್ಥ ವಿಜ್ಞಾನ ಮುಂತಾದುವುಗಳ ಕುರಿತು ಆಳವಾಗಿ ಚಿಂತಿಸಿದವರು. ತುಳು ಹಾಗೂ ಕನ್ನಡ ಭಾಷೆಯ ಹಲವಾರು ಪದಗಳ ವ್ಯುತ್ಪತ್ತಿಯ ಬಗ್ಗೆ ಲೇಖನಗಳನ್ನೂ ಬರೆದಿದ್ದಾರೆ. ಪ್ರಸ್ತುತ ಪಾಠಭಾಗವನ್ನು ಇವರ ವಿಚಾರ ಪ್ರಪಂಚ ಎಂಬ ಲೇಖನಗಳ ಸಂಕಲನದಿಂದ ಆಯ್ದುಕೊಳ್ಳಲಾಗಿದೆ. ಈ ಪಾಠ ಭಾಗದಲ್ಲಿ 'ಇಡ್ಲಿ' ಶಬ್ದದ ವ್ಯುತ್ಪತ್ತಿಯ ಬಗ್ಗೆ ವಿವರಿಸಿದ್ದಾರೆ.

## ಚಟುವಟಿಕೆಗಳು

### ಸ್ಥಳನಾಮಗಳ ಮಾಹಿತಿ

ಪ್ರತಿಯೊಂದು ಸ್ಥಳಕ್ಕೂ ಅದರದ್ದೇ ಆದ ವಿಶೇಷತೆಗಳಿರುತ್ತವೆ. ಭೌಗೋಳಿಕ ಸ್ಥಿತಿಗತಿಗಳು, ಐತಿಹಾಸಿಕ ವಿಚಾರಗಳು, ಸಾಂಸ್ಕೃತಿಕ ಹಾಗೂ ಧಾರ್ಮಿಕವಾದ ಹಿನ್ನೆಲೆಗಳು ಆಯಾಯ ಸ್ಥಳದ ವೈಶಿಷ್ಟ್ಯವನ್ನು ಸಾರುತ್ತವೆ ಮುಂತಾಗಿ ಸ್ಥಳನಾಮಗಳ ಬಗ್ಗೆ ಕೆಲವು ವಿಚಾರಗಳನ್ನು ಅಧ್ಯಾಪಕರು ಪ್ರಸ್ತಾವಿಸುವುದು. ವಿದ್ಯಾರ್ಥಿಗಳು ತಮ್ಮ ಪರಿಸರದ ಬೇರೆ ಬೇರೆ ಸ್ಥಳನಾಮಗಳ ವಿಶೇಷತೆಗಳನ್ನು ಕಂಡುಕೊಳ್ಳಲಿ. ಗುಂಪುಗಳಲ್ಲಿ ಚರ್ಚಿಸಲಿ. ಆಯ್ದ ಕೆಲವರು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು. ಬಳಿಕ ಪ್ರತಿಯೊಬ್ಬರೂ ಹತ್ತು ಸ್ಥಳನಾಮಗಳ ಮಾಹಿತಿಗಳನ್ನು ಸಂಗ್ರಹಿಸಿ, ತರಗತಿಯಲ್ಲಿ ಮಂಡಿಸಲಿ. ಕೊನೆಗೆ ಕ್ರೋಡೀಕರಿಸಿ ಲೇಖನವೊಂದನ್ನು ಸಿದ್ಧಪಡಿಸಲಿ. ಅದನ್ನು ಪರಸ್ಪರ ಮೌಲ್ಯಮಾಪನ ನಡೆಸಲಿ. ನಂತರ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

### ಸ್ಥಳನಾಮದ ಮಾದರಿ ಪರಿಚಯ

### ಕೋಳ್ಯೂರು

ಈ ಸ್ಥಳವು ಕಾಸರಗೋಡು ಜಿಲ್ಲೆಯ ಮಂಜೇಶ್ವರ ತಾಲೂಕಿನ ಹೊಸಂಗಡಿಯಿಂದ 12 ಕಿ.ಮೀ ದೂರದಲ್ಲಿದೆ. 'ಕೋಳ್ಯೂರು' ಸ್ಥಳನಾಮದ ಉಗಮದ ಕುರಿತಾಗಿ ಒಂದು ಐತಿಹ್ಯವಿದೆ. ಇಲ್ಲಿರುವ ದೇವಸ್ಥಾನದ ಬಾವಿಯನ್ನು ಹಗಲು ರಾತ್ರಿ ಅಗೆದೂ ಅಗೆದೂ ಕೊನೆಗೆ ನೀರು ಸಿಗುವಾಗ ಕೋಳಿ ಕೂಗಿತು ಎಂಬ ಕಾರಣದಿಂದ ಈ ನೆಲಕ್ಕೆ 'ಕೋಳ್ಯೂರು' ಎಂಬ ಹೆಸರಾಯಿತಂತೆ. ಈ ಸ್ಥಳದ ಕುರಿತು ಇನ್ನೊಂದು ಐತಿಹ್ಯವೂ ಇದೆ. ಇಲ್ಲಿ ಆರಾಧಿಸಲ್ಪಡುವ ತ್ರಿಲಿಂಗಗಳು ಗೋಳಿಮರದ ಬುಡದಲ್ಲಿ ಉದ್ಭವಿಸಿರುವುದರಿಂದ ಈ ಪ್ರದೇಶಕ್ಕೆ ಮೊದಲಿಗೆ 'ಗೋಳ್ಯೂರು' ಎಂದು ಹೆಸರಾಯಿತು. ಅದೇ ಮುಂದೆ 'ಕೋಳ್ಯೂರು' ಆಯಿತು ಎಂಬುದು ಮತ್ತೊಂದು ಐತಿಹ್ಯ. 'ಕೋಳ್ಯೂರು' ಎಂಬ ಹೆಸರಿನಲ್ಲಿ ಎರಡು ಪದಗಳಿವೆ. ಅವುಗಳಲ್ಲಿ ಎರಡನೇ ಪದ ಊರು ಎಂಬುದು ನಿಶ್ಚಯ. ಮೊದಲ ಪದ ಯಾವುದು? ಕೋಳಿ ಎಂದಿರಬಹುದೇ ಎಂಬುದು ವಿಚಾರಿಸಬೇಕಾದುದು. ನಮ್ಮ ಪ್ರದೇಶದಲ್ಲಿ ಊರು ಪದ ಕೊನೆಯಾಗಿರುವ ಹಲವು ಸ್ಥಳನಾಮಗಳಿವೆ. ಬಾಡೂರು, ಹೇರೂರು, ಪುತ್ತೂರು, ಕುಳೂರು.... ಇತ್ಯಾದಿ. ಇದೇ ರೀತಿ ವಿದ್ಯಾರ್ಥಿಗಳು ತಮ್ಮ ಪರಿಸರದಲ್ಲಿರುವ ಸ್ಥಳನಾಮಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಲಿ.

ವಿದ್ಯಾರ್ಥಿಗಳು 'ಅಡ್ಕ' ಮತ್ತು 'ಪಾಡಿ'ಗಳಿಂದ ಕೊನೆಗೊಳ್ಳುವ ಸ್ಥಳನಾಮಗಳನ್ನು ಸಂಗ್ರಹಿಸಿ, ತರಗತಿಯ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲಿ. ಮಾಹಿತಿಗಾಗಿ ಕೆಳಗಿನ ಪಟ್ಟಿಯನ್ನು ಗಮನಿಸುವುದು.

| | |
|---|---|
| ಅಡ್ಕ | ಪಾಡಿ |
| ಬಂದಡ್ಕ | ತಲಪಾಡಿ |
| ಅಂಡಿತಡ್ಕ | ಅಗಲ್ಪಾಡಿ |

| | |
|---|---|
| ಮುಂಡಿತಡ್ಕ | ಮನ್ನಿಪ್ಪಾಡಿ |
| ಅಡ್ಯನಡ್ಕ | ದೇಲಂಪಾಡಿ |
| ಬದಿಯಡ್ಕ | ನುಳ್ಳಿಪಾಡಿ |
| ಧರ್ಮತ್ತಡ್ಕ | ಕುದುರೆಪಾಡಿ |
| ಏತಡ್ಕ | ಆಲಂಪಾಡಿ |
| ಸಾಲೆತ್ತಡ್ಕ | ಅಂಬಲಪಾಡಿ |
| ಪೂವನಡ್ಕ | ಕೊಲ್ಲಂಪಾಡಿ |
| ಕಾರಡ್ಕ | ಕನಕಪಾಡಿ |
| .................. | .................... |
| .................. | .................... |

ಇಲ್ಲಿ ಕೊನೆಯಲ್ಲಿ ಬರುವ ಅಡ್ಕ ಮತ್ತು ಪಾಡಿ ಎಂಬ ಪದಗಳ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸಲಿ.

**ಪಾರಂಪರಿಕ ತಿಂಡಿ ತಿನಸುಗಳ ಕುರಿತು ಟಿಪ್ಪಣಿ ಬರೆಯುವುದು.**

ವಿದ್ಯಾರ್ಥಿಗಳು ತಮಗೆ ತಿಳಿದಿರುವ ವಿವಿಧ ತಿಂಡಿಗಳ ಹೆಸರನ್ನು ಹೇಳಲಿ. ಅದನ್ನು ಪಾರಂಪರಿಕ ತಿಂಡಿಗಳು ಹಾಗೂ ಇತರ ತಿಂಡಿಗಳಾಗಿ ವರ್ಗೀಕರಿಸುವುದು. ಈ ಪಾರಂಪರಿಕ ತಿಂಡಿಗಳ ಹೆಸರುಗಳ ಕುರಿತು ಟಿಪ್ಪಣಿ ಬರೆಯಲು ತಿಳಿಸುವುದು. ಅವರು ಬರೆದ ವಿವರಣಾತ್ಮಕ ಟಿಪ್ಪಣಿಗಳನ್ನು ತರಗತಿಯಲ್ಲಿ ಮಂಡಿಸಲಿ. ಚರ್ಚೆಯ ಬಳಿಕ ಅದನ್ನು ಉತ್ತಮಪಡಿಸಿ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

ಕೆಲವು ಪಾರಂಪರಿಕ ತಿಂಡಿಗಳು

- ಹಲಸಿನ ಹಣ್ಣಿನ ಗಟ್ಟಿ/ಕಡುಬು
- ಪತ್ರೊಡೆ
- ಅರಸಿನ ಎಲೆಯಲ್ಲಿ ತಯಾರಿಸಿದ ಕಡುಬು
- ಸೇಮಿಗೆ
- ದೋಸೆ
- ಕೊಟ್ಟಿಗೆ
- 
- 

## ತಿಂಡಿತಿನಿಸುಗಳ ತೌಲನಿಕ ಪಟ್ಟಿ

ವಿದ್ಯಾರ್ಥಿಗಳಲ್ಲಿ ತಿಂಡಿ ತಿನಿಸುಗಳ ಹೆಸರಿನ ತೌಲನಿಕ ಪಟ್ಟಿಯನ್ನು ತಯಾರಿಸಲು ತಿಳಿಸುವುದು. ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

**ಮಾದರಿ:**

| ಕನ್ನಡ | ತುಳು | ಮಲೆಯಾಳ |
|---|---|---|
| ದೋಸೆ | ದೋಸೆ | ದೋಶ |
| ವಡೆ | ವಡೆ | ವಡ |
| ........... | ........... | ............... |
| ........... | ........... | ............... |

## ನಿಘಂಟು ರಚನೆ

ನಿಘಂಟು ರಚನೆಗಾಗಿ ಅಧ್ಯಾಪಕರು ಸೂಕ್ತವಾದ ಮಾರ್ಗದರ್ಶನ ನೀಡುವುದು. ವಿದ್ಯಾರ್ಥಿಗಳು ಮಾದರಿ ನಿಘಂಟನ್ನು ರಚಿಸಲಿ. ಅಕಾರಾದಿಯಾಗಿ ಬರೆಯಲಿ. ವ್ಯಾಕರಣಾಂಶ(ನಾಮಪದ, ಕ್ರಿಯಾಪದ, ಸರ್ವನಾಮ ಇತ್ಯಾದಿ.)ಗಳನ್ನು ಗುರುತಿಸಲಿ. ಅರ್ಥವನ್ನು ಬರೆಯಲಿ.

ಅನಂತರ – (ಅ) ಆ ಮೇಲೆ, ಅಂತರವಿಲ್ಲದ

ಇದು – (ಸ) ನಪುಂಸಕ ಲಿಂಗ ಪ್ರಥಮ ಪುರುಷದ ಏಕವಚನ ರೂಪ

ಒಟ್ಟಿಗೆ – (ನಾ) ಒಂದಾಗಿ, ಒಟ್ಟಿನಲ್ಲಿ

ಕೂಡಿಸು – (ಧಾ) ಹೊಂದಿಸು, ಜೋಡಿಸು

ಕೊಠಡಿ – (ನಾ) ಕಿರಿಮನೆ, ಚಿಕ್ಕಕೋಣೆ

ಗರಡಿ – (ನಾ) ಅಂಗಸಾಧನೆ, ಕುಸ್ತಿ

ಗಳಿಸು – (ಕ್ರಿ) ಸಂಪಾದಿಸು, ದೊರಕಿಸು

ಚಿಕ್ಕ – (ನಾ) ಸಣ್ಣ, ಪುಟ್ಟ

ಜೋಪಡಿ – (ನಾ) ಗುಡಿಸಲು

ಟಗರು – (ನಾ) ಗಂಡುಕುರಿ

ಡಮರು – (ನಾ) ಡಕ್ಕೆ, ಶಿವನ ಕೈಯಲ್ಲಿಯ ಒಂದು ಬಗೆಯ ಚರ್ಮವಾದ್ಯ

ತುಡಿತ – (ನಾ) ಸ್ಪಂದನ, ಮಿಡಿತ

ನಾವು – (ಸ) ನಾನು ಎಂಬುದರ ಬಹುವಚನ ರೂಪ

| | | | |
|---|---|---|---|
| ಪಾತ್ರೆ | – | (ನಾ) | ಕೊಳಗ, ತಪ್ಪಲೆ ಮುಂತಾದ ಸಾಧನ |
| ಪುಟ್ಟ | – | (ವಿ) | ಚಿಕ್ಕ, ಸಣ್ಣ |
| ಬಿದಿರು | – | (ನಾ) | ನೆಟ್ಟಗೆ ಉದ್ದವಾಗಿ, ಮೆಳೆಯಾಗಿ ಬೆಳೆಯುವುದು. |
| ಮಾತು | – | (ನಾ) | ವಚನ, ನುಡಿ |
| ಮುನಿಸು | – | (ನಾ) | ಸಿಟ್ಟು, ಕೋಪ |
| ಮೂಲಭೂತ | – | (ವಿ) | ಸ್ವಭಾವಸಿದ್ಧವಾದ |
| ಮೊದಲು | – | (ವಿ) | ಪ್ರಥಮ, ಮುಖ್ಯವಾಗಿ |
| ಯಾರು | – | (ಸ) | ಯಾವನು, ಯಾವಳು |
| ರಟ್ಟೆ | – | (ನಾ) | ತೋಳು, ತೋಳಿನ ಸಂಧು |
| ವಾರಿಸು | – | (ಕ್ರಿ) | ಬೇಡವೆಂದು ಹೇಳು,ತಡೆ |
| ವಿದ್ಯೆ | – | (ನಾ) | ವಿಷಯದ ವಿಶೇಷ ಜ್ಞಾನ |
| ಹಂತ | – | (ನಾ) | ಮೆಟ್ಟಲು, ಸೋಪಾನ |
| ಹಾವಾಡಿಗ | – | (ನಾ) | ಹಾವನ್ನು ಆಡಿಸುವವನು |
| ಹೆಸರು | – | (ನಾ) | ನಾಮ, ಕೀರ್ತಿ, ಒಂದು ಬಗೆಯ ಧಾನ |

(ನಾ–ನಾಮಪದ, ವಿ–ವಿಶೇಷಣ, ಕ್ರಿ–ಕ್ರಿಯಾಪದ, ಧಾ–ಕ್ರಿಯಾಧಾತು, ಅ–ಅವ್ಯಯ, ಸ–ಸರ್ವನಾಮ)

**ಭಾಷಾಭ್ಯಾಸ**

ವಿದ್ಯಾರ್ಥಿಗಳು ಗದ್ಯಭಾಗವನ್ನು ಓದಿ ಆಶಯವು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ರಚಿಸಲಿ.

- ಮಕ್ಕಳ ಕಲ್ಪನೆ ಗರಿಕೆದರಲು ಕಾರಣವೇನು?
- ಸಾಹಿತಿಯು ಮಕ್ಕಳಿಗಾಗಿ ಸಾಹಿತ್ಯವನ್ನು ರಚಿಸುವಾಗ ಗಮಿಸಬೇಕಾದ ಅಂಶಗಳೇನು?
- 

ಇದೇ ರೀತಿಯಲ್ಲಿ ಇತರ ಪ್ರಶ್ನೆಗಳನ್ನು ರಚಿಸಲಿ.

**ಪದ ವಿಂಗಡಿಸಿ ಸಂಧಿಯನ್ನು ಹೆಸರಿಸಿರಿ**

| | | | |
|---|---|---|---|
| ಉಪಾಹಾರ | – | ಉಪ + ಆಹಾರ | (ಸವರ್ಣದೀರ್ಘ ಸಂಧಿ) |
| ಹಳೆಗನ್ನಡ | – | ಹಳೆ + ಕನ್ನಡ | (ಆದೇಶ ಸಂಧಿ) |
| ರೂಪುಗೊಂಡು | – | ರೂಪು + ಕೊಂಡು | (ಆದೇಶ ಸಂಧಿ) |
| ವರ್ಣೋಚ್ಚಾರ | – | ವರ್ಣ + ಉಚ್ಚಾರ | (ಗುಣ ಸಂಧಿ) |
| ಶೀಘ್ರೋಚ್ಚಾರ | – | ಶೀಘ್ರ + ಉಚ್ಚಾರ | (ಗುಣ ಸಂಧಿ) |

# ಪ್ರಾಚೀನ ತುಳು ಸಾಹಿತ್ಯ

## ಪ್ರವೇಶ

ಪ್ರಪಂಚದ ಪ್ರತಿಯೊಂದು ಭಾಷೆಗೂ ಅದರದೇ ಆದ ವೈಶಿಷ್ಟ್ಯವಿದೆ. ದ್ರಾವಿಡ ಭಾಷಾ ಕುಟುಂಬದ ಅವಿಭಾಜ್ಯ ಅಂಗವಾದ ತುಳು ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳ ಪ್ರಾಚೀನತೆಯಿದೆ. ತುಳು ಭಾಷೆಯಲ್ಲಿ ರಚಿತವಾದ ಸಾಹಿತ್ಯ ಕೃತಿಗಳ ಲಭ್ಯತೆ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಇದು ಶಿಷ್ಟ ಸಾಹಿತ್ಯವಾಗಿ ಮೆರೆದಿರುವುದನ್ನು ಲಭ್ಯಕೃತಿಗಳಿಂದ ತಿಳಿಯುವುದಕ್ಕೆ ಸಾಧ್ಯವಾಯಿತು. ವಿದ್ವಾಂಸರು ಮಾಡಿದ ಸಂಶೋಧನೆಯ ಫಲವಾಗಿ ಕೆಲವು ಕೃತಿಗಳು ಬೆಳಕಿಗೆ ಬಂದುವು. ತುಳು ನಾಡಿನ ಇತಿಹಾಸದ ಕುರಿತು ಮಲೆಯಾಳ ಸಾಹಿತ್ಯದಲ್ಲೂ ಧಾರಾಳ ಪುರಾವೆಗಳಿವೆ. ಆದರೆ ಸಾಹಿತ್ಯ ಕೃತಿಯ ಕುರಿತು ಮಲೆಯಾಳ ಸಾಹಿತ್ಯದಲ್ಲಿ ಬಂದಿಲ್ಲ.

ವಿದ್ಯಾರ್ಥಿಗಳು ತಿಳಿದಿರುವ ತುಳು ಸಂಸ್ಕೃತಿ ಕಲೆಗಳ ಕುರಿತು ಅವರ  ಪೂರ್ವಜ್ಞಾನವನ್ನು ತಿಳಿಯುವುದಕ್ಕಾಗಿ ಕೆಲವು ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ಅವರು ನೋಡಿರುವ ತುಳು ಜನಪದ ಕಲೆ, ಕ್ರೀಡೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಹೇಳಲಿ.

ಪಠ್ಯಭಾಗದಲ್ಲಿ ಗುರುತಿಸಿರುವ ಲಭ್ಯ ಕೃತಿಗಳನ್ನು ಸಂಗ್ರಹಿಸಿ ತರಗತಿಯಲ್ಲಿ ಓದಲು ಹೇಳುವುದು. ವಿದ್ಯಾರ್ಥಿಗಳು ಓದಲು ಪ್ರಯತ್ನ ಪಡಲಿ. ಅಗತ್ಯವಿದ್ದಲ್ಲಿ (ಸಿ.ಡಿ.ಯ ಸಹಾಯದಿಂದ ಅಥವಾ ಇನ್ನಿತರ ಮಾರ್ಗಗಳಿಂದ) ಅಧ್ಯಾಪಕರು ಸಹಕಾರ ನೀಡುವುದು.

## ಭಿತ್ತಿ ಪತ್ರಿಕೆ

ತುಳು ಪಾಡ್ದನಗಳಲ್ಲಿ ಬಂದಿರುವ ಕೋಟಿ ಚೆನ್ನಯರ ಕಥೆಯನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲು ಸೂಚಿಸುವುದು. ವಿದ್ಯಾರ್ಥಿಗಳು ತುಳುಪಾಡ್ದನಗಳನ್ನು ಸಂಗ್ರಹಿಸಿ ಬರೆದು ಮೊದಲು ತರಗತಿಯಲ್ಲಿ ಮಂಡಿಸಲಿ. ಅಗತ್ಯ ತಿದ್ದುಪಡಿಗಳನ್ನು ಮಾಡಿ ಭಿತ್ತಿ ಪತ್ರಿಕೆಯಲ್ಲಿ ಪ್ರಕಟಿಸಲಿ.

## ತುಲನಾತ್ಮಕ ಲೇಖನ/ಟಿಪ್ಪಣಿ

ತುಳುಗಾದೆಗಳನ್ನು ಸಂಗ್ರಹಿಸಿ ಕನ್ನಡ ಗಾದೆಗಳೊಂದಿಗೆ ಹೋಲಿಸಿ ತುಲನಾತ್ಮಕ ಟಿಪ್ಪಣಿ ಬರೆಯಲು ಸೂಚಿಸುವುದು. ಸಮಾನ ಆಶಯಗಳಿರುವ ಗಾದೆಗಳನ್ನು ಸಂಗ್ರಹಿಸಿ ಗುಂಪಿನಲ್ಲಿ ಮಂಡಿಸಲಿ. ಅಧ್ಯಾಪಕರ ಸಲಹೆಯಂತೆ ಅಗತ್ಯ ತಿದ್ದುಪಡಿಗಳನ್ನು ಮಾಡಿದ ನಂತರ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

### ಕಿರುಲೇಖನ

ತುಳುನಾಡಿನ ಆಚರಣೆಗಳ ಕುರಿತು ಸಂಕ್ಷಿಪ್ತ ವಿವರಣೆಗಳನ್ನು ಸಂಗ್ರಹಿಸಿ ಬರೆಯಲು ಹೇಳುವುದು. (ಕ್ರೀಡೆ,ಕಲೆ, ಆಹಾರತಯಾರಿ, ಉಡುಗೆ ತೊಡುಗೆ, ಭೂತಾರಾಧನೆ ಇತ್ಯಾದಿಗಳು ಒಳಗೊಳ್ಳಲಿ) ತುಳು ಆಚರಣೆಗಳಿಗೆ ಸಂಬಂಧಿಸಿದ ಸಚಿತ್ರ ಲೇಖನಗಳನ್ನು ತರಗತಿಯಲ್ಲಿ ಮಂಡಿಸಲಿ, ಅಗತ್ಯ ಸಂದರ್ಭದಲ್ಲಿ ಅಡಕ ಮುದ್ರಿಕೆಯ ಬಳಕೆಯಾಗಲಿ.

### ಪರಿಚಯಾತ್ಮಕ ಲೇಖನ

ಪಠ್ಯಭಾಗದಲ್ಲಿ ಉಲ್ಲೇಖಿಸದೆ ಇರುವ ಲಭ್ಯ ಪ್ರಾಚೀನ ತುಳು ಕೃತಿಗಳ ಕುರಿತು ಒಂದು ಪರಿಚಯಾತ್ಮಕ ಲೇಖನ ಬರೆಯಲು ಹೇಳುವುದು. (ಅಡಕವಾಗಿರಬೇಕಾದ ಅಗತ್ಯ ಮಾಹಿತಿಗಳು : ಕರ್ತೃ , ಕಾಲ, ಭಾಷೆಯ ಪ್ರಯೋಗದಲ್ಲಿ ಕಂಡುಬರುವ ವೈಶಿಷ್ಟ್ಯ, ಸಂಶೋಧಕರ ಕುರಿತು ಮಾಹಿತಿ... ಇತ್ಯಾದಿ) ಮಾಹಿತಿಗಳನ್ನು ಸಂಗ್ರಹಿಸಿದ ವಿವರಗಳನ್ನು ತಮ್ಮ ಚಟುವಟಿಕೆ ಪುಸ್ತಕದಲ್ಲಿ ನಮೂದಿಸಲಿ. ಮಾಹಿತಿ ಮೂಲಗಳನ್ನು ತಿಳಿಸಿರಬೇಕು. ವಿದ್ಯಾರ್ಥಿಗಳು ಬರೆದ ಲೇಖನವನ್ನು ಬ್ಲೋಗ್‌ನಲ್ಲಿ ಪ್ರಕಟಿಸಲಿ.

### ಸರಳ ವಾಕ್ಯ / ಮಿಶ್ರವಾಕ್ಯ

ತುಳು ಜನರ ಬಳಕೆಯ ಭಾಷೆ ತುಳು ಆಗಿದೆ. ನಾಡಿನ ವ್ಯವಹಾರ ಭಾಷೆಯಾಗಿ ಕನ್ನಡ ಬೆಳೆದು ಬಂದಿದೆ.

ತುಳು ಜನರ ಬಳಕೆಯ ಭಾಷೆ ತುಳುವಾಗಿದ್ದರೂ ನಾಡಿನ ವ್ಯವಹಾರ ಭಾಷೆಯಾಗಿ ಕನ್ನಡ ಬೆಳೆದು ಬಂದಿದೆ.

– ಇದೇ ರೀತಿಯಲ್ಲಿ ಇನ್ನೂ ಅನೇಕ ಸರಳ / ಮಿಶ್ರ ವಾಕ್ಯಗಳನ್ನು ರಚಿಸಲು ಹೇಳುವುದು.

# ಭಾಷೆ ಮತ್ತು ಭಾಷಾ ವಿಜ್ಞಾನ

## ಪ್ರವೇಶ

ದಿನನಿತ್ಯದ ವ್ಯವಹಾರಗಳಿಗಾಗಿ ಮನುಷ್ಯನು ಭಾಷೆಯನ್ನು ಒಂದು ಸಂವಹನ ಮಾಧ್ಯಮವಾಗಿ ಬಳಸಿಕೊಂಡಿದ್ದಾನೆ. ಭಾಷೆಯೆಂಬುದು ಇಲ್ಲದೇ ಇರುತ್ತಿದ್ದರೆ ಈ ಪ್ರಪಂಚ ಹೇಗಿರುತ್ತಿತ್ತು ಎಂಬುದನ್ನು ಊಹಿಸುವುದೇ ಕಷ್ಟ. ಮನುಷ್ಯನನ್ನು ಇತರ ಪ್ರಾಣಿಗಳಿಗಿಂತ ಪ್ರತ್ಯೇಕವಾಗಿ ನಿಲ್ಲುವಂತೆ ಮಾಡುವ ಹಲವು ವಿಚಾರಗಳಲ್ಲಿ ಭಾಷೆಯು ಪ್ರಮುಖವಾದುದು.

## ಪೂರ್ವಜ್ಞಾನ

ವಿದ್ಯಾರ್ಥಿಗಳು ಭಾಷೆಯ ಬಗೆಗೆ ಕೆಲವು ವಿಚಾರಗಳನ್ನು ತಿಳಿದಿರುತ್ತಾರೆ. ಅವರಿಗೆ ಗೊತ್ತಿರುವ ಭಾಷೆಗಳು, ಅವರ ಮಾತೃಭಾಷೆ ವ್ಯವಹಾರದ ಭಾಷೆಗಳು, ಒಂದು ಭಾಷೆಗೂ ಇನ್ನೊಂದು ಭಾಷೆಗೂ ನಡುವೆ ಇರುವ ಸಾಮ್ಯ–ವ್ಯತ್ಯಾಸಗಳ ಬಗೆಗೆ ಕೆಲವು ಪ್ರಶ್ನೆಗಳನ್ನು ಅಧ್ಯಾಪಕರು ಕೇಳುವುದು.

ಭಾಷೆಯಲ್ಲಿ ಬದಲಾವಣೆ ಎಂಬುದು ನಿರಂತರವಾದ ಪ್ರಕ್ರಿಯೆ. ಭಾಷೆಯು ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತಿರುತ್ತದೆ. ಸಂಪರ್ಕಕ್ಕೆ ಬಂದ ಇತರ ಭಾಷೆಗಳಿಂದ ಪದಗಳನ್ನು ಸ್ವೀಕರಿಸುತ್ತ, ಇರುವ ಪದಗಳಲ್ಲಿ ಅರ್ಥ ವ್ಯತ್ಯಾಸ ಪಡೆಯುತ್ತ, ಧ್ವನಿ ವ್ಯತ್ಯಾಸಗಳಾಗುತ್ತಾ ಭಾಷೆಗಳು ಸಾಗಿ ಬಂದಿರುವುದರತ್ತ ಮಕ್ಕಳ ಗಮನ ಸೆಳೆಯುವುದು. ಕನ್ನಡ ಭಾಷೆಯಲ್ಲಿ ಉಂಟಾಗಿರುವ ಇಂತಹ ಕೆಲವು ಬದಲಾವಣೆಗಳನ್ನು ತಿಳಿದುಕೊಳ್ಳುವುದರೊಂದಿಗೆ ಈ ಭಾಷೆ ಬೆಳೆದು ಬಂದಿರುವ ಬಗೆಯನ್ನೂ ತಿಳಿದುಕೊಳ್ಳುವುದು ಇಲ್ಲಿಯ ಉದ್ದೇಶ.

ಪಾಠಭಾಗವನ್ನು ವಿದ್ಯಾರ್ಥಿಗಳು ಹೆಚ್ಚಿನ ಶ್ರದ್ಧೆಯಿಂದ ಓದಿಕೊಳ್ಳಲಿ. ಓದಿದ ಭಾಗವನ್ನು ಗ್ರಹಿಸಿಕೊಂಡಿದ್ದಾರೆಯೇ ಎಂಬುದನ್ನು ಪರೀಕ್ಷಿಸಲು ಅಧ್ಯಾಪಕರು ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುವುದು. ವಿದ್ಯಾರ್ಥಿಗಳು ಬಾಯ್ದೆರೆಯಾಗಿ ಉತ್ತರಿಸಲಿ.

## ಪ್ರಶ್ನೆಗಳು

- ಭಾಷಾ ವಿಜ್ಞಾನದ ಕೆಲಸವೇನು?
- ಯಾರು ಭಾಷಾ ವಿಜ್ಞಾನಿ ಎನಿಸುತ್ತಾನೆ
- ತೌಲನಿಕ ಭಾಷಾ ವಿಜ್ಞಾನವೆಂದರೇನು?
- ಭಾರತದ ಬಹುದೊಡ್ಡ ಭಾಷಾ ಪರಿವಾರ ಯಾವುದು?
- ಕನ್ನಡ ಭಾಷೆಯಲ್ಲಿ ಕಂಡುಬರುವ ಹಂತಗಳು ಯಾವುವು?

ಹೀಗೆಯೇ ಮುಂದಿನ ಭಾಗಗಳಿಂದ ಪ್ರಶ್ನಿಸುವುದು.

### ಸಂಕ್ಷಿಪ್ತವಾಗಿ ಉತ್ತರಿಸುವ ಪ್ರಶ್ನೆಗಳು

ವಿದ್ಯಾರ್ಥಿಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸುವುದು.

ಪಾಠದ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಲ್ಲಿ ಒಂದೊಂದನ್ನು ಒಂದೊಂದು ಗುಂಪಿನವರಿಗೆ ಕೊಡುವುದು. ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಉತ್ತರವನ್ನು ಕಂಡುಕೊಂಡು ಬರೆಯಲಿ. ಬರೆದ ಉತ್ತರವನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಹಾಯದಿಂದ ಸೂಕ್ತ ತಿದ್ದುಪಡಿಯೊಂದಿಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

### ಟಿಪ್ಪಣಿ ಬರೆಯುವುದು

ವಿದ್ಯಾರ್ಥಿಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ಟಿಪ್ಪಣಿ ಬರೆಯುವುದಕ್ಕಾಗಿ ಕೆಳಗಿನ ಈ ವಿಷಯಗಳನ್ನು ಕೊಡುವುದು.

1. ಭಾಷಾ ಬೆಳವಣಿಗೆಯ ಹಂತಗಳು
2. ಧ್ವನಿ ವ್ಯತ್ಯಾಸಗಳು
3. ಅರ್ಥವ್ಯತ್ಯಾಸ
4. ಸ್ವೀಕರಣಗಳು

ವಿದ್ಯಾರ್ಥಿಗಳು ಗುಂಪಿನಲ್ಲಿ ಚರ್ಚಿಸಿ ಟಿಪ್ಪಣಿಯನ್ನು ಬರೆದುಕೊಳ್ಳಲಿ. ಬರೆದ ಟಿಪ್ಪಣಿಯನ್ನು ತರಗತಿಯಲ್ಲಿ ಮಂಡಿಸಲಿ. ಅಧ್ಯಾಪಕರ ಸಹಾಯದಿಂದ ಉತ್ತಮಡಿಸಿ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆದುಕೊಳ್ಳಲಿ.

### ಅನ್ಯಭಾಷಾ ಸ್ವೀಕರಣ

ನಾವಿಂದು ಓದುವ ದಿನ ಪತ್ರಿಕೆಗಳನ್ನು ಗಮನಿಸಿದರೆ ಕಂಡುಬರುವ ಭಾಷಾ ಪ್ರಯೋಗವು ಅನ್ಯಭಾಷಾ ಸ್ವೀಕರಣಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಯಾಕೆಂದರೆ ಇತರ ಭಾಷೆಯ ಕೆಲವು ಪದಗಳು ಇಂದಿನ ಪ್ರಯೋಗಗಳಲ್ಲಿ ಹಾಸುಕೊಕ್ಕಾಗಿ ಸೇರಿಕೊಂಡಿವೆ. ಅನ್ಯಭಾಷಾ ಪದಗಳನ್ನು ಅನಿಯಮಿತವಾಗಿ ಬಳಸುವ ಪ್ರವೃತ್ತಿ ಭಾಷಾ ಶುದ್ಧಿಯನ್ನು ಬಯಸುವ ವಿಚಾರವಂತರಿಗೆ ಒಂದಿಷ್ಟು ಮುಜುಗರವನ್ನುಂಟು ಮಾಡುತ್ತದೆ.

## ಕಾಸರಗೋಡು ಕನ್ನಡದಲ್ಲಿ ಬಳಕೆಯಲ್ಲಿರುವ ಮಲೆಯಾಳ ಭಾಷೆಯ ಸ್ವೀಕರಣ ಪದಗಳು

ಕಾಸರಗೋಡಿನ ಕನ್ನಡ ಭಾಷೆಯಲ್ಲಿ ಮಲೆಯಾಳ ಭಾಷೆಯ ಪ್ರಭಾವವು ಧಾರಾಳವಾಗಿದೆ. ಮಲೆಯಾಳ ಭಾಷೆಯನ್ನಾಡುವವರ ನಿರಂತರವಾದ ಸಂಪರ್ಕದ ಪರಿಣಾಮವಾಗಿ ಆ ಭಾಷೆಯಿಂದ ಕನ್ನಡ ಭಾಷೆಯು ಅನೇಕ ಪದಗಳನ್ನು ಸ್ವೀಕರಿಸಿಕೊಂಡಿದೆ. ಹೀಗೆ ಸ್ವೀಕರಿಸಿದ ಪದಗಳನ್ನು ವಿದ್ಯಾರ್ಥಿಗಳು ಸಂಗ್ರಹಿಸಿ, ಬರೆದು ತರಗತಿಯಲ್ಲಿ ಮಂಡಿಸಲಿ. ಆ ಪದಗಳು ಬಳಕೆಯಾಗುವ ಸಂದರ್ಭಗಳನ್ನು ಬಳಿಕ ವಿವರಿಸಲಿ. ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

### ಕೆಲವು ಪದಗಳು

ಭರಣ (ಆಡಳಿತ), ಪತ್ರ (ವಾರ್ತಾಪತ್ರಿಕೆ), ಸಮರ (ಮುಷ್ಕರ), ರಾಷ್ಟ್ರೀಯ (ರಾಜಕೀಯ), ಭಾರವಾಹಿ (ಪದಾಧಿಕಾರಿ), ಸಾಹಚರ್ಯ (ಒಡನಾಟ–ಸಂದರ್ಭ) ... ಇತ್ಯಾದಿ

ಪತ್ರ : ಮಲೆಯಾಳ ಭಾಷೆಯಲ್ಲಿ ವಾರ್ತಾಪತ್ರಿಕೆಗೆ 'ಪತ್ರಂ' ಎಂದು ಹೇಳುವರು. ಅದೇ ಶಬ್ದವನ್ನು ಕಾಸರಗೋಡಿನ ಕನ್ನಡದಲ್ಲಿ ಬಳಸುತ್ತಾರೆ. ರೀತಿಯಲ್ಲಿ ಗುರುತಿಸಿದ ಸ್ವೀಕರಣ ಪದಗಳ ವಿವರವನ್ನು ಬರೆದು ಮಂಡಿಸಲಿ.

**ಚರ್ಚಾಗೋಷ್ಠಿ**

ತರಗತಿಯಲ್ಲಿ ವಿದ್ಯಾರ್ಥಿಗಳನ್ನು ಎರಡು ಗುಂಪುಗಳನ್ನಾಗಿಸಿ ಅನ್ಯಭಾಷಾ ಸ್ವೀಕರಣ ಅನಿವಾರ್ಯವೇ ಎಂಬ ವಿಚಾರದಲ್ಲಿ ಚರ್ಚಾಗೋಷ್ಠಿಯನ್ನು ನಡೆಸುವುದು. ಎರಡು ಗುಂಪುಗಳು ಪರ ಮತ್ತು ವಿರೋಧ ಅಭಿಪ್ರಾಯಗಳನ್ನು ತಮ್ಮದೇ ಆದ ಸ್ಪಷ್ಟ ನಿಲುವುಗಳ ಮೂಲಕ ಮಂಡಿಸಲಿ. ಅಧ್ಯಾಪಕರು ಸಮನ್ವಯಕಾರರಾಗಿ ನಿರ್ವಹಿಸುವುದು. ಈ ಚರ್ಚೆಯನ್ನು ಆಧರಿಸಿ ವರದಿಯೊಂದನ್ನು ತಯಾರಿಸಲಿ. ಸೂಕ್ತ ತಿದ್ದುಪಡಿಗಳೊಂದಿಗೆ ತಮ್ಮ ಚಟುವಟಿಕೆ ಪುಸ್ತಕದಲ್ಲಿ ಬರೆಯಲಿ.

**ಸೂಚಕಗಳು**

| **ಪರ** | **ವಿರೋಧ** |
|---|---|
| ಭಾಷಾ ಬೆಳವಣಿಗೆಗೆ ಪೂರಕ | ಭಾಷಾ ಬೆಳವಣಿಗೆಗೆ ಮಾರಕ |
| ಹೊಸ ವಿಚಾರಗಳ ಅಭಿವ್ಯಕ್ತಿಗೆ ಸಹಾಯಕ | ಮಾತೃ ಭಾಷಾ ಪದಗಳ ಮಾಯವಾಗುವಿಕೆ |
| ಭಾಷಾ ಬಾಂಧವ್ಯದ ಬೆಳವಣಿಗೆ | ಭಾಷೆಯ ಮೂಲ ಸ್ವಭಾವಕ್ಕೆ ದೋಷಕರ |
| ಸಂಸ್ಕೃತಿಯ ವಿನಿಮಯ | ಪದಗಳ ಅರ್ಥದಲ್ಲಿ ವ್ಯತ್ಯಾಸವುಂಟಾಗುವಿಕೆ. |

**ಪರಾಮರ್ಶನ ಗ್ರಂಥಗಳು**

- ಅಮೇರಿಕಾದಲ್ಲಿ ಗೋರೂರು – ಗೋರೂರು ರಾಮಸ್ವಾಮಿ ಅಯ್ಯಂಗಾರ್
- ಮೋಸ್ಕೋದಲ್ಲಿ 22 ದಿನ – ಜಿ.ಎಸ್. ಶಿವರುದ್ರಪ್ಪ
- ನೆನಪಿನ ದೋಣಿಯಲ್ಲಿ – ಕುವೆಂಪು
- ಸ್ಮೃತಿ ಪಟಲ – ಶಿವರಾಮ ಕಾರಂತ

# 4. ನಾಟಕ ರಂಗ

ಘಟಕ 4 : ನಾಟಕ ರಂಗ

ಸಮಯ : 45 ಪಿರೇಡುಗಳು

**ಕಲಿಕಾ ಸಾಮಾಗ್ರಿಗಳು** :

- ಪಠ್ಯ ಪುಸ್ತಕ
- ಅಡಕ ಮುದ್ರಿಕೆ
- ನಾಟಕ ಕೃತಿಗಳು
- ಪರಾಮರ್ಶನ ಗ್ರಂಥಗಳು
- ಅಂತರ್ಜಾನ

**ಮೌಲ್ಯಗಳು ಮತ್ತು ಮನೋಭಾವಗಳು** :

- ನಾಟಕವನ್ನು ಆಸ್ವಾದಿಸುವ ಮನೋಭಾವ
- ಅಭಿನಯ ಕಲೆಯನ್ನು ಬೆಳೆಸುವುದು.
- ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದನೆ.
- ಭಾಷಾ ಪ್ರಯೋಗದ ವೈಶಿಷ್ಟ್ಯಗಳನ್ನು ತಿಳಿಯುವಂತಹ ಮನೋಭಾವ.
- ಸಮಾಜದಲ್ಲಿ ಸಮಾನತೆಯನ್ನು ಉಳಿಸುವ ಪ್ರಯತ್ನ
- ಸಮಾಜ ಜಾಗೃತಿಗಾಗಿ ನಾಟಕವನ್ನು ಬಳಸುವ ಮನೋಭಾವ

# ಪ್ರಸ್ತಾವನೆ

ಆಧುನಿಕ ಕನ್ನಡ ನಾಟಕದ ಚರಿತ್ರೆ ಸುಸಮಾರು ನೂರು ವರ್ಷಗಳನ್ನು ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಇದು ಅತ್ಯಂತ ತಡವಾಗಿ ಹುಟ್ಟಿದ್ದು. ಆದರೆ ಕಾದಂಬರಿ, ಸಣ್ಣಕಥೆಗಳಿಗೆ ಲಭ್ಯವಿಲ್ಲದ ಸಂಸ್ಕೃತ ಸಾಹಿತ್ಯದ ಪರಂಪರೆ ಈ ಸಾಹಿತ್ಯ ರೂಪಕ್ಕೆ ಲಭ್ಯವಿತ್ತು.

ನಾಟಕವು ಸಂಕೀರ್ಣವಾದ ಸಾಹಿತ್ಯ ಪ್ರಕಾರ. ಇತರ ಸಾಹಿತ್ಯ ಪ್ರಕಾರಗಳಂತೆ ಇದು ಒಬ್ಬರೊಡನೊಬ್ಬರ ಸಂಬಂಧವನ್ನು ಸ್ಥಾಪಿಸುವುದಿಲ್ಲ. ಒಂದು ಪ್ರೇಕ್ಷಕ ವರ್ಗದೊಡನೆ ಸಂಬಂಧ ಸ್ಥಾಪಿಸುತ್ತದೆ. ನಾಟಕವು ಸಂಪೂರ್ಣವಾಗುವುದು ರಂಗಮಂದಿರದಲ್ಲೇ. ನಾಟಕ ರಚನೆ ಅದರ ಒಂದು ಭಾಗ ಮಾತ್ರ. ಭಾರತದಲ್ಲಿ ನಾಟಕ – ನಾಟಕ ಮಂದಿರ ಒಟ್ಟಿಗೆ ಅರಳಿದಂತೆ ಕಾಣುತ್ತದೆ.

ನಾಟಕವು ಸಮಾಜದ ಮೇಲೆ ಹೆಚ್ಚು ಪ್ರಭಾವ ಬೀರುವ ಕಲಾರೂಪವಾಗಿದೆ. ಗಂಭೀರವಾಗಿಯೂ ವಿಮರ್ಶಾದೃಷ್ಟಿಯಿಂದಲೂ ಕಾಣುವಂತೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಬೇಕಾದುದು ಅಗತ್ಯ. ಈ ಮೂಲಕ ಸಾಮಾಜಿಕ ಸಂಬಂಧ, ಮೌಲ್ಯಗಳನ್ನು ಅವರು ಅರ್ಥ ಮಾಡಿಕೊಳ್ಳಬೇಕಾಗಿದೆ.

ಈ ಉದ್ದೇಶಗಳಿಗಾಗಿ ಕನ್ನಡ ನಾಟಕ ಸಾಹಿತ್ಯದ ಪರಿಚಯವನ್ನು ಆಧುನಿಕ ನಾಟಕವೊಂದನ್ನು ಈ ಘಟಕದಲ್ಲಿ ನೀಡಲಾಗಿದೆ. ವೃತ್ತಿ ರಂಗಭೂಮಿಯಿಂದ ಹವ್ಯಾಸಿ ರಂಗಭೂಮಿಯ ವರೆಗೆ ಬೆಳೆದು ಬಂದಿರುವ ನಾಟಕದಲ್ಲಿ ಇಂದು ಹಲವು ಹೊಸ ಪ್ರಯೋಗಗಳು ನಡೆಯುತ್ತಿವೆ. ಪೌರಾಣಿಕ ಮತ್ತು ಐತಿಹಾಸಿಕ ಸಾಮಗ್ರಿಗಳ ಸಾಧ್ಯತೆಗಳನ್ನು ಕಂಡುಕೊಂಡುದು ವಸ್ತುವಿನ ದೃಷ್ಟಿಯಿಂದ ಮಹತ್ವದ ಬೆಳವಣಿಗೆಯಾಗಿದೆ. ಅದರಲ್ಲಿ ಸಮಕಾಲೀನ ಪ್ರಸ್ತುತತೆಯನ್ನು ಹೇಳಲು ಸಾಧ್ಯವಾದುದು, ಹಾಡುಗಳನ್ನು ಬಳಸಿಕೊಂಡ ರೀತಿ ತಾಂತ್ರಿಕವಾಗಿ ಮಹತ್ವದ ಸಂಗತಿಯಾಗಿದೆ. ನಾಟಕವೆಂಬ ಕಲಾ ಪ್ರಕಾರದ ಮೂಲಕ ಭಾವನಾತ್ಮಕವೂ ಸೌಂದರ್ಯಾತ್ಮಕವೂ ಆದ ಮೌಲ್ಯಗಳನ್ನು ತಿಳಿಯುವುದರೊಂದಿಗೆ ಸಾಮಾಜಿಕ ಸತ್ಯದ ದೃಷ್ಟಿಯಿಂದಲೂ ನೋಡಬೇಕಾಗಿದೆ. ಈ ಉದ್ದೇಶಗಳಿಗಾಗಿಯೇ 'ಮಂಥರಾ' ನಾಟಕವನ್ನು ಕೊಡಲಾಗಿದೆ.

ಇತ್ತೀಚೆಗೆ ಬಂದಿರುವ ಬೀದಿನಾಟಕಗಳನ್ನು ವೈಜ್ಞಾನಿಕ ತಿಳುವಳಿಕೆಯ ಪ್ರಸಾರಕ್ಕೂ ಬಳಸಿಕೊಳ್ಳುವುದರ ಮೂಲಕ ಕಾಡು, ಪರಿಸರ ಸಂರಕ್ಷಣೆಯ ಬಗ್ಗೆ ಹಳ್ಳಿಯ ಅನಕ್ಷರಸ್ಥರಿಗೂ ಎಚ್ಚರ ಮೂಡಿಸಲು ಸಾಧ್ಯವಾಗಿದೆ.

# UNIT FRAME

**ಘಟಕ 4 : ನಾಟಕ ರಂಗ** ಸಮಯ : ಪಿರೇಡುಗಳು

**ಕಲಿಕಾ ಸಾಧನೆಗಳು**

- ಅಭಿನಯ ಕಲೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವರು, ಅಭಿನಯಿಸುವರು.
- ಕಥೆಯನ್ನು ನಾಟಕ ರೂಪಕ್ಕೆ ಬದಲಾಯಿಸುವ ಕೌಶಲವನ್ನು ಪಡೆದುಕೊಂಡು ಪ್ರಯೋಗಿಸುವರು.
- ನಾಟಕ ರಚನಾ ತಂತ್ರಗಳನ್ನು ಅರಿತುಕೊಳ್ಳುವರು, ನಾಟಕ ರಚಿಸುವರು.
- ಸಾಮಾಜಿಕ ಜೀವನದಲ್ಲಿ ದೃಶ್ಯಮಾಧ್ಯಮಗಳ ಪ್ರಭಾವವನ್ನು ಸೂಕ್ಷ್ಮವಾಗಿ ಗಮನಿಸಿ ವಿಮರ್ಶೆಯನ್ನು ಬರೆಯುವರು.
- ಮಾಹಿತಿತಂತ್ರಜ್ಞಾನವನ್ನು ಉಪಯೋಗಿಸಿ ದೃಶ್ಯಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸುವರು.
- ಕನ್ನಡ ನಾಟಕ ಸಾಹಿತ್ಯದ ಹುಟ್ಟು ಬೆಳವಣಿಗೆಯ ಪರಿಚಯವನ್ನು ಮಾಡಿಕೊಳ್ಳುವರು. ಲೇಖನ ಬರೆಯುವರು.
- ನಾಟಕವನ್ನು ಓದಿ ಆಸ್ವಾದಿಸಿ ಆಸ್ವಾದನಾ ಟಿಪ್ಪಣಿಯನ್ನು ಬರೆಯುವರು.
- ಪುರಾಣ ಕಥೆಗಳಲ್ಲಿಯೂ ಹುದುಗಿರುವ ಸಮಕಾಲೀನ ಅಂಶಗಳನ್ನು ತಿಳಿದುಕೊಳ್ಳುವರು. ವಿಮರ್ಶಾಲೇಖನವನ್ನು ಬರೆಯುವರು.

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| • ಕನ್ನಡ ನಾಟಕ ಸಾಹಿತ್ಯ ದೀರ್ಘ ಕಾಲದಿಂದ ಬೆಳೆದು ಬಂದಿದೆ. | • ನಾಟಕಗಳ ಕುರಿತಾದ ವಿದ್ಯಾರ್ಥಿಗಳ ಪೂರ್ವಜ್ಞಾನವನ್ನು ತಿಳಿಯುವುದು.<br>• ನಾಟಕ ಪ್ರಕಾರಗಳ ಕುರಿತು ತಿಳಿಯುವುದು, ಟಿಪ್ಪಣಿ ಬರೆಯುವುದು.<br>• ಪಾಠವನ್ನು ಓದುವುದು.<br>• ಪ್ರಮುಖ ನಾಟಕಕಾರರ ಹೆಸರನ್ನು ಅವರ ನಾಟಕಗಳನ್ನು ಪಟ್ಟಿ ಮಾಡುವುದು.<br>• ನಾಟಕಗಳನ್ನು ಓದಿ ಅದರ ಕಿರು ಪರಿಚಯವನ್ನು ಬರೆಯುವುದು.<br>• ಕನ್ನಡ ನಾಟಕ ಸಾಹಿತ್ಯದ ಬೆಳವಣಿಗೆಯ ಸ್ಥೂಲ ಪರಿಚಯವನ್ನು ಮೂಡಿಸುವ ಲೇಖನವನ್ನು ಬರೆಸುವುದು. | • ಟಿಪ್ಪಣಿ<br>• ಸಂಗ್ರಹ<br>• ಪರಿಚಯ ಲೇಖನ<br>• ಲೇಖನ |

| ಪರಿಕಲ್ಪನೆ | ಪ್ರಕ್ರಿಯೆ / ಚಟುವಟಿಕೆ/ಮೌಲ್ಯಮಾಪನ | ಕಲಿಕಾ ಸಾಧನೆಗಳು |
|---|---|---|
| | • ಕನ್ನಡ ನಾಟಕರಂಗಕ್ಕೆ ಸ್ಥಳೀಯವಾದ ರಂಗಭೂಮಿಯ ಕೊಡುಗೆಯ ಕುರಿತು ಸಂಗ್ರಹಿಸಿ ಬರೆಯುವುದು.<br>• ಅನ್ಯಭಾಷೆಯಿಂದ ಕನ್ನಡಕ್ಕೆ ಭಾಷಾಂತರಗೊಂಡ ನಾಟಕಗಳ ಕುರಿತು ಲೇಖನ ಬರೆಯುವುದು.<br>• ಹಳೆಗನ್ನಡದ ನಾಟಕವನ್ನು ಹೊಸಗನ್ನಡ ಗದ್ಯಕ್ಕೆ ಪರಿವರ್ತಿಸಿ ಬರೆಯುವುದು. | • ಸಂಗ್ರಹ ಲೇಖನ<br>• ಲೇಖನ<br>• ರೂಪಾಂತರ |
| • ನಾಟಕವು ಪ್ರಬಲ ದೃಶ್ಯ ಮಾಧ್ಯಮವಾಗಿದೆ. | • ನಾಟಕವನ್ನು ಸ್ವರಭಾರದೊಂದಿಗೆ ಓದುವುದು<br>• ನಾಟಕವನ್ನು ಅಭಿನಯಿಸುವುದು<br>• ಗಾದೆಮಾತುಗಳನ್ನು ವಿಸ್ತರಿಸಿ ಬರೆಯುವುದು<br>• ನಾಟಕವು ಸಮಾಜದ ಮೇಲೆ ಬೀರುವ ಪರಿಣಾಮಗಳನ್ನು ತಿಳಿದುಕೊಳ್ಳುವುದು. ಲೇಖನ ಬರೆಯುವುದು.<br>• ಪೌರಾಣಿಕ ಕಥಾ ವಸ್ತು ಸಮಕಾಲೀನ ಸ್ಥಿತಿಗೆ ಹೊಂದಿಕೆಯಾಗುತ್ತಿರುವುದನ್ನು ತಿಳಿದುಕೊಳ್ಳುವುದು.<br>• ನಾಟಕವನ್ನು ಪ್ರದರ್ಶಿಸಲು ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವುದು. ವಿವಿಧ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು.<br>• ನಾಟಕದ ವಿಮರ್ಶೆ ಬರೆಯುವುದು.<br>• ಪತ್ರಿಕಾ ವರದಿ ತಯಾರಿಸುವುದು.<br>• ಕರಪತ್ರ ತಯಾರಿಸುವುದು.<br>• ಪಾತ್ರಚಿತ್ರಣ ಮಾಡುವುದು.<br>• ಸಂಭಾಷಣೆ ಬರೆಯುವುದು.<br>• ಸ್ಟೋರಿಬೋರ್ಡ್ ತಯಾರಿಸುವುದು. | • ಓದು<br>• ಅಭಿನಯ<br>• ಸ್ವಾರಸ್ಯ<br>• ಲೇಖನ<br>• ನಾಟಕ<br>• ವಿಮರ್ಶಾಲೇಖನ<br>• ವರದಿ<br>• ಕರಪತ್ರ<br>• ಪಾತ್ರಚಿತ್ರಣ<br>• ಸಂಭಾಷಣೆ<br>• ಸ್ಟೋರಿಬೋರ್ಡ್ |

# ಕನ್ನಡದಲ್ಲಿ ನಾಟಕ ಸಾಹಿತ್ಯ

## ಪ್ರವೇಶ

ವಿದ್ಯಾರ್ಥಿಗಳು ಓದಿದ/ನೋಡಿದ ನಾಟಕಗಳ ಹೆಸರನ್ನು ಹೇಳಲು ಸೂಚಿಸುವುದು. ಅವರು ನಾಟಕಕಾರರ ಹೆಸರನ್ನು ತಿಳಿದಿರುವವರು ಅದನ್ನು ಹೇಳಲಿ. ಆ ನಾಟಕಗಳು ಯಾವ ಪ್ರಕಾರದವುಗಳೆಂದು ಕೇಳುವುದು. (ಪೌರಾಣಿಕ, ಐತಿಹಾಸಿಕ, ಚಾರಿತ್ರಿಕ, ಸಾಮಾಜಿಕ... ಇತ್ಯಾದಿಗಳಲ್ಲಿ)ಅವುಗಳೊಳಗಿನ ವ್ಯತ್ಯಾಸವನ್ನು ಅವರು ಹೇಳಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಅದನ್ನು ಸ್ಪಷ್ಟಪಡಿಸುವುದು. ಆ ನಾಟಕಗಳ ಕತೆಯನ್ನು ಚುಟುಕಾಗಿ ಹೇಳಲಿ. ನಾಟಕವನ್ನು ಓದಿದಾಗಿನ ಮತ್ತು ನೋಡಿದಾಗಿನ ಅವರ ಅನುಭವವನ್ನು ವಿವರಿಸಲಿ. ಅನುಭವಗಳಲ್ಲಿನ ವ್ಯತ್ಯಾಸಗಳಿಗೆ ಕಾರಣಗಳನ್ನೂ ಹೇಳಲಿ.

## ಚಟುವಟಿಕೆಗಳು

ಪಾಠಭಾಗವನ್ನು ವಿದ್ಯಾರ್ಥಿಗಳು ಮೌನವಾಗಿ ಓದಲಿ. ಓದಿನ ಬಳಿಕ ಅದರಲ್ಲಿ ಸಂಶಯಗಳಿದ್ದಲ್ಲಿ ಅದ್ಯಾಪಕರು ಹೆಚ್ಚಿನ ವಿವರ ನೀಡುವುದು. ಶಾಲಾ ಗ್ರಂಥಾಲಯದಲ್ಲಿ ಲಭ್ಯವಿರುವ ನಾಟಕ ಕೃತಿಗಳನ್ನು ಓದಲು ಸೂಚಿಸುವುದು.

ಪಾಠಭಾಗದಲ್ಲಿ ನೀಡಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರ ಬರೆದು ಅಧ್ಯಾಪಕರಿಗೆ ತೋರಿಸಲಿ.

## ಸಂಗ್ರಹಿಸಿ ಬರೆಯಿರಿ

ಕಾಸರಗೋಡಿನಲ್ಲಿ ಹಿಂದಿನಿಂದಲೇ ಹಲವು ಹವ್ಯಾಸಿ ನಾಟಕ ತಂಡಗಳು ನಾಟಕಗಳನ್ನು ಪ್ರದರ್ಶಿಸುತ್ತಾ ಬಂದಿವೆ. ನಾಟಕಗಳನ್ನು ರಚಿಸಿದವರೂ ಹಲವರಿದ್ದಾರೆ. ಈ ಕುರಿತು ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಲಿ. ದೊರಕಿದ ಮಾಹಿತಿಗಳನ್ನು ಒಟ್ಟು ಗೂಡಿಸಿ ಲೇಖನವನ್ನು ಸಿದ್ಧಪಡಿಸಲಿ. ಲೇಖನ ಬರೆಯಲು ವಿದ್ಯಾರ್ಥಿಗಳ ಗುಂಪೊಂದನ್ನು ರಚಿಸುವುದು. ಬರೆದ ಲೇಖನವನ್ನು ಪರಿಷ್ಕರಿಸಿ ಶಾಲಾ ಭಿತ್ತಿಪತ್ರಿಕೆಯಲ್ಲಿ ಪ್ರಕಟಿಸುವುದು, ಇಲ್ಲವೆ. ವಾಚನಾಲಯದಲ್ಲಿ ಓದಲು ಇರಿಸುವುದು.

## ಕಾಸರಗೋಡಿನ ರಂಗಭೂಮಿ

ಕಾಸರಗೋಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ರಂಗಭೂಮಿಯ ಬೆಳವಣಿಗೆಗೆ ಹಿಂದಿನ ಕಾಲದಿಂದಲೂ ಪ್ರಚಲಿತದಲ್ಲಿದ್ದ ಯಕ್ಷಗಾನ ಬಯಲಾಟಗಳು ಪ್ರೇರಕ ಶಕ್ತಿಯಾಗಿದ್ದುವು ಎಂಬುದು ನಿರ್ವಿವಾದ. ಬಯಲಾಟಗಳಿಂದ ಪ್ರಭಾವಿತಗೊಂಡು ನಾಟಕ ಕಲೆ ಇಲ್ಲಿ ಬೆಳೆಯಿತೆನ್ನಬಹುದು. ಬಯಲಾಟಗಳು ಇಲ್ಲಿನ ರಂಗ ಪರಂಪರೆಯ ಪ್ರಾಚೀನತೆಗೆ ಸಾಕ್ಷಿಯಾಗಿ ನಿಲ್ಲಬಲ್ಲವುಗಳಾಗಿವೆ. ಹಿಂದಿನ ಕಾಲದಲ್ಲಿ ಜನರು ಮನೋರಂಜನೆಗೆ ಯಕ್ಷಗಾನ ಬಯಲಾಟಗಳನ್ನೇ ಅವಲಂಬಿಸುತ್ತಿದ್ದರು. ಹಾಗಾಗಿ ಕಾಸರಗೋಡು, ದ.ಕ. ಜಿಲ್ಲೆಗಳಲ್ಲಿ ಯಕ್ಷಗಾನ ಬಯಲಾಟಗಳು ಜನಪ್ರಿಯವಾಗಿದ್ದವು.

ಅರುವತ್ತರ ದಶಕದಲ್ಲಿ ಕಾಸರಗೋಡಿನಲ್ಲಿ ಹಲವು ರಂಗ ತಂಡಗಳು ಹುಟ್ಟಿಕೊಂಡಿವೆ. ತಮ್ಮ ವಾರ್ಷಿಕೋತ್ಸವಗಲಿಗೆ ಮಾತ್ರವೇ ಹೆಚ್ಚಿನ ತಂಡಗಳು ಪ್ರಾಮುಖ್ಯ ನೀಡಿ ನಾಟಕಗಳನ್ನಾಡುತ್ತಿದ್ದುವು. ವಾರ್ಷಿಕಾಚರಣೆಗಳಿಗೆ ಹೊರತಾಗಿ ರಂಗ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಸಂಘ ಸಂಸ್ಥೆಗಳಲ್ಲಿ ವಿವೇಕಾನಂದ ಕಲಾ ಸಂಘ, ನಿತ್ಯಾನಂದ ಕಲಾ ವೃಂದ ಮತ್ತು

ಕೆ.ಸಿ. ಸ್ಟೋರ್ಸ್ ನೌಕರರ ಕಲಾವೃಂದಗಳು ಪ್ರಮುಖವಾದವುಗಳಾಗಿವೆ. ಕಾಸರಗೋಡಿನಲ್ಲಿ ಸೀಮೋಲ್ಲಂಘನೆ ಮಾಡಿದ ಮೊತ್ತ ಮೊದಲ ನಾಟಕ ತಂಡ ಬಹುಶಃ ವಿವೇಕಾನಂದ ಕಲಾಸಂಘವಾಗಿರಬೇಕು. ಈ ತಂಡವು ಮಡಿಕೇರಿ, ಮೂಡುಬಿದ್ರೆಗಳಲ್ಲಿ ನಾಟಕಗಳನ್ನಾಡಿದೆ. ನಿತ್ಯಾನಂದ ಕಲಾವೃಂದ ಕೂಡಾ ಕಾಸರಗೋಡಿನ ಬೇರೆ ಬೇರೆ ಕಡೆಗಳಲ್ಲಿ ನಾಟಕಗಳನ್ನು ಪ್ರದರ್ಶಿಸಿ ಜನಪ್ರಿಯತೆ ಪಡೆದುಕೊಂಡಿತ್ತು. ಈ ತಂಡದಲ್ಲಿ ನಾಟಕ ನಿರ್ದೇಶಕ ಹಾಗೂ ನಟ ದಿವಂಗತ ಕೆ. ಭಾಸ್ಕರ ಶೆಟ್ಟಿ ಮಾಸ್ತರರು ಓರ್ವ ಉತ್ತಮ ಕಲಾವಿದರೆಂದು ಹೆಸರು ಪಡೆದವರು. ಇವರು ಸಾಮಾನ್ಯವಾಗಿ ಹಿರಣ್ಣಯ್ಯನವರ ಶೈಲಿಯಲ್ಲಿ ದ್ವಂದ್ವಾರ್ಥದ ಸಂಭಾಷಣೆಗಳ ಮೂಲಕ ಪ್ರೇಕ್ಷಕರನ್ನು ನಗಿಸುತ್ತಿದ್ದರು. ಇವರೊಂದಿಗೆ ಅಭಿನಯಿಸುವುದೆಂದರೆ ಬಹಳ ಕಷ್ಟದ ಕೆಲಸವಾಗಿತ್ತು. ಕಾರಣ ಇವರು ಸ್ಟೇಜಿನಲ್ಲಿ ತಮ್ಮ ಸ್ವಂತದ ಸಂಭಾಷಣೆಗಳನ್ನು ಬಳಸುತ್ತಿದ್ದುದರಿಂದ ಪುಸ್ತಕದಲ್ಲಿದ್ದ ಸಂಭಾಷಣೆಗಳನ್ನು ಉರುಹೊಡೆದು ಬಂದ ನಟರು ಹಲವು ಸಂದರ್ಭಗಳಲ್ಲಿ ತಬ್ಬಿಬ್ಬಾದುದಿದೆ. ಆದರೆ ಅಂಥ ಸಂದರ್ಭಗಳಲ್ಲಿಯೂ ದಿ. ಭಾಸ್ಕರ ಶೆಟ್ಟರು ತನ್ನ ಸ್ವಂತ ಮಾತುಗಾರಿಕೆಯ ಮೂಲಕ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಿದ್ದರು ಹಾಗೂ ಸಹನಟರು ಎದೆಗುಂದದಂತೆ ಧೈರ್ಯ ತುಂಬುತ್ತಿದ್ದರು.

1963ರಲ್ಲಿ ಸ್ಥಾಪನೆಗೊಂಡ ಲಲಿತ ಕಲಾ ಸದನವು ನಾಟಕ, ಸಂಗೀತ ಮತ್ತಿತರ ಸಾಂಸ್ಕೃತಿಕ ಕಲೆಗಳನ್ನು ಪೋಷಿಸುತ್ತಿತ್ತು. ಸಹೋದರ ಕಲಾವೃಂದ, ಕೊರಕೋಡಿನ ಆರ್ಯ ಕಾತ್ಯಾಯಿನಿ ಕಲಾಸಂಘಗಳು ಈ ವೇಳೆಗೆ ವಾರ್ಷಿಕೋತ್ಸವಗಳ ಸಂದರ್ಭಗಳಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದುವು. 1966ರಲ್ಲಿ ಸ್ಥಾಪಿಸಲ್ಪಟ್ಟ ಕೆ.ಸಿ. ಸ್ಟೋರ್ಸ್ ನೌಕರರ ಕಲಾವೃಂದವು ಹಲವು ನಾಟಕಗಳನ್ನು ಪ್ರದರ್ಶಿಸುವ ಮೂಲಕ ರಂಗ ಚಳುವಳಿಯನ್ನು ಜೀವಂತವಾಗಿರಿಸುವಲ್ಲಿ ಮಹತ್ವದ ಕೊಡುಗೆಯನ್ನು ನೀಡಿದೆ. ಕಾಸರಗೋಡು ನಗರಸಭೆ ಮತ್ತು ಲಲಿತ ಕಲಾ ಸದನದವರು ಜಂಟಿಯಾಗಿ ಹಲವು ವರ್ಷಗಳ ಕಾಲ ನಡೆಸಿದ ನಾಟಕೋತ್ಸವ ಕಾಸರಗೋಡಿನಲ್ಲಿ ನಾಟಕಗಳ ಗುಣ ಮಟ್ಟವನ್ನು ವೃದ್ಧಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ನಿತ್ಯಾನಂದ ಕಲಾ ಸಂಘ, ಕೆ.ಸಿ. ಸ್ಟೋರ್ಸ್ ಕಲಾವೃಂದ, ಕೂಡ್ಲು ಯುವಜನ ಸಂಘ ಮೊದಲಾದ ತಂಡಗಳು ಮಲೆಯಾಳ ನಾಟಕಗಳಿಂದ ಪ್ರಭಾವಿತಗೊಂಡು ಕೆಲವಾರು ಉತ್ತಮ ನಾಟಕಗಳನ್ನು 60ರ ದಶಕದ ಕಾಲಘಟ್ಟದಲ್ಲಿ ಪ್ರದರ್ಶಿಸಿದ್ದುವು. ನಾಟಕಗಳಲ್ಲಿ ಹೊಸ ಪ್ರಯೋಗಗಳು ಮೂಡಿ ಬಂದು ಜನರನ್ನು ಬಹಳಷ್ಟು ಆಕರ್ಷಿಸುವಲ್ಲಿ ಯಶಸ್ವಿಯಾಗಿದ್ದ ಈ ಕಾಲಘಟ್ಟವೇ ಕಾಸರಗೋಡಿನ ರಂಗ ಚಟುವಟಿಕೆಯ ಉಚ್ಛ್ರಾಯ ಕಾಲವೆನ್ನಬಹುದು.

1960ರಿಂದ 70ರ ತನಕದ ಅವಧಿಯಲ್ಲಿ ಹಲವು ಮಂದಿ ಪ್ರತಿಭಾವಂತ ನಾಟಕಕಾರರು ಕಾಸರಗೋಡಿನ ವಿವಿಧ ತಂಡಗಳಲ್ಲಿ ಅಭಿನಯಿಸುತ್ತಿದ್ದರು. ಅಂಥವರ ಪೈಕಿ ವಿವೇಕಾನಂದ ಕಲಾ ಸಂಘದ ಗಂಗಾಧರ, ವಿಠಲದಾಸ್, ಪುಂಡಲೀಕ, ನಿತ್ಯಾನಂದ ಕಲಾ ಸಂಘದ ಭಾಸ್ಕರ ಶೆಟ್ಟಿ, ಶ್ರೀನಿವಾಸ ಶೆಟ್ಟಿ, ಕೆ.ಸಿ. ಸ್ಟೋರ್ಸ್ ನೌಕರರ ಕಲಾ ವೃಂದದ ಅಬ್ದುಲ್ ಸತ್ತಾರ್, ಸತ್ಯನಾರಾಯಣ ಕೊರಕ್ಕೋಡು, ಲಲಿತ ಕಲಾ ಸದನದ ಯು.ಎಲ್. ಭಟ್, ಉಜಿರೆ ಈಶ್ವರ ಭಟ್, ಎಸ್.ವಿ. ಭಟ್, ಶಿವರಾಮ ಶೆಟ್ಟಿ, ಕೂಡ್ಲು ಯುವಜನ ಸಂಘದ ರಾಘವ ಮಾಸ್ತರ್, ಪುರುಷೋತ್ತಮ ದೇವಾಂಗ, ಕೂಡ್ಲು ತರುಣ ಕಲಾ ವೃಂದದ ಕೆ. ಮಹಾಬಲ ಶೆಟ್ಟಿ, ಚಟ್ಲ ರಾಮಯ್ಯ ಶೆಟ್ಟಿ ಮೊದಲಾದವರು ಕಾಸರಗೋಡಿನ ರಂಗಭೂಮಿಗೆ ಉಲ್ಲೇಖನೀಯ ಕೊಡುಗೆ ನೀಡಿದವರಾಗಿದ್ದಾರೆ. ಕಾಸರಗೋಡಿನಲ್ಲಿ ಮಕ್ಕಳ ನಾಟಕಗಳಿಗೆ ಚಾಲನೆ ನೀಡಿದವರಲ್ಲಿ ಕೆ.ಟಿ. ಶ್ರೀಧರ್ ಪ್ರಮುಖರು. ಇವರು ಅನೇಕ ಮಕ್ಕಳ ನಾಟಕಗಳನ್ನು ರಚಿಸಿ ನಿರ್ದೇಶಿಸಿ ಹೆಸರುವಾಸಿಯಾಗಿದ್ದರು. ಪುರುಷೋತ್ತಮ ಪೈಕ ಅವರು ಹಲವು ನಾಟಕಗಳನ್ನು ನಿರ್ದೇಶಿಸಿದ ಇನ್ನೋರ್ವ ಪ್ರತಿಭಾವಂತರು.

ಪ್ರಸಾಧನದಲ್ಲಿ ದಿವಂಗತ ಭಾಸ್ಕರ ಶೆಟ್ಟಿ ಮಾಸ್ತರ್, ದಿವಂಗತ ಕೆ.ವಿ. ನೋಂಡ, ದಿವಂಗತ ಬಿ.ಪಿ. ದಿವಾಕರ ಮಾಸ್ತರ್, ದಿ. ಸುಬ್ರಾಯ ಅನಂತಪುರ ಕೂಡ್ಲು ಗೋಪಾಲಕೃಷ್ಣ ಶ್ಯಾನುಭೋಗ್ ಮೊದಲಾದವರು ಪ್ರಮುಖರು.

ಎಪ್ಪತ್ತರ ದಶಕದ ಪ್ರಾರಂಭದ ಎರಡು ಮೂರು ವರ್ಷಗಳ ತನಕ ರಂಗ ಚಟುವಟಿಕೆ ಕಾಸರಗೋಡಿನಲ್ಲಿ ಚುರುಕಾಗಿಯೆ ಮುಂದುವರಿಯಿತು. ಬಳಿಕ ಸ್ಥಗಿತಗೊಂಡ ಅಥವಾ ನಿಷ್ಕ್ರಿಯಗೊಂಡಿದ್ದ ರಂಗಚಟುವಟಿಕೆಗೆ ಚಾಲನೆ ದೊರೆತದ್ದು 1979ರಲ್ಲಿ ಯವನಿಕಾ ಕಾಸರಗೋಡು ಎಂಬ ಹೆಸರಿನಲ್ಲಿ ಹವ್ಯಾಸಿ ರಂಗ ಕಲಾವಿದರುಗಳ ತಂಡ ಹುಟ್ಟಿಕೊಂಡಾಗ. ಇಲ್ಲಿಂದ ಬಳಿಕ ರಂಗಭೂಮಿ ಹೊಸ ಅಲೆಯ ನಾಟಕಗಳ ಮೂಲಕ ನಿರಂತರ ರಂಗಚಟುವಟಿಕೆಗಳನ್ನು ಹಮ್ಮಿಕೊಂಡು ಕಾಸರಗೋಡು ಹಾಗೂ ಕರ್ನಾಟಕ ರಾಜ್ಯದಾದ್ಯಂತ ಯವನಿಕಾ ತಂಡವು ಹೆಸರುವಾಸಿಯಾಯಿತು. ಕಾಸರಗೋಡಿನ ಸಾಂಸ್ಕೃತಿಕ ರಂಗದಲ್ಲಿ ಹೊಸ ಇತಿಹಾಸವನ್ನೇ ಸೃಷ್ಟಿಸಿದ ಯವನಿಕಾ ಕರ್ನಾಟಕದ ಅತ್ಯುತ್ತಮ ತಂಡಗಳನ್ನು ಕಾಸರಗೋಡಿಗೆ ಆಹ್ವಾನಿಸಿ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಹೊಸ ಅಲೆಯ ನಾಟಕಗಳ ಪರಿಚಯವನ್ನು ಕಾಸರಗೋಡಿನ ರಂಗಾಸಕ್ತರಿಗೆ ನೀಡಿತು. ಹಲವು ಮಂದಿ ಪ್ರತಿಭಾವಂತರನ್ನು ಬೆಳಕಿಗೆ ತರುವ ಮೂಲಕ ಯವನಿಕಾ ತಂಡವು ಹತ್ತು ಹಲವು ಕಾರ್ಯಕ್ರಮಗಳನ್ನು ನಡೆಸಿ ಜನರ ಮೆಚ್ಚುಗೆಗೆ ಪಾತ್ರವಾಯಿತು.

ಯವನಿಕಾ ಸಂಸ್ಥೆ ಬಯಸಿದಾಗಲೆಲ್ಲಾ, ಲಭ್ಯವಾಗುವ ಕಲಾವಿದರಿಗೆ ಸರಿಹೊಂದುವಂತೆ ನಾಟಕಗಳನ್ನು ಬರೆದು ಕೊಡುತ್ತಿದ್ದ ಪ್ರೊ. ವೇಣುಗೋಪಾಲ ಅವರು ಕಾಸರಗೋಡಿನ ರಂಗಭೂಮಿಗೆ ನೀಡಿದ ಕೊಡುಗೆ ಉಲ್ಲೇಖನೀಯವಾದುದು.

1987ರಲ್ಲಿ ಸ್ಥಾಪನೆಗೊಂಡ ಗಡಿನಾಡ ಕಲಾವಿದರು ತಂಡವು ಇಂದಿಗೂ ರಂಗಚಟುವಟಿಕೆಗಳಲ್ಲಿ ನಿರತವಾಗಿ ಕಾಸರಗೋಡಿನ ಕನ್ನಡ, ತುಳು ರಂಗ ಭೂಮಿಗೆ ವಿಶಿಷ್ಟ ಸೇವೆ ಸಲ್ಲಿಸುತ್ತಿದೆ. ಈ ತಂಡದ ಬೆನ್ನೆಲುಬಾಗಿರುವ ಸುಕುಮಾರ ಕೆ. ಕಣ್ಣನ್ ಅವರು ಹಲವು ಉತ್ತಮ ನಾಟಕಗಳನ್ನು ನಿರ್ದೇಶಿಸಿ ಜನಪ್ರಿಯರಾಗಿದ್ದಾರೆ.

ನಟನಾ ತಂಡದ ಮೂಲಕ ಬೆಳಕಿಗೆ ಬಂದು ಹಲವಾರು ನಾಟಕಗಳಲ್ಲಿ ಅಭಿನಯಿಸಿರುವ ಪ್ರತಿಭಾವಂತ ನಟ ಸುಖಚಂದ್ರ ಕೊರಕೋಡು ಎಪ್ರಿಲ್ 14, 2000 ದಂದು ವಿಧಿಯ ಕ್ರೂರ ಲೀಲೆಗೆ ಬಲಿಯಾಗಿ ನಿಧನರಾದುದರಿಂದಾಗಿ ಕಾಸರಗೋಡಿನ ರಂಗಭೂಮಿ ಉದಯೋನ್ಮುಖ ಕಲಾವಿದನೋರ್ವನನ್ನು ಕಳೆದುಕೊಂಡು ಬಡವಾಗಿದೆ. ನೀನಾಸಂ ರಂಗ ತರಬೇತಿ ಕೇಂದ್ರದಲ್ಲಿ ಕಲಿತು ಬಂದು ಕಾಸರಗೋಡಿನ ರಂಗಭೂಮಿಯನ್ನು ಸಂಪನ್ನಗೊಳಿಸಿದವರಲ್ಲಿ ಪ್ರದೀಪ್ ಕಾಸರಗೋಡು ಮತ್ತು ಪಿ. ಮುರಹರಿ ಪ್ರಮುಖರು. ಪ್ರದೀಪ್ ಕಾಸರಗೋಡು ಯವನಿಕಾ ತಂಡದ ಸದಸ್ಯರಾಗಿದ್ದರಲ್ಲದೆ ಹಲವು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಪಿ. ಮುರಹರಿ ರಂಗಭೂಮಿಗಾಗಿಯೇ ತಮ್ಮ ಸೇವೆಯನ್ನು ಮುಡಿಪಾಗಿಟ್ಟಿದ್ದಾರೆ.

ಕಾಸರಗೋಡಿನ ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ರಂಗ ಚಟುವಟಿಕೆಗಳ ಮೂಲಕ ಹೆಸರುವಾಸಿಯಾಗಿರುವ ಅನೇಕ ತಂಡಗಳಿವೆ. ಅನಂತಪುರದ ಪ್ರಕೃತಿ ಯುವತಂಡ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಂಗಚಟುವಟಿಕೆಗಳನ್ನು ನಡೆಸುತ್ತಾ ಈ ಪ್ರದೇಶದಲ್ಲಿ ಹೆಸರುವಾಸಿಯಾಗಿದೆ. ಕುಂಬಳೆ ಆರಿಕ್ಕಾಡಿಯ ಮಲ್ಲಿಕಾ ಆರ್ಟ್ಸ್ ಮತ್ತು ಸ್ಪೋರ್ಟ್ಸ್ ಕ್ಲಬ್ ಹಲವು ಉತ್ತಮ ನಾಟಕಗಳನ್ನು ಪ್ರಯೋಗಿಸಿದ ಯಶಸ್ವೀ ನಾಟಕ ತಂಡವೆನಿಸಿದೆ. ದಿವಂಗತ ಕರುಣಾಕರ ಮಾಸ್ತರ್ ಈ ತಂಡದ ಪ್ರಮುಖ ನಟರಾಗಿದ್ದರು. ಉಪ್ಪಳದ ರಚನಾ ತಂಡದವರು ಹತ್ತು ಹಲವು ಕಾರ್ಯಕ್ರಮಗಳ ಮೂಲಕ ಈ ಪ್ರದೇಶದಲ್ಲಿ ರಂಗ ಚಟುವಟಿಕೆಗಳ ಮೂಲಕ ರಂಗಭೂಮಿಗೆ ಸಲ್ಲಿಸುತ್ತಿರುವ ಕೊಡುಗೆ ಅನುಪಮವಾದುದು. ಮಧೂರಿನ ಮಿತ್ರ ಕಲಾವೃಂದ, ಕೊಲ್ಯದ ಶಿವಾಜಿ ಕಲಾ ಸಂಘ, ತರುಣ ಕಲಾ ವೃಂದ, ಉಳಿಯ, ಆದರ್ಶ ಯುವಕ ಸಂಘ, ಉಳಿಯತ್ತಡ್ಕ, ರೂಪ ಕಲಾ ಕರ್ಷಕ ಸಂಘ ಸಮಿತಿ, ಸುಳ್ಯಮೆ ಪಾತೂರು, ಕಲಾವರ್ಧಕ ಸಂಘ, ಕಾರ್ತಿಕೇಯ ಕಲಾ

ನಿಲಯ, ಕೋಟೂರು, ಎಸ್.ಕೆ.ಎಸ್. ಕ್ಲಬ್, ಪುತ್ತಿಗೆ, ನವರಂಗ್ ಆರ್ಟ್ಸ್ ಗಾಂಧೀನಗರ ಕೊಲ್ಲಂಗಾನ ಹೀಗೆ ಅನೇಕ ತಂಡಗಳು ಕಾಸರಗೋಡಿನಲ್ಲಿ ರಂಗ ಚಟುವಟಿಕೆಗಳ ಮೂಲಕ ಈ ಮಣ್ಣಿನ ಸಂಸ್ಕೃತಿಯನ್ನು ಬೆಳಗಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿವೆ.

ಎಡನೀರಿನ ಭಾರತೀ ಕಲಾ ಸದನ ಹಲವು ನಾಟಕಗಳನ್ನು ಪ್ರದರ್ಶಿಸಿ ಯಶಸ್ಸು ಪಡೆದ ಕಾಸರಗೋಡಿನ ಇನ್ನೊಂದು ಹೆಸರಾಂತ ತಂಡ. ಎಡನೀರು ಶ್ರೀಗಳಾದ ಶ್ರೀ ಶ್ರೀ ಕೇಶವಾನಂದ ಭಾರತಿ ಸ್ವಾಮೀಜಿಯವರು ಅನೇಕ ನಾಟಕಗಳನ್ನು ಬರೆದು ನಿರ್ದೇಶಿಸಿ ಕಾಸರಗೋಡಿನ ರಂಗಭೂಮಿಯನ್ನು ಶ್ರೀಮಂತಗೊಳಿಸಿದ್ದಾರೆ.

ಕಾಸರಗೋಡು ಚಿನ್ನಾ ಮತ್ತು ವೇಣುಗೋಪಾಲ ಕಾಸರಗೋಡು ಸೇರಿ ಕಟ್ಟಿದ ಸಂಸ್ಥೆ ಅಪೂರ್ವ ಕಲಾವಿದರು. ಈ ಸಂಸ್ಥೆಯು ಲಾರಿ ನಾಟಕದ ಮೂಲಕ ಕಾಸರಗೋಡು ಮತ್ತು ಕರ್ನಾಟಕದಾದ್ಯಂತ ಪ್ರಚಾರವನ್ನು ಪಡೆದುಕೊಂಡಿದೆ. ಇವುಗಳಲ್ಲದೆ ಇನ್ನೂ ಹಲವಾರು ನಾಟಕ ತಂಡಗಳು ಕಾಸರಗೋಡಿನ ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡ ತುಳು ನಾಟಕಗಳನ್ನಾಡುತ್ತಾ ಈ ಮಣ್ಣಿನ ಸಂಸ್ಕೃತಿಯನ್ನು ಬೆಳೆಸಿ ಪೋಷಿಸುವಲ್ಲಿ ಅನನ್ಯ ಕೊಡುಗೆಯನ್ನು ನೀಡಿದೆ ಎಂಬುದನ್ನು ಕಡೆಗಣಿಸುವಂತಿಲ್ಲ. ಉಮೇಶ ಸಾಲಿಯಾನ್ ಅವರು ಮಕ್ಕಳ ನಾಟಕಗಳನ್ನು ನಿರ್ದೇಶಿಸಿ ವಿವಿದೆಡೆಗಳಲ್ಲಿ ಪ್ರದರ್ಶಿಸಿ ಮೆಚ್ಚುಗೆ ಪಡೆದಿದ್ದಾರೆ.

## ಹೊಸಗನ್ನಡಕ್ಕೆ ಪರಿವರ್ತನೆ

ಬಿ.ಎಂ.ಶ್ರೀ. ಅವರು ದುರಂತ ನಾಟಕ ಪ್ರಕಾರವನ್ನು ಕನ್ನಡಕ್ಕೆ ಪರಿಚಯಿಸಿದವರು. ಅವರು ಬರೆದ 'ಅಶ್ವತ್ಥಾಮನ್' ನಾಟಕದ ಯಾವುದಾದರೂ ಒಂದು ದೃಶ್ಯವನ್ನು ಹೊಸಗನ್ನಡ ಗದ್ಯ ರೂಪಕ್ಕೆ ಪರಿವರ್ತಿಸಿ ಬರೆಯಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ವಿದ್ಯಾರ್ಥಿಗಳ ಗುಂಪನ್ನುರಚಿಸುವುದು. ನಾಟಕ ಕೃತಿಯನ್ನು ಅವರಿಗೆ ಒದಗಿಸುವುದು. ಅಧ್ಯಾಪಕರು ಆ ನಾಟಕದ ಕಥಾಭಾಗವನ್ನು ಸಂಕ್ಷಿಪ್ತವಾಗಿ ಮಾಡುವುದು. ವಿದ್ಯಾರ್ಥಿಗಳು ಬರೆದ ಅನುವಾದ ಬರಹವನ್ನು ಅಧ್ಯಾಪಕರು ಗಮನಿಸಿ ಅಗತ್ಯವಾದ ತಿದ್ದುಪಡಿಯನ್ನು, ಹೊಸಗನ್ನಡ ಗದ್ಯಾನುವಾದವನ್ನು ಸರದಿ ಪ್ರಕಾರ ಪ್ರತ್ಯೇಕ ಪ್ರತ್ಯೇಕವಾಗಿ ಸ್ವರಭಾರದೊಂದಿಗೆ ಓದಲಿ.

## ಹಳೆಗನ್ನಡ ಭಾಗ

### ಮೇಳ ನಾಯಕನ್

ಅಱಿಲ, ಮಗು, ಭಾರ್ಗವೀ, ಕೇಳ ಬಾ ವಾರ್ತೆಯನ್
ಶಾಂತಿ ಎಂಬುದು ನಮಗೆ ಇಲ್ಲೆಂದು ತೋಱುಗುಂ

### ಭಾರ್ಗವಿ

ಏಕಣ್ಣ, ಕೆಳರಿಪಿರ್, ಇದೆ ತಾನೆ ಮೇಲೆ ಮೇ
ಲೊತ್ತಿ ಬರ್ಪಱಿಲಿಂದೆ ಬಿಡುತೆಗೊಂಡಿರ್ದಳನ್?

**ಮೇಳನಾಯಕನ್**

ಈತನ್ ಅಶ್ವತ್ಥಾಮನ್ ಕುಱಿತು ವಾರ್ತೆಯನ್
ಕೆಟ್ಟಟುದನ್ ತಂದೆಮ್ಮ ಪೊಡೆಗೆ ಕಿರ್ಚಿಕ್ಕಿದನ್,

**ಭಾರ್ಗವಿ**

ಏನಪ್ಪ, ಮುೞುಗಿಪೋದೆವೊ ನಾಮ್? ಅದೇನ್, ಅಱಿಪು
ದೂತನ್ ಪೊಱಗವನ್ ಪೋಗಿರ್ದೊಡುೞ್ವಿ ನಚ್ಚುಗೆ ಇಲ್ಲ.

**ಭಾರ್ಗವಿ**

ಪೋದನೇ? ಏಕಿಂತು ನುಡಿವಯ್

**ದೂತನ್**

ಏಕಲವ್ಯನ್ ಪೇೞ್ದಿನ್– ಒಳಗಿರ್ಕೆ ಬೀಡಿನೊಳ್;
ಪೊಱಗೆ ತಾನೊರ್ವನೇ ಪೋಗಲಾಗದು ಎಂದು,

**ಭಾರ್ಗವಿ**

ಅವನೆಲ್ಲಿ ಏಕಲವ್ಯನ್? ಇಂತೇಕೆ ಪೇೞ್ವಿನ್?

**ದೂತನ್**

ಬರುತಿರ್ಪನ್. ಈ ಪಗಲ್ ಪೊಱಗೆ ಸುಳಿಯಲ್ ಸಾವು
ನಮ್ಮ ವೀರಂಗೆಂದು ತಾನಾತನ್ ಒಣರ್ದಪನ್

**ಭಾರ್ಗವಿ**

ಆಹ, ಇದು ನಿಶ್ಚಯಮೆ? ಆರ್ ಅವಂಗ ಱಿಪಿದರ್?

**ದೂತನ್**

ದಿವ್ಯಜ್ಞಾನಿ, ಕೃಷ್ಣನ್, ಉಱಿವು ಅಱಿವಿಂದೆಂದು

**ಭಾರ್ಗವಿ**

ಕಾಪಾಡಿಂ, ಓ ಕೆಳೆಯಿರ್! ಬೀೞ್ವ ಸಿಡಿಲ್ ತಪ್ಪಿಸಿ!
ಇತ್ತಲ್ ಓಡಿಂ ಕೆಲರ್, ತರಲ್ ಏಕಲವ್ಯನನ್
ಮೂಡಲ್ ಕೆಲಂಬರ್– ಪಡುವಲ್ ಕೆಲಂಬರ್
ಅಱಸಿಮ್ ಆತನ ಪಜ್ಜೆ ಪೋದ ಪಾೞ್ ಪೊಲಂಗಳಂ
ತಿಳಿದೆನ್ ಈಗಳ್–ಪುಸಿದು, ನಂಬಿಸಿ, ಕಟಿಲ್ಚಿದನ್
ಪಮಿಯೊಲ್ಮೆಯನ್ ಬಿಸುಟನ್. ಅಯ್ಯೊ, ಮಗು ಏವೆನ್?
ಕುಳ್ಳಿರಲ್ಕಾಗದು. ಆದನಿತು ಬೆನ್ನೊಳೆ ಬರ್ಪೆನ್
ನಿಲ್ಲದಿರಿಂ, ಅಣ್ಣಂದಿರ್ ಓಡಿಂ, ತಡೆಯೆ ಪೊೞ್ತಿಲ್ಲು, ಓ ನಲ್ಲಿರ್(ಪೋಪರ್)
ಪಿಡಿಯಲ್ಕೆವೇೞ್ಕುಮೇ ಸಾಯಲ್ ಓಡುವನನ್!

(ಕುರುಕ್ಷೇತ್ರದ ಬೇಱೊಂದೆಡೆ ಕಾಡು)

**ಅಶ್ವತ್ಥಾಮನ್**

ನಿಶ್ಚಲಂ ನಿಂದುದೀ ಕಟುಕನ್, ನಂಬತಕ್ಕುದು–ಮಗುೞ್ದಿ ಕೊಲ್ಗು
ನ್ಯಾಯಮೇ, ಪೊೞ್ತಿರಲ್ ನೆನೆಯಲ್ಕೇ ಮೊದಲೆ ಇದು ಆ ಶತ್ರುವಿನ್
ಅಭಿಮನ್ಯು, ಎನ್ನ ಕಱುಬಾದವನ್, ಸಮಯುದ್ಧದೊಳ್ ಮೆಚ್ಚುಗೊಟ್ಟ
ಕೊಡುಗೆ ತಾನ್; ಪೆಱನಾಡ ನೆಲದಲ್ಲಿ ನಾಂಟಿರ್ಕುಂ; ಪೊಸೆತು ಮಸೆದಿಗಳ್
ಮೊನೆಗೊಂಡ ಕೂರ್ಪಿನದು; ನೋಡಿ ನಟ್ಟೆನ್ ನಾನೆ, ಒಡನೆ ಸಾವೀಯಲ್
ಸಿದ್ಧಮ್ ಆಮ್ ಇರ್ವರು. ಓ ರುದ್ರ–ಪ್ರಾರ್ಥಿಪುದು ಸಾವರ್ಗೆಧರ್ಮಂ

ಎನಗೊಳ್ಳೆಯವನಾಗು. ದೊಡ್ಡ ವರಮಲ್ತು ನಾನ್ ಬೇಡುವುದು ನಿನ್ನನ್
ಈ ಬಾಳಮೇಲ್ ಬಿೞ್ದಿ ನೆತ್ತರನ್ ಬಸಿವನನ್, ಬಂದು ಮೊದಲ್ ಎತ್ತಲ್
ಏಕಲವ್ಯಂಗಲುಪೆ, ಅಟ್ಟು ಆರಾನುಮನ್; ಇದೊಂದು ಕೃಪೆದೋಱು
ಓ ಅಗ್ನಿ, ಕಱಿವೆನ್ ಆನ್, ಪಿತೃಲೋಕಕುಯ್ವೆ ನೀನ್, ಸುಖನಿದ್ರೆಗೊಳಿಸು

ಅಳ್ಕದೆಯೆ ನೆನೆದೆನ್ನ ಕರುಳ್ಗಳೊಳ್ ಖಡ್ಗಮ್ ಇಱಿದೊಡನೆ– ಮೆಯ್ದಡವಿ.

ನಿಮ್ಮುವನ್ ಕೂಗುವೆನ್, ಓ ಉಗ್ರಕನ್ನಿಕೆಯರ್, ಎಂದೆಂದು ಇರ್ಪಿರ್,

ಎಂದೆಂದು ಆಳ್ಗಳನ್ಯಾಯಮನ್, ರೋಷಮನ್ ನೋಡುತುಮೆ ಇರ್ಪಿರ್,

ಬಿಡದೆ ಬೆನ್ನೊಳೆ ಬಂದು, ಓ ಘೋರಮೂರ್ತಿಗಳ್, ಕಾಡುತಮೆ ಇರ್ಪಿರ್,

ಇದೊ ನೋಡಿಮ್ ಓರೊರ್ವರ್ ಎಂತು ನಾಮ್ ಘಾತುಕರ ತಂತ್ರಕ್ಕೆ ತೊಡಕಿ

ಕೈಗುಂದಿ ಬಿೞ್ದಿಪೆವು; ನಾನೆ ಕೊಳೆ! ಪಿಳ್ಳೆ ಪೆಸರಿಲ್ಲಾಯ್ತೆ ಕೌರವಕುಲಶ್ರೀ!

ಬಿಡಬೇಡ, ಬಿಡಬೇಡ–ಬೆನ್ನಮರ್ದು ಗಿಡಿಯಿಮ್ ಅವರ್ಗರವರ ಕರ್ಮ

ಬನ್ನಿಮ್, ಏಱಿ, ಕ್ರೂರಮಾತೆಯರ ರೌದ್ರಿಯರ, ಕಟ್ಟುಗ್ರಮ್ ಎಱಗಿಂ,

ತೀರಿಸಿ ನಿಮ್ಮ ಕೋಪಂಗಳನ್ ಪಾಂಡವರ ನೆನೆಯೊಳಗೊಂದು ಱಿಯಗುಡದೆ!

ನೀನುಂ ಪಿರಣ್ಯರಥಮನ್ ಕೊಂಡು  ಗಗನದೆತ್ತಿರಮರ್ವ ಓ ಸೂರ್ಯದೇವ,

ಎಮ್ಮ ಪಿರಿಯರ ನಾಡ ಮೇಲ್ನಿಂದು, ಮಲಯಗಿರಿಯೊಳ್ ಕುದುರೆಯೆ ಱಿದು,

ಪೇೞಿ, ಎನ್ನಿರ್ಕಡೆಯ ಬಳಕ್ಕೆ, ಎಳವೆಯೊಳಗೆನ್ನನ್ ಒಲ್ದರ್ಗೆ,

ಈ ಎನ್ನೞಿಲ್ಗಳನ್, ಪೆರ್ಮೆಬಗೆ ಸಾವನ್ ಆಹ, ಏನೊರಲ್ವರ್

ಕೇಳ್ದೊರ್ ಈ ಕಥೆಯನ್! ಊರೇ ಮೊೞಂಗದೇ ಗೋಳಾಟಮಿಟ್ಟು!

ಸಾಲ್ಗುಂ, ಸಾಲ್ಗುಮ್ ಈ ಕನಿಕರಂ ಕೆಲಸಂ ಕೆಲಸಂ!

ಮೃತ್ಯು, ಓ ಮೃತ್ಯು, ನೀನ್ ಬಾರ, ಬಾರಾ! ಇರಿರ್ ನಾನೆ ಬರ್ಪೆನ್

ನಿನ್ನ ಮರ್ಬಿನ ಮನೆಗೆ ಬಿರ್ದು. ನೀಮ್ ಎಲ್ಲಿ ಇನ್ನೆನಗೆ ಓ ಪೊಳೆವ ಪಗಲ

ಎಳೆ–ಬಿಸಿಲೆ! ತೇರೊಳ್ ಏಱಿದ ಪೊೞ್ತೆ! ಇದುವೆ ಕಡೆ, ಕಡೆಯ ನುಡಿ ನುಡಿವೆನ್

ಓ ಬೆಳಕೆ, ಓ ಪುಣ್ಯಭೂಮಿಯೆ, ಕನ್ನಡಮೇ ಎನ್ನ ತಾಯ್ನಾಡೆ,

ನೆಲನ್ ಅಱಿವ ಬನವಾಸಿ, ತೆಂಗುಗೞ ಕೊಡೆಯಿರ್ಪ  ಕಡೞಲಿಯ ಮನೆಯೇ

ಒಡನಾಡಿ ಪಸುಗಳೆ, ಕೆಱೆಗಳೆ, ಪೊನಲ್ಗಳೆ, ಓ ಪಸುರ ಬಯಲೆ,

ಬೀಳ್ಕೊಡಿಂ, ಬೀಳ್ಕೊಡಿಂ, ಎನಗೆ ಜೀವಾನಂದಮ್ ಆಗಿರ್ದರ್ ಎಲ್ಲರ್

ಬೀಳ್ಕೊಡಿಂ, ಬೀಳ್ಕೊಡಿಂ, ಎನಗೆ ಜೀವಾನಂದಮ್ ಆಗಿರ್ದರ್ ಎಲ್ಲರ್

ಬೀಲ್ಕೊಡಿಂ, ಪೋಗಿಬರ್ಪೆನ್, ಇದೆ ಕಡೆಯ ಮಾತೆನತು, ನಾನ್ ಪೋಗಿ ಬರ್ಪೆನ್

ಮುಂದಣದು ಕೞಿದವರ ಕೂಟದೊಳ್–ಭಾರತದ ಸಂದಸಿಂಹಗಳ್,

ಕೌರವ ಸ್ವಾಮಿಗಳ್, ಕರ್ಣನೊಳ್, ಭೀಷ್ಮರೊಳ್, ತಂದೆ ಆ ಗುರುವೊಳ್ (ಖಡ್ಗದ ಮೇಲೆ ಬೀಳ್ವನ್)

## ಗದ್ಯಾನುವಾದ

ದುಃಖದ ಮಗುವಾದ ಮೇಳದ ನಾಯಕ ಭಾರ್ಗವಿಯೇ ಈ ವಾರ್ತೆಯನ್ನು ಕೇಳು ಬಾ. ಶಾಂತಿ ಎಂಬುದು ನಮಗೆ ಇಲ್ಲವೆಂದೇ ತೋರುತ್ತಿದೆ

**ಭಾರ್ಗವಿ**

ಯಾಕಣ್ಣ, ಕೆರಳಿಸುತ್ತಿರುವಿ? ಇಷ್ಟರ ತನಕದ ಮೇಲೆ ಮೇಲೆ
ಒತ್ತಿ ಬರುವ ದುಃಖದಿಂದ ಬಿಡುಗಡೆ ಗೊಂಡವಳನ್ನು! ಮೇಳನಾಯಕ
ಈತ ಅಶ್ವತ್ಥಾಮನ ಕುರಿತಾದ ಕೆಟ್ಟ ವಾರ್ತೆಯೊಂದನ್ನು
ತಂದು ನಮ್ಮ ಹೊಟ್ಟೆಗೆ ಕಿಚ್ಚಿಕ್ಕಿದ್ದಾನೆ

**ಭಾರ್ಗವಿ**

ಏನಪ್ಪ, ನಾವು ಮುಳುಗಿಹೋದೆವೋ? ಅದೇನೆಂದು ಹೇಳು.

**ದೂತ**

ಏಕಲವ್ಯನು ಹೇಳಿದನು ಅವನನ್ನು ಮನೆಯೊಳಗೆ ಇರಲು
ಅವನೊಬ್ಬನೇ ಹೊರಗೆ ಹೋಗಬಾರದೆಂದು

**ಭಾರ್ಗವಿ**

ಏಕಲವ್ಯನು ಎಲ್ಲಿದ್ದಾನೆ? ಹೀಗೇಕೆ ಹೇಳಿದನು?

**ದೂತ**

ಬರುತ್ತಿದ್ದಾನೆ. ಈ ಹಗಲು ಹೊರಗೆ ಹೋದರೆ
ನಮ್ಮ ವೀರನಿಗೆ ಸಾವು ಸಂಭವಿಸುವುದೆಂದು ಅವನು ಎಚ್ಚರಿಸುತ್ತಿದ್ದಾನೆ.

**ಭಾರ್ಗವಿ**

ಆಹ, ಇದು ನಿಜವೇ? ಅದನ್ನು ಯಾರು ಅವನಿಗೆ ಹೇಳಿದರು?

**ದೂತ**

ದಿವ್ಯಜ್ಞಾನಿ, ಶ್ರೀಕೃಷ್ಣ, ಅಳಿವು ಉಳಿವು ಇಂದೇ ನಡೆವುದೆಂದು

**ಭಾರ್ಗವಿ**

ಕಾಪಾಡಿ, ಓ ಗೆಳೆಯರೆ! ಅಪ್ಪಳಿಸಲಿರುವ ಸಿಡಿಲನ್ನು ತಪ್ಪಿಸಿರಿ. ಈ ಕಡೆಯಿಂದ ಕೆಲವರು ಹೋಗಿ, ಏಕಲವ್ಯನನ್ನು ಕರೆತರಲು ಮೂಡಿ ದಿಕ್ಕಿಗೆ ಕೆಲವರು–ಪಡುದಿಕ್ಕಿಗೆ ಕೆಲವರು ಹೋಗಿರಿ. ಹಾಳು ಹೊಲಗಳಲ್ಲಿ ಆತನ ಹೆಜ್ಜೆ ಗುರುತುಗಳನ್ನು ಹುಡುಕಿರಿ.

ಈಗ ಅರಿತೆನು–ಸುಳ್ಳು ಹೇಳಿ, ನಂಬಿಸಿ, ಜಾರಿಕೊಂಡನು. ಹಳೆಯ ಸ್ನೇಹವನ್ನು ಬಿಟ್ಟನು. ಅಯ್ಯೋ ಮಗು ಏನು ಮಾಡಲಿ? ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದಷ್ಟು ಬೆನ್ನ ಹಿಂದೆಯೇ ಬರುವೆನು. ನಿಲ್ಲದಿರಿ, ಅಣ್ಣಂದಿರೇ ಓಡಿರಿ, ತಡ ಮಾಡಲು ಹೊತ್ತಲ್ಲ, ಓ ಗೆಳೆಯರೆ, ಸಾಯಲು ಹೋಗುವವನನ್ನು ತಡೆಯಲೇ ಬೇಕು.

ಹೋಗುವರು.

(ಕುರುಕ್ಷೇತ್ರದ ಮತ್ತೊಂದು ಸ್ಥಳ–ಕಾಡು)

## ಅಶ್ವತ್ಥಾಮ

ಈ ಕಟುಕ (ಖಡ್ಗ) ಸ್ತಬ್ದನಾಗಿ ನಿಂತಿದ್ದಾನೆ, ನಂಬಬಹುದು–ಪುನಃ ಕೊಂದೀತು. ನ್ಯಾಯವೇ ಸಮಯವಿದ್ದಾಗ ನೆನಪಿಸಲು ಮೊದಲೆ ಇದು ಶತ್ರುವಾದರೂ ಮಿತ್ರನಾಗಿರುವ, ನನ್ನ ಹೊಟ್ಟೆ ಕಿಚ್ಚಾದವನೂ ಆದ ಅಭಿಮನ್ಯು ದ್ವಂದ್ವಯುದ್ಧದ ಸಮಯದಲ್ಲಿ ಮೆಚ್ಚುಗೆಯಾಗಿ ನನಗೆ ನೀಡಿದ ಖಡ್ಗ. ಇದು ಈಗ ಬೇರೊಂದು ನಾಡಿನ ನೆಲದಲ್ಲಿ ನಾಟಿದೆ. ಈಗ ತಾನೆ ಮಸೆದು ಹರಿತಗೊಂಡ ಮೊನೆಯುಳ್ಳದ್ದು.

ನಾನೆ ಇದನ್ನು ನಟ್ಟೆ. ಕೂಡಲೆ ಮರಣವನ್ನು ಕೊಡಲು ನಾವಿಬ್ಬರೂ ಸಿದ್ಧರಾಗಿದ್ದೇವೆ. ಓ ರುದ್ರ ಸಾಯುವವರಿಗಾಗಿ ಪ್ರಾರ್ಥಿಸುವುದು ಧರ್ಮ. ನನಗೆ ಒಳ್ಳೆಯವನಾಗು. ನಾನು ನಿನ್ನಲ್ಲಿ ದೊಡ್ಡ ವರವನ್ನೇನೂ ಬೇಡುವುದಿಲ್ಲ. ಈ ಖಡ್ಗದ ಮೇಲೆ ಬಿದ್ದು ರಕ್ತ ಹರಿಯುತ್ತಿರುವ ನನ್ನನ್ನು ಮೊದಲು ಎತ್ತಲು ಏಕಲವ್ಯನಿಗೆ ತಿಳಿಸುವುದಕ್ಕಾಗಿ ಯಾರನ್ನಾದರೂ ಕಳುಹಿಸು. ವೈರಿಗಳು ಮೊದಲು ಕಂಡದಾದರೆ ನಾಯಿ, ನರಿ, ಹಂದಿಗಳಿಗೆ ಆಹಾರವಾಗಿ ನನ್ನನ್ನು ಎಳೆದಾಡುವರು. ಈ ಒಂದು ಕೃಪೆ ಮಾಡು ಓ ಅಗ್ನಿ ನಿನ್ನನ್ನು ಕರೆಯುತ್ತಿದ್ದೇನೆ. ನೀನು ಪಿತೃ ಲೋಕಕ್ಕೆ ಒಯುತ್ತಿ. ಯಾವ ಅಳುಕು ಇಲ್ಲದೆ ಖಡ್ಗದ ಮೇಲೆ ಬಿದ್ದಾಗ ನನ್ನ ಕರುಳುಗಳಲ್ಲಿ ಇರಿದ ತಕ್ಷಣ ಮೈ ದಡವಿ ಸುಖನಿದ್ರೆಗೊಳಿಸು. ಓ ಉಗ್ರ ಕನ್ನಿಕೆಯರೇ ನೀವು ಎಂದೆಂದೂ ಇರುವವರು. ಮನುಷ್ಯರ ಅನ್ಯಾಯ, ರೋಷಗಳನ್ನು ಎಂದೆಂದೂ ನೋಡುತ್ತಲೇ ಇರುತ್ತೀರಿ. ಬಿಡದೆ ಅವರ ಬೆನ್ನ ಹಿಂದೇ ಬಂದು ಅವರನ್ನು ಕಾಡುತ್ತಲೇ ಇರುತ್ತೀರಿ. ಓ ಘೋರ ಮೂರ್ತಿಗಳೇ ನಿಮ್ಮನ್ನೂ ಕರೆಯುತ್ತಿದ್ದೇನೆ. ಇದೋ ನೋಡಿರಿ. ನಾವು ಒಬ್ಬೊಬ್ಬರು ಘಾತುಕರ ತಂತ್ರಗಳಿಗೆ ಸಿಲುಕಿ ಕೈ ಸೋತು ಬೀಳುತ್ತಿದ್ದೇವೆ! ನಾನೇ ಕೊನೆ. ಕೌರವ ಕುಲ ಹೇಳ ಹೆಸರಿಲ್ಲದಂತೆ ನಾಶವಾಯಿತೇ? ಬಿಡಬೇಡಿ ಬಿಡಬೇಡಿ ಅವರವರ ಕರ್ಮಗಳನ್ನು ಅವರವರ ಬೆನ್ನುಗಳಿಗೆ ಸರಿಯಾಗಿ ಜಡಿಯಿರಿ. ಬನ್ನಿ, ಏಳಿ ಓ ರುದ್ರ, ಕ್ರೂರ ಮಾತೆಯರೇ ನಿನ್ನ ಕೋಪಗಳಳನ್ನು ಪಾಂಡವರ ಸೇನೆಯಲ್ಲಿ ಯಾವೊಂದನ್ನೂ ಉಳಿಯಗೊಡದೆ ಹಾಗೆ ಕಟ್ಟುಗ್ರವಾಗಿ ಎರಗಿ ತೀರಿಸಿಕೊಳ್ಳಿ. ಓ ಸೂರ್ಯದೇವ ನೀನೂ ಚಿನ್ನದ ರಥವನ್ನೇರಿ ಗಗನದ ಎತ್ತರಕ್ಕೆ ಏರುತ್ತಿ. ನಿಮ್ಮ ಹಿರಿಯರ ನಾಡ ಮೇಲೆ ನಿಂತು ಮಲೆಯ ಗಿರಿಯ ಮೇಲೆಯೇ ನಿನ್ನ ಕುದುರೆಗಳನ್ನು ಎಳೆದು ನಿಲ್ಲಿಸಿ. ನನ್ನ ಎರಡು ಕಡೆಯಯ ಬಲಕ್ಕೂ, ಚಿಕ್ಕಂದಿನಲ್ಲಿ ನನ್ನನ್ನು ಒಲಿದವರಿಗೂ ಈ ನನ್ನ ದುಃಖವನ್ನೂ ಹಿರಿದಾದ ರೀತಿಯ ಸಾವನ್ನೂ ಹೇಳು. ಆಹಾ! ಈ ಕತೆಯನ್ನು ಕೇಳಿದವರು

ಏನೆಂದಾರೂ!? ಊರೇ ಗೋಳಾಡುತ್ತಾ ಮೊಳಗದಿದ್ದೀತೇ? ಸಾಕು ಸಾಕು ಈ ಕನಿಕರದ ಕೆಲಸ. ಸಾವೇ ನೀನು ಬಾ..., ಬಾ...! ಬೇಡ ಇರು ಬರಬೇಡ ನಾನೇ ಬರುತ್ತೇನೆ. ನಿನ್ನ ನೆಚ್ಚಿನ ಮನೆಗೆ ಅತಿಥಿಯಾಗಿ. ಓ ಹೊಳೆಯುವ ಹಗಲಿನ ಎಳೆ ಬಿಸಿಲೇ! ನೀನು ನನಗೆ ಇನ್ನೆಲ್ಲಿ! ರಥದಲ್ಲಿ ಏರಿದ ಸೂರ್ಯನೆ! ಇದುವೆ ನನ್ನ ಕೊನೆ, ಕೊನೆಯ ಮಾತುಗಳನ್ನು ಹೇಳುವೆ. ಓ ಬೆಳಕೆ, ಪುಣ್ಯ ಭೂಮಿಯೆ, ಕನ್ನಡವೇ, ನನ್ನ ತಾಯ್ನಾಡೇ ವಿಶ್ವವಿಖ್ಯಾತವಾದ ಬನವಾಸಿಯೇ ತೆಂಗಿನ ಗರಿಯು ಕೊಡೆಯಾಗಿರುವ ಕಡಲ ಮೊರೆತವು ಕೇಳುವ ನನ್ನ ಮನೆಯೇ, ನನ್ನ ಒಡನಾಟದ ಹಸುಗಳೇ, ಕೆರೆಗಲೇ, ತೊರೆಗಳೇ, ಓ ಹಸಿರು ಬಯಲೇ ಬೀಳ್ಕೊಡಿ, ಬೀಳ್ಕೊಡಿ ಹೋಗಿ ಬರುವೆನು, ಇದೇ ನನ್ನ ಕೊನೆಯ ಮಾತು. ನಾನು ಹೋಗಿ ಬರುವೆನು. ಮುಂದಿನ ಮಾತು ಸತ್ತು ಹೋದವರ ಊಟದಲ್ಲಿ (ಅವರ ಜತೆಯಲ್ಲಿ) – ಭಾರತ ವರ್ಷದ ಸಂದು ಹೋದ ಸಿಂಹಗಳಾಗಿದ್ದು ನನ್ನ ಒಡೆಯ ದುರ್ಯೋಧನ ಜೊತೆ, ಕರ್ಣನ ಜೊತೆ, ಭೀಷ್ಮರ ಜೊತೆ, ತಂದೆಯಾದ ಆ ಗುರುವಿನ ಜೊತೆ.

(ಖಡ್ಗದ ಮೇಲೆ ಬೀಳುವನು)

### ಪರಿಚಯ ಲೇಖನ

ಭಾರತೀಯ ಹಾಗೂ ಪಾಶ್ಚಾತ್ಯ ಭಾಷೆಗಳಿಂದ ನಾಟಕಗಳು ಕನ್ನಡಕ್ಕೆ ಭಾಷಾಂತರಗೊಂಡಿವೆ. ನಮ್ಮ ಸಹೋದರ ಭಾಷೆಯಾಗಿರುವ ಮಲಯಾಳದಿಂದ ಕನ್ನಡಕ್ಕೆ ಭಾಷಾಂತರಗೊಂಡ ನಾಟಕ ಕೃತಿಗಳ ಕುರಿತಾದ ಮಾಹಿತಿಯನ್ನೊಳಗೊಂಡ ಪರಿಚಯಲೇಖನವನ್ನು ವಿದ್ಯಾರ್ಥಿಗಳು ಬರೆಯಲಿ. ಲೇಖನವನ್ನು ಭಿತ್ತಿಪತ್ರಿಕೆಯಲ್ಲಿ ಅಥವಾ ಹಸ್ತ ಪತ್ರಿಕೆಯಲ್ಲಿ ಪ್ರಕಟಿಸಲಿ.

**ಭಾಷಾಂತರಗೊಂಡ ಕೆಲವು ನಾಟಕಗಳು :**

| | |
|---|---|
| ಕನ್ನಿಕಾ (ಕನ್ನಿಕೆ) | – ಎನ್. ಕೃಷ್ಣ ಪಿಳ್ಳೆ |
| ಅವನ್‌ವೀಡುಂ ವರುನ್ನು (ಅವನು ಮರಳಿ ಬರುತ್ತಾನೆ) | – ಸಿ.ಜೆ. ಥೋಮಸ್ |
| ಇದು ಭೂಮಿಯಾಣ್ (ಇದು ಭೂಮಿ) | – ಕೆ.ಟಿ. ಮುಹಮ್ಮದ್ |
| | ಈ ಮೂರು ಕೃತಿಗಳ ಅನುವಾದ : ವೆಂಕಟರಾಜ ಪುಣಿಂಚತ್ತಾಯ |
| ನೆಲ್ಮಣಿಗಳ್ (ಭತ್ತದ ಕಾಳುಗಳು) | – ಪಿ.ಎ.ಎನ್. ಹನೀಫಾ ಅನುವಾದ: ನಾ. ದಾಮೋದರ ಶೆಟ್ಟಿ |

# ಮಂಥರಾ

## ಪ್ರವೇಶ

ಕನ್ನಡ ನಾಟಕಗಳ ಕುರಿತು ವಿದ್ಯಾರ್ಥಿಗಳು ಈಗಾಗಲೇ ತಿಳಿದಿದ್ದಾರೆ. ಆಧುನಿಕ ಕಾಲದಲ್ಲಿ ಪೌರಾಣಿಕ, ಐತಿಹಾಸಿಕ, ಜಾನಪದ ವಸ್ತುಗಳನ್ನು ಆರಿಸಿ ಸಮಕಾಲೀನ ಸಂವೇದನೆಯೊಂದಿಗೆ ನಾಟಕಗಳನ್ನು ರಚಿಸಿರುವ ಗಿರೀಶ್ ಕಾರ್ನಾಡ್, ಕಂಬಾರ ಮೊದಲಾದವರ ಪರಿಚಯವೂ ಅವರಿಗಿದೆ. ಅಂತಹ ನಾಟಕವನ್ನು ಅವರು ನೋಡಿದ್ದರೆ/ ಓದಿದ್ದರೆ ಆ ಕುರಿತು ಸಂಕ್ಷಿಪ್ತವಾಗಿ ಹೇಳಲಿ. ರಾಮಾಯಣದಲ್ಲಿ ಬರುವ ಮಂಥರೆಯ ಬಗ್ಗೆ ತಿಳಿದಿರುವ ವಿದ್ಯಾರ್ಥಿಗಳು ಅದನ್ನು ಹೇಳಲಿ. 'ಮಂಥರಾ' ನಾಟಕದಲ್ಲೂ ಅದನ್ನು ಕಾಣಬಹುದು ಎಂಬುವುದಾಗಿ ಅಧ್ಯಾಪಕರು ತಿಳಿಸುವುದು. ಬಳಿಕ ಮಂಥರಾ ನಾಟಕದ ಕಿರುಪರಿಚಯವನ್ನು ನೀಡಬಹುದು.

## ನಾಟಕಕಾರರ ಪರಿಚಯ

ನಾಟಕಕಾರರ ಕಿರುಪರಿಚಯವನ್ನು ಅಧ್ಯಾಪಕರು ನೀಡುವುದು.

ನವ್ಯೋತ್ತರ ಪೀಳಿಗೆಯ ಪ್ರಮುಖ ಕವಿಯಾದ ಎಚ್.ಎಸ್. ವೆಂಕಟೇಶಮೂರ್ತಿಯವರು ಕನ್ನಡ ಸಾಹಿತ್ಯದ ಇತರ ಪ್ರಕಾರಗಳಲ್ಲಿಯೂ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಇವರು ಹಲವಾರು ನಾಟಕಗಳನ್ನೂ ರಚಿಸಿದ್ದು ಅವುಗಳು ಕೂಡ ಇವರ ಕಾವ್ಯಗಳ ಎತ್ತರಕ್ಕೇ ತಲುಪಿವೆ.

ಸೂಕ್ತವಾದ ವಸ್ತು, ಕಾವ್ಯ ಸತ್ವದಿಂದ ಕೂಡಿದ ಭಾಷೆ, ಸಹಜ ನಿರೂಪಣ ತಂತ್ರ – ಇವುಗಳ ಕಲಾತ್ಮಕ ಸಂಯೋಜನೆಗಳಿಂದಾಗಿ ಇವರ ಹೆಚ್ಚಿನ ನಾಟಕಗಳು ಮೇಲ್ಮಟ್ಟದಲ್ಲಿ ನಿಲ್ಲುತ್ತವೆ. ಮಂಥರೆಯಂತಹ ಪುರಾಣ ಪ್ರಸಿದ್ಧ ವ್ಯಕ್ತಿಗಳ ಅಂತರಂಗವನ್ನು ಶೋಧಿಸುವ ಪ್ರಕ್ರಿಯೆಯಲ್ಲಿ ಅಲ್ಲಿನ ವಸ್ತುವಿನಲ್ಲಿಯ ನಾಟಕೀಯ ಉತ್ಕಟತೆಯನ್ನು ಕಾವ್ಯಕ್ಕೆ ಬಗ್ಗಿಸಿಕೊಳ್ಳುವ ತಂತ್ರಕೌಶಲ ಇವರಿಗೆ ಸಿದ್ಧಿಸಿದೆ.

## ನಾಟಕದ ಓದು

ವಿದ್ಯಾರ್ಥಿಗಳಿಂದ ನಾಟಕವನ್ನು ಓದಿಸುವುದು. ಪಾತ್ರಗಳ ಭಾವನೆಗೆ ಅನುಗುಣವಾಗಿ, ಸ್ವರಭಾರದೊಂದಿಗೆ ಅವರು ಓದಲಿ. ಅಧ್ಯಾಪಕರು ಸೂಕ್ತ ಮಾರ್ಗದರ್ಶನ ನೀಡುವುದು.

## ನಾಟಕದ ಅಭಿನಯ

ಈ ನಾಟಕವನ್ನು ಪ್ರತಿಯೊಬ್ಬರೂ ಓದಿರುವುದರಿಂದ, ಕೇಳಿರುವುದರಿಂದ ಅದರ ಕತೆಯ ಸಾಮಾನ್ಯ ಪರಿಚಯ ವಿದ್ಯಾರ್ಥಿಗಳಿಗೆ ಆಗಿರಬಹುದು. ಬಳಿಕ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ನಾಟಕದ ಒಂದೊಂದು ದೃಶ್ಯವನ್ನು ನೀಡಿ ಅದನ್ನು ಅಭಿನಯಿಸಲು ಸಿದ್ಧತೆ ಮಾಡುವಂತೆ ಸೂಚಿಸಬಹುದು. ಅದಕ್ಕೆ ಅಗತ್ಯವಾದ ಸಮಯಮನ್ನು ಅವರಿಗೆ ನೀಡಬೇಕು. ವಿದ್ಯಾರ್ಥಿಗಳು ಬೇಕಾದ ಸಿದ್ಧತೆಯನ್ನು ಮಾಡಿ ನಾಟಕವನ್ನು ತರಗತಿಯಲ್ಲಿ ಅಭಿನಯಿಸಲಿ. ಅಧ್ಯಾಪಕರು ಅವರಿಗೆ ಬೇಕಾದ ಸಹಕಾರ ನೀಡುವುದು. ಮೆಚ್ಚುಗೆಯನ್ನು ಸೂಚಿಸುವುದು.

## ಗಾದೆಮಾತುಗಳ ವಿಸ್ತರಣೆ

ನಾಟಕದಲ್ಲಿ ಕೆಲವು ಗಾದೆಮಾತುಗಳು ಸಂದರ್ಭಾನುಸಾರವಾಗಿ ಬಂದಿವೆ. ಅವುಗಳನ್ನು ವಿದ್ಯಾರ್ಥಿಗಳು ಗುರುತಿಸಿ ವಿವರಿಸಲಿ.

- ಬೆಳ್ಳಗಿರುವುದೆಲ್ಲ ಬೆಳ್ದಿಂಗಳಲ್ಲ
- ಗಂಡ ಹೆಂಡಿರ ಜಗಳದಾಗ ಕೂಸು ಬಡವಾತು
- ದೀಪದ ಹಿಂದೆ ನೆಳ್ಳೂ ಹೋಗೋ ಹಾಂಗ, ಇತ್ಯಾದಿ

ಅಗತ್ಯವಿದ್ದಲ್ಲಿ ಅಧ್ಯಾಪಕರು ಸ್ಪಷ್ಟಪಡಿಸುವುದು.

## ಅರ್ಥಗರ್ಭಿತ ಅನುಭವಜನ್ಯ ಮಾತುಗಳು

ನಾಟಕಕ್ಕೆ ಹೊಂದಿಕೆಯಾಗುವ ಹಲವು ಅರ್ಥಗರ್ಭಿತವಾದ ಮಾತುಗಳನ್ನು ವಿದ್ಯಾರ್ಥಿಗಳು ಗಮನಿಸಿರಬಹುದು. ಅವುಗಳನ್ನು ಪಟ್ಟಿ ಮಾಡಲು ಹೇಳುವುದು. ಬಳಿಕ ಅವುಗಳನ್ನು ವಿವರಿಸಲು ಸೂಚಿಸುವುದು. ಅಧ್ಯಾಪಕರು ಸಹಕರಿಸುವುದು. ನಾಟಕದಲ್ಲಿನ ಸಂದರ್ಭಕ್ಕೆ ಅವುಗಳು ಹೇಗೆ ಸೂಕ್ತವಾಗುತ್ತವೆಯೆಂದೂ ಅವರು ವಿವರಿಸಲಿ.

- ಮೈ ಸೊಟ್ಟ ಇದ್ದರೆ, ಮಾತು ಸೊಟ್ಟ ಆಗಬೇಕೇನು?
- ಬಿಲ್ಲು ಬಗ್ಗದೆ ಬಾಣ ಹಾರೋಣಿಲ್ಲ.
- ಮೋಡ ಒಡೀದೆ ಮಳೆ ಹೆಂಗೆ ಬಂದಾವು?
- ಮೊಟ್ಟೆ ಒಡೀದೆ ಮರಿ ಹೆಂಗೆ ಬಂದಾವು?
- ಉಳೀ ಹೊಡೆತಾ ತಿನದೆ ಕಲ್ಲಿಗೆ ಕುಸುರು ಬಂದೀತಾ?
- ಕಣ್ಣಿಗೆ ಎಣ್ಣೆ ಬಿಟ್ಟ ಕಂಡು ಕಾಯುತ ಕುಂತೀವಿ ನಾವು.
- ಒಂದೇ ಏಟಿಗೆ ಹಕ್ಕೀನೂ ಬಿತ್ತೂ... ಹಣ್ಣೂ ಬಿತ್ತೂ...
- ಬಾವೀ ನೀರ ಕಲಕಲಿಕ್ಕೆ ಸಣ್ಣದೊಂದು ಕಲ್ಲು ಸಾಕಾದೀತು.

ಕಡಲ ಕಲಕೋದಕ್ಕೆ ಕಲ್ಲು ಗುಡ್ಡಾನಾ ಬೇಕಾದೀತು. ಇತ್ಯಾದಿ

## ದ್ವಿರುಕ್ತಿ

ನಾಟಕದಲ್ಲಿ ಬಂದಿರುವ ದ್ವಿರುಕ್ತಿ ಪದಗಳನ್ನು ಪಟ್ಟಿ ಮಾಡಲು ವಿದ್ಯಾರ್ಥಿಗಳಿಗೆ ಸೂಚಿಸುವುದು. ಅವರು ಪಟ್ಟಿ ಮಾಡಲಿ. ಹೇಳಲಿ.

| | |
|---|---|
| ಕುಣಿತ–ಭಣಿತ | ಚಿಲಿ ಚಿಲಿ |
| ನೋಡಿ ನೋಡಿ | ರಿಪಿ ರಿಪಿ |
| ಕುಣಿ ಕುಣಿ | ದಸ ದಸ |
| ಎದಿ ಎದಿ | ಪಿಸ ಪಿಸ |
| ಥಳ ಥಳ | ಮಿರಿ ಮಿರಿ |
| ಭಾಳ ಭಾಳ | ಚುರು ಚುರು |

### ಸಂಕ್ಷೇಪಿಸಿ ಬರೆಯುವುದು

ನಾಟಕವನ್ನು ಓದಿ, ಅಭಿನಯಿಸಿದ ವಿದ್ಯಾರ್ಥಿಗಳಿಗೆ ನಾಟಕದ ಕಥೆ ಸಾಮಾನ್ಯ ಸ್ಪಷ್ಟವಾಗಿರಬಹುದು. ಅದನ್ನು ಅವರು ಸಂಕ್ಷೇಪಿಸಿ ಬರೆಯಲಿ. ಬರೆದ ಕಥೆಯನ್ನು ಕೆಲವು ಮಂದಿ ತರಗತಿಯಲ್ಲಿ ಓದಲಿ. ತಿದ್ದುಪಡಿ ಅಗತ್ಯವಿದ್ದಲ್ಲಿ ಅಧ್ಯಾಪಕರು ಸೂಚಿಸುವುದು.

### ವಿಮರ್ಶಾ ಲೇಖನ

ವಿವಿಧ ಪ್ರಕಾರದ ನಾಟಕಗಳನ್ನು ವಿದ್ಯಾರ್ಥಿಗಳು ನೋಡಿರಬಹುದು. ಅವುಗಳ ಕುರಿತು ಅವರದೇ ಆದ ಅಭಿಪ್ರಾಯವನ್ನು ಹೊಂದಿರಬಹುದು. ಅವುಗಳನ್ನು ವಿಮರ್ಶೆಯ ರೂಪದಲ್ಲಿ ಬರೆಯಲಿ. ಮಾದರಿಯಾಗಿ ಅಧ್ಯಾಪಕರು ನಾಟಕವೊಂದರ ವಿಮರ್ಶಾ ಲೇಖನವನ್ನು ಓದುವುದು. ವಿದ್ಯಾರ್ಥಿಗಳು ಬರೆದ ವಿಮರ್ಶಾ ಲೇಖನಗಳಲ್ಲಿ ಕೆಲವನ್ನು ತರಗತಿಯಲ್ಲಿ ಓದಲಿ. ಎಲ್ಲ ಲೇಖನ ಮಾದರಿಗಳನ್ನೂ ಒಟ್ಟು ಕೂಡಿಸಿ ಗ್ರಂಥಾಲಯದಲ್ಲಿ ಇರಿಸಲಿ.

### ಮಾದರಿ

## ಎಂಭತ್ತರ ದಶಕದ ಬದುಕು

ಕೊಡವರ ನಡುವಣ ಪ್ರಬುದ್ಧ ರಂಗಕರ್ಮಿಗಳಾದ ಅಡ್ಡಂಡ ಕಾರ್ಯಪ್ಪ ಹಾಗೂ ಅವರ ಧರ್ಮಪತ್ನಿ ಅನಿತಾ ಕಾರ್ಯಪ್ಪ ಬೆಂಗಳೂರಿನಲ್ಲಿ ನೆಲೆಸಿ ತಿಂಗಳುಗಟ್ಟಲೆ ಅಭ್ಯಾಸ ಮಾಡಿ ಸಿದ್ಧಪಡಿಸಿದ ಬದ್‌ಕ್ ನಾಟಕದ ಮೂಲ. ತೆಲುಗಿನ ಶ್ರೀರಮಣರ ಸಣ್ಣಕತೆ (ಕನ್ನಡಕ್ಕೆ: ವಸುಧೇಂದ್ರ). ಅದನ್ನು ಕೊಡಗಿನ ಪರಿಸರ, ಬದುಕು ಹಾಗೂ ಸಂಸ್ಕೃತಿಗೆ ಹೊಂದಿಕೆಯಾಗುವಂತೆ ಕೊಡವ ಭಾಷೆಗೆ ಪರಿವರ್ತನೆ ಮಾಡಿ ರಂಗನಾಟಕವನ್ನಾಗಿಸಿದವರು ಅಡ್ಡಂಡ ಕಾರ್ಯಪ್ಪ.

ನಾಟಕ ಪ್ರಾರಂಭವಾಗುವುದೇ ಎಂಬತ್ತರ ಹರೆಯದ ಹೆಂಡತಿಯ ಅಡುಗೆ ಹಾಗೂ ಎಂಬತ್ತೂರರ ಹರೆಯದ ಗಂಡನ ನಸ್ಯ ಸಿದ್ಧಪಡಿಸುವಿಕೆಯಿಂದ. ಅನಿವಾರ್ಯವಾಗಿ ವೃದ್ಧ ಗಂಡ ಹೆಂಡತಿಯರು ಇಬ್ಬರೇ ಬದುಕಬೇಕಾಗಿ ಬಂದಾಗ ಪರಸ್ಪರ ನಗುತ್ತಾ ನಗಿಸುತ್ತಾ ಆಡುತ್ತಾ ಆಡಿಸುತ್ತಾ ಮಕ್ಕಳು, ಮೊಮ್ಮಕ್ಕಳು ಸನಿಹದಲ್ಲಿಲ್ಲದ ನೋವನ್ನು ಮರೆಯಲೆತ್ನಿಸುತ್ತಾರೆ. ಅದಕ್ಕಾಗಿ ವಿವಿಧ ದಾರಿಗಳನ್ನು ಹುಡುಕುತ್ತಿರುತ್ತಾರೆ. ತಾವು ಬೆಳೆಸಿದ ಗಿಡಮರಗಳಿಗೆ ತಮ್ಮ ಮಕ್ಕಳ ಹೆಸರನ್ನಿಟ್ಟು ಅವುಗಳ ಲಾಲನೆ ಮಾಡುವುದರ ಮೂಲಕ ಅವುಗಳಲ್ಲಿ ತಮ್ಮ ಮಕ್ಕಳನ್ನೇ ಕಂಡುಕೊಳ್ಳುತ್ತಾರೆ. ಹೀಗೆ ಖುಶಿಸಂಸಾರ ಸಾಗಿಸುವ ಚುಂಗಪ್ಪ ಮತ್ತು ತಂಗವ್ವರಿಗೆ ಹಾಲು ತರುವ ಹುಡುಗನ ಹೊರತು ಅನ್ಯರ ಸಂಪರ್ಕವಿಲ್ಲ. ಆದರೂ ಪ್ರತಿ ಕತ್ತಲೆ ಬೆಳಕಾಗಿ, ಬೆಳಕು ಕತ್ತಲೆಯಾಗಿ ಅವರ ಬದುಕು ತುಂಬ ಹರಡಿಕೊಳ್ಳುವುದು. ಅಂದರೆ ಸಿಟ್ಟು–ಸೆಡವು, ನಗು–ನಲಿವು, ಒಂದಕ್ಕೊಂದು ಓತಪ್ರೋತವಾಗಿ ಅವರ ಬದುಕನ್ನು ಹಸನಾಗಿಸುವ ನೈಜ ಪ್ರಕ್ರಿಯೆ ನಾಟಕ ತುಂಬ ಕಾಣಿಸಿಕೊಳ್ಳುವುದು. ನಡುವೆ ಇಬ್ಬರೂ ಬಡಾಯಿ ಕೊಚ್ಚತೊಡಗಿದರೆಂದರೆ ಅವರಿಬ್ಬರ ಹೊಟ್ಟೆಯ ಜೊತೆಗೆ ಪ್ರೇಕ್ಷಕರ ಹೊಟ್ಟೆಯೂ ತುಂಬುವುದು. ಒಮ್ಮೆಯಂತೂ ವಸ್ತುವೊಂದನ್ನು ಅಟ್ಟದಲ್ಲಿರಿಸುವುದಕ್ಕೆ ಗಂಡನನ್ನು ಏಣಿಯಿಟ್ಟು ಅಟ್ಟಕ್ಕೆ ಹತ್ತಿಸಿದ ಹೆಂಡತಿ ಆತ ಮೇಲಿದ್ದಂತೆ ಕೆಳಗಿನಿಂದ ಏಣಿ ಜಾರಿಸಿಬಿಡುತ್ತಾಳೆ. ಬಹಳ ಹೊತ್ತು ಮುದುಕ ಅಟ್ಟದ ಮೇಲೆಯೇ ಬಾಕಿ! ಹಾಗೆಂದು ಮುದುಕನಿಗೆ ತನ್ನ ಹೆಂಡತಿಯ ಮೇಲೆ ಸಿಟ್ಟಿಲ್ಲ. ಅಂಥ ಜಗಳಗಳನ್ನೆಲ್ಲ ತಮ್ಮ ಬದುಕಿನ ರಸವತ್ತಾದ ಘಟನೆಗಳಾಗಿ ಪರಿಭಾವಿಸುವುದು ಬಹುರೋಚಕ ಅಂಶ.

ಮರಗಿಡಗಳು, ಮನುಷ್ಯರಿಗಿಂತ ಯಾಕೆ ಶ್ರೇಷ್ಠ ಎಂಬುದನ್ನು ಈ ನಾಟಕ ಚಂಗಪ್ಪಜ್ಜನ ಆವೇಶದ ಮಾತಿನ ಮೂಲಕ

ಪ್ರಚುರ ಪಡಿಸುತ್ತದೆ. ಬೆಳಗ್ಗೆ ತೋಟಕ್ಕೆ ಪ್ರದಕ್ಷಿಣೆ ಬರುವುದು, ಮಧ್ಯಾಹ್ನ ಹೆಂಡತಿಯ ರುಚಿರುಚಿ ಕೈಯಡುಗೆಯನ್ನು ಹಂಚಿ ತಿನ್ನುವುದು, ಸಂಜೆಗೆ ಅಪ್ಪಚ್ಚು ಕವಿಯ ಕಾವ್ಯದ ಸಾಲುಗಳನ್ನು ಹೆಂಡತಿಗೆ ಓದಿ ಹೇಳುವುದು–ಹೀಗೆ ಸಾಗುತ್ತದೆ ಮುದುಕ – ಮುದುಕಿಯರ ದಿನಗಳು.

ಮಕ್ಕಳು ತಮ್ಮನ್ನು ವಿದೇಶಕ್ಕೆ ಕರೆದರೂ ಇವರು ಪರಸ್ಪರ ಬಿಟ್ಟು ಹೋಗುವ ಪ್ರಶ್ನೆಯೇ ಬಾರದು. ಹಾಗೆಂದೇ ತೋಟದ ಗಿಡಮರಗಳು ಅವರ ಮಕ್ಕಳಾದ ವಿಷ್ಣು ಶಂಕರು, ಕೃಷ್ಣ ಗಣೇಶ ಹಾಗೂ ಕಾವೇರಿಯರಾದದ್ದು. ನಿತ್ಯವೂ ಅವುಗಳ ಬಗ್ಗೆ ಮಾತನಾಡುತ್ತ ಆ ಮೂಲಕ ಬದುಕಿಗೆ ಅರ್ಥವನ್ನು ಕಂಡುಕೊಳ್ಳುವುದರ ಪರಿಯೇ ಭಿನ್ನ.

ಬಹು ಸಾಂಪ್ರದಾಯಿಕ ಮನೆ ಅವರದು. ರಂಗದ ಒಂದು ಪಾರ್ಶ್ವದಲ್ಲಿ ಕಟ್ಟಿಗೆ ಒಲೆ. ಒಂದು ಕೋಂಬರೆ, ಮಧ್ಯದ ಮೇಜಿನ ಮೇಲೆ ತಮ್ಮ ಕಿರಿಯ ಪುತ್ರ ಮೇಜರ್ ಗಣೇಶನ ಭಾವಚಿತ್ರ: ಸಾಂದರ್ಭಿಕ ಹಾಡುಗಳನ್ನು ಹಾಡುವ ಹಳೆಯ ರೇಡಿಯೋ; ಹರಿದಾಸ ಅಪ್ಪಚ್ಚು ಕವಿಯ ಪುಸ್ತಕಗಳು (ಆ ಪುಸ್ತಕಗಳು ಅವರಷ್ಟೇ ಹಳತಾಗಿರ ಬೇಕಿತ್ತು!) ವೇದಿಕೆಯ ಇನ್ನೊಂದು ಪಾರ್ಶ್ವದಲ್ಲಿ ಹಳೆ ಆರಾಮ ಖುರ್ಚಿ, ಹಿನ್ನೆಲೆಯಲ್ಲಿ ಹಸಿರು ತೋಟವಿರುವುದನ್ನು ಸಾಂಕೇತಿಕವಾಗಿ ಹೇಳುವ ಕಿಟಿಕಿಯ ಬಳ್ಳಿಗಳು–ಹೀಗೆ ನಾಟಕದ ಕಾಲವನ್ನು ಸಾಕಷ್ಟು ಹಿಂದಕ್ಕೆ ಒಯ್ಯಲಾಗಿದೆ. ಅದಕ್ಕೆ ಪೂರಕವಾಗಿ ಚೆಂಗಪ್ಪ ಹಾಗೂ ತಂಗವ್ವ ಕೊಡವರ ಸಾಂಪ್ರದಾಯಿಕ ವೇಷಭೂಷಣಗಳಲ್ಲೇ ಕಾಣಿಸಿಕೊಳ್ಳುತ್ತಾರೆ.

ನಾಟಕದ ಪ್ರಬಲ ಅಸ್ತ್ರ ಲವಲವಿಕೆ. ಆಂಗಿಕ ಚಲನೆಯಿಂದ ಅದೆಷ್ಟೋ ವಿಚಾರಗಳನ್ನು ಸಾದರಪಡಿಸುವ, ಕಣ್ಣಿನಿಂದಲೇ ಮಾತುಗಳನ್ನು ಕಟ್ಟಿಕೊಡುವ ಚತುರ ನಟನಟಿಯರು ಈ ಕಾರ್ಯಪ್ಪ ಮತ್ತು ಅನಿತಾ. ಹಾಲು ತರುವ ಚುಬ್ರ ಪಾತ್ರಧಾರಿಯೂ(ಚೆಡಿಯಂಡ ಮೇದಪ್ಪ) ಸಹಜ ನಟನೇ ಸರಿ. ಅಜ್ಜನ ಸಾವನ್ನು ಕುರಿತು ಮತ್ತೆ ಮತ್ತೆ ಹೇಳಿದರೆ ನನಗೂ ಅಳು ಬರುತ್ತದೆ ಎಂದು ಹೇಳುವ ಒಂದು ಮಾತು ಸಾಕು, ಆತನ ಪ್ರತಿಭೆಯನ್ನು ಅಳೆಯಲಿಕ್ಕೆ.

ಲಘುದಾಟಿಯಲ್ಲಿ ಸಾಗುವ ಈ ನಾಟಕ ಘನವಾದ ಬದುಕಿನ ಅರ್ಥವನ್ನು ಬಿಂಬಿಸುವ ಪರಿಯೇ ಚಂದ. ನಾಟಕ ಬದಲಾವಣೆ ಬಯಸುವುದು ಒಂದೇ ಕಡೆ: ಚಂಗಪ್ಪನ ಮರಣಾನಂತರ ತಂಗವ್ವ ಬದುಕನ್ನು ನಿಭಾಯಿಸುವ ಭಾಗ ನಾಟಕದ ಕ್ಲೈಮಾಕ್ಸ್ ಆದ ಬಳಿಕ (ಅರ್ಥಾತ್ ಚಂಗಪ್ಪನ ಸಾವು) ಬರಬೇಕಾಗಿಲ್ಲ, ನಾಟಕವನ್ನು ಸಾವಿನಿಂದ ಪ್ರಾರಂಭಿಸಿ ಫ್ಲಾಶ್‌ಬ್ಯಾಕ್ ತಂತ್ರದ ಮೂಲಕ ಬದುಕನ್ನು ಕಟ್ಟಿಕೊಟ್ಟರೆ ಇನ್ನಷ್ಟು ಪ್ರಭಾವ ಶಾಲಿಯಾಗಬಹುದು.

ಹೆತ್ತವರನ್ನು ಹಳ್ಳಿಯಲ್ಲಿ ಬಿಟ್ಟು ನಗರಕ್ಕೆ ಸಾಗಿದ ಅದೆಷ್ಟೋ ಮಕ್ಕಳು ಈ ನಾಟಕವನ್ನು ನೋಡಬೇಕು. ವಯಸ್ಸಾದ ಮೇಲೆ ಮಕ್ಕಳು ಮರಿಗಳು ಕಣ್ಣೆದುರಿಗಿಲ್ಲದ ಕೊರಗು ನಿಮಿತ್ತವಾಗಿ ಬದುಕನ್ನು ಶ್ಮಶಾನ ಸದೃಶ ಮಾಡಿಕೊಂಡ ಅನೇಕ ಮುದುಕ–ಮುದುಕಿಯರಿಗೆ ಈ ನಾಟಕದ ಲವಲವಿಕೆಯೊಂದು ಅದ್ಭುತ ಪಾಠ. ಕೊಡವ ರಂಗಭೂಮಿಗೆ ಇದೊಂದು ಅದ್ಭುತ ಕೊಡುಗೆ.

### ರೂಪಾಂತರ

ವಿದ್ಯಾರ್ಥಿಗಳ ಗುಂಪನ್ನು ರಚಿಸಿ ಪ್ರತಿಗುಂಪಿನವರೂ ಚಿಕ್ಕ ಕಥೆಯೊಂದನ್ನು ಆಯ್ಕೆ ಮಾಡಿ ಅದನ್ನು ನಾಟಕ ರೂಪಕ್ಕೆ ಪರಿವರ್ತಿಸಲು ಅಧ್ಯಾಪಕರು ಸೂಚಿಸಬಹುದು. ಅಗತ್ಯವಿದ್ದಲ್ಲಿ ಅಧ್ಯಾಪಕರೇ ಕಥೆಗಳನ್ನು ಅವರಿಗೆ ಒದಗಿಸಬಹುದು. ಸೂಕ್ತ ಮಾರ್ಗದರ್ಶನವನ್ನೂ ನೀಡಬಹುದು. ರಚನೆಯಾದ ನಾಟಕವನ್ನು ಸ್ವರಭಾರಯುಕ್ತವಾಗಿ ತರಗತಿಯಲ್ಲಿ ಓದಲಿ. ಬಳಿಕ ಅವುಗಳನ್ನು ಶಾಲೆಯ ಎಲ್ಲ ವಿದ್ಯಾರ್ಥಿಗಳೂ ಓದಲು ಸಾಧ್ಯವಾಗುವಂತೆ ಗ್ರಂಥಾಲಯದಲ್ಲಿ ಇರಿಸಲಿ.

**ಶಿಷ್ಟ ಭಾಷೆಗೆ ಪರಿವರ್ತನೆ**

ಈ ನಾಟಕವು ಗ್ರಾಮ್ಯ ಭಾಷೆಯಲ್ಲಿ ರಚನೆಯಾಗಿದೆ. ಇದನ್ನು ಶಿಷ್ಟಭಾಷೆಯಲ್ಲಿ ಬರೆಯಲು ಸೂಚಿಸುವುದು. ನಾಟಕದಲ್ಲಿನ ಆರು ದೃಶ್ಯಗಳಲ್ಲಿ ಪ್ರತಿಯೊಂದು ಗುಂಪಿನವರಿಗೆ ಒಂದೊಂದು ದೃಶ್ಯವನ್ನು ನೀಡುವುದು. ಅವರು ಆ ದೃಶ್ಯವನ್ನು ಶಿಷ್ಟಭಾಷೆಗೆ ಪರಿವರ್ತಿಸಲಿ. ಅಧ್ಯಾಪಕರು ಅಗತ್ಯದ ಮಾರ್ಗದರ್ಶನ ನೀಡುವುದು. ಸಿದ್ಧವಾದ ದೃಶ್ಯವನ್ನು ಆಯಾ ಗುಂಪಿನವರು ತರಗತಿಯಲ್ಲಿ ಓದಲಿ. ಎಲ್ಲ ದೃಶ್ಯ ಭಾಗಗಳನ್ನು ಒಟ್ಟುಗೂಡಿಸಿ ಗ್ರಂಥಾಲಯದಲ್ಲಿ ಇರಿಸುವುದು.

**ಸ್ಟೋರಿ ಬೋರ್ಡ್**

ಸ್ಟೋರಿಬೋರ್ಡ್ ಬಳಸುವುದರಿಂದ ವಿಷಯಗಳು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ನಾಟಕದ ವಿವಿಧ ಪ್ರಕಾರಗಳ ಕುರಿತು ಸ್ಟೋರಿಬೋರ್ಡ್‌ನ್ನು ವಿದ್ಯಾರ್ಥಿಗಳು ಸಿದ್ಧಪಡಿಸಲಿ. ಇದಕ್ಕಾಗಿ ಗಣಕಯಂತ್ರವನ್ನು ಉಪಯೋಗಿಸಿ‘Powerpoint Presentation’ ಸೌಲಭ್ಯವನ್ನು ಬಳಸಬಹುದು. ಸಿದ್ಧಪಡಿಸಿದ ಸ್ಟೋರಿಬೋರ್ಡ್‌ಗಳನ್ನು ತರಗತಿಯಲ್ಲಿ ಪ್ರದರ್ಶಿಸಲು ಅಧ್ಯಾಪಕರು ವ್ಯವಸ್ಥೆ ಮಾಡುವುದು.

**ಮಾದರಿ**

**ನಾಟಕ ಪ್ರಕಾರಗಳು**

- ಪೌರಾಣಿಕ ನಾಟಕ
- ಐತಿಹಾಸಿಕ ನಾಟಕ
- ಚಾರಿತ್ರಿಕ ನಾಟಕ
- ಸಾಮಾಜಿಕ ನಾಟಕ

**ಪೌರಾಣಿಕ ನಾಟಕ**

- ಪುರಾಣಗಳ ಕಥಾವಸ್ತು

**ಐತಿಹಾಸಿಕ ನಾಟಕ**

- ಇತಿಹಾಸದ ಕಥಾವಸ್ತು

**ಚಾರಿತ್ರಿಕ ನಾಟಕ**

- ಚರಿತ್ರೆಯ ಕಥಾವಸ್ತು

**ದುರಂತ ನಾಟಕ**

**ಸ್ಟೋರಿ ಬೋರ್ಡ್**

**ಸಾಮಾಜಿಕ ನಾಟಕ**

- ಸಮಕಾಲೀನ ಸಮಾಜದ ವಸ್ತು

**ಸಾಮಾಜಿಕ ನಾಟಕ ಪ್ರಕಾರಗಳು**

- ಅಸಂಗತ ನಾಟಕ
- ಬೀದಿನಾಟಕ
- ವಠಾರ ನಾಟಕ
- ಲಾರಿ ನಾಟಕ
- ಏಕಾಂಕ ನಾಟಕ
- ರೇಡಿಯೋ ನಾಟಕ

## ನಾಟಕದ ಅಭಿನಯ

ಈ ನಾಟಕವನ್ನು ಶಾಲಾ ವಾರ್ಷಿಕೋತ್ಸವದಂದು ವಿದ್ಯಾರ್ಥಿಗಳು ಅಭಿನಯಿಸಲಿ. ಅದಕ್ಕೆ ಅಗತ್ಯವಾದ ಸಿದ್ಧತೆಗಳನ್ನು ಮೊದಲೇ ಮಾಡಿಕೊಳ್ಳಲಿ. ಅದಕ್ಕೆ ಬೇಕಾದ ವ್ಯವಸ್ಥೆ ಮಾಡಲು ಅಧ್ಯಾಪಕರು ಸೂಕ್ತವಾದ ಮಾರ್ಗದರ್ಶನ ನೀಡುವುದು.

## ಸಿದ್ಧತೆ

1. ಪಾತ್ರಧಾರಿಗಳ ಆಯ್ಕೆ
2. ವೇಷಭೂಷಣಗಳು
3. ಪ್ರಸಾಧನ
4. ನಿರ್ದೇಶಕರು
5. ಹಾಡುವವರು
6. ಹಿನ್ನೆಲೆ ಸಂಗೀತ ನುಡಿಸುವವರು
7. ತರಬೇತಿ
8. ರಂಗಸಜ್ಜಿಕೆ
9. ಪರಿಕರಗಳು
10. ಆಮಂತ್ರಣ ಪತ್ರಿಕೆ ತಯಾರಿ, ಹಂಚಿಕೆ
11. ಪ್ರಚಾರ
12. ಪತ್ರಿಕಾ ವರದಿ

## ಪ್ರಶ್ನೆಗಳಿಗೆ ಉತ್ತರಿಸುವುದು

ನಾಟಕದ ಕೊನೆಯಲ್ಲಿ ನೀಡಲಾದ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ತಮ್ಮ ಚಟುವಟಿಕೆ ಪುಸ್ತಕದಲ್ಲಿ ಉತ್ತರ ಬರೆದು ತರಗತಿಯಲ್ಲಿ ಓದಲಿ. ಅಗತ್ಯವಿದ್ದಲ್ಲಿ ಅಧ್ಯಾಪಕರು ಅಗತ್ಯವಾದ ತಿದ್ದುಪಡಿಯನ್ನು ಸೂಚಿಸುವುದು. ವಿದ್ಯಾರ್ಥಿಗಳು ಅವುಗಳನ್ನು ಅಳವಡಿಸಿಕೊಳ್ಳಲಿ.

## ಪರಾಮರ್ಶನ ಗ್ರಂಥಗಳು


- ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಸಂಪಾದಕ: ಡಾ. ಚಿ.ಸಿ. ನಿಂಗಣ್ಣ
- ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಲ್.ಎಸ್. ಶೇಷಗಿರಿರಾವ್
- ಕನ್ನಡ ಸಾಹಿತ್ಯ ಚರಿತ್ರೆ – ತ.ಸು. ಶಾಮರಾಯ
- ಲೋಕ ಶಾಕುಂತಲ – ಕೆ.ವಿ. ಸುಬ್ಬಣ್ಣ
- ಪುರುಷಾರ್ಥ – ಪ್ರಸನ್ನ

# SAMPLE QUESTION PAPER

## HSE - II

**Set - I**

## KANNADA - OPTIONAL

Time : 2.30 Hrs.
Cool off time : 15 mts.
Max. Marks : 80

**ಸೂಚನೆಗಳು :**

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಟೈಮ್'ನಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

**1ರಿಂದ 12ರ ವರೆಗಿನ ಪ್ರತಿಯೊಂದು ಪ್ರಶ್ನೆಗೂ ಉತ್ತರಿಸಿರಿ.**

1. ಕನ್ನಡದ ಆದಿ ಕವಿ ಯಾರು? (1)
(ರನ್ನ, ಪೊನ್ನ, ಜನ್ನ, ಪಂಪ)

2. ಅಕ್ಷರಪಲ್ಲಟಕ್ಕೆ ಉದಾಹರಣೆ ಯಾವುದು? (1)
(ಅಗಸ, ದಾಟು, ಹಲಸು, ಅಡಿಕೆ)

3. ಈ ಕೆಳಗಿನವುಗಳಲ್ಲಿ ಯಕಾರಾಗಮ ಸಂಧಿಗೆ ಉದಾಹರಣೆ ಯಾವುದು? (1)
(ಮೇರೆದಪ್ಪಿದ, ಹೊರೆಯೇರು, ಹೊಸತೆನಿಪ, ಮನಗುಂದು)

4. 'ಉಲ್ಲಂಘಿಸುವರುಂಟೆ ವಿಧಿಕೃತವನು'–ಎಂಬ ಕಾವ್ಯಭಾಗವನ್ನು ಯಾವ ಕೃತಿಯಿಂದ ಆಯ್ದುಕೊಳ್ಳಲಾಗಿದೆ? (1)
(ವಿಕ್ರಮಾರ್ಜುನ ವಿಜಯ, ಭರತೇಶ ವೈಭವ, ಜೈಮಿನಿ ಭಾರತ, ಶ್ರೀ ರಾಮಾಶ್ವಮೇಧ)

**5ರಿಂದ 12ರ ವರೆಗಿನ ಪ್ರಶ್ನೆಗಳನ್ನು ಸೂಚನೆಯಂತೆ ಉತ್ತರಿಸಿರಿ.**

5. 'ಹರೆಯ' – ಈ ಪದದ ಸಂಸ್ಕೃತ ರೂಪವನ್ನು ಬರೆಯಿರಿ. (1)

6. 'ಪ್ರತಿಫಲಾಪೇಕ್ಷೆ' – ಈ ಪದವನ್ನು ಬಳಸಿ ವಾಕ್ಯವೊಂದನ್ನು ರಚಿಸಿರಿ. (1)

7. 'ಕಾಣಿಸು'–ಈ ಪದದ ನಿಷೇದಾರ್ಥಕ ರೂಪವನ್ನು ಬರೆಯಿರಿ. (1)

8. 'ಮಾತುಗಾರ'–ಇಲ್ಲಿರುವ ತದ್ಧಿತ ಪ್ರತ್ಯಯವನ್ನು ಗುರುತಿಸಿರಿ. (1)

9. 'ಹೊಂದಾವರೆ'– ಈ ಪದವನ್ನು ವಿಗ್ರಹಿಸಿ ಬರೆಯಿರಿ. (1)

10. ಅನ್ಯಭಾಷಾ ಸ್ವೀಕರಣಕ್ಕೆ ಒಂದು ಉದಾಹರಣೆ ನೀಡಿರಿ. (1)

11. 'ಕುದುರೆ'–ಇದರ ಪರ್ಯಾಯ ಪದಗಳನ್ನು ಬರೆಯಿರಿ. (1)

12. ಕಣ್ಪೊಗರನಿರ್ವರೊಳು–ಈ ಪದವನ್ನು ವಿಂಗಡಿಸಿ ಬರೆಯಿರಿ. (1)

**ಸೂಚನೆಯಂತೆ ಉತ್ತರಿಸಿರಿ.**

13. 'ಅಡ್ಕ ಮತ್ತು ಪಾಡಿ' ಎಂಬ ಪದಗಳಿಂದ ಕೊನೆಗೊಳ್ಳುವ ನಾಲ್ಕು ನಾಲ್ಕು ಸ್ಥಳನಾಮಗಳನ್ನು ಪಟ್ಟಿ ಮಾಡಿರಿ? (2)

14. ಕೆಳಗಿನ ಸಾಲನ್ನು ಶಿಷ್ಟಗನ್ನಡಕ್ಕೆ ಪರಿವರ್ತಿಸಿ ಬರೆಯಿರಿ. (3)
"ಅಕ್ಕುಂ, ಲೋಕದೊಳ್ ಮಹಾತ್ಮರೆನಿಪರೊಳನೇಕರ್ ಮಾಯಾವಿಗಳೊಳರ್.
ಅಂತಪ್ಪವರೊಳಾರೊ ಕನ್ನೆಯಂ ಕಳ್ದುಯ್ದಿರವೇೞ್ಕುಮಲ್ಲದೆ ಎನ್ನಿನಾದ ಕಜ್ಜಮಲ್ತು".

15. ಕತ್ತರಿಸಲ್ಪಟ್ಟ ಶಿಶುಪಾಲನ ರುಂಡದ ಭಾವವಿಶೇಷವು ಕೆಳಗಿನ ಸಾಲುಗಳಲ್ಲಿ ಹೇಗೆ ಪ್ರಕಟವಾಗಿದೆ. (4)

ಮುಳಿದು ತನಗರ್ಘ್ಯವೆತ್ತಿದ
ತಳಿಗೆಯೊಳಿಡೆ ತೆಱೆದ ತೆಱದೆ ತಲೆ ಪಱೆದಾಗಳ್
ಕಳಕಳಿಸಿ ನಗುತಮಿರ್ದುದು
ತಳಿಗೆಯ ಮೇಲಸುರನದಟದೇನಚ್ಚರಿಯೋ

16. ಕೆಳಗಿನ ಪದಗಳನ್ನು ಅಕಾರಾದಿಯಾಗಿ ಬರೆದು ಅರ್ಥವನ್ನು ತಿಳಿಸಿರಿ. (4)
ಅಳವು, ಎಸೆ, ಲಲಾಟ, ತುಂಗ, ಸಲಿಲ, ನಾಂದಿ, ಧರೆ

17. ಕೆಳಗೆ ನೀಡಿರುವ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿರಿ(4)

ಮೀನಾವೆ ಪಂದಿಎಂದೆನಿ
ತಾನುಂ ತೆಱನಾಗಿ ಡೊಂಬ ನಿದ್ದೆಯನಾಡಲ್

18. ಕೆಳಗೆ ಕೊಡಲಾದ ಪದ್ಯಭಾಗದಲ್ಲಿ ಬಳಕೆಯಾದ ಅಲಂಕಾರವನ್ನು ಗುರುತಿಸಿ ಲಕ್ಷಣವನ್ನು ಬರೆಯಿರಿ. (5)

ಗರುಡಮಂತ್ರಕೆ ವಿಷವಿಳಿವಂತೆ ಭರತ ಭೂ
ವರನ ವಾಕ್ಯವ ಕೇಳಲಾಗಿ
ಜರಿಜರಿದಂಗಜಗೆತ್ತಿದ್ದ ಕೋಪ ಪೈ
ಸರಿಸಿತು ಹೃದಯ ತಂಪಾಯ್ತು

19. ಕೆಳಗಿನ ಗದ್ಯಭಾಗವನ್ನು ಕನ್ನಡಕ್ಕೆ ಭಾಷಾಂತರಿಸಿರಿ. (5)

Health is one of the graces of god, the Almighty. Everyone must express gratitude to him. Protection of health is the responsibility of every individual. Liquor narcotics are the enemies of individuals, families and society.

**20ರಿಂದ 24ರ ವರೆಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ.**

20. ತುಳು ಭಾಷೆಯಲ್ಲಿ ಶಿಷ್ಟ ಸಾಹಿತ್ಯ ರಚನೆ ವಿಪುಲವಾಗಿ ಮೂಡಿಬರದೇ ಇರುವುದಕ್ಕೆ ಲೇಖಕರು ನೀಡುವ ಕಾರಣಗಳೇನು? (5)

21. ಮಂಥರೆಯ ಪಾತ್ರಚಿತ್ರಣ ನೀಡಿರಿ. (5)

22. ಭಾಷಾಪ್ರಭೇಧಗಳು ಉಂಟಾಗಲು ಕಾರಣವೇನು? ಉದಾಹರಣೆ ಸಹಿತ ವಿವರಿಸಿರಿ. (5)

23. ಇಳೆಯಾಂಡಗುಡಿಮಾರನ ಶಿವಭಕ್ತಿಯ ಕುರಿತು ಲೇಖನ ಬರೆಯಿರಿ. (5)

24. ಸಮಾಜದಲ್ಲಿ ಸ್ತ್ರೀಯರು ಉದ್ಯೋಗ ಕ್ಷೇತ್ರದಲ್ಲಿ ಅನುಭವಿಸುತ್ತಿರುವ ಸಮಸ್ಯೆಗಳ ಕುರಿತು ಪ್ರಬಂಧ ಸಿದ್ಧಪಡಿಸಿರಿ. (5)

**25 ಮತ್ತು 26ನೇ ಪ್ರಶ್ನೆಗಳಲ್ಲಿ ಒಂದೊಂದನ್ನು ಆಯ್ದು ಒಂದೂವರೆ ಪುಟಕ್ಕೆ ಮೀರದಂತೆ ಬರೆಯಿರಿ.**

25. 'ಶ್ರೀಮತಿ ಸ್ವಯಂವರ ಎಂಬ ಗದ್ಯಭಾಗದಲ್ಲಿ ಅಡಕವಾಗಿರುವ ಕಥೆಯ ಸಾರವನ್ನು ಬರೆಯಿರಿ. (8)

**ಅಥವಾ**

'ಉಲ್ಲಂಘಿಸುವರುಂಟೆ ವಿಧಿಕೃತವನು' ಎಂಬ ಕಾವ್ಯಭಾಗದ ಆಶಯವನ್ನು ಬರೆಯಿರಿ.

26. ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ಕುರಿತು ವಿಶದೀಕರಿಸಿರಿ. (8)

**ಅಥವಾ**

ಕನ್ನಡದಲ್ಲಿ ನಾಟಕ ಸಾಹಿತ್ಯ ಬೆಳೆದು ಬಂದ ರೀತಿಯನ್ನು ಪಠ್ಯಭಾಗದ ಆಧಾರದಲ್ಲಿ ವಿವರಿಸಿರಿ.

* * *

# SAMPLE QUESTION PAPER

## HSE - II

Set - II

## KANNADA - OPTIONAL

Time : 2.30 Hrs.
Cool off time : 15 mts.
Max. Marks : 80

**ಸೂಚನೆಗಳು :**

- 15 ನಿಮಿಷಗಳ 'ಕೂಲ್ ಆಫ್ ಟೈಮ್' ನೀಡಲಾಗಿದೆ. ಉತ್ತರ ಬರೆಯಲು ಎರಡೂವರೆ ಗಂಟೆಗಳ ಕಾಲಾವಕಾಶವಿದೆ.
- 'ಕೂಲ್ ಆಫ್ ಟೈಮ್'ನಲ್ಲಿ ವಿದ್ಯಾರ್ಥಿಗಳು ಉತ್ತರಗಳನ್ನು ಬರೆಯುವುದಾಗಲೀ ಇತರರೊಂದಿಗೆ ಚರ್ಚಿಸುವುದಾಗಲೀ ಮಾಡಬಾರದು.
- ಉತ್ತರಗಳನ್ನು ಬರೆಯುವುದಕ್ಕೆ ಮೊದಲು ಪ್ರಶ್ನೆಗಳನ್ನು ಸೂಕ್ಷ್ಮವಾಗಿ ಓದಿರಿ.
- ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿವೆ. ಅವುಗಳಲ್ಲಿ ಆಯ್ಕೆಗಳಿದ್ದರೆ ಯಾವುದಾದರೂ ಒಂದನ್ನು ಉತ್ತರಿಸತಕ್ಕದ್ದು.
- ನೀವು ಒಂದು ಪ್ರಶ್ನೆಯನ್ನು ಆಯ್ಕೆ ಮಾಡಿದಾಗ ಅದರದ್ದೇ ಆದ ಬಿಡಿ ಪ್ರಶ್ನೆಗಳನ್ನು ಉತ್ತರಿಸಬೇಕು.

**1ರಿಂದ 4ನೇ ಪ್ರಶ್ನೆಗಳ ವರೆಗೆ ಸರಿಯಾದ ಉತ್ತರವನ್ನು ಆವರಣದಿಂದ ಆರಿಸಿ ಬರೆಯಿರಿ.**

1. ಪಂಪ ಕವಿಯ ಕಾಲ (1)
(8ನೇ ಶತಮಾನ, 9ನೇ ಶತಮಾನ, 10ನೇ ಶತಮಾನ, 12ನೇ ಶತಮಾನ)

2. 'ಹೊಸಗನ್ನಡದ ಮುಂಗೋಳಿ' ಎಂಬ ಕೀರ್ತಿಗೆ ಪಾತ್ರನಾದ ಕವಿ (1)
(ಮುದ್ದಣ, ಹರಿಹರ, ರತ್ನಾಕರವರ್ಣಿ, ಸೇಡಿಯಾಪು ಕೃಷ್ಣಭಟ್ಟ)

3. ಕನ್ನಡದ ಮೊದಲ ನಾಟಕ (1)
(ಅಶ್ವತ್ಥಾಮನ್, ಮಿತ್ರವಿಂದಾ ಗೋವಿಂದ, ಇಗ್ಗಪ್ಪಹೆಗ್ಗಡೆಯ ವಿವಾಹಪ್ರಹಸನ, ಹೆಬ್ಬೆರಳು)

4. "ಅಧಿಕಾರ ಅಂತಸ್ತು ತರತ್ತೆ
ಅಂತಸ್ತು ಅಂತರ ತರತ್ತೆ"– ಇದು ಮಂಥರಾ ನಾಟಕದಲ್ಲಿ ಬರುವ ಮಾತು. ಈ ಮಾತನ್ನು ಆಡಿದವರು (1)
(ಕೈಕಯಿ, ಭರತ, ದಶರಥ, ಮಂಥರಾ)

5. 'ಅ' ವಿಭಾಗದೊಂದಿಗೆ 'ಆ' ಮತ್ತು 'ಇ' ವಿಭಾಗಗಳನ್ನು ಹೊಂದಿಸಿ ಬರೆಯಿರಿ. (4×1=4)

| ಅ ವಿಭಾಗ | ಆ ವಿಭಾಗ | ಇ ವಿಭಾಗ |
|---|---|---|
| 1. ಪಂಪ | ಜೈಮಿನಿ ಭಾರತ | ಪ್ರವಾಸ ಕಥನ |
| 2. ಲಕ್ಷ್ಮೀಶ | ಆದಿಪುರಾಣ | ಆತ್ಮಕಥೆ |
| 3. ಜಿ. ಪಿ. ಬಸವರಾಜು | ಬರಹಗಾರ್ತಿಯ ಬದುಕು | ಷಟ್ಪದಿ ಕಾವ್ಯ |
| 4. ಅನುಪಮಾ ನಿರಂಜನ | ಕಾಡು ಕಣಿವೆಯ ಹಾಡು | ಚಂಪೂ ಕಾವ್ಯ |

**ಸೂಚನೆಯಂತೆ ಉತ್ತರಿಸಿರಿ.**

6. ಪಾದಾಂಬುಜ – ಈ ಪದವನ್ನು ಬಿಂಗಡಿಸಿ ಬರೆದು ಸಂಧಿಯನ್ನು ಹೆಸರಿಸಿರಿ. (1)

7. ರತ್ನತ್ರಯರು ಎಂಬ ಹೆಸರಿಗೆ ಪಾತ್ರರಾದ ಕವಿಗಳು ಯಾರು? (1)

8. ಚಿನ್ನ – ಇದರ ಎರಡು ಪರ್ಯಾಯ ನಾಮಗಳನ್ನು ಬರೆಯಿರಿ. (1)

9. ಕುಲಶೀಲವಿತ್ತವಿದ್ಯೆಗಳು – ಈ ಪದವನ್ನು ವಿಗ್ರಹಿಸಿ ಬರೆದು ಸಮಾಸವನ್ನು ಹೆಸರಿಸಿರಿ. (1)

10. ಕುಡವೇೞ್ವಿನ ಕುಡುವನ ಕುಡೆ ಪಡೆವನ ಪೆಂಪೇ ನೆಗೞ್ತೆವಡೆಗುಮೊ – ಈಪದ್ಯವನ್ನು ಹೊಸಗನ್ನಡದಲ್ಲಿ ಬರೆಯಿರಿ. (1)

11. ಕನ್ನಡ ಭಾಷೆಯು ಯಾವ ಭಾಷಾ ವರ್ಗಕ್ಕೆ ಸೇರುತ್ತದೆ? (1)

12. 'ರಘಟಾ' – ಈ ಪದದ ತದ್ಭವ ರೂಪ ಯಾವುದು? (1)

**ಸಂಕ್ಷಿಪ್ತವಾಗಿ ಉತ್ತರಿಸಿರಿ.**

13. ತುಳುವರ ಗರಡಿಯ ವೈಶಿಷ್ಟ್ಯಗಳನ್ನು ಬರೆಯಿರಿ. (2)

14. ನಿಮ್ಮ ಪರಿಸರದ ಸ್ಥಳವೊಂದರ ಹೆಸರಿನ ಕುರಿತಾದ ವಿಶೇಷತೆಯನ್ನು ಬರೆಯಿರಿ. (2)

15. 'ಬಾವೀ ನೀರ ಕಲಕಲಿಕ್ಕೆ ಸಣ್ಣದೊಂದು ಕಲ್ಲು ಸಾಕಾದೀತು' – ಈ ಮಾತಿನ ಸ್ವಾರಸ್ಯವನ್ನು ಬರೆಯಿರಿ. (2)

16. ಶ್ರೀಕೃಷ್ಣನು ಅಗ್ರಪೂಜೆಗೆ ಅರ್ಹನೆಂದು ಹೇಳಲು ಭೀಷ್ಮನು ನೀಡಿದ ಕಾರಣಗಳು ಯಾವುವು? (3)

17. ಇಳೆಯಾಂಡಗುಡಿಮಾರನು ಮಾಡಿದ ಭಕ್ತಿಯ ಕೃಷಿಯನ್ನು ವಿವರಿಸಿರಿ. (3)

18. ಅನುಪಮಾ ನಿರಂಜನರ ಅಭಿಪ್ರಾಯದಂತೆ ಒಳ್ಳೆಯ ಸಾಹಿತ್ಯ ರಚನೆ ಹೇಗೆ ಸಾಧ್ಯವಾಗುತ್ತದೆ? ತಿಳಿಸಿರಿ. (3)

19. ಕನ್ನಡದ ಉಪಭಾಷೆಗಳ ಕುರಿತು ಕಿರುಟಿಪ್ಪಣಿ ಬರೆಯಿರಿ. (3)

20 ಕೆಳಗೆ ನೀಡಲಾದ ಪದ್ಯಭಾಗದಲ್ಲಿ ಕಾಣಿಸುವ ಅಲಂಕಾರವನ್ನು ತಿಳಿಸಿ ಲಕ್ಷಣವನ್ನು ಬರೆಯಿರಿ. (4)

ಕುಂದಣದದ್ರಿ ಪಚ್ಚೆಯ ಗಿರಿಯೆರಡೊಡ್ಡಿ
ನಿಂದುವೋ ಕಳದೊಳೆಂಬಂತೆ
ಸೌಂದರಾಯುತ ದೀರ್ಘದೇಹಿಗಳಣ್ಣ ತ
ಮ್ಮಂದಿರೊಪ್ಪಿದರು ನೋಳ್ಪರಿಗೆ

21. ನಾರದ ಮತ್ತು ಪರ್ವತರೆಂಬ ಮುನಿಗಳು ಪರಸ್ಪರ ವಂಚಿಸಲು ಹೋಗಿ ತಾವೇ ಮೋಸಹೋದ ಸಂದರ್ಭವನ್ನು ನಿರೂಪಿಸಿರಿ. (4)

22. ಆಸ್ವಾದನ ಟಿಪ್ಪಣಿ ಬರೆಯಿರಿ. (4)

ಬಳಿಕೋರ್ವರೋರ್ವರಂ ನೋಡುತ್ತ ಕೂಡುತ್ತ
ನಲವಿಂದ ನೃತ್ಯಮಂ ಮಾಡುತ್ತ ಪಾಡುತ್ತ
ಸೆಳಸಿ ಸರಸೋಕ್ತಿಗಳನಾಡುತ್ತ ತೀಡುತ್ತ ಬೆಳ್ನಗೆಯ ಬೆಡಂಗುಗಳನು
ಅಲರ್ಗಳಂ ತೆಗೆತೆಗೆದು ನೀಡುತ್ತ ಸೂಡುತ್ತ
ಲಲಿತ ಮಧು ಚಷಕಮಂ ಬೇಡುತ್ತ ಕಾಡುತ್ತ
ಕಲೆಗಳ ವಿಲಾಸಮಂ ಪೂಡುತ್ತ ಕೂಡುತ್ತ ಕಣ್ಗೆಸೆದರೆಳೆವೆಣ್ಗಳು

23. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಜನೆ ಮಾಡಿ ಛಂದಸ್ಸನ್ನು ಹೆಸರಿಸಿರಿ. (4)

ಮನದೊಲವರಮುಳ್ಳೊಡೆ ಕುಡು
ಮನೆಯೊಳ್ ಹರಿಗಗ್ರಪೂಜೆಯಂ ಯಜ್ಞದೊಳೀ

24. ದುಷ್ಟಬುದ್ಧಿಯ ಕುತಂತ್ರಕ್ಕೆ ಸಿಲುಕಿದರೂ ಅದರಿಂದ ಪಾರಾದ ಚಂದ್ರಹಾಸನ ಕಥೆಯು 'ಉಲ್ಲಂಘಿಸುವರುಂಟೆ ವಿಧಿಕೃತವನು' ಕಾವ್ಯಭಾಗದಲ್ಲಿ ಹೇಗೆ ಮೂಡಿ ಬಂದಿದೆ? ವಿವರಿಸಿರಿ. (5)

25. 'ಧರೆಮೆಚ್ಚದಣ್ಣ ಸೋದರರ ಕಾಳಗಕೆ' ಕಾವ್ಯಭಾಗದಲ್ಲಿ ವರ್ಣಿತವಾದ ಭರತನ ವ್ಯಕ್ತಿತ್ವವನ್ನು ಕುರಿತು ವಿಮರ್ಶಾತ್ಮಕ ಲೇಖನವನ್ನು ಬರೆಯಿರಿ. (5)

26. ಕನ್ನಡ ನಾಟಕ ಸಾಹಿತ್ಯದ ಬೆಳವಣಿಗೆಯ ಸ್ಥೂಲ ಪರಿಚಯವನ್ನು ನೀಡಿರಿ. (5)

27. ಕಾಡಿಗೆ ಹೊದ್ದಿಸಿದ ಮಂಜಿನ ಪರದೆ–ಪ್ರವಾಸ ಕಥನವನ್ನು ಪರಿಚಯಿಸಿರಿ. (8)

**ಅಥವಾ**

ನೀವು ಕೈಗೊಂಡ ಪ್ರವಾಸವೊಂದರ ಅನುಭವಗಳನ್ನು ಬರೆಯಿರಿ.

28. ಮಂಥರಾ–ನಾಟಕದಲ್ಲಿ ಮೂಡಿಬಂದಿರುವ ಮಂಥರೆಯ ಪಾತ್ರ ಚಿತ್ರಣ ಮಾಡಿರಿ. (8)

**ಅಥವಾ**

ಮಂಥರೆಯ ಉಪದೇಶಕ್ಕೆ ಮಾರುಹೋದ ಕೈಕಯಿಂದಾಗಿ ಅಯೋಧ್ಯೆಯಲ್ಲಿ ಉಂಟಾದ ಅನಾಹುತಗಳ ಕುರಿತು ವಿವರಿಸಿರಿ.

* * *